ಶನಿವಾರ, ಜುಲೈ 24, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 205 | ಪುಟ 26

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಉದ್ಯೋಗದ ಏಕತಾನತೆಯ
ಬೇಸರವು ಕೆಲವೊಮ್ಮೆ ವೈಯಕ್ತಿಕ
ಬದುಕಿನ ಮೇಲೂ ಪರಿಣಾಮ ಬೀರುತ್ತದೆ.
ಇದರಿಂದ ಉದ್ಯೋಗ ತೊರೆದು
ಬದುಕಿನ ಪಥ ಬದಲಿಸಿಕೊಳ್ಳುವವರ
ಸಂಖ್ಯೆ ಜಾಸ್ತಿ ಆಗಿದೆ

ಚರ್ಚೆ
ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124 ಎ (ದೇಶದ್ರೋಹ) ರದ್ದುಪಡಿಸಬೇಕೇ? 11

'ಬಿಜೆಪಿ ದಲಿತ ಸಿ.ಎಂ ಆಯ್ಕೆ ಮಾಡಲಿ' 8

'ಮೋದಿ, ಶಾ ಎಸಗಿದ್ದು ದೇಶದ್ರೋಹ' 13

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 52,975 ▲ | 15,856 ▲ | ₹49,280 (ಬೆಂಗಳೂರು) | ₹69,100 (ಬೆಂಗಳೂರು) | 74.40 ▲ |

## ಸಿಐಎಸ್‌ಸಿಇ 10, 12ನೇ ತರಗತಿ ಫಲಿತಾಂಶ ಇಂದು

ನವದೆಹಲಿ (ಪಿಟಿಐ): ಭಾರತೀಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು (ಸಿಐಎಸ್‌ಸಿಇ) 10ನೇ ತರಗತಿ (ಐಸಿಎಸ್‌ಇ), 12ನೇ ತರಗತಿಯ (ಐಎಸ್‌ಸಿ) ಫಲಿತಾಂಶವನ್ನು ಜುಲೈ 24ರ ಮಧ್ಯಾಹ್ನ 3 ಗಂಟೆಗೆ ಪ್ರಕಟಿಸಲಿದೆ.

ಫಲಿತಾಂಶ ಮಂಡಳಿಯ ವೆಬ್‌ಸೈಟ್‌ನಲ್ಲಿ ಲಭ್ಯವಿರಲಿದ್ದು, ಎಸ್‌ಎಂಎಸ್ ಮೂಲಕವೂ ಸಿಗಲಿದೆ ಎಂದು ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಮತ್ತು ಕಾರ್ಯದರ್ಶಿ ಗ್ಯಾರಿ ಅರತೂನ್ ತಿಳಿಸಿದರು.

ಕ್ಯಾರಿಯರ್ ಪೋರ್ಟಲ್ ಮೂಲಕ ಆಯಾ ಶಾಲೆಗಳ ಅಂಕ ಪಟ್ಟಿ ದೊರೆಯಲಿದೆ. ಶಾಲೆಗಳ ಪ್ರಾಂಶುಪಾಲರ ಐ.ಡಿ ಮತ್ತು ಪಾಸ್‌ವರ್ಡ್ ಬಳಸಿ ವೆಬ್‌ನಿಂದ ಫಲಿತಾಂಶ ಪಡೆಯಬಹುದು ಎಂದು ಹೇಳಿದರು.

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರಜಾವಾಣಿ ಕನ್ನಡ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

### ಚಿನಕುರಳಿ

ಪ್ರಕಾಶ್ ಶೆಟ್ಟಿ

ಮೂವರು ಸಾವು • ಸೇತುವೆಗಳು ಮುಳುಗಡೆ, ಭೂಕುಸಿತ • ಜನಜೀವನ ಅಸ್ತವ್ಯಸ್ತ

# ಮುಂದುವರಿದ ಮಳೆಯ ಅಬ್ಬರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಿಟ್ಟೂಬಿಡದ ಮಳೆಯಿಂದಾಗಿ ಕೃಷ್ಣ, ಮಲಪ್ರಭಾ, ಘಟಪ್ರಭಾ, ತುಂಗಾ, ತುಂಗಭದ್ರಾ, ಕಾವೇರಿ, ಲಕ್ಷ್ಮಣತೀರ್ಥ ಸೇರಿದಂತೆ ಬಹುತೇಕ ನದಿಗಳು ಉಕ್ಕಿ ಹರಿಯುತ್ತಿವೆ. ಸೇತುವೆಗಳ ಮುಳುಗಡೆ, ಗುಡ್ಡಗಳ ಕುಸಿತ, ಬೆಳೆಗಳ ಹಾನಿ, ರಸ್ತೆ, ಗ್ರಾಮಗಳು ಜಲಾವೃತವಾಗಿರುವುದರಿಂದ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆಗೆ ಹೋದವರಲ್ಲಿ ಇಬ್ಬರು ಮೃತರಾಗಿದ್ದರೆ, ಇನ್ನಿಬ್ಬರು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ಚಿಕ್ಕಮಗಳೂರು ತಾಲ್ಲೂಕಿನ ಕ್ಯಾತನಬೀಡು ಗ್ರಾಮದಲ್ಲಿ ಕೊಟ್ಟಿಗೆಮನೆ ಕುಸಿದು ಒಬ್ಬರು ಮೃತಪಟ್ಟಿದ್ದಾರೆ.

ಚಿಕ್ಕೋಡಿ ಹೊರವಲಯದ ರಾಮನಗರ ಬಳಿ ರಭಸವಾಗಿ ಹರಿಯುತ್ತಿರುವ ಹಳ್ಳದಲ್ಲಿ ಬಾಲಕಿ ಕೊಚ್ಚಿಕೊಂಡು ಹೋದ ಘಟನೆ ಶುಕ್ರವಾರ ನಡೆದಿದೆ.

ನದಿಗಳು ಉಕ್ಕಿ ಹರಿಯುತ್ತಿರುವುದರಿಂದ ಗ್ರಾಮಗಳು ಜಲಾವೃತಗೊಂಡಿವೆ. ಮನೆಗಳು ಕುಸಿದಿವೆ. ಕಬ್ಬು, ಭತ್ತ, ಜೋಳ, ಕಡಲೆ, ಹೆಸರು ಸೇರಿದಂತೆ ಹಲವು ಬೆಳೆಗಳು ನೀರಿನಲ್ಲಿ ಮುಳುಗಿವೆ. ಪಂಪ್‌ಸೆಟ್‌ಗಳು ಕೊಚ್ಚಿ ಹೋಗಿವೆ. ನದಿ ದಂಡೆಯ ಜನರ ಬದುಕು ಬೀದಿಗೆ ಬಂದಿದೆ. ಬೆಳಗಾವಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. 2019ರ ನೆರೆಯನ್ನು ಪುನಃ ನೆನಪಿಸುವಂತಾಗಿದೆ.

ನೆರೆಯ ಮಹಾರಾಷ್ಟ್ರದ ಕೊಂಕಣ ಪ್ರದೇಶ, ರಾಜ್ಯದ ಬೆಳಗಾವಿ ಜಿಲ್ಲೆಯಲ್ಲಿ ಧಾರಾಕಾರ ಮಳೆಯಾಗುತ್ತಿರುವುದು ಕೃಷ್ಣಾ ಹಾಗೂ ಅದರ ಉಪನದಿಗಳ ಹರಿವಿನ ಪ್ರಮಾಣದಲ್ಲಿ ಹೆಚ್ಚಾಗುತ್ತಲಿದೆ. ಇದೇ ರೀತಿ ಕೇರಳದ ವಯನಾಡ್‌ನಲ್ಲಿಯೂ ಮಳೆಯಾಗುತ್ತಿರುವುದರಿಂದ ಕಬಿನಿ ಜಲಾಶಯದ ಒಳ ಹರಿವಿನ ಪ್ರಮಾಣ ಹೆಚ್ಚಾಗಿದೆ. ಮುಂಬೈ–ಕರ್ನಾಟಕ, ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು, ಹಾಸನ ಸೇರಿದಂತೆ ರಾಜ್ಯದ ವಿವಿಧೆಡೆ ಧಾರಾಕಾರ ಮಳೆ ಮುಂದುವರಿದಿದೆ. ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ 52 ಸೆ.ಮೀ. ದಾಖಲೆ ಮಳೆಯಾಗಿದೆ. ಇಲ್ಲಿ 2019ರ ಆ.3ರಂದು 41 ಸೆಂ.ಮೀ. ಮಳೆ ದಾಖಲಾಗಿತ್ತು.

**ಸಂಚಾರಸ್ಥಗಿತ:** ಆಲಮಟ್ಟಿ, ನಾರಾಯಣಪುರ, ತುಂಗಾ, ಕಬಿನಿ ಜಲಾಶಯಗಳಿಂದ ಭಾರೀ ಪ್ರಮಾಣದಲ್ಲಿ ನೀರು ಹೊರಬಿಡಲಾಗುತ್ತಿದೆ. ಹಲವು ಕಡೆಗಳಲ್ಲಿ ಸೇತುವೆಗಳು ಮುಳುಗಿರುವುದರಿಂದ, ಸುತ್ತು–ಬಳಸಿ ಸಂಚರಿಸಬೇಕಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಭಾರೀ ಮಳೆಯಾಗುತ್ತಿರುವುದರಿಂದ ನಿಪ್ಪಾಣಿ ತಾಲ್ಲೂಕಿನ ಯಮಗರ್ಣಿ ಬಳಿ ಪುಣೆ–ಬೆಂಗಳೂರು ರಸ್ತೆ ಜಲಾವೃತವಾಗಿದೆ. ಬೆಳಗಾವಿ–ಚೋರ್ಲಾ ರಾಜ್ಯ ಹೆದ್ದಾರಿಯಲ್ಲಿ ಭೂ ಕುಸಿತವಾಗಿರುವುದರಿಂದ ಗೋವಾಕ್ಕೆ ತೆರಳುವ ಮಾರ್ಗಗಳಲ್ಲಿ ಸಂಚಾರ ಸ್ಥಗಿತವಾಗಿದೆ.

ಇನ್ನಷ್ಟು ಸುದ್ದಿಗಳು 6

ಅಂಕೋಲಾ ತಾಲ್ಲೂಕಿನ ಕೂರ್ವೆ ದ್ವೀಪದ ಸಮೀಪ ಗಂಗಾವಳಿ ನದಿಯ ಪ್ರವಾಹದಲ್ಲಿ ತೆಂಗಿನಮರ ಹಿಡಿದು ನಿಂತಿದ್ದ ಸ್ಥಳೀಯರನ್ನು ಮೀನುಗಾರರು ದೋಣಿಯ ಮೂಲಕ ರಕ್ಷಿಸಿದರು

### 'ಪ್ರವಾಹ: ದಿನದ 24 ಗಂಟೆ ಎಚ್ಚರವಹಿಸಿ'

ಬೆಂಗಳೂರು: ಮಳೆ ಹಾಗೂ ಪ್ರವಾಹ ಪೀಡಿತ ಪ್ರದೇಶಗಳಲ್ಲಿನ ಅಧಿಕಾರಿಗಳು ದಿನ 24 ಗಂಟೆ ಎಚ್ಚರಿಕೆಯಿಂದ ಕೆಲಸ ಮಾಡುವುದರ ಜತೆಗೆ ಮುಂದಿನ 48 ಗಂಟೆ ಏನು ಆಗಬಹುದು ಎಂದು ಅಂದಾಜಿಸಿ ಕಾರ್ಯ ಪ್ರವೃತ್ತರಾಗಿ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶುಕ್ರವಾರ ಸೂಚನೆ ನೀಡಿದರು. 6

### ಮಹಾರಾಷ್ಟ್ರ: ಮಳೆ ಅಬ್ಬರಕ್ಕೆ 100ಕ್ಕೂ ಹೆಚ್ಚು ಸಾವು

ಮುಂಬೈ (ಪಿಟಿಐ): ಮಹಾರಾಷ್ಟ್ರದ ವಿವಿಧೆಡೆ ಮಳೆ ಸಂಬಂಧಿ ಅವಘಡಗಳಿಂದಾಗಿ 100-110 ಮಂದಿ ಶುಕ್ರವಾರ ಮೃತಪಟ್ಟಿರಬಹುದು ಎಂದು ಅಂದಾಜಿಸಲಾಗಿದೆ. ಕರಾವಳಿಯ ರಾಯಗಡ ಜಿಲ್ಲೆಯಲ್ಲಿ ನಡೆದ ಭೂಕುಸಿತದ ಸ್ಥಳದಿಂದ 50ಕ್ಕೂ ಹೆಚ್ಚು ಮೃತದೇಹಗಳನ್ನು ಮೇಲೆತ್ತಲಾಗಿದೆ. ಇನ್ನೂ 40–50 ಮಂದಿ ಮಣ್ಣಿನಡಿ ಸಿಲುಕಿರಬಹುದು ಎನ್ನಲಾಗಿದೆ. ರಾಯಗಡ ಜಿಲ್ಲೆಯ ಮಹಾಡ್ ತಾಲ್ಲೂಕಿನ ತಲಾಯ್ ಗ್ರಾಮದಲ್ಲಿ ಗುರುವಾರ ರಾತ್ರಿ ಭೂಕುಸಿತ ಸಂಭವಿಸಿತ್ತು. 50–60 ಮೀಟರ್ ಎತ್ತರದ ಗುಡ್ಡವು ನಿರಂತರ ಮಳೆಯಿಂದಾಗಿ ಕುಸಿದಿತ್ತು. ರತ್ನಾಗಿರಿ ಜಿಲ್ಲೆಯಲ್ಲಿಯೂ ಭೂಕುಸಿತ ಉಂಟಾಗಿದ್ದು 10 ಮಂದಿ ಮಣ್ಣಿನಡಿ ಸಿಲುಕಿರಬಹುದು ಎಂದು ಹೇಳಲಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಭಾರಿ ಮಳೆ ಸುರಿಯುತ್ತಲೇ ಇದೆ. ಕೊಂಕಣದ ಗುಡ್ಡಗಾಡು ಪ್ರದೇಶಗಳಿಂದ ಅಪಾಯದ ಸ್ಥಳದಲ್ಲಿದ್ದ ಜನರನ್ನು ತೆರವು ಮಾಡಲಾಗಿದೆ.

ಕೊಲ್ಲಾಪುರ ಜಿಲ್ಲೆಯಲ್ಲಿ ಬಸ್ಸೊಂದು ಇನ್ನೇನು ಕೊಚ್ಚಿ ಹೋಗಲಿದೆ ಎನ್ನುವಷ್ಟರಲ್ಲಿ ಬಸ್‌ನಲ್ಲಿದ್ದ 11 ಮಂದಿಯನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ರಾಷ್ಟ್ರೀಯ ವಿಪತ್ತು ಪರಿಹಾರ ಪಡೆಯ (ಎನ್‌ಡಿಆರ್‌ಎಫ್) ಸಿಬ್ಬಂದಿಯು ರಕ್ಷಣಾ ಕಾರ್ಯಾಚರಣೆ ಮುಂದುವರಿಸಿದ್ದಾರೆ. ಗುರುವಾರ ರಾತ್ರಿಯೇ ಭೂಕುಸಿತ ಸಂಭವಿಸಿದ್ದರೂ ಭಾರಿ ಮಳೆ, ಪ್ರವಾಹ, ಕೆಸರಿನಿಂದಾಗಿ ರಕ್ಷಣಾ ಸಿಬ್ಬಂದಿಯು ಅವಘಡದ ಸ್ಥಳಕ್ಕೆ ತಲುಪುವುದು ತಡವಾಯಿತು ಎಂದು ರಾಯಗಡ ಜಿಲ್ಲಾಧಿಕಾರಿ ನಿಧಿ ಚೌಧರಿ ತಿಳಿಸಿದ್ದಾರೆ. ವಿವಿಧ ಸ್ಥಳಗಳಲ್ಲಿ ಹಲವು ಮನೆಗಳು ಕುಸಿದಿವೆ.

**ಅತಿ ಹೆಚ್ಚು ಮಳೆಯಾಗಿರುವ ಸ್ಥಳಗಳು** (ಸೆ.ಮೀ.ಗಳಲ್ಲಿ)

| | |
|---|---|
| ಕಣಕುಂಬಿ | 52 |
| ಲೋಂಡಾ | 38 |
| ಕದ್ರಾ | 34 |
| ಜನ್ಮನೆ | 34 |
| ಬನವಾಸಿ | 28 |

ಟೋಕಿಯೊದಲ್ಲಿ ಶುಕ್ರವಾರ ನಡೆದ ಒಲಿಂಪಿಕ್ಸ್ ಉದ್ಘಾಟನೆ ಸಮಾರಂಭದ ಪಥಸಂಚಲನದಲ್ಲಿ ಭಾಗವಹಿಸಿದ ಭಾರತ ತಂಡವನ್ನು ಮನ್‌ಪ್ರೀತ್ ಸಿಂಗ್ ಮತ್ತು ಮೇರಿ ಕೋಮ್ ಅವರು ತ್ರಿವರ್ಣ ಧ್ವಜ ಹಿಡಿದು ಮುನ್ನಡೆಸಿದರು –ಪಿಟಿಐ ಚಿತ್ರ

# ಒಲಿಂಪಿಕ್ಸ್‌ಗೆ ವರ್ಣರಂಜಿತ ಆರಂಭ

ಟೋಕಿಯೊ (ಪಿಟಿಐ): ಕೋವಿಡ್ ಕಾಲಘಟ್ಟದ ಸವಾಲುಗಳನ್ನು ಎದುರಿಸುವ ಗಟ್ಟಿ ವಿಶ್ವಾಸದೊಂದಿಗೆ ಶುಕ್ರವಾರ ಟೋಕಿಯೊ ಒಲಿಂಪಿಕ್ –2020 ಉದ್ಘಾಟನೆಯಾಯಿತು.

ಆತಿಥೇಯ ದೇಶದ ಟೆನಿಸ್ ತಾರೆ ನವೊಮಿ ಒಸಾಕಾ ಅವರು ಕ್ರೀಡಾ ಜ್ಯೋತಿಯನ್ನು ಪ್ರಜ್ವಲಿಸಿದರು. ಜಪಾನಿನ ಚಕ್ರವರ್ತಿ ನರುಹಿಟೊ ಕೂಟವನ್ನು ಉದ್ಘಾಟಿಸಿದರು.

ಪ್ರೇಕ್ಷಕರಿಲ್ಲದ ಕ್ರೀಡಾಂಗಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಜಪಾನ್ ದೇಶದ ಅಭಿವೃದ್ಧಿಯ ಕಥೆ ಹೇಳುವ ರೂಪಕಗಳು ಪ್ರದರ್ಶನಗೊಂಡವು. ಈ ಸಂದರ್ಭದಲ್ಲಿ ನಡೆದ ತಂಡಗಳ ಪಥಸಂಚಲನದಲ್ಲಿ ಭಾರತ ತಂಡದ 19 ಅಥ್ಲೀಟ್‌ಗಳು ಭಾಗವಹಿಸಿದ್ದರು. ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಮತ್ತು ಬಾಕ್ಸಿಂಗ್ ತಾರೆ ಮೇರಿ ಕೋಮ್ ತ್ರಿವರ್ಣ ಧ್ವಜ ಹಿಡಿದು ತಂಡವನ್ನು ಮುನ್ನಡೆಸಿದರು.

ಭಾರತ ತಂಡದಲ್ಲಿ 228 ಸದಸ್ಯರಿದ್ದಾರೆ. ಅದರಲ್ಲಿ 120 ಕ್ರೀಡಾಪಟುಗಳು ಇದ್ದಾರೆ. ಕೂಟವು ಆಗಸ್ಟ್ 8ರಂದು ಮುಕ್ತಾಯವಾಗಲಿದೆ. ಹೋದ ವರ್ಷದ ಜುಲೈನಲ್ಲಿ ಆಯೋಜನೆಗೊಳ್ಳಬೇಕಿದ್ದ ಟೂರ್ನಿಯನ್ನು ಕೋವಿಡ್ ಪಿಡುಗಿನ ಕಾರಣ ಮುಂದೂಡಲಾಗಿತ್ತು.

ವಿಶೇಷ ಪುಟಗಳು 14, 15

ಅರಮನೆ ಮೈದಾನದಲ್ಲಿ ಭಾನುವಾರ ಮಹಾ ಸಮಾವೇಶ

# ಶಕ್ತಿ ಪ್ರದರ್ಶನಕ್ಕೆ ಮಠಾಧೀಶರು ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಬಿ.ಎಸ್. ಯಡಿಯೂರಪ್ಪ ಹೇಳಿದ ಬಳಿಕವೂ ಅವರ ಬೆನ್ನಿಗೇ ನಿಲ್ಲಲು ಮುಂದಾಗಿರುವ ಮಠಾಧೀಶರು, ನಗರದ ಅರಮನೆ ಮೈದಾನದಲ್ಲಿ ಭಾನುವಾರ ಬಲ ಪ್ರದರ್ಶನ ನಡೆಸಲು ಸಜ್ಜಾಗಿದ್ದಾರೆ.

ಕಳೆದ ಒಂದು ವಾರದಿಂದ ಮಠಾಧೀಶರು ನಾಡಿನ ವಿವಿಧ ಭಾಗಗಳಲ್ಲಿ ಯಡಿಯೂರಪ್ಪ ಅವರ ಪರ ಬೆಂಬಲ ವ್ಯಕ್ತಪಡಿಸುತ್ತಲೇ ಬಂದಿದ್ದರು. ಸಾಕಷ್ಟು ಸಂಖ್ಯೆಯ ಮಠಾಧೀಶರು ನಗರದಲ್ಲೇ ಬೀಡು ಬಿಟ್ಟಿದ್ದಾರೆ.

ಬಾಲೆಹೊಸೂರಿನ ದಿಂಗಾಲೇಶ್ವರ ಸ್ವಾಮೀಜಿ ಮತ್ತು ಇತರ ಸ್ವಾಮೀಜಿಗಳು ಶುಕ್ರವಾರ ತುರ್ತು ಸುದ್ದಿಗೋಷ್ಠಿ ನಡೆಸಿ ಮಠಾಧೀಶರ ಸಮಾವೇಶದ ಮಾಹಿತಿ ನೀಡಿದರು. 'ಸಮಾವೇಶದಲ್ಲಿ ನಾಡಿನ ಎಲ್ಲ ಸಮುದಾಯಗಳ ಸ್ವಾಮೀಜಿಗಳು ಭಾಗವಹಿಸಲಿದ್ದು, ಸುಮಾರು 1,000 ಮಠಾಧೀಶರು ಭಾಗವಹಿಸುವ ನಿರೀಕ್ಷೆ ಇದೆ' ಎಂದು ಹೇಳಿದರು.

8ನೇ ಪುಟ ನೋಡಿ

SINGHANIA UNIVERSITY
(Recognized under Section 2(f) of the UGC Act, 1956)
PACHERI BARI, JHUNJHUNU, RAJASTHAN (INDIA). Website: www.singhaniauniversity.co.in/bse/
MISSION : EDUCATION FOR ALL, HEALTHCARE FOR ALL, EMPLOYMENT FOR ALL, CORRUPTION FREE, AUTONOMOUS & MULTI TASKING EDUCATION SYSTEM

SINGHANIA UNIVERSITY BOARD FOR SECONDARY & SENIOR SECONDARY EDUCATION
introduces
INTEGRATED SCHOOL EDUCATION WITH UNIVERSITY EDUCATION FOR PROMOTING STUDENT'S CHOICE BASED CAREER EDUCATION
ADMISSION OPEN in (10th /12th + CERTIFICATE/DIPLOMA) / CERTIFICATE / DIPLOMA / 10th / 12th for students of CBSE / Rajasthan Board / ICSE / any other State Board or University.

FACULTY OF MULTI DISCIPLINARY & MULTI EMPLOYABILITY EDUCATION

CAREER IN MEDICAL, ALLIED & PARAMEDICAL
- 10th / 12th with choice based subjects and,
- Certificate / Diploma in Healthcare Education, Nursing Care Assistant, General Duty Assistant, Medical Lab Technology, Dental Mechanics, Dialysis Technology, Health Inspector, X-Ray Technology, Nursing Assistant, OT Technology, Occupational Therapy, MRI Technician, ECG Technology, Medical Radiology, Physiotherapy, Naturopathy Assistant, Ayurvedic Medicine Assistant
- After completion, start working or take admission 2nd year of graduation.

CAREER IN ENGINEERING
- 10th / 12th with choice based subjects and,
- ITI / Certificate / Diploma in Computer Engineering, Electrical Engineering, Mechanical, Electronics, Civil, Automobile, Textile Technology, Chemical, Bio-Medical, Aerospace etc.
- After completion, start working or take admission 2nd year of graduation.

CAREER IN PROFESSIONAL FIELDS
- 10th / 12th with choice based subjects and,
- Certificate / Diploma in Architecture, Hotel Management, Fashion Designing, Financial Accounting, Beauty & Wellness, Photography, Food & Beverage Production & Management, 3D Animation & VFX, Taxation, Mobile App Development, Airline, Media & Journalism, Agriculture etc.
- After completion, start working or take admission 2nd year of graduation.

CAREER IN DEFENCE & PARAMILITARY FORCES
- 10th / 12th with choice based subjects and,
- Certificate / Diploma in Computer Exam Education, Current Affairs, Interview Cracking Skills, Ethics & Moral Values, Physical Fitness Training, Horse Riding, Swimming etc.

CAREER IN GOVERNMENT & PUBLIC SECTOR
- 10th / 12th with choice based subjects and,
- Certificate / Diploma in Computer Exam Education, Current Affairs, Interview Cracking Skills, Ethics & Moral Values, Physical Fitness Training, Horse Riding, Swimming etc.

MODE OF STUDY : 'ASSISTED SELF STUDY ' BLENDED LEARNING 'CONVENTIONAL MODE OF LEARNING
For other courses and more details visit university website - www.singhaniauniversity.co.in/bse/

RECOGNITION / LEGAL OPINION
As per legal advice, 'Singhania University Board for Secondary & Senior Secondary Education' is a constituent of Singhania University, a statutory university established by an Act of State Legislature and recognised under Section 2(f) of the UGC Act, 1956 and empowered to award all degrees, diplomas and certificates in all education under Section 22 of the UGC Act read with Section 5(b) of The Singhania University Act, 2008. The academic distinctions awarded by the University are sui generis, recognised and valid for all intents and purposes including government jobs. For more information, refer to the University website.

INVITING APPLICATIONS FOR COLLABORATION
PROPOSALS ARE INVITED FROM SCHOOLS AND INSTITUTIONS. TO APPLY FOR COLLABORATION MAIL AT coll@singhaniauniversity.ac.in

FOR ADMISSION CALL AT : 8448515516
OR MAIL AT : admission@singhaniauniversity.ac.in

# ಆಸ್ಕರ್ ಫರ್ನಾಂಡಿಸ್ ಆರೋಗ್ಯ ಸ್ಥಿರ

ಮಂಗಳೂರು: ತಲೆಗೆ ಪೆಟ್ಟಾಗಿ, ನಗರದ ಯೇನೆಪೋಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಜ್ಯಸಭಾ ಸದಸ್ಯ, ಕಾಂಗ್ರೆಸ್‌ನ ಹಿರಿಯ ಮುಖಂಡ ಆಸ್ಕರ್ ಫರ್ನಾಂಡಿಸ್ ಅವರ ಆರೋಗ್ಯಸ್ಥಿತಿ ಗಂಭೀರವಾಗಿದ್ದರೂ, ಸ್ಥಿರವಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

'ವ್ಯಾಯಾಮ ಮಾಡುವಾಗ ಜಾರಿ ಬಿದ್ದು, ತಲೆಗೆ ಪೆಟ್ಟಾಗಿತ್ತು. ನಂತರ ತಪಾಸಣೆ ವೇಳೆ ಇಂಟ್ರಾಕ್ರೇನಿಯಲ್ ರಕ್ತಸ್ರಾವವಾಗಿರುವುದು ಗೊತ್ತಾಗಿತ್ತು. ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಮೊಹಮ್ಮದ್ ತಾಹಿರ್ ತಿಳಿಸಿದ್ದಾರೆ.

'ಅವರಿಗೆ ಈ ಮೊದಲೇ ಇದ್ದ, ಹೃದಯ ಮತ್ತು ಮೂತ್ರಪಿಂಡದ ಸಮಸ್ಯೆಯಿಂದಾಗಿ ಆರೋಗ್ಯ ಸ್ಥಿತಿ ಜಟಿಲವಾಗಿದೆ' ಎಂದು ಹೇಳಿದರು. 'ವೈದ್ಯರು ಆರೋಗ್ಯದ ಮೇಲೆ ನಿರಂತರ ನಿಗಾ ವಹಿಸಿದ್ದಾರೆ. ಶಸ್ತ್ರಚಿಕಿತ್ಸೆ ಕುರಿತು ಇನ್ನೂ ನಿರ್ಧಾರವಾಗಿಲ್ಲ' ಎಂದು ಆಸ್ಕರ್ ಅವರ ಕುಟುಂಬದ ಮೂಲಗಳು ತಿಳಿಸಿವೆ.

# 'ಮರಳಿ ಕ್ಯಾಂಪಸ್‌ಗೆ ಸ್ವಾಗತ'

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 'ಮರಳಿ ಕ್ಯಾಂಪಸ್‌ಗೆ ಸುಸ್ವಾಗತ' ಕಾರ್ಯಕ್ರಮವನ್ನು ಇದೇ 26ರಂದು ಆಯೋಜಿಸಲಾಗಿದೆ.

ಬಹುದಿನಗಳಿಂದ ವಿಶ್ವ-ವಿದ್ಯಾಲಯದ ಆವರಣದಿಂದ ದೂರ ಉಳಿದಿರುವ ವಿದ್ಯಾರ್ಥಿಗ-ಳನ್ನು ಸ್ವಾಗತಿಸಲು ಕಾರ್ಯಕ್ರಮ ಆಯೋಜಿಸಿದ್ದು, ಕುಲಪತಿ ಕಚೇರಿಯ ಆವರಣದಲ್ಲಿ ಬೆಳಿಗ್ಗೆ 11ಕ್ಕೆ ಕಾರ್ಯಕ್ರಮ ನಡೆಯಲಿದೆ. ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ನಗರದಲ್ಲಿ ಇಂದು

**ಶ್ರೀರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿಯವರ 28ನೇ ಚಾತುರ್ಮಾಸ್ಯ ಆಚರಣೆ:** ಸ್ಥಳ–ಶ್ರೀರಾಮಾಶ್ರಮ, ಗಿರಿನಗರ, ಬೆಳಿಗ್ಗೆ 9.30

**ರಂಗಸುರಾನ–ಚನ್ನಕೇಶವ ಅವರಿಗೆ ರಂಗ ನಮನ:** ಭಾಗವಹಿಸುವವರು–ಶ್ರೀನಿವಾಸ್ ಜಿ.ಕಪ್ಪಣ್ಣ, ಜೆ.ಲೋಕೇಶ್, ಸಿ.ಬಸವಲಿಂಗಯ್ಯ, ಶಶಿಧರ ಅಡಪ, ಎಚ್.ಎಲ್.ಪುಷ್ಪ, ಅಧ್ಯಕ್ಷತೆ–ಎಂ.ಆರ್. ಭವಾನಿ, ಅರ್ಚನಾ ಸುರಾನ, ಆಯೋಜನೆ–ಸುರಾನ ಕಾಲೇಜು, ನಮ್ ತಂಡ, ಸ್ಥಳ–ಸೆಮಿನಾರ್ ಹಾಲ್, ಸುರಾನ ಕಾಲೇಜು, ಬೆಳಿಗ್ಗೆ 10.30

**ದಯಾನಂದ ಸಾಗರ ಇನ್‌ಸ್ಟಿಟ್ಯೂಷನ್ಸ್‌ನ ಸಂಸ್ಥಾಪಕರ ದಿನ ಹಾಗೂ ಶತಮಾನೋತ್ಸವ ಸಮಾರಂಭ:** ಭಾಗವಹಿಸುವವರು–ಡಿ.ಪ್ರೇಮಚಂದ್ರ ಸಾಗರ್, ಡಿ.ಹೇಮಚಂದ್ರ ಸಾಗರ್, ಆರ್. ಜನಾರ್ದನ್, ಗಾಳಿಸ್ವಾಮಿ, ಬೆಳಿಗ್ಗೆ 10 (ಆನ್‌ಲೈನ್ ಕಾರ್ಯಕ್ರಮ)

**'ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಪ್ರಾದೇಶಿಕ ಅಸ್ಮಿತೆ' ಕುರಿತು ವೆಬಿನಾರ್:** ಮಾತನಾಡುವವರು–ಪುರುಷೋತ್ತಮ ಬಿಳಿಮಲೆ, ಪ್ರತಿಸ್ಪಂದನೆ–ಶಾಕಿರಾ ಖಾನಮ್, ಪಿ.ಡಿ.ಶ್ರೀಧರ್, ಮಲ್ಲಿಕಾರ್ಜುನ ಮೇತ್ರಿ, ಜಯಪ್ರಕಾಶ್ ಶೆಟ್ಟಿ, ನಾಗೇಂದ್ರಪ್ಪ ಔರಾದ್, ಶಂಕರ ವಾಲೀಕಾರ, ಆಯೋಜನೆ–ಸಮುದಾಯ ಕರ್ನಾಟಕ, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

## ಅಮೆಜಾನ್–ಫ್ಲಿಪ್‌ಕಾರ್ಟ್‌ಗೆ ಹಿನ್ನಡೆ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಇ–ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್‌ಗೆ ಮತ್ತೊಂದು ಹಿನ್ನಡೆಯಾಗಿದೆ. ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಆದೇಶಿಸಿರುವ ತನಿಖೆ ಪ್ರಶ್ನಿಸಿ ಈ ಸಂಸ್ಥೆಗಳು ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ದ್ವಿಸದಸ್ಯ ಪೀಠ ವಜಾಗೊಳಿಸಿದೆ.

ಸ್ಪರ್ಧಾ ಕಾಯ್ದೆ 2002 ಉಲ್ಲಂಘನೆ ಮಾಡಿಲ್ಲ ಎಂಬುದಾದರೆ ತನಿಖೆಗೆ ಅರ್ಜಿದಾರರು ಹಿಂಜರಿಯಬಾರದು. ಈ ಹಂತದಲ್ಲಿ ತನಿಖೆಗೆ ತಡೆ ನೀಡಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ ಅವರಿದ್ದ ಪೀಠ ಹೇಳಿತು.

ದೆಹಲಿಯ ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ ಸಂಘಟನೆಯಾದ ದೆಹಲಿ ವ್ಯಾಪಾರ ಮಹಾಸಂಘವು ಸಿಸಿಐಗೆ ದೂರು ನೀಡಿತ್ತು. ವಸ್ತುಗಳ ಮೇಲೆ ಅತೀ ಹೆಚ್ಚು ರಿಯಾಯಿತಿ ನೀಡುವ ಸ್ಪರ್ಧಾತ್ಮಕ ವಿರೋಧಿ ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ಸ್ಪರ್ಧಾತ್ಮಕ ಕಾಯ್ದೆ–2002 ಅನ್ನು ಉಲ್ಲಂಘಿಸಲಾಗಿದೆ ಎಂಬ ಆರೋಪದಲ್ಲಿ ಸಿಸಿಐ ತನಿಖೆಗೆ ಆದೇಶಿಸಿತ್ತು.

ಈ ಆದೇಶ ಪ್ರಶ್ನಿಸಿ ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ಸಂಸ್ಥೆಗಳು 2020 ಜನವರಿ 13ರಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದವು. ಏಕಸದಸ್ಯ ಪೀಠ ಈ ಅರ್ಜಿ ವಜಾಗೊಳಿಸಿತ್ತು. ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದವು.

## ವಸತಿ ನಿಲಯಗಳು ಪುನರಾರಂಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಪದವಿ ಪರೀಕ್ಷೆಗಳನ್ನು ಬರೆಯುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಇದೇ 26ರಿಂದ ಹಾಸ್ಟೆಲ್‌ಗಳನ್ನು ತೆರೆಯಲಾಗುವುದು ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಬಿ.ಟೆಕ್‌ನ 1 ಮತ್ತು 3ನೇ ಸೆಮಿಸ್ಟರ್ ಹಾಗೂ ಬಿ.ಆರ್ಕ್‌ನ 1ನೇ ಸೆಮಿಸ್ಟರ್‌ನ ಪರೀಕ್ಷೆಗಳು ಇದೇ 28ರಿಂದ ಪ್ರಾರಂಭವಾಗಲಿವೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯ ಪ್ರೊ. ಎಚ್‌.ಎನ್‌. ರಮೇಶ್ ತಿಳಿಸಿದ್ದಾರೆ.


**ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,**

ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 23300497–41159606 ಫ್ಯಾಕ್ಸ್: 23359600,
Email: vjn@jscbl.com, ಶಾಖೆ: ರಾಜರಾಜೇಶ್ವರಿನಗರ

**ಸ್ವಾಧೀನ ಸೂಚನೆ (ಸ್ಥಿರಾಸ್ತಿಗಳಿಗಾಗಿ) ನಿಯಮ 8(1)**

ಅದಾಗಿ ಕೆಳಸಹಿದಾರರು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸದರಿ ನೋಟೀಸ್ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತರೂ. 1,29,61,472/– (ಒಂದು ಕೋಟಿ ಇಪ್ಪತ್ತೊಂಭತ್ತು ಲಕ್ಷದ ಅರವತ್ತೊಂದು ಸಾವಿರದ ನಾಲ್ಕನೂರು ಎಪ್ಪತ್ತೇರಡು ರೂಪಾಯಿಗಳು ಮಾತ್ರ) ಅನ್ನು ಮರುಪಾವತಿ ಮಾಡುವಂತೆ ಸಾಲಗಾರರಾದ 1. ಶ್ರೀ ಬಸವರಾಜು ಬಿ. ಬಿನ್ ಭದ್ರಯ್ಯ ಮತ್ತು ಶ್ರೀಮತಿ ಅನ್ನಪೂರ್ಣ ಬಿ. ಬಸವರಾಜು ಬಿ. ರವರ ಧರ್ಮಪತ್ನಿ ಇವರಿಬ್ಬರೂ ನಂ. 1102, 4ನೇ ಮುಖ್ಯರಸ್ತೆ, 5ನೇ ಹಂತ, ಬಿ.ಇ.ಎಂ.ಎಲ್. ಲೇಔಟ್, ರಾಜರಾಜೇಶ್ವರಿನಗರ, ಬೆಂಗಳೂರು – 560 098 ಇಲ್ಲಿನ ನಿವಾಸಿಗಳು, ಇವರಿಗೆ ಕರೆ ನೀಡಿ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ, 2002 ರ ಅನ್ವಯ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮ 2002 ರ ನಿಯಮ 3 ಓದಿಕೊಂಡಂತೆ ಪ್ರಕರಣ 13 (12) ರ ಅನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ ದಿನಾಂಕ 22–02–2021 ರ ಡಿಮ್ಯಾಂಡ್ ನೋಟೀಸ್ ನೀಡಿದ್ದರು.

ಸಾಲಗಾರರು ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿರುವುದರಿಂದ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು ನಿಯಮ 8 ಓದಿಕೊಂಡಂತೆ ಕಾಯ್ದೆಯ ಪ್ರಕರಣ 13ರ ಉಪಪ್ರಕರಣ (4) ರ ಅನ್ವಯ ಇವರಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಈ ಕೆಳಗೆ ವಿವರಿಸಿರುವ ಸ್ವತ್ತನ್ನು ದಿನಾಂಕ 15ನೇ ಜುಲೈ 2021 ರಂದು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿರುವರು.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಯಾರೂ ಸದರಿ ಸ್ವತ್ತಿನ ಬಗ್ಗೆ ವ್ಯವಹರಿಸಬಾರದು. ಒಂದು ವೇಳೆ ಸದರಿ ಸ್ವತ್ತಿನ ಬಗ್ಗೆ ವ್ಯವಹರಿಸಿದ್ದೇ ಆದರೆ ಅದು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ರಾಜರಾಜೇಶ್ವರಿನಗರ ಶಾಖೆ, ಬೆಂಗಳೂರು ಇದಕ್ಕೆ ಸಾಲದ ಸಂ. ಬಿಎಲ್/77 ರ ಸಂಬಂಧದಲ್ಲಿ ಬರಬೇಕಾಗಿರುವ ಸಾಲದ ಬಾಕಿ ಮೊತ್ತ ದಿನಾಂಕ 14–07–2021 ರಂದು ಇದ್ದಂತೆ ರೂ. 1,31,90,594/– (ಒಂದು ಕೋಟಿ ಮೂವತ್ತೊಂದು ಲಕ್ಷದ ತೋಂಭತ್ತು ಸಾವಿರದ ಐದು ನೂರು ತೊಂಭತ್ತ ನಾಲ್ಕು ರೂಪಾಯಿಗಳು ಮಾತ್ರ) ಮತ್ತು ಓಡಿ/11 ಓಂಕಾರ್ ಫಿಲ್ಲಿಂಗ್ ಸೆಂಟರ್ ಇವರಿಗೆ ರೂ. 40,86,453/– (ನಲವತ್ತು ಲಕ್ಷದ ಎಂಭತ್ತಾರು ಸಾವಿರದ ನಾಲ್ಕು ನೂರ ಐವತ್ತು ಮೂರು ರೂಪಾಯಿಗಳು ಮಾತ್ರ) ಒಟ್ಟು ಮೊತ್ತ ರೂ. 1,72,77,047/– (ಒಂದು ಕೋಟಿ ಎಪ್ಪತ್ತೇರಡು ಲಕ್ಷದ ಎಪ್ಪತ್ತೇಳು ಸಾವಿರದ ನಲವತ್ತೇಳು ರೂಪಾಯಿಗಳು ಮಾತ್ರ) ಮತ್ತು ಇದರ ಮೇಲಿನ ಬಡ್ಡಿ ಪಾವತಿ ಮಾಡುವುದಕ್ಕೆ ಒಳಪಟ್ಟಿರುತ್ತದೆ.

ಭದ್ರತೆಯುಳ್ಳ ಆಸ್ತಿಯನ್ನು ಬಿಡಿಸಿಕೊಳ್ಳಲು ಕಾಲಾವಕಾಶ ಲಭ್ಯವಿರುವ ಬಗ್ಗೆ ಪ್ರಕರಣ 13 (8) ರ ಉಪಬಂಧಗಳ ಬಗ್ಗೆ ಸಾಲಗಾರರ ಗಮನ ಸೆಳೆಯಲಾಗಿದೆ.

**ಸ್ಥಿರಾಸ್ತಿಯ ವಿವರ :**

1. ಶ್ರೀಮತಿ ಅನ್ನಪೂರ್ಣ ಬಿ. ಬಸವರಾಜು ಬಿ. ರವರ ಧರ್ಮಪತ್ನಿ ಇವರಿಗೆ ಸೇರಿದ ಸ್ವತ್ತು
ಬೆಂಗಳೂರು ದಕ್ಷಿಣ ತಾಲ್ಲೂಕು, ರಾಜರಾಜೇಶ್ವರಿನಗರ, ಬಿ.ಇ.ಎಂ.ಎಲ್. ಲೇಔಟ್ 7ನೇ ಹಂತ, ಕೆಂಗೇರಿ ಹೋಬಳಿ, ಮೈಲಸಂದ್ರ ಗ್ರಾಮದ ಸರ್ವೆ ನಂ. 16/1 ರಲ್ಲಿರುವ, ಖಾತಾ ನಂ. 1458/1381/1440/73 ಹೊಂದಿರುವ, ಪೂರ್ವದಿಂದ ಪಶ್ಚಿಮಕ್ಕೆ : 50–0 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 30–0 ಅಡಿ ಹೀಗೆ ಒಟ್ಟಾರೆ 1500 ಚದರ ಅಡಿ ವಿಸ್ತೀರ್ಣವುಳ್ಳ ನಂ. 73 ರ ಸ್ಥಿರಾಸ್ತಿ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು. ಪೂರ್ವಕ್ಕೆ :ರಸ್ತೆ, ಪಶ್ಚಿಮಕ್ಕೆ : ನಿವೇಶನ ಸಂ. 88, ಉತ್ತರಕ್ಕೆ : ನಿವೇಶನ ಸಂ. 74, ದಕ್ಷಿಣಕ್ಕೆ : ನಿವೇಶನ ಸಂ. 72.

ಸ್ಥಳ : ಬೆಂಗಳೂರು
ದಿನಾಂಕ : 15/07/2021

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,


### ರಾಜ್ಯದಲ್ಲಿ 11 ನೋಡಲ್ ಕೇಂದ್ರ ಸ್ಥಾಪನೆ • 84 ಸಾವಿರ ಅಭ್ಯರ್ಥಿಗಳು

# ಕೆ–ಸೆಟ್ ನಾಳೆ: ಮೈಸೂರು ವಿ.ವಿ ಸಜ್ಜು

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಪರೀಕ್ಷಾ ಕೇಂದ್ರಗಳಲ್ಲಿ ಕೋವಿಡ್ ಮುನ್ನೆಚ್ಚರಿಕೆ
- ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1ರವರೆಗೆ ಪರೀಕ್ಷೆ
- ಮಾಸ್ಕ್ ಮತ್ತು ಪ್ರವೇಶ ಪತ್ರ ಕಡ್ಡಾಯ

**ಮೈಸೂರು:** ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆಯನ್ನು (ಕೆ–ಸೆಟ್) ಜುಲೈ 25ರಂದು ನಡೆಸಲು ಮೈಸೂರು ವಿಶ್ವವಿದ್ಯಾಲಯ ಸಜ್ಜಾಗಿದೆ.

ಬೆಂಗಳೂರು, ಮೈಸೂರು, ಬೆಳಗಾವಿ, ಬಳ್ಳಾರಿ, ವಿಜಯಪುರ, ದಾವಣಗೆರೆ, ಧಾರವಾಡ, ಕಲಬುರ್ಗಿ, ಮಂಗಳೂರು, ಶಿವಮೊಗ್ಗ ಮತ್ತು ತುಮಕೂರಿನಲ್ಲಿರುವ ನೋಡಲ್ ಕೇಂದ್ರಗಳಲ್ಲಿ 41 ವಿಷಯಗಳಲ್ಲಿ ಪರೀಕ್ಷೆ ನಡೆಯಲಿದೆ. ಒಟ್ಟು 84 ಸಾವಿರ ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಕೋವಿಡ್ ಮಾರ್ಗಸೂಚಿ ಅನುಸಾರ ಪರೀಕ್ಷಾ ಕೇಂದ್ರಗಳಲ್ಲಿ ಸ್ಯಾನಿಟೈಸ್ ಮಾಡಲಾಗಿದೆ. ಪ್ರತಿ ಕೊಠಡಿಯಲ್ಲಿ 24 ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಕೋವಿಡ್ ಲಸಿಕೆ ಪಡೆದಿರುವ ಸಿಬ್ಬಂದಿಯನ್ನೇ ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದೆ.

‘ಜುಲೈ 25ರಂದು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1ರವರೆಗೆ ಪರೀಕ್ಷೆ ನಡೆಯಲಿದೆ. ಎಲ್ಲಾ ಅಭ್ಯರ್ಥಿಗಳು ಬೆಳಿಗ್ಗೆ 8ಕ್ಕೆ ಪರೀಕ್ಷೆ ಕೇಂದ್ರದಲ್ಲಿ ಹಾಜರಿರಬೇಕು. ಜೊತೆಗೆ ಕಡ್ಡಾಯವಾಗಿ ಮಾಸ್ಕ್ ಮತ್ತು ಪ್ರವೇಶ ಪತ್ರವನ್ನು ತರಬೇಕು’ ಎಂದು ಕೆ–ಸೆಟ್ ಸಂಯೋಜಕ ಪ್ರೊ.ಎಚ್‌.ರಾಜಶೇಖರ್ ‘ಪ್ರಜಾವಾಣಿ’ಗೆ ತಿಳಿಸಿದರು.

**ಅಭ್ಯರ್ಥಿಗಳ ಸುರಕ್ಷತೆಯೇ ನಮ್ಮ ಆದ್ಯತೆ. ಕೋವಿಡ್ ಮಾರ್ಗಸೂಚಿ ಪಾಲಿಸಲು ಎಲ್ಲ ಕೇಂದ್ರಗಳಿಗೆ ಸೂಚಿಸಲಾಗಿದೆ**

**ಪ್ರೊ.ಎಚ್‌. ರಾಜಶೇಖರ್**
ಕೆ–ಸೆಟ್ ಸಂಯೋಜಕ

**ಮೊದಲ ಬಾರಿಗೆ ಕೆ–ಸೆಟ್ ಪರೀಕ್ಷೆ ಬರೆಯುತ್ತಿದ್ದೇನೆ. ಪ್ರವೇಶಪತ್ರ ಕಳೆದುಕೊಂಡಿದ್ದೆ. ನಕಲು ಪ್ರವೇಶಪತ್ರ ಸಿಕ್ಕಿದ್ದರಿಂದ ಖುಷಿಯಾಗಿದೆ**

**ಕೆ.ಎಂ. ನಾಗೇಶ್**
ಕೆ–ಸೆಟ್ ಅಭ್ಯರ್ಥಿ

‘ಕೋವಿಡ್ ಅಥವಾ ರೋಗ ಲಕ್ಷಣಗಳು ಇರುವವರಿಗೆ ಪರೀಕ್ಷಾ ಕೇಂದ್ರಗಳಲ್ಲಿ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ. ಹೀಗಾಗಿ, ಅಭ್ಯರ್ಥಿಗಳು ಆತಂಕ ಪಡದೆ ಪರೀಕ್ಷೆ ಬರೆಯಬೇಕು’ ಎಂದು ಮನವಿ ಮಾಡಿದರು.

‘ಈ ಹಿಂದೆ ಕೆಲ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡಿರಲಿಲ್ಲ. ಅವರಿಗೆ ಮತ್ತೆ ಡೌನ್‌ಲೋಡ್‌ಗೆ ಅವಕಾಶ ನೀಡಲಾಗಿತ್ತು. ಪ್ರವೇಶ ಪತ್ರ ಕಳೆದುಕೊಂಡವರ ಅನುಕೂಲಕ್ಕಾಗಿ ನಕಲು ಪ್ರವೇಶ ಪತ್ರ ನೀಡುವ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ನೋಂದಣಿ ಮಾಡಿಕೊಂಡಿರುವ ವಿದ್ಯಾರ್ಥಿಗಳು ಹೆಸರು ಅಥವಾ ನೋಂದಣಿ ಸಂಖ್ಯೆಯನ್ನು ನೋಡಲ್ ಕೇಂದ್ರದಲ್ಲಿ ನೀಡಿದರೆ, ಅವರ ದಾಖಲೆ ಹಾಗೂ ಹೆಸರನ್ನು ಪರಿಶೀಲಿಸಿ ನಕಲು ಪ್ರವೇಶ ಪತ್ರ ಕೊಡಲಾಗುತ್ತದೆ’ ಎಂದು ತಿಳಿಸಿದರು.

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸುಪರ್ದಿಯಲ್ಲಿ ನಡೆಯುವ ಈ ಪರೀಕ್ಷೆಗೆ ಮೈಸೂರು ವಿಶ್ವವಿದ್ಯಾಲಯವು ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇದುವರೆಗೆ 9 ಬಾರಿ ಪರೀಕ್ಷೆ ನಡೆಸಿದ್ದು, ಈಗ ನಡೆಯಬೇಕಿರುವುದು 10ನೆಯದ್ದು.

ಏ.11ರಂದು ನಿಗದಿಯಾಗಿದ್ದ ಕೆ–ಸೆಟ್ ಪರೀಕ್ಷೆಯನ್ನು ಈಗಾಗಲೇ ಎರಡು ಬಾರಿ ಮುಂದೂಡಲಾಗಿತ್ತು. ಸಾರಿಗೆ ನೌಕರರ ಮುಷ್ಕರ ಕಾರಣ 11ರಿಂದ ಏ.25ಕ್ಕೆ ಮುಂದೂಡಲಾಗಿತ್ತು. ಕೊರೊನಾ ಸೋಂಕು ನಿಯಂತ್ರಿಸಲು ಕರ್ಫ್ಯೂ ವಿಧಿಸಿದ್ದ ಕಾರಣ ಎರಡನೇ ಬಾರಿ ಮುಂದಕ್ಕೆ ಹಾಕಲಾಗಿತ್ತು.

**ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ**

## ವಿದ್ಯುತ್ ವ್ಯತ್ಯಯ ನಾಳೆಯಿಂದ

**ಬೆಂಗಳೂರು:** ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 25ರಿಂದ 31ರವರೆಗೆ ಬೆಳಿಗ್ಗೆ 10ರಿಂದ ಸಂಜೆ 6ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

**25 ಮತ್ತು 26:** ರಾಘವೇಂದ್ರ ಬಡಾವಣೆ, ಆರ್.ಎನ್.ಎಸ್. ಮೋಟಾರ್, ಮುನೇಶ್ವರ ನಗರ, ಬೃಂದಾವನ, ಪೀಣ್ಯ ಕೈಗಾರಿಕಾ ಪ್ರದೇಶ, ಸಹಕಾರ ನಗರ, ಎಂಸಿಇಎಚ್‌ಎಸ್ ಬಡಾವಣೆ, ಬ್ಯಾಟರಾಯನಪುರ ತಲಕಾವೇರಿ ಬಡಾವಣೆ, ಗೋಕುಲ, ಎಸ್.ಎಂ. ನಗರ, ಸಾಯಿ ಕಾಲೇಜು ರಸ್ತೆ, ಪ್ರಕಾಶ ನಗರ, ಸುಬ್ರಹ್ಮಣ್ಯ ನಗರ, ಬಂಡಿರೆಡ್ಡಿ ವೃತ್ತ, ಐಐಎಸ್‌ಸಿ, ಮಲ್ಲೇಶ್ವರ 8ನೇ ಮುಖ್ಯರಸ್ತೆ, ಟಿಟಿಎಂಸಿ, ಯಶವಂತಪುರ, ರವೀಂದ್ರ ನಗರ, ಪ್ರಶಾಂತನಗರ, ಸಂತೋಷ ನಗರ, ಏರ್‌ಫೋರ್ಸ್ ಜಾಲಹಳ್ಳಿ, ಮಹಾಲಕ್ಷ್ಮಿ ಬಡಾವಣೆ ಸುತ್ತ–ಮುತ್ತಲಿನ ಪ್ರದೇಶ.

**26ರಿಂದ 31:** ಬ್ರೆಂಟನ್ ರಸ್ತೆ, ಶೋಭಾ ಪರ್ಲ್, ಐಸಿಐಸಿಐ ಬ್ಯಾಂಕ್, ಎಂಬೆಸ್ಸಿ ಹೈಟ್ಸ್, ಆಭರಣ ಜ್ಯುವೆಲರಿ, ಅಶೋಕ ನಗರ, ಗರುಡಮಾಲ್, ಏರ್‌ಫೋರ್ಸ್ ಆಸ್ಪತ್ರೆ, ದೊಮ್ಮಲೂರು, ಆಸ್ಟಿನ್ ಟೌನ್, ವಿವೇಕ್ ನಗರ, ಟ್ರಿನಿಟಿ ಚರ್ಚ್, ವಿಜಯ ಬ್ಯಾಂಕ್, ಹೋಟೆಲ್ ತಾಜ್, ವಿಕ್ಟೋರಿಯಾ ಬಡಾವಣೆ, ಮ್ಯೂಸಿಯಂ ರಸ್ತೆ, ಆಲ್ಬರ್ಟ್ ರಸ್ತೆ, ಲಾವೆಲ್ಲೆ ರಸ್ತೆ, ಸೇಂಟ್ ಮಾರ್ಕ್ ರಸ್ತೆ, ವೈ.ಜಿ. ಪಾಳ್ಯ, ಕೆಎಸ್‌ಆರ್‌ಪಿ, ಐಟಿಸಿ ಹೋಟೆಲ್, ರಿಚ್ಮಂಡ್ ರಸ್ತೆ, ಎಂ.ಜಿ. ರಸ್ತೆ, ಕಾನ್ವೆಂಟ್ ರಸ್ತೆ, ಎಸ್.ಎಲ್. ಅಪಾರ್ಟ್‌ಮೆಂಟ್, ರಿಚ್ಮಂಡ್ ಟೌನ್, ನಂಜಪ್ಪ ವೃತ್ತ, ಲ್ಯಾಂಗ್‌ಫೋರ್ಡ್ ರಸ್ತೆ, ಫುಡ್‌ವರ್ಲ್ಡ್ ರಸ್ತೆ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು.

## ಹುಂಡೈ ಕ್ಯಾಂಪ್ ಇಂದು ಅಂತ್ಯ

**ಬೆಂಗಳೂರು:** ಹುಂಡೈ ಕಂಪನಿ ಆಯೋಜಿಸಿರುವ ಮಾನ್ಸೂನ್ ಕ್ಯಾಂಪ್ ಶನಿವಾರ (ಜು. 24) ಕೊನೆಗೊಳ್ಳಲಿದೆ. ಈ ಕ್ಯಾಂಪ್‌ನಲ್ಲಿ ಗ್ರಾಹಕರು ಆಕರ್ಷಕ ಕೊಡುಗೆಗಳನ್ನು ಪಡೆಯಬಹುದು ಎಂದು ಕಂಪನಿ ಹೇಳಿದೆ.

ರಾಜ್ಯದ ಎಲ್ಲ ಹುಂಡೈ ವರ್ಕ್‌ಶಾಪ್‌ಗಳಲ್ಲಿ ಈ ಕ್ಯಾಂಪ್ ಆಯೋಜನೆ ಆಗಿದೆ. ಇಲ್ಲಿ ಗ್ರಾಹಕರು ಹೊಸ ಐ20 ಕಾರು ಹೇಗಿದೆ ಎಂಬುದನ್ನು ಪರಿಶೀಲಿಸುವ, ಟೆಸ್ಟ್ ಡ್ರೈವ್ ಮಾಡುವ ಅವಕಾಶವೂ ಇದೆ. ಗ್ರಾಹಕರು ಹುಂಡೈ ಕೇರ್ ಆ್ಯಪ್ ಮೂಲಕ ತಮ್ಮ ಸಮಯವನ್ನು ಕಾಯ್ದಿರಿಸಿಕೊಳ್ಳಬಹುದು ಎಂದು ಕಂಪನಿ ತಿಳಿಸಿದೆ.

## ಉಚಿತ ಆನ್‌ಲೈನ್ ಸಮಾಲೋಚನೆ

**ಬೆಂಗಳೂರು:** ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯು ವಿವಿಧ ರೀತಿಯ ಕಣ್ಣಿನ ಸಮಸ್ಯೆಗಳಿಗೆ ಆ.15ರವರೆಗೆ ಆನ್‌ಲೈನ್ ವೇದಿಕೆಯ ಮೂಲಕ ಉಚಿತ ಸಮಾಲೋಚನೆಯನ್ನು ಹಮ್ಮಿಕೊಂಡಿದೆ.

ಕೋವಿಡ್ ಹಾಗೂ ಲಾಕ್‌ಡೌನ್‌ನಿಂದಾಗಿ ಕಣ್ಣಿನ ಸಮಸ್ಯೆ ಎದುರಿಸುತ್ತಿರುವ ಹಲವರಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆಯಲು ಸಾಧ್ಯವಾಗಿಲ್ಲ. ಇದರಿಂದಾಗಿ ಕೆಲವರಲ್ಲಿ ಸಮಸ್ಯೆ ಉಲ್ಬಣಿಸಿದೆ. ಮನೆಯಲ್ಲಿ ಅಧಿಕ ಅವಧಿ ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ವೀಕ್ಷಣೆಯಿಂದಾಗಿ ಹಲವರಲ್ಲಿ ಹೊಸ ಸ್ವರೂಪದ ಸಮಸ್ಯೆಗಳು ಗೋಚರಿಸುತ್ತಿವೆ. ಈ ಬಗ್ಗೆ ವೈದ್ಯರ ಅಭಿಪ್ರಾಯ ಪಡೆಯಲು ಮೊ. 9167378541ಕ್ಕೆ ಕರೆ ಮಾಡಬಹುದು ಅಥವಾ www.dragarwal.com ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಒಂದು ಚಮಚ ರುಬ್ಬಿದ ಈರುಳ್ಳಿ ರಸದ ಜತೆ ಒಂದು ಚಮಚ ಲೋಳೆಸರವನ್ನು ಸೇರಿಸಿ ತಲೆಗೆ ಮಸಾಜ್ ಮಾಡಿಕೊಂಡು ಅರ್ಧ ಗಂಟೆ ಬಿಟ್ಟು ತಲೆಸ್ನಾನ ಮಾಡುವುದರಿಂದ ತಲೆಹೊಟ್ಟು ಕಡಿಮೆಯಾಗುತ್ತದೆ



# ಉದ್ಯೋಗ ಬದಲಾವಣೆಯೂ ಹೊಸ ಬದುಕಿನ ಹಾದಿಯೂ

ಹಲವು ವರ್ಷಗಳಿಂದ ಒಂದೇ ವೃತ್ತಿಯಲ್ಲಿರುವ ಹೆಣ್ಣುಮಕ್ಕಳನ್ನು ಏಕತಾನತೆ ಕಾಡುವುದು ಸಹಜ. ಇದು ಕೆಲವೊಮ್ಮೆ ವೈಯಕ್ತಿಕ ಬದುಕಿನ ಮೇಲೂ ಪರಿಣಾಮ ಬೀರುತ್ತದೆ. ಅಂತಹ ಸಂದರ್ಭದಲ್ಲಿ ಉದ್ಯೋಗ ತೊರೆಯುವವರ ಸಂಖ್ಯೆ ಜಾಸ್ತಿಯಾಗಿದೆ.

**ರೇಷ್ಮಾ**

ಖಾಸಗಿ ಕಂಪನಿಯೊಂದರಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿದ್ದ ಮಹತಿ ಇತ್ತೀಚೆಗೆ ಕೆಲಸಕ್ಕೆ ರಾಜೀನಾಮೆ ನೀಡಿದ್ದಳು. ದೊಡ್ಡ ಹುದ್ದೆ, ಕೈ ತುಂಬಾ ಸಂಬಳ, ಎಲ್ಲವನ್ನೂ ಅನುಸರಿಸಿಕೊಂಡು ಹೋಗುವ ಗಂಡ–ಮಕ್ಕಳು.. ಆದರೂ ಆಕೆ ಕೆಲಸಕ್ಕೆ ರಾಜೀನಾಮೆ ನೀಡಿದ್ದು ಎಲ್ಲರಿಗೂ ಆಶ್ಚರ್ಯ. 'ನಾನು ಬಹಳ ಕಷ್ಟಪಟ್ಟು ಓದಿ, ಕೆಲಸಕ್ಕೆ ಸೇರಿದ್ದೆ. ಮೊದ ಮೊದಲು ಎಲ್ಲವೂ ಚೆನ್ನಾಗಿತ್ತು. ಆದರೆ ಕೆಲಸದಲ್ಲಿ ಏಕತಾನತೆ ಕಾಡಲು ಶುರುವಾಯಿತು. ಅದರೊಂದಿಗೆ ವೃತ್ತಿ ಜೀವನದ ಒತ್ತಡದಿಂದ ಮನೆಯವರನ್ನೂ ಖುಷಿಯಾಗಿ ಇಡಲು ಆಗುತ್ತಿರಲಿಲ್ಲ. ನನ್ನದೇ ಆದ ಜೀವನವೇ ಇಲ್ಲದಂತಾಗಿತ್ತು. ಸಂಬಳಕ್ಕಿಂತ ಜೀವನವೇ ಮುಖ್ಯ ಎಂದು ಈಗ ಅನ್ನಿಸುತ್ತಿದೆ' ಎಂದು ಹೇಳುವಾಗ ಅವಳ ಕಣ್ಣುಗಳು ನೆಮ್ಮದಿಯ ನಾಳೆಗಳನ್ನು ಹುಡುಕುತ್ತಿದ್ದವು.

ಮಹತಿಯಂತೆ ಹಲವು ಹೆಣ್ಣುಮಕ್ಕಳು ಉದ್ಯೋಗದ ಏಕತಾನತೆ, ಕೌಟುಂಬಿಕ ತೊಂದರೆಗಳು, ಆರೋಗ್ಯ ಸಮಸ್ಯೆ ಮೊದಲಾದ ಕಾರಣಗಳಿಂದ ಉದ್ಯೋಗ ತ್ಯಜಿಸುವುದು ಅಥವಾ ಉದ್ಯೋಗ ಬದಲಾಯಿಸುವುದು ಮಾಡುತ್ತಿದ್ದಾರೆ. ಈ ಉದ್ಯೋಗ ಬದಲಾವಣೆಯ ಮನೋಭಾವ ಕೋವಿಡ್ ಶುರುವಾದಾಗಿನಿಂದ ಹೆಚ್ಚಿದೆ ಎನ್ನುತ್ತದೆ ಒಂದು ಅಧ್ಯಯನ.

ದುಡಿಮೆಯ ಮಧ್ಯೆ ತಮ್ಮ ಖುಷಿ, ಹವ್ಯಾಸ, ವೈಯಕ್ತಿಕ ಜೀವನ, ಕುಟುಂಬ ಎಲ್ಲವನ್ನೂ ಮರೆಯುವಂತಹ ಪರಿಸ್ಥಿತಿ ಬರಬಹುದು. ಅತಿಯಾದ ಒತ್ತಡ ಕೆಲಸದ ಸಾಮರ್ಥ್ಯದ ಮೇಲೂ ಪರಿಣಾಮ ಬೀರುತ್ತದೆ. ಖಿನ್ನತೆ, ಪಾರ್ಶ್ವವಾಯು, ಹೃದ್ರೋಗ, ಸ್ನಾಯುಸೆಳೆತ, ತಲೆನೋವಿನಂತಹ ಸಮಸ್ಯೆಯನ್ನೂ ಹುಟ್ಟು ಹಾಕುತ್ತದೆ. ಹಾರ್ಮೋನ್ ವ್ಯತ್ಯಾಸವನ್ನು ಉಂಟು ಮಾಡುತ್ತದೆ ಎನ್ನುತ್ತಾರೆ ತಜ್ಞರು. ಹಾಗಾಗಿ ಉದ್ಯೋಗಕ್ಕೆ ರಾಜೀನಾಮೆ ನೀಡುವುದು, ಉದ್ಯೋಗವನ್ನು ಬದಲಿಸುವುದು, ಇಲ್ಲವೇ ಸ್ವಂತ ಉದ್ಯಮ ಶುರು ಮಾಡುವುದರ ಮೂಲಕ ಹೊಸ ಹಾದಿಯಲ್ಲಿ ಸಾಗುತ್ತಿದ್ದಾರೆ ಮಹಿಳೆಯರು.

### ಕೌಟುಂಬಿಕ ಬಾಂಧವ್ಯ ವೃದ್ಧಿ

'ಕೆಲಸದ ಅವಧಿ, ಶಿಫ್ಟ್‌ಗಳು, ಕೆಲಸಕ್ಕೆ ಸಂಬಂಧಿಸಿದ ಪ್ರಯಾಣ ಕೌಟುಂಬಿಕ ಸಂಬಂಧ ಹಳಸಲು ಪ್ರಮುಖ ಕಾರಣ. ಎಷ್ಟೋ ಹೆಣ್ಣುಮಕ್ಕಳು ಕುಟುಂಬಕ್ಕೆ ಸಮಯ ನೀಡುವ ಸಲುವಾಗಿ ಕೆಲಸಕ್ಕೆ ರಾಜೀನಾಮೆ ನೀಡುತ್ತಿದ್ದಾರೆ, ಇಲ್ಲವೆ ವೃತ್ತಿ ಬದಲಾಯಿಸುತ್ತಾರೆ' ಎನ್ನುತ್ತಾರೆ ಆಪ್ತ ಸಮಾಲೋಚಕಿ ಪ್ರಮೀಳಾ ಎಸ್.

ನಾನು ಮೊದಲು ಆಂಗ್ಲ ಪತ್ರಿಕೆಯೊಂದರಲ್ಲಿ ಕೆಲಸ ಮಾಡುತ್ತಿದ್ದೆ. ಆಗ ನನಗೆ ನನ್ನ ಹವ್ಯಾಸ, ವೈಯಕ್ತಿಕ ಬದುಕಿಗೆ ಸಮಯ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಆ ಕಾರಣಕ್ಕೆ ಕೆಲಸಕ್ಕೆ ರಾಜೀನಾಮೆ ನೀಡಿ ಫ್ರೀಲಾನ್ಸರ್ ಆಗಿ ವೃತ್ತಿ ಬದುಕನ್ನು ಮುಂದುವರಿಸಿದೆ. ಶುರುವಿಗೆ ಆರ್ಥಿಕವಾಗಿ ಕಷ್ಟವೆನಿಸಿತು. ಆದರೆ ಮನಸ್ಸಿಗೆ ಖುಷಿ ಸಿಕ್ಕಿತು. ಬೆಂಗಳೂರು ಬಿಟ್ಟು ಬಂದು ನಮ್ಮೂರು ಮಡಿಕೇರಿಯಲ್ಲಿ ಬದುಕುತ್ತಿದ್ದೇವೆ.

**ದೀಪಾ ಭಾಸ್ತಿ,** ಫ್ರೀಲಾನ್ಸರ್ ಬರಹಗಾರ್ತಿ

ನಾನು ಎಂದಿಗೂ ಒಂದೇ ಕಡೆ ಕುಳಿತುಕೊಳ್ಳುವವಳಲ್ಲ. ಆಕಾಶವಾಣಿ, ರೇಡಿಯೊ ಮಿರ್ಚಿ, ಟಿವಿ ಪ್ರೊಡಕ್ಷನ್, ಉಪನ್ಯಾಸಕಿ ಹೀಗೆ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಅನುಭವವಿದೆ. ನನ್ನ ಆಸಕ್ತಿ ಹಾಗೂ ಪ್ರವೃತ್ತಿಯನ್ನು ಮುಂದುವರಿಸುವ ಸಲುವಾಗಿ ಕೆಲಸಕ್ಕೆ ರಾಜೀನಾಮೆ ನೀಡಿದೆ. ಸದ್ಯ ರೇಡಿಯೊದಲ್ಲಿ ಅರೆಕಾಲಿಕ ವೃತ್ತಿ ಮಾಡುತ್ತಿದ್ದೇನೆ. ಈಗ ನನ್ನ ಕುಟುಂಬಕ್ಕೂ ಸಮಯ ನೀಡುತ್ತಾ ಪ್ರವೃತ್ತಿಗಳನ್ನು ಮುಂದುವರಿದ್ದೇನೆ.

**ಜ್ಯೋತಿ ಸಾಲಿಗ್ರಾಮ**

### ಸ್ವಂತ ಉದ್ಯಮದ ಹಾದಿ

ಈಗೀಗ ಉದ್ಯೋಗ ತ್ಯಜಿಸುವ ಹೆಣ್ಣುಮಕ್ಕಳು ಸ್ವಂತ ಉದ್ಯಮದತ್ತ ಒಲವು ಮೂಡಿಸಿಕೊಳ್ಳುತ್ತಿದ್ದಾರೆ. ಆ ಮೂಲಕ ಬದುಕಿಗೆ ಆರ್ಥಿಕ ಭದ್ರತೆಯನ್ನು ರೂಪಿಸಿಕೊಳ್ಳುತ್ತಿದ್ದಾರೆ. ಆನ್‌ಲೈನ್ ಮಾರುಕಟ್ಟೆಗಳು, ಸಾಮಾಜಿಕ ಜಾಲತಾಣಗಳು ಇಂತಹ ಹೆಣ್ಣುಮಕ್ಕಳಿಗೆ ಹೊಸ ಹಾದಿಯನ್ನು ಪರಿಚಯಿಸುವುದರ ಜೊತೆಗೆ ಅವರನ್ನು ಸ್ವಾವಲಂಬಿಗಳನ್ನಾಗಿಸಲು ಸಹಾಯ ಮಾಡುತ್ತಿವೆ.

# ಮಳೆಗಾಲ: ಮಕ್ಕಳ ಕಾಡದಿರಲಿ ಅನಾರೋಗ್ಯ

**ಡಾ. ಶಾಲಿನಿ ಚಿಕೊ**

ಡಾ. ಶಾಲಿನಿ

**ಮಳೆಗಾಲ** ಶುರುವಾಗಿ ಎರಡು ತಿಂಗಳೇ ಕಳೆದಿದೆ. ಈ ಕಾಲದಲ್ಲಿ ಆತಂಕ ಹುಟ್ಟಿಸುವಂತಹ ಅಂಶವೆಂದರೆ ಸಾಂಕ್ರಾಮಿಕ ಕಾಯಿಲೆ. ಅದು ಸೊಳ್ಳೆ ಕಡಿತದಿಂದ ಬರುವಂತಹ ಡೆಂಗಿ, ಚಿಕುನ್‌ಗುನ್ಯ ಅಥವಾ ಮಲೇರಿಯ ಇರಲಿ, ನೀರು ಹಾಗೂ ಕಲುಷಿತ ಆಹಾರದಿಂದ ಬರುವಂತಹ ಟೈಫಾಯ್ಡ್, ಹೆಪಟೈಟಿಸ್ ಎ ಇರಲಿ, ವೈರಸ್‌ನಿಂದ ಗಾಳಿಯಲ್ಲಿ ಹರಡುವಂತಹ ಫ್ಲೂ ಅಥವಾ ಇತರ ಉಸಿರಾಟಕ್ಕೆ ಸಂಬಂಧಪಟ್ಟ ರೋಗಗಳಿರಲಿ... ಈ ಸಂದರ್ಭದಲ್ಲಿ ಮುನ್ನೆಚ್ಚರಿಕೆ ಇಟ್ಟುಕೊಂಡಿರಬೇಕಾಗುತ್ತದೆ. ಇವೆಲ್ಲವುಗಳ ಮಧ್ಯೆ ಕೋವಿಡ್–19 ಭಯವಂತೂ ಇದ್ದೇ ಇದೆ.

ಹೀಗಿರುವಾಗ ದೊಡ್ಡವರಿಗಿಂತ ಮಕ್ಕಳಿಗೆ ಹೆಚ್ಚಿನ ಕಾಳಜಿಯ ಅಗತ್ಯವಿದೆ. ಒಂದಿಷ್ಟು ಹೆಚ್ಚೇ ಮುನ್ನೆಚ್ಚರಿಕೆ ತೆಗೆದುಕೊಂಡರೆ ಮಕ್ಕಳನ್ನು ಕಾಯಿಲೆಗಳಿಂದ ಕಾಪಾಡಬಹುದು.

**ಆಹಾರ ಮತ್ತು ನೀರು:** ಕುಡಿಯುವ ನೀರು ಶುಚಿಯಾಗಿರುವಂತೆ ಕಾಳಜಿ ವಹಿಸಿ. ಮಕ್ಕಳಿಗೆ ಅದರಲ್ಲೂ ಒಂದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಶಿಶುಗಳಿಗೆ ಚೆನ್ನಾಗಿ ಕುದಿಸಿದ ನೀರನ್ನೇ ಕುಡಿಸಿ. ಹಣ್ಣು ಮತ್ತು ತರಕಾರಿಗಳನ್ನು ಚೆನ್ನಾಗಿ ತೊಳೆದು ಬಳಸಿ.

**ಕೈಗಳ ಮತ್ತು ವೈಯಕ್ತಿಕ ಸ್ವಚ್ಛತೆ:** ಹೊರಗೆ ಆಟವಾಡಲು ಹೋದರೆ ಮಕ್ಕಳ ಕೈ ಮತ್ತು ಕಾಲುಗಳನ್ನು ಚೆನ್ನಾಗಿ ತೊಳೆಯಿರಿ. ಉಗುರುಗಳನ್ನೂ ಕೂಡ ಕತ್ತರಿಸಿ, ಶುಚಿಯಾಗಿರುವಂತೆ ನೋಡಿಕೊಳ್ಳಿ.

**ಲಸಿಕೆ ಹಾಕಿಸಿ:** ಫ್ಲೂ (ಇನ್‌ಫ್ಲೂಯೆಂಜ) ಹಾಗೂ ಕೋವಿಡ್–19 ಹೆಚ್ಚು ಕಡಿಮೆ ಒಂದೇ ತರಹದ ಲಕ್ಷಣಗಳನ್ನು ಹೊಂದಿವೆ. ಅಂದರೆ ಜ್ವರ, ಗಂಟಲು ನೋವು ಅಥವಾ ಕೆಮ್ಮು.. ಇವೆಲ್ಲ ಲಕ್ಷಣಗಳು ಒಂದೇ ರೀತಿಯಿದ್ದು. ಹೀಗಾಗಿ ಆರು ತಿಂಗಳಿಗಿಂತ ಹೆಚ್ಚು ವಯಸ್ಸಾದ ಮಕ್ಕಳಿಗೆ ವಾರ್ಷಿಕ ಫ್ಲೂ ಲಸಿಕೆ ಕೊಡಿಸುವುದು ಉತ್ತಮ

ಮಕ್ಕಳನ್ನು ಕೋವಿಡ್–19 ಸೋಂಕಿನಿಂದ ಪಾರು ಮಾಡಲು ಮನೆಯಲ್ಲಿರುವ ದೊಡ್ಡವರು ಕೋವಿಡ್ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸಿಕೊಳ್ಳಿ. ಮಗುವಿಗೆ ಹಾಲೂಡಿಸುವ ತಾಯಂದಿರು ಕೂಡ ಈ ಕೋವಿಡ್ ಲಸಿಕೆ ಹಾಕಿಸಿಕೊಂಡರೆ ಮಗುವಿಗೂ ಎದೆಹಾಲಿನ ಮೂಲಕ ರೋಗ ನಿರೋಧಕ ಶಕ್ತಿ ಲಭ್ಯವಾಗುತ್ತದೆ.

**ಸೊಳ್ಳೆಗಳಿಗೆ ತಡೆ:** ಈ ಕಾಲದಲ್ಲಿ ಸೊಳ್ಳೆಗಳು ಜಾಸ್ತಿ. ಅವುಗಳ ಕಡಿತದಿಂದ ಪಾರಾಗಲು ನೈಸರ್ಗಿಕ ಸೊಳ್ಳೆ ರೆಪೆಲೆಂಟ್ ಬಳಸಿ. ಕಿಟಕಿ, ಬಾಗಿಲಿಗೆ ಸೊಳ್ಳೆ ಪರದೆ (ಮೆಶ್) ಹಾಕಿಸಿ.

**ಸೂಕ್ತ ಉಡುಪು:** ನಿಮ್ಮ ಮಗುವಿಗೆ ಚೆನ್ನಾಗಿ ಒಣಗಿದ ಉಡುಪು ತೊಡಿಸಿ. ಶೀತದಿಂದ ದೂರ ಇಡಲು ತಲೆಯನ್ನು ಟೊಪ್ಪಿ ಅಥವಾ ಮಫ್ಲರ್‌ನಿಂದ ಬೆಚ್ಚಗಿಡಿ. ಆಗಾಗ ಡೈಪರ್ ಬದಲಿಸುವುದು, ಹತ್ತಿಯ ಡೈಪರ್ ಬಳಸುವುದು ಉತ್ತಮ. ಮಕ್ಕಳು ಮಳೆಯಲ್ಲಿ ನೆನೆಯುವುದಕ್ಕೆ ಬಿಡಬೇಡಿ.

(ಲೇಖಕರು: ಸೀನಿಯರ್ ಕನ್ಸಲ್ಟೆಂಟ್, ನಿಯೊನೇಟೊಲೋಜಿಸ್ಟ್ ಮತ್ತು ಮಕ್ಕಳ ತಜ್ಞೆ, ಫೋರ್ಟಿಸ್ ಲಾ ಫೆಮ್ಮೆ ಆಸ್ಪತ್ರೆ, ಬೆಂಗಳೂರು)

# ನಮಗೆ ನಾವೆಷ್ಟು ಅರ್ಥವಾಗಿದ್ದೇವೆ?

ಏನಾದ್ರೂ ಕೇಳ್ಬೋದು

**ನಡಹಳ್ಳಿ ವಸಂತ್**

- **20ರ ಯುವತಿ. ನನ್ನನ್ನು ಅರ್ಥ ಮಾಡಿಕೊಳ್ಳುವ ಸಂಗಾತಿ ಇದ್ದಾನೆ. ಅವನನ್ನು ಅರ್ಥ ಮಾಡಿಕೊಳ್ಳಲು ಆಗುತ್ತಿಲ್ಲ. ಪರಿಹಾರವೇನು?**

**ಪೂರ್ಣಿಮಾ,** ಊರಿನ ಹೆಸರಿಲ್ಲ.

ಬೇರೆಯವರನ್ನು ಅರ್ಥ ಮಾಡಿಕೊಳ್ಳುವುದು ಎನ್ನುವುದರ ಕುರಿತು ನಮ್ಮಲ್ಲಿ ಬಹಳ ತಪ್ಪುಕಲ್ಪನೆಗಳಿವೆ. ನಿಮಗೆ ನೀವೇ ಅರ್ಥವಾಗದಿದ್ದಾಗ ಬೇರೆಯವರನ್ನು ಹೇಗೆ ಅರ್ಥಮಾಡಿಕೊಳ್ಳುತ್ತೀರಿ? ನಿಮ್ಮಿಂದ ಅವನ ನೆಮ್ಮದಿ ಹಾಳಾಗುತ್ತಿದೆ ಎಂದು ಹೇಳಿದ್ದೀರಿ. ನಿಮ್ಮ ವರ್ತನೆಯ ಹಿಂದೆ ನಿಮ್ಮದೇ ಮಾನಸಿಕ ಹೋರಾಟಗಳಿಲ್ಲವೇ? ಅವುಗಳನ್ನು ನಿಭಾಯಿಸಿಕೊಂಡು ಸ್ನೇಹ– ಸಂಬಂಧಗಳನ್ನು ಉಳಿಸಿಕೊಳ್ಳುವುದು ಹೇಗೆ? ಇವುಗಳನ್ನೆಲ್ಲಾ ನೀವು ಕಲಿಯದೆ ಇನ್ನೊಬ್ಬರನ್ನು ಖುಷಿಯಾಗಿ ಇಡುವುದೇ ಪ್ರೇಮ ಎಂದುಕೊಳ್ಳುವುದು ನಿಜಜೀವನ ಆಗಲಾರದು. ನಿಮ್ಮ ನೋವು, ಬೇಸರ, ಹತಾಶೆಯ ಆಳಕ್ಕೆ ಹೋಗಲು ಪ್ರಯತ್ನಿಸಿ. ನಿಮ್ಮನ್ನು ಖುಷಿಯಾಗಿಡುವ ಜವಾಬ್ದಾರಿಯನ್ನು ಪ್ರಿಯಕರನಿಗೆ ಕೊಡಬೇಡಿ. ನಿಮ್ಮ ಸಂತೋಷ, ಸಮಾಧಾನಗಳನ್ನು ನೀವೇ ಕಂಡುಕೊಳ್ಳುತ್ತಾ ಹೋದಂತೆ ಸಂಬಂಧಗಳು ಸಹಜವಾಗುತ್ತವೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

### ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

# ಬಾಕಾಹು ಬರ್ಫಿ, ಬನ್ಸ್

**ಸೌಖ್ಯ ಮೋಹನ್ ತಲಕಾಲುಕೊಪ್ಪ**

**ಬಾಳೆಕಾಯಿಗೆ ಮಾರುಕಟ್ಟೆ ಇರದೇ ಕೃಷಿಕರು ಒದ್ದಾಡುತ್ತಿದ್ದಾರೆ. ಇಂತಹ ಸಮಯದಲ್ಲಿ ಬಾಳೆಕಾಯಿಯನ್ನು ಪುಡಿ ಮಾಡಿ ಅದನ್ನು ಸದುಪಯೋಗ ಮಾಡಿಕೊಳ್ಳುವ ಮಾಹಿತಿ ಬಹಳ ಜನಪ್ರಿಯವಾಗುತ್ತಿದೆ. ಇದು 'ಬಾಕಾಹು' ಎಂದೇ ಪ್ರಸಿದ್ಧವಾಗಿದೆ. ಹಲವಾರು ಕೃಷಿಕರು ಹಾಗೂ ಗೃಹಿಣಿಯರು ಇತ್ತೀಚೆಗೆ ಬಾಳೆಕಾಯಿ ಹಿಟ್ಟನ್ನು ಬಳಸುತ್ತಿದ್ದಾರೆ. ಇದರಿಂದ ಮಾಡಬಹುದಾದ ಕೆಲವು ರುಚಿಕರ ರೆಸಿಪಿಗಳು ಇಲ್ಲಿವೆ.**

### ಬಾಕಾಹು ಬರ್ಫಿ

**ಬೇಕಾಗುವ ಸಾಮಗ್ರಿಗಳು:** ಬಾಳೆಕಾಯಿ ಹಿಟ್ಟು ಒಂದು ಕಪ್, ಹಾಲು ಒಂದು ಕಪ್, ಸಕ್ಕರೆ ಒಂದು ಕಪ್, ತುಪ್ಪ ಅರ್ಧ ಕಪ್, ಏಲಕ್ಕಿ ಪುಡಿ, ಗೋಡಂಬಿ ಚೂರುಗಳು

**ತಯಾರಿಸುವ ವಿಧಾನ:** ಮೊದಲು ಬಾಳೆಕಾಯಿ ಹುಡಿಯನ್ನು ತುಪ್ಪದಲ್ಲಿ ಚೆನ್ನಾಗಿ ಹುರಿದುಕೊಳ್ಳಿ. ಸುಮಾರು 3–4 ನಿಮಿಷ ಪರಿಮಳ ಬರುವವರೆಗೆ ಹುರಿದುಕೊಳ್ಳಿ. ನಂತರ ಹಾಲು ಸೇರಿಸಿ. ಕೈ ಬಿಡದೆ ಗೊಟಾಯಿಸುತ್ತಾ ಇರಿ. ಮೊದಲು ಗಂಟಿನಂತೆ ಕಂಡುಬಂದರೂ ಚೆನ್ನಾಗಿ ಮಿಶ್ರಣ ಮಾಡುವಾಗ ಸರಿಯಾಗುತ್ತದೆ. ನಂತರ ಸಕ್ಕರೆ ಹಾಕಿ. ಮಧ್ಯೆ ಮಧ್ಯೆ ತುಪ್ಪ ಹಾಕಿಕೊಳ್ಳುತ್ತಾ ಗಟ್ಟಿ ಮುದ್ದೆಯಾಗುವವರೆಗೂ ಮಗುಚಿ, ಏಲಕ್ಕಿ ಪುಡಿ ಹಾಕಿ. ಸಂಪೂರ್ಣ ತಳ ಬಿಟ್ಟ ನಂತರ ತುಪ್ಪ ಸವರಿದ ಪ್ಲೇಟಿಗೆ ಹಾಕಿ. ಮೇಲೆ ತುಪ್ಪದಲ್ಲಿ ಹುರಿದ ಗೋಡಂಬಿ ಹಾಕಿ ಕತ್ತರಿಸಿ.

ನಳಪಾಕ

### ಬಾಕಾಹು ಬನ್ಸ್

**ಬೇಕಾಗುವ ಸಾಮಗ್ರಿಗಳು:** ಬಾಳೆಹಣ್ಣು 3–4, ಬಾಳೆಕಾಯಿ ಹುಡಿ, ಮೊಸರು 2–3 ಚಮಚ, ಸೋಡಾ (ಬೇಕಾದರೆ), ಉಪ್ಪು, ಸಕ್ಕರೆ 3–4 ಚಮಚ, ಕರಿಯಲು ಎಣ್ಣೆ

**ತಯಾರಿಸುವ ವಿಧಾನ:** ಮೊದಲು ಬಾಳೆಹಣ್ಣನ್ನು ಹೆಚ್ಚಿಕೊಳ್ಳಿ. ಅದಕ್ಕೆ ಮೊಸರು, ಉಪ್ಪು, ಸಕ್ಕರೆ ಹಾಕಿ ರುಬ್ಬಿಕೊಳ್ಳಿ. ಅದಕ್ಕೆ ಚಿಟಿಕೆ ಸೋಡಾ ಹಾಕಿ ನಂತರ ಅದಕ್ಕೆ ಹಿಡಿಯುವಷ್ಟು ಬಾಳೆಕಾಯಿ ಹಿಟ್ಟನ್ನು ಹಾಕಿ ಚೆನ್ನಾಗಿ ನಾದಿ ಕಲೆಸಿ ಮುಚ್ಚಿಡಿ. ತುಂಬಾ ಗಟ್ಟಿಯಾಗಿ ಹಿಟ್ಟನ್ನು ಕಲೆಸಿಕೊಳ್ಳಬಾರದು. ಸ್ವಲ್ಪ ಹೊತ್ತಿನ ನಂತರ ಉಂಡೆ ಮಾಡಿ ಕೈಯಲ್ಲಿ ತಟ್ಟಿ ಅಥವಾ ಲಟ್ಟಿಸಿ ಎಣ್ಣೆಯಲ್ಲಿ ಹೊಂಬಣ್ಣ ಬರುವವರೆಗೆ ಕರಿಯಿರಿ.

ಶನಿವಾರ ● ಜುಲೈ 24, 2021 ಪ್ರಜಾವಾಣಿ

ಸತತ ಮಳೆಯಿಂದಾಗಿ ಕರ್ನಾಟಕ–ಗೋವಾ ಸಂಪರ್ಕಿಸುವ ಬೆಳಗಾವಿ–ಚೋರ್ಲಾ ಹೆದ್ದಾರಿ ಮೇಲೆ ಗುಡ್ಡ ಕುಸಿದಿದೆ (ಎಡಚಿತ್ರ) ರಟ್ಟೀಹಳ್ಳಿ ತಾಲ್ಲೂಕು ಮಾಸೂರು– ಶಿಕಾರಿಪುರ ಮಧ್ಯೆ ತಿಪ್ಪಾಯಿಕೊಪ್ಪದ ಹತ್ತಿರ ಸೇತುವೆ ಮೇಲೆ ಕುಮದ್ವತಿ ನದಿ ಅಪಾಯಕಾರಿ ಮಟ್ಟದಲ್ಲಿ ಹರಿಯುತ್ತಿದೆ. ಇದನ್ನು ನೋಡಲು ಅಪಾರ ಸಂಖ್ಯೆಯಲ್ಲಿ ಜನರು ಸೇರಿದ್ದರು

### ನದಿಪಾತ್ರದ ಗ್ರಾಮಗಳಲ್ಲಿ ಪ್ರವಾಹ ಭೀತಿ: ಬೆಳಗಾವಿ ಜಿಲ್ಲೆಯಲ್ಲಿ 9 ಕಡೆ ಕಾಳಜಿ ಕೇಂದ್ರ

# ಮುಂದುವರಿದ ಮಳೆ: ಜನ ಜೀವನ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ಧಾರವಾಡ, ಬೆಳಗಾವಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸತತ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿದೆ. ಜಲಾಶಯಗಳಲ್ಲಿ ನೀರು ಬಿಡುಗಡೆ ಮಾಡಿರುವುದರಿಂದ ಬಾಗಲಕೋಟೆ, ವಿಜಯಪುರ, ಹಾವೇರಿ ಜಿಲ್ಲೆಗಳ ನದಿಪಾತ್ರದ ಗ್ರಾಮಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿವೆ.

ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಮಳೆ ಅಬ್ಬರ ಶುಕ್ರವಾರವೂ ಮುಂದುವರಿದಿದ್ದು, ಜನ ಜೀವನ ತತ್ತರಗೊಂಡಿದೆ. ಕೃಷ್ಣಾ, ವೇದಗಂಗಾ, ದೂಧ್‌ಗಂಗಾ, ಮಲಪ್ರಭಾ, ಘಟಪ್ರಭಾ, ಹಿರಣ್ಯಕೇಶಿ, ಮಾರ್ಕಂಡೇಯ ನದಿಗಳು ಅಪಾಯಮಟ್ಟ ಮೀರಿ ಹರಿಯುತ್ತಿದ್ದು, ಪ್ರವಾಹದ ಭೀತಿ ಎದುರಾಗಿದೆ.

ನೆರೆಯ ಮಹಾರಾಷ್ಟ್ರದ ಕೊಂಕಣ ಮತ್ತು ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ನದಿ ಜಲಾನಯನ ಪ್ರದೇಶಗಳಲ್ಲಿ ವರುಣನ ಆರ್ಭಟ ಹೆಚ್ಚಿದೆ. ಚಿಕ್ಕೋಡಿ ತಾಲ್ಲೂಕಿನ ಸದಲಗಾ-ಬೋರ-ಗಾಂವ ಸೇತುವೆ ಮುಳುಗಡೆಯಾಗಿದೆ. ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಹೊರಬಿಡಲಾದ 10ಸಾವಿರ ಕ್ಯುಸೆಕ್, ದೂಧ್‌ಗಂಗಾ ನದಿಯಿಂದ 34,320 ಕ್ಯುಸೆಕ್ ಮತ್ತು ರಾಜಾಪುರ ಬ್ಯಾರೇಜ್‌ನಿಂದ ಬರುತ್ತಿರುವ 1.21 ಲಕ್ಷ ಕ್ಯುಸೆಕ್ ಸೇರಿ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ 1.56 ಲಕ್ಷ ಕ್ಯುಸೆಕ್ ನೀರು ಸೇರುತ್ತಿದೆ. ಪ್ರವಾಹ ಭೀತಿಯೂ ಹೆಚ್ಚಾಗತೊಡಗಿದೆ.

ರಾಯಬಾಗ ತಾಲ್ಲೂಕಿನ ಕುಡಚಿ-ಉಗಾರ ಸೇತುವೆ ಮೇಲೆ ನೀರು ಹರಿಯುತ್ತಿದ್ದು, ಸಂಪರ್ಕ ಕಡಿತಗೊಂಡಿದೆ.

ಖಾನಾಪುರ ತಾಲ್ಲೂಕಿನ ಕಣಕುಂಬಿಯಲ್ಲಿ ದಾಖಲೆಯ 52 ಸೆಂ.ಮೀ. ಮಳೆ ಆಗಿದೆ. ಇಲ್ಲಿ 2019ರ ಆ.3ರಂದು 41 ಸೆಂ.ಮೀ. ಮಳೆ ದಾಖಲಾಗಿತ್ತು. ಈ ವಿಷಯವನ್ನು ಬೆಳಗಾವಿ ಉಪ ವಿಭಾಗಾಧಿಕಾರಿ ರವೀಂದ್ರ ಕರಲಿಂಗಣ್ಣವರ ‘ಪ್ರಜಾವಾಣಿ’ಗೆ ಖಚಿತಪಡಿಸಿದರು.

ಬೆಳಗಾವಿ–ಚೋರ್ಲಾ ರಾಜ್ಯ ಹೆದ್ದಾರಿಯಲ್ಲಿ ಭೂಕುಸಿತದ ಕಾರಣ ಕರ್ನಾಟಕ-ಗೋವಾ ನಡುವೆ ವಾಹನಗಳ ಸಂಚಾರ ಸ್ಥಗಿತಗೊಂಡಿದೆ. ಖಾನಾಪುರ ತಾಲ್ಲೂಕಿನ ಹಬ್ಬಾನಟ್ಟಿ ಹೊರವಲಯದ ಮಲಪ್ರಭಾ ನದಿ ದಂಡೆಯಲ್ಲಿರುವ ಆಂಜನೇಯ ದೇವಸ್ಥಾನ ಸಂಪೂರ್ಣ ಮುಳುಗಿದೆ. ಖಾನಾಪುರ ಪಟ್ಟಣ ಸಂಪರ್ಕಿಸುವ ಎಲ್ಲ ದಿಕ್ಕುಗಳ ರಸ್ತೆಗಳು ಕೂಡ ಬಂದ್ ಆಗಿವೆ. ಖಾನಾಪುರದಲ್ಲಿ ವಿದ್ಯುತ್ ಸ್ಪರ್ಶದಿಂದ ವ್ಯಕ್ತಿಯೊಬ್ಬರು ಮೃತರಾದರು. ಲೋಂಡಾ ಗ್ರಾಮದಲ್ಲಿ ಪಾಂಡರಿ ನದಿಯ ಪ್ರವಾಹದ ಕಾರಣ ಸಂತ್ರಸ್ತರಿಗೆ ಲೋಂಡಾ ರೈಲು ನಿಲ್ದಾಣದಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ. ನದಿ ಪ್ರವಾಹದಲ್ಲಿ ಸಿಲುಕಿದ್ದ ವ್ಯಕ್ತಿಯನ್ನು ಪೊಲೀಸರು ರಕ್ಷಿಸಿದರು.

ಭಾರಿ ಮಳೆಯಿಂದಾಗಿ ವೇದಗಂಗಾ ನದಿ ಉಕ್ಕಿ ಹರಿಯುತ್ತಿದ್ದು, ನಿಪ್ಪಾಣಿ ತಾಲ್ಲೂಕಿನ ಯಮಗರ್ಣಿ ಗ್ರಾಮದ ಬಳಿ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಜಲಾವೃತವಾಗಿದೆ. ಮುಂಜಾಗ್ರತಾ ಕ್ರಮವಾಗಿ ಸಂಚಾರ ಬಂದ್ ಮಾಡಲಾಗಿದೆ. ಕಾರು ಹಾಗೂ ಲಾರಿ ನೀರಿನಲ್ಲಿ ಸಿಲುಕಿದ್ದು, ಆ ವಾಹನಗಳಲ್ಲಿದ್ದ ಎಂಟು ಮಂದಿಯನ್ನು ರಕ್ಷಿಸಲಾಗಿದೆ.

ಹುಕ್ಕೇರಿ ತಾಲ್ಲೂಕಿನ ಹಿರಣ್ಯಕೇಶಿ ನದಿಯಲ್ಲಿ ಪ್ರವಾಹ ಉಂಟಾಗಿದ್ದು, ಸಂಕೇಶ್ವರದ ಮಠ ಗಲ್ಲಿಯ ಮನೆಗಳಿಗೆ ನೀರು ನುಗ್ಗಿದೆ. ಜನರನ್ನು ಎನ್‌ಡಿಆರ್‌ಎಫ್ ತಂಡದವರು ಮತ್ತು ಪೊಲೀಸರು ರಕ್ಷಿಸಿ ಸ್ಥಳಾಂತರಿಸಿದರು. 5 ಕಡೆಗಳಲ್ಲಿ ಕಾಳಜಿ ಕೇಂದ್ರಗಳನ್ನು ಆರಂಭಿಸಲಾಗಿದೆ. ನಿಪ್ಪಾಣಿ ತಾಲ್ಲೂಕಿನ ಕೊಡ್ನಿ ಗ್ರಾಮಕ್ಕೆ ಚಿಕುತ್ರಾ ನದಿ ನೀರು ನುಗ್ಗಿದ್ದು, ಅಲ್ಲಿನ 300 ಮಂದಿಯನ್ನು ಎನ್‌ಡಿಆರ್‌ಎಫ್ ತಂಡದವರು ರಕ್ಷಿಸಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದರು. ಸಂತ್ರಸ್ತರಿಗೆ 26 ಕಡೆಗಳಲ್ಲಿ ಕಾಳಜಿ ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ ತಿಳಿಸಿದ್ದಾರೆ.

ಗೋಕಾಕ ತಾಲ್ಲೂಕಿನ ಕುಂದರಗಿ ಆಡುಸಿದ್ದೇಶ್ವರ ಮಠದಲ್ಲಿ ಸಿಲುಕಿದ್ದ ಸ್ವಾಮೀಜಿ ಮತ್ತು ನಾಲ್ವರನ್ನು ಎಸ್‌ಡಿಆರ್‌ಎಫ್ ತಂಡದವರು ಮತ್ತು ಪೊಲೀಸರು ಕಾರ್ಯಾಚರಣೆ ನಡೆಸಿ, ರಕ್ಷಿಸಿದರು.

ಮಲಪ್ರಭಾ ಹಾಗೂ ಘಟಪ್ರಭಾ ಜಲಾಶಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಹೊರಬಿಡುವ ಸಾಧ್ಯತೆ ಇದ್ದು, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ನದಿ ತೀರದ ಗ್ರಾಮಗಳ ಜನರಿಗೆ ಮುನ್ನೆಚ್ಚರಿಕೆ ನೀಡಲಾಗಿದೆ.

ಬೆಳಗಾವಿ ತಾಲ್ಲೂಕಿನ ಬೆನಕನಹಳ್ಳಿ-ಬೆಳಗುಂದಿ-ರಕ್ಕಸಕೊಪ್ಪ ರಸ್ತೆ ಜಲವೃತ-ವಾಗಿದ್ದು, ಸಂಚಾರ ಬಂದ್ ಆಗಿದೆ.

## ಅಪಾಯಮಟ್ಟ ಮೀರಿ ಹರಿಯುತ್ತಿರುವ ನದಿಗಳು

**ಬಾಗಲಕೋಟೆ, ಹಾವೇರಿ :** ಮಹಾರಾಷ್ಟ್ರ ಹಾಗೂ ಬೆಳಗಾವಿ ಭಾಗದ ಜಲಾನಯನ ಪ್ರದೇಶದಲ್ಲಿ ನಿರಂತರ ಮಳೆಯ ಪರಿಣಾಮ ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣಾ, ಘಟಪ್ರಭಾ ಹಾಗೂ ಮಲಪ್ರಭಾ ನದಿಗಳು ಅಪಾಯದ ಮಟ್ಟಮಟ್ಟ ಮೀರಿ ಹರಿಯುತ್ತಿವೆ.

ಘಟಪ್ರಭಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾಗಿ ಮಹಾಲಿಂಗಪುರ–ಮಿರ್ಜಿ ನಡುವಿನ ಸೇತುವೆ, ಬೆಳಗಾವಿ–ಬಾಗಲಕೋಟೆ ಜಿಲ್ಲೆಗಳ ನಡುವೆ ಸಂಪರ್ಕ ಕಲ್ಪಿಸುವ ಮುಧೋಳ ತಾಲ್ಲೂಕಿನ ಢವಳೇಶ್ವರ ಹಾಗೂ ಜಾಲಿಬೇರ ಸೇತುವೆ ಮುಳುಗಡೆಯಾಗಿವೆ. ಇದರಿಂದ ಸಂಪರ್ಕ ಕಡಿತಗೊಂಡಿದೆ.

ಹಾವೇರಿ ಜಿಲ್ಲೆಯಲ್ಲಿ ಮೂರ್ನಾಲ್ಕು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಕೆರೆ–ಕಟ್ಟೆಗಳು ತುಂಬಿ, ವರದಾ, ಕುಮದ್ವತಿ ನದಿಗಳು ಅಪಾಯದ ಮಟ್ಟದಲ್ಲಿ ಹರಿಯುತ್ತಿವೆ.

ರಾಣೆಬೆನ್ನೂರು ತಾಲ್ಲೂಕಿನ ಹಿರೇಮಾಗನೂರು ಗ್ರಾಮದ ಹತ್ತಿರ ಕುಮದ್ವತಿ ನದಿ ತುಂಬಿ ಹರಿಯುತ್ತಿರುವುದರಿಂದ ಸೇತುವೆ ಮುಳುಗಡೆಯಾಗಿ ಹಿರೇಮಾಗನೂರು ದಂಡಗೀಹಳ್ಳಿ ರಸ್ತೆ ಸಂಪರ್ಕ ಕಡಿತಗೊಂಡಿದೆ. ರಟ್ಟೀಹಳ್ಳಿ–ಎಲಿವಾಳ ಗ್ರಾಮಗಳ ಮಧ್ಯೆ ಕುಮದ್ವತಿ ನದಿ ಸೇತುವೆ ಮೇಲೆ ಹರಿಯುತ್ತಿದ್ದು ರಸ್ತೆ ಸಂಪರ್ಕ ಕಡಿತಗೊಂಡಿದೆ.

ರಟ್ಟೀಹಳ್ಳಿ ತಾಲ್ಲೂಕು ತಿಪ್ಪಾಯಿಕೊಪ್ಪದ ಬಳಿ ಸೇತುವೆ ಜಲಾವೃತವಾಗಿದ್ದು, ಮಾಸೂರು– ಶಿಕಾರಿಪುರ ರಸ್ತೆ ಸಂಪರ್ಕ ಕಡಿತಗೊಂಡಿದೆ. ಮಾಸೂರು–ಹಿರೇಮೊರಬ ನಡುವಿನ ರಸ್ತೆ ಜಲಾವೃತವಾಗಿದೆ. ಮದಗ ಮಾಸೂರು ಕೆರೆ ಕೋಡಿ ಬಿದ್ದಿದೆ.

ಸವಣೂರ ತಾಲ್ಲೂಕು ಕಳಸೂರು– ದೇವಗಿರಿ ಮಾರ್ಗವಾಗಿ ಹಾವೇರಿ ನಗರವನ್ನು ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಮುಳುಗಡೆಯಾಗಿದೆ. ಹಾನಗಲ್ ತಾಲ್ಲೂಕು ತಿಳವಳ್ಳಿ ಸಮೀಪದ ಯತ್ತಿನಹಳ್ಳಿ ಗ್ರಾಮದ ನಾಗರ ಹಳ್ಳವು ತುಂಬಿ ಹರಿಯುತ್ತಿರುವುದರಿಂದ ಸೇತುವೆ ಮುಳುಗಡೆ-ಯಾಗಿದ್ದು, ತಿಳವಳ್ಳಿ ಹಾಗೂ ಆನವಟ್ಟಿ ರಸ್ತೆ ಸಂಪರ್ಕ ಕಡಿತಗೊಂಡಿದೆ.

## ನಾಲ್ವರು ನೀರುಪಾಲು

**ಕಾರವಾರ:** ಶಿರಸಿ ತಾಲ್ಲೂಕಿನ ಚಿನ್ನಾಪುರ ಕೆರೆ ನೀರಿನ ಸೆಳೆತಕ್ಕೆ ಸಿಲುಕಿ ಹುಸರಿ ಗ್ರಾಮದ ಗಂಗಾಧರ ಗೌಡ (28) ಮೃತಪಟ್ಟಿದ್ದಾರೆ. ಹೊನ್ನಾವರ ತಾಲ್ಲೂಕಿನ ಮಾಳ್ಕೋಡ ಗ್ರಾಮದ ಬಳಿ ಶರಾವತಿ ನದಿಯಲ್ಲಿ ಮೀನುಗಾರಿಕೆ ಮಾಡುತ್ತಿದ್ದ ದೋಣಿಯೊಂದು ಭಾರಿ ಗಾಳಿ ಮಳೆಗೆ ಮುಳುಗಿದೆ. ಅದರಲ್ಲಿದ್ದ ಮಾದೇವಿ ಅಂಬಿಗ (46) ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಅವರ ಪತಿ ಸುಬ್ರಾಯ ಅಂಬಿಗ (55) ಈಜಿ ದಡ ಸೇರಿದ್ದಾರೆ.

ಅಂಕೋಲಾದ ಶಿರೂರಿನಲ್ಲಿ ದೋಣಿಯಲ್ಲಿ ನದಿ ದಾಟುವಾಗ ಮಹಿಳೆ ಬೀರು ಗೌಡ (65) ಮತ್ತು ಗಂಗಾಧರ ಗೌಡ (30) ನೀರುಪಾಲಾಗಿದ್ದಾರೆ.

ಕೂರ್ವೆ ದ್ವೀಪದ ಮೇಲೆ ಗಂಗಾವಳಿ ನದಿ ನೀರು ಹರಿಯಲು ಆರಂಭಿಸಿದಾಗ, ಅಲ್ಲಿದ್ದವರು ದೋಣಿಯಲ್ಲಿ ಸುರಕ್ಷಿತ ಸ್ಥಳಕ್ಕೆ ಬರುತ್ತಿದ್ದರು. ಆಗ ನೀರಿನ ರಭಸಕ್ಕೆ ದೋಣಿ ಪಲ್ಟಿಯಾಗಿ ಮಹಿಳೆಯೊಬ್ಬರು ಸೇರಿದಂತೆ ಎಂಟು ಮಂದಿ ನದಿಗೆ ಬಿದ್ದರು. ಒಂದು ಗಂಟೆ ನೀರಿನಲ್ಲೇ ತೆಂಗಿನ ಮರವನ್ನು ಹಿಡಿದುಕೊಂಡು ಜೀವರಕ್ಷಣೆ ಮಾಡಿಕೊಂಡರು. ಅವರನ್ನು ಸ್ಥಳೀಯ ಮೀನುಗಾರರ ಸಹಾಯದಿಂದ ಒಂದು ತಾಸು ಕಾರ್ಯಾಚರಣೆ ನಡೆಸಿ ರಕ್ಷಿಸಲಾಗಿದೆ.

## ಸುದ್ದಿ 2 ನಿಮಿಷ

### ಪ್ರವಾಹ: ದಿನದ 24 ಗಂಟೆ ಎಚ್ಚರವಹಿಸಿ: ಬಿಎಸ್‌ವೈ ಸೂಚನೆ

**ಬೆಂಗಳೂರು:** ಮಳೆ ಹಾಗೂ ಪ್ರವಾಹ ಪೀಡಿತ ಪ್ರದೇಶಗಳ-ಲ್ಲಿನ ಅಧಿಕಾರಿಗಳು ದಿನ 24 ಗಂಟೆ ಎಚ್ಚರಿಕೆಯಿಂದ ಕೆಲಸ ಮಾಡುವುದರ ಜತೆಗೆ ಮುಂದಿನ 48 ಗಂಟೆ ಏನು ಆಗಬಹುದು ಎಂದು ಅಂದಾಜಿಸಿ ಕಾರ್ಯಪ್ರ-ವೃತ್ತರಾಗಿ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಶುಕ್ರವಾರ ಸೂಚನೆ ನೀಡಿದರು.

ಅತಿಯಾದ ಮಳೆ ಹಾಗೂ ಅಣೆಕಟ್ಟೆಗಳಿಂದ ನೀರು ಬಿಡುಗಡೆಯಿಂದಾಗಿ ತೊಂದರೆಗೆ ಒಳಗಾಗಿರುವ ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಹಾವೇರಿ, ಚಿಕ್ಕಮಗಳೂರು ಹಾಗೂ ಧಾರವಾಡ ಜಿಲ್ಲೆಗಳ ಜಿಲ್ಲಾಧಿಕಾ-ರಿಗಳ ಜತೆ ವಿಡಿಯೊ ಸಂವಾದ ನಡೆಸಿದ ಅವರು, ಸದ್ಯದ ಪರಿಸ್ಥಿತಿಯ ಮಾಹಿತಿಗಳನ್ನು ಪಡೆದುಕೊಂಡರು.

ಪ್ರವಾಹ ಪೀಡಿತ ಗ್ರಾಮಗಳ ಜನರನ್ನು ತಕ್ಷಣವೇ ಅಲ್ಲಿಂದ ತೆರವುಗೊಳಿಸಿ ಸುರಕ್ಷಿತ ಸ್ಥಳಗಳಿಗೆ ಕಳುಹಿಸಲು ವ್ಯವಸ್ಥೆ ಮಾಡಬೇಕು. ಪ್ರವಾಹ ಉಂಟಾಗುವ ಸಾಧ್ಯತೆ ಇರುವ ಗ್ರಾಮಗಳ ಜನರನ್ನು ಸಹ ಮುಂಜಾಗ್ರತಾ ಕ್ರಮವಾಗಿ ಸ್ಥಳಾಂತರಿಸಲು ಕ್ರಮಕೈಗೊಳ್ಳಿ ಎಂದು ಆದೇಶಿಸಿದರು.

### 7 ಜಿಲ್ಲೆಗಳಲ್ಲಿ ಭಾರಿ ಮಳೆ ಸಾಧ್ಯತೆ– ಇಂದು ‘ರೆಡ್ ಅಲರ್ಟ್’ ಘೋಷಣೆ

**ಬೆಂಗಳೂರು:** ಮುಂಗಾರು ತೀವ್ರಗೊಂಡಿರುವುದರಿಂದ ರಾಜ್ಯದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಜುಲೈ 24ರಂದು ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ. ಈ ಜಿಲ್ಲೆಗಳಲ್ಲಿ ‘ರೆಡ್ ಅಲರ್ಟ್’ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಕರಾವಳಿ ಜಿಲ್ಲೆಗಳಲ್ಲಿ ಜು.27 ರವರೆಗೆ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿಯಲ್ಲಿ ಗಂಟೆಗೆ ಗರಿಷ್ಠ 60 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, 4.3 ಮೀಟರ್‌ಗಳಷ್ಟು ಎತ್ತರದ ಅಲೆಗಳು ಏಳುವ ಸೂಚನೆ ಇದ್ದು, ಮೀನುಗಾರರು ಇದೇ 27ರವರೆಗೆ ಸಮುದ್ರಕ್ಕೆ ಇಳಿಯಬಾರದು’ ಎಂದೂ ಇಲಾಖೆ ಎಚ್ಚರಿಸಿದೆ.

## ಕದ್ರಾ ಜಲಾಶಯದಿಂದ ನೀರು ಹೊರಕ್ಕೆ

**ಹುಬ್ಬಳ್ಳಿ:** ಕಾರವಾರ ತಾಲ್ಲೂಕಿನ ಕದ್ರಾ ಜಲಾಶಯದ 10 ಗೇಟ್‌ಗಳನ್ನು ತೆರೆದು ಕಾಳಿ ನದಿಗೆ ಒಟ್ಟು 2.15 ಲಕ್ಷ ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದೆ. ಇದರಿಂದ ಜಲಾಶಯದ ಕೆಳಭಾಗದಲ್ಲಿರುವ ಕದ್ರಾ, ಮಲ್ಲಾಪುರ, ಕುರ್ನಿಪೇಟೆ, ಕಿನ್ನರ ಪ್ರದೇಶಗಳು ಮುಳುಗಡೆಯಾಗಿವೆ.

ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲ್ಲೂಕಿನ ಹಿಪ್ಪರಗಿ ಜಲಾಶಯಕ್ಕೆ 1.13 ಲಕ್ಷ ಕ್ಯೂಸೆಕ್ ನೀರು ಹರಿದುಬರುತ್ತಿದೆ. 1.12 ಲಕ್ಷ ಕ್ಯೂಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಯಬಿಡಲಾಗಿದೆ. ಹಿಡಕಲ್ ಜಲಾಶಯದಿಂದ ಘಟಪ್ರಭಾ ನದಿಗೆ 10 ಸಾವಿರ ಕ್ಯೂಸೆಕ್ ಹಾಗೂ ನವಿಲುತೀರ್ಥ ಜಲಾಶಯದಿಂದ ಮಲಪ್ರಭಾ ನದಿಗೆ 5 ಸಾವಿರ ಕ್ಯೂಸೆಕ್ ನೀರು ಹರಿಸಲಾಗಿದೆ. ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ನಿವಾಸಿಗಳಿಗೆ ಜಿಲ್ಲಾಡಳಿತ ಎಚ್ಚರಿಕೆ ನೀಡಿದೆ.

## ಪ್ರವಾಹದಲ್ಲಿ ಮುಳುಗಿದ ಬಸ್: ಪ್ರಯಾಣಿಕರ ರಕ್ಷಣೆ

**ವಿಜಯಪುರ:** ಜಿಲ್ಲೆಯ ಇಂಡಿ ಪಟ್ಟಣದಿಂದ ಮಹಾರಾಷ್ಟ್ರ ರಾಜ್ಯದ ರತ್ನಗಿರಿಗೆ ತೆರಳುತ್ತಿದ್ದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವಿಜಯಪುರ ವಿಭಾಗಕ್ಕೆ ಸೇರಿದ ಬಸ್ (ಕೆಎ 28 ಎಫ್ 2230) ರಾತ್ರಿ 1.30ಕ್ಕೆ ಕೊಲ್ಲಾಪುರದಿಂದ ಎರಡು ಕಿ.ಮೀ. ದೂರದಲ್ಲಿ ಕೃಷ್ಣಾ ನದಿ ಪ್ರವಾಹಕ್ಕೆ ಸಿಲುಕಿದ್ದು, ಬಸ್ ಸಂಪೂರ್ಣ ಮುಳುಗಿದೆ.

ಬಸ್‌ನಲ್ಲಿ ಪಯಣಿಸುತ್ತಿದ್ದ ಕರ್ನಾಟಕದ 10 ಮಂದಿ ಸೇರಿದಂತೆ ಅದರಲ್ಲಿದ್ದ 19 ಪ್ರಯಾಣಿಕರು ಹಾಗೂ ಚಾಲಕ ಶ್ರೀಶೈಲ ಬೋಲೆಗಾವ್, ನಿರ್ವಾಹಕ ಅಬ್ಬಾಸ್ ಅಲಿ ಅವರನ್ನು ಎನ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಣೆ ಮಾಡಿದ್ದಾರೆ ಎಂದು ನಿಗಮದ ವಿಜಯಪುರ ವಿಭಾಗೀಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ ತಿಳಿಸಿದ್ದಾರೆ.

ಅಂಕೋಲಾ ತಾಲ್ಲೂಕಿನ ಸುಂಕಸಾಳದಲ್ಲಿ ಹೋಟೆಲೊಂದರ ಬಳಿ ನಿಲ್ಲಿಸಿದ್ದ ಕಾರುಗಳು ಗಂಗಾವಳಿ ನದಿಯ ಪ್ರವಾಹದಲ್ಲಿ ತೇಲುತ್ತಿರುವುದು

## ಭೂ ಕುಸಿತ: ಪ್ರಯಾಣಿಕರ ಪರದಾಟ

**ಹುಬ್ಬಳ್ಳಿ:** ನೈರುತ್ಯ ರೈಲ್ವೆ ವಲಯ ವ್ಯಾಪ್ತಿಯ ದೂದ್‌ಸಾಗರ ಬಳಿ ರೈಲ್ವೆ ಮಾರ್ಗದಲ್ಲಿ ಎರಡು ಕಡೆ ಭೂಕುಸಿತವಾಗಿದೆ. ರೈಲಿನಲ್ಲಿದ್ದ ಪ್ರಯಾಣಿಕರನ್ನು ಬಸ್ ಮೂಲಕ ಕಳುಹಿಸಿವ ವ್ಯವಸ್ಥೆ ಮಾಡಲಾಗಿದೆ.

ಮಂಗಳೂರು- ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ಎಕ್ಸ್‌ಪ್ರೆಸ್ ರೈಲಿನ ಬೋಗಿಯೊಂದು ಹಳಿ ತಪ್ಪಿದೆ. ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗಿಲ್ಲ. ಅವರನ್ನು ಬೇರೆ ಬೋಗಿಗಳಿಗೆ ಸ್ಥಳಾಂತರಿಸಲಾಗಿದೆ.

ಹಜರತ್ ನಿಜಾಮುದ್ದೀನ್-ವಾಸ್ಕೊ ಡ ಗಾಮಾ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೂ ಅಡ್ಡಿಯಾಗಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3hZmL6x

## ಶಿರಾಡಿಘಾಟ್ ಸಂಚಾರ ನಿರ್ಬಂಧ

**ಹಾಸನ:** ಧಾರಾಕಾರ ಮಳೆ ಹಿನ್ನೆಲೆಯಲ್ಲಿ ಶಿರಾಡಿಘಾಟ್ ರಸ್ತೆಯಲ್ಲಿ ಶುಕ್ರವಾರದಿಂದ ಎಲ್ಲ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

ಶಿರಾಡಿಘಾಟ್‌ನಲ್ಲಿ ರಸ್ತೆ ತೀವ್ರವಾಗಿ ಕುಸಿತವಾಗಿದ್ದು, ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಪರ್ಯಾಯ ಮಾರ್ಗಗಳ ಮೂಲಕ ವಾಹನಗಳು ಸಂಚರಿಸುತ್ತಿವೆ.

ಚಿಕ್ಕಮಗಳೂರು ಜಿಲ್ಲೆಯ ಚಾರ್ಮಾಡಿ ಘಾಟ್ ಮಾರ್ಗದಲ್ಲಿ (ಎನ್.ಎಚ್–173) ಭಾರಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ. ಲಘು ವಾಹನಗಳು ಹಗಲಿನಲ್ಲಿ ಮಾತ್ರ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ.

ಮೈಸೂರು ಜಿಲ್ಲೆಯ ಕಪಿಲಾ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದ್ದು, ಸ್ನಾನ ಘಟ್ಟದಲ್ಲಿ ಸ್ನಾನ ಮಾಡುವುದು ಹಾಗೂ ಶ್ರೀಕಂಠೇಶ್ವರ ಸ್ವಾಮಿ ದೇವಾಲಯ ವತಿಯಿಂದ ನಡೆಸಲಾಗುತ್ತಿದ್ದ ಮುಡಿ ಸೇವೆ ರದ್ದು ಮಾಡಲಾಗಿದೆ ಎಂದು ದೇವಾಲಯ ಪ್ರಕಟಣೆ ತಿಳಿಸಿದೆ.

### ಹಳಿಗಳ ಮೇಲೆ ಹರಿಯುತ್ತಿರುವ ನೀರು: ತಾಳಗುಪ್ಪ ರೈಲು ಸಂಚಾರ ಸ್ಥಗಿತ

# ಭಾರಿ ಮಳೆ: ತುಂಗೆಯಲ್ಲಿ ಪ್ರವಾಹ ಭೀತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಲೆನಾಡು ಮತ್ತು ಬಯಲುಸೀಮೆ ಪ್ರದೇಶಗಳಲ್ಲಿ ಮಳೆಯ ಆರ್ಭಟ ಮುಂದುವರಿದಿದೆ. ಜಲಾಶಯಗಳು ಭರ್ತಿಯಾಗುತ್ತಿರುವುದರಿಂದ ನದಿಗೆ ನೀರು ಹರಿಸಲಾಗುತ್ತಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಮಳೆಯ ಆರ್ಭಟ ಮುಂದುವರಿದಿದ್ದು, ಹಲವು ರಸ್ತೆಗಳ ಸಂಪರ್ಕ ಕಡಿತಗೊಂಡಿದೆ. 24 ತಾಸುಗಳಲ್ಲಿ ಲಿಂಗನಮಕ್ಕಿ ಜಲಾಶಯದ ನೀರಿನಮಟ್ಟ ಐದು ಅಡಿ ಏರಿಕೆಯಾಗಿದೆ. 2.50 ಲಕ್ಷ ಕ್ಯುಸೆಕ್ ನೀರು ಜಲಾಶಯ ಸೇರುತ್ತಿದೆ. ತುಂಗಾ ಜಲಾಶಯಕ್ಕೆ 80 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಅಷ್ಟೇ ಪ್ರಮಾಣದ ನೀರನ್ನು ನದಿಗೆ ಬಿಡಲಾಗುತ್ತಿದೆ. ಇದರಿಂದ ತುಂಗಾ ನದಿ ತೀರದಲ್ಲಿ ಪ್ರವಾಹ ಭೀತಿ ಎದುರಾಗಿದೆ. ಕೋರ್ಪಳಯ್ಯನ ಛತ್ರದ ಬಳಿಯ ಮಂಟಪ ಮುಳುಗಿದೆ.

ಶರಾವತಿ ಕಣಿವೆ ಪ್ರದೇಶದಲ್ಲಿ ಭಾರಿ ಪ್ರಮಾಣದ ಮಳೆ ಸುರಿಯುತ್ತಿದ್ದು, ಕಣಿ-ವೆಯಾಳದಲ್ಲಿ ಜಲ ವಿದ್ಯುತ್ ಬಳಕೆಗಾಗಿ ನಿರ್ಮಾಣಗೊಂಡಿರುವ ಅಂಬುತೀರ್ಥ ಮಿನಿ ಅಣೆಕಟ್ಟೆ ಭರ್ತಿಯಾಗಿದೆ. ಸಾಗರ ತಾಲ್ಲೂಕಿನ ಮಿಡಿನಾಗರ ಹಾಗೂ ಮುತ್ತಲಬಯಲು ಸಂಪರ್ಕಿಸುವ ಸೇತುವೆ ಮುಳುಗಡೆಯಾಗಿದೆ.

ಕುಮದ್ವತಿ ನದಿ ಸಮೀಪದ ಗೌರಿಹಳ್ಳ ಭರ್ತಿಯಾಗಿ ರಸ್ತೆ ಮೇಲೆ ನೀರು ಹರಿಯುತ್ತಿದ್ದು, ಶಿಕಾರಿಪುರ–ಶಿರಾಳಕೊಪ್ಪ ಮಾರ್ಗ ಬಂದ್ ಮಾಡಲಾಗಿದೆ. ಆನಂದಪುರ ಸಮೀಪದ ಗೇರುಬೀಸು ಹೊಳೆ ರಸ್ತೆ ಮೇಲೆ ನೀರು ಹರಿಯುತ್ತಿದ್ದು, ಆನಂದಪುರ–ಗೇರುಬೀಸು ತೊಳಿಕಲ್ಲು ಸಂಪರ್ಕ ಕಡಿತವಾಗಿದೆ. ತೀರ್ಥಹಳ್ಳಿ ಭಾಗದಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, ತುಂಗಾ ನದಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದೆ. ಪೌರಾಣಿಕ ಐತಿಹ್ಯದ ರಾಮಮಂಟಪ ಮುಳುಗಡೆಯಾಗಿದೆ.

ಸಾಗರ ತಾಲ್ಲೂಕು ಕಾನ್ಲೆ ಬಳಿ ರೈಲು ಹಳಿಯ ಮೇಲೆ ನೀರು ನಿಂತಿರುವ ಕಾರಣ ತಾಳಗುಪ್ಪ ರೈಲು ಸಂಚಾರ ರದ್ದುಗೊಳಿಸಲಾಗಿದೆ. ಮೈಸೂರು-ತಾಳಗುಪ್ಪ ರೈಲು ತಾಳಗುಪ್ಪ ಸಂಚಾರವನ್ನು ರದ್ದುಪಡಿಸಿ, ಸಾಗರದಿಂದಲೇ ಮರಳಿದೆ. ಮಳೆ ಕಡಿ-ಮೆಯಾಗುವವರೆಗೂ ರಾತ್ರಿ ರೈಲುಗಳ ಸಂಚಾರವೂ ಸಾಗರಕ್ಕೆ ಕೊನೆಯಾಗಲಿವೆ ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹೊನ್ನಾಳಿ, ನ್ಯಾಮತಿ, ಚನ್ನಗಿರಿ ತಾಲ್ಲೂಕುಗಳಲ್ಲಿ ಒಟ್ಟು 52 ಮನೆಗಳು ಕುಸಿದಿವೆ. ತುಂಗಭದ್ರಾ ನದಿಯಲ್ಲಿ ಪ್ರವಾಹ ಉಂಟಾಗಿರುವುದರಿಂದ ದಾವಣಗೆರೆ ಜಿಲ್ಲೆಯ ಮಲೇಬೆನ್ನೂರು ಹೋಬಳಿ ವ್ಯಾಪ್ತಿಯ ಸುಕ್ಷೇತ್ರ ಉಕ್ಕಡಗಾತ್ರಿ ಕರಿಬಸವೇ-ಶ್ವರ ದೇವಾಲಯದ ಸ್ನಾನಘಟ್ಟ, ಜವಳದ ಕಟ್ಟೆ, ಹಣ್ಣು-ಕಾಯಿ ಪೂಜಾ ಸಾಮಗ್ರಿ ಮಾರಾಟದ ಅಂಗಡಿಗಳು ಮುಳುಗಡೆಯಾಗಿವೆ.

ಫತ್ಯಾಪುರ ಮೂಲಕ ನಂದಿಗುಡಿ ಸಂಪರ್ಕಿಸುವ ರಸ್ತೆ ಸೇತುವೆ ನದಿ ಹಿನ್ನೀರಿನಲ್ಲಿ ಮುಳುಗಿದೆ. ಭತ್ತದ ಗದ್ದೆ, ತೋಟಕ್ಕೆ ನೀರು ನುಗ್ಗಿದೆ. ಪಂಪ್‌ಸೆಟ್‌ಗಳು ಕೊಚ್ಚಿಕೊಂಡು ಹೋಗಿವೆ.

ಬೀದರ್ ಜಿಲ್ಲೆಯ ಕಾರಂಜಾ ಜಲಾಶಯ ಭರ್ತಿಯಾಗಿದ್ದು, ನದಿಗೆ ನೀರು ಬಿಡಲಾಗುತ್ತಿದೆ. ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ನಾಗರಾಳ ಜಲಾಶಯಕ್ಕೆ ನೀರು ಹರಿದುಬರುತ್ತಿದ್ದು, 1500 ಕ್ಯುಸೆಕ್ ನೀರನ್ನು ಮುಲ್ಲಾಮಾರಿ ನದಿಗೆ ಹರಿಸಲಾಗುತ್ತಿದೆ.

ಕೊಡಗಿನ ಮುಕ್ಕೊಡ್ಲು ಹಟ್ಟುಹೊಳೆ ರಸ್ತೆಯಲ್ಲಿ ಗುಡ್ಡ ಕುಸಿದಿದ್ದು ವಾಹನ ಸಂಚಾರ ಬಂದ್ ಆಗಿದೆ

**ಅತಿ ಹೆಚ್ಚು ಮಳೆಯಾಗಿರುವ ಸ್ಥಳಗಳು (ಸೆ.ಮೀ.ಗಳಲ್ಲಿ)**

| | | | |
|---|---|---|---|
| ಖಾನಾಪುರ | 27 | ಶ್ರೀಮಂಗಲ | 17.6 |
| ಬೆಳಗಾವಿ | 21 | ಭಾಗಮಂಡಲ | 16.5 |
| ನಿಪ್ಪಾಣಿ | 17 | ನಾಪೋಕ್ಲು | 14.7 |
| ತಾಳಗುಪ್ಪ | 27 | ಶನಿವಾರಸಂತೆ | 11.5 |
| ಶಿರಸಿ | 24 | ವಿರಾಜಪೇಟೆ | 11 |
| ಸಾಗರ | 23 | ಮಾರನಹಳ್ಳಿ | 18 |
| ಸೊರಬ | 19 | ಹೆತ್ತೂರು | 17 |
| ತೀರ್ಥಹಳ್ಳಿ | 17, | ಯಸಳೂರು | 13 |
| ಶಿಕಾರಿಪುರ | 12 | ಶುಕ್ರವಾರ ಸಂತೆ | 15 |
| ಸಾವೆಹಕ್ಲು | 22.5 | ಹಾನುಬಾಳು | 12.5 |
| ಹೊಸನಗರ | 21 | ಕೊಲ್ಲೂರು | 20 |
| ಮಾಸ್ತಿಕಟ್ಟೆ | 20 | ಕೊಪ್ಪ | 19 |

## ರಸ್ತೆ, ವಿದ್ಯುತ್ ಸಂಪರ್ಕ ಕಡಿತ

ಕೊಡಗು ಹಾಗೂ ಹಾಸನದಲ್ಲಿ ಧಾರಾಕಾರ ಮಳೆ ಸುರಿದಿದ್ದು ಪ್ರವಾಹದಿಂದ ಹಲವೆಡೆ ರಸ್ತೆ ಸಂಪರ್ಕ ಕಡಿತಗೊಂಡಿದೆ. ಗುಡ್ಡ, ಮನೆಗಳು ಕುಸಿದಿವೆ, ವಿದ್ಯುತ್ ಕಂಬಗಳು ಉರುಳಿವೆ. ಹಲವು ಗ್ರಾಮಗಳಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿ-ದ್ದು ಜನಜೀವನ ಅಸ್ತವ್ಯಸ್ತವಾಗಿದೆ. ವಿದ್ಯುತ್ ತಂತಿ ತಗುಲಿ ನಾಲ್ಕು ಹಸುಗಳು ಮೃತಪಟ್ಟಿವೆ.

ಸೋಮವಾರಪೇಟೆಯ ಮುಕ್ಕೊಡ್ಲು– ಹಟ್ಟಿಹೊಳೆ ರಸ್ತೆಯಲ್ಲಿ ಗುಡ್ಡ ಕುಸಿದಿದ್ದು, ರಸ್ತೆ ಸಂಪರ್ಕ ಬಂದ್ ಆಗಿದೆ. ಭಾಗಮಂಡಲದ ತ್ರಿವೇಣಿ ಸಂಗಮವು ಸಂಪೂರ್ಣ ಜಲಾವೃತಗೊಂಡಿದೆ.

ಹಾಸನ ಜಿಲ್ಲೆಯಲ್ಲಿ ಧಾರಾಕಾರ ಮಳೆಯಿಂದ ಆಲೂರು, ಅರಕಲಗೂಡು, ಬೇಲೂರು ಮತ್ತು ಹೆತ್ತೂರಿನಲ್ಲಿ ಮನೆಗಳು ಕುಸಿದು ಬಿದ್ದಿವೆ. ವಿದ್ಯುತ್ ಕಂಬಗಳು ಕುಸಿದು ಗ್ರಾಮಗಳು ಕತ್ತಲಲ್ಲಿವೆ. ಸಕಲೇಶಪುರ ದೊಡ್ಡನಾಗರ ಗ್ರಾಮದಲ್ಲಿ ಗಾಳಿ, ಮಳೆಗೆ ವಿದ್ಯುತ್ ತಂತಿ ಕೆಳಗೆ ಬಿದ್ದು ನಾಲ್ಕು ಹಸುಗಳು ಮೃತಪಟ್ಟಿವೆ. ವಾಟೆಹೊಳೆ ಜಲಾಶಯ ಭರ್ತಿಯಾಗಿದೆ.

**ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)**

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್* | 124.80 | 104.38 | 25,915 | 6,415 |
| ಹಾರಂಗಿ | 2,859 | 2,854.48 | 13,900 | 14,003 |
| ಕಬಿನಿ | 2,284 | 2,281.10 | 25,000 | 30,000 |
| ಹೇಮಾವತಿ | 2,922 | 2,910.68 | 30,000 | 410 |
| ಲಿಂಗನಮಕ್ಕಿ | 1,819 | 1,799.15 | 73,431 | - |
| ಸೂಪಾ (ಮೀ) | 564 | 545.90 | 86,046 | 2,169 |
| ಮಾಣಿ | 594.36 | 579.10 | 9,253 | - |
| ತುಂಗಭದ್ರಾ | 1,633 | 1,622.65 | 44,320 | 3,645 |
| ಮಲಪ್ರಭಾ | 2079.50 | 2,069 | 33,677 | 5,000 |
| ಘಟಪ್ರಭಾ | 2175 | 2,151.36 | 53,952 | 10,000 |
| ಭದ್ರಾ | 186 | 171.1 | 39,286 | 478 |
| ಆಲಮಟ್ಟಿ (ಮೀ) | 519.60 | 517.38 | 1,43,519 | 3,00,000 |
| ನಾರಾಯಣಪುರ (ಮೀ) | 492.25 | 490.55 | 1,95,000 | 2,56,150 |

*ನೆಲಮಟ್ಟದಿಂದ

ಪ್ರವಾಹದ ನೀರಿನಲ್ಲಿ ಜಲಾವೃತವಾಗಿರುವ ಸತಾರಾ ಜಿಲ್ಲೆಯ ಚಿಪ್ಲನ್ ಪ್ರದೇಶ ಪಿಟಿಐ ಚಿತ್ರ

# ಮಹಾರಾಷ್ಟ್ರದಲ್ಲಿ ಭಾರಿ ಮಳೆ

**ಮುಂಬೈ (ಪಿಟಿಐ/ರಾಯಿಟರ್ಸ್):** ಗುರುವಾರ ರಾತ್ರಿಯಿಂದ ಸುರಿದ ಭಾರಿ ಮಳೆಯ ಕಾರಣ ಮಹಾರಾಷ್ಟ್ರದ ಹಲವೆಡೆ ಭೂಕುಸಿತ ಉಂಟಾಗಿದೆ. ಮುಂಬೈನಲ್ಲಿ ಪ್ರವಾಹದ ಸ್ಥಿತಿ ತಲೆದೋರಿದ್ದು, ಜನಜೀವನ ಅಸ್ತವ್ಯಸ್ತ-ವಾಗಿದೆ. ರಾಜ್ಯದ ಗ್ರಾಮೀಣ ಪ್ರದೇಶದ ಹಲವೆಡೆ ಪ್ರವಾಹ ಉಂಟಾಗಿದ್ದು, ಸಂಚಾರ ವ್ಯವಸ್ಥೆ ಏರುಪೇರಾಗಿದೆ.

ಇನ್ನೂ ಎರಡು ದಿನ ರಾಜ್ಯದಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಪರಿಸ್ಥಿತಿಯನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಮಹಾರಾಷ್ಟ್ರ ಸರ್ಕಾರ ಹೇಳಿದೆ.

‘ಇಷ್ಟು ಮಳೆಯನ್ನು ನಿರೀಕ್ಷಿಸಿರಲಿ-ಲ್ಲ. ಭಾರಿ ಮಳೆಯ ಕಾರಣ ಹಲವೆಡೆ ಭೂಕುಸಿತ ಉಂಟಾಗಿದೆ. ರಾಜ್ಯದ ನದಿಗಳು ತುಂಬಿ ಹರಿಯುತ್ತಿವೆ. ಜಲಾಶಯಗಳು ಭರ್ತಿಯಾಗಿದ್ದು, ಹೆಚ್ಚುವರಿ ನೀರನ್ನು ಹೊರ ಬಿಡಲಾಗಿದೆ. ಪ್ರವಾಹ ಸ್ಥಿತಿ ಎದುರಾಗಿರುವ ಕಾರಣ, ನದಿ ದಂಡೆಯ ಪ್ರದೇಶದ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರ ಮಾಡಲಾಗುತ್ತಿದೆ. ಜಲಾಶಯಗಳಿಂದ ನೀರು ಹೊರಬಿಟ್ಟಿರುವ ಬಗ್ಗೆ ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳಿಗೆ ಮಾಹಿತಿ ನೀಡಲಾಗಿದೆ’ ಎಂದು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿದ್ದಾರೆ.

- ಮುಂಬೈ-ಬೆಂಗಳೂರು ಹೆದ್ದಾರಿಯಲ್ಲಿ ಭೂಕುಸಿತ ಉಂಟಾಗಿ ಸಂಚಾರ ಬಂದ್ ಆಗಿದೆ. ಬೆಂಗಳೂರು ಮತ್ತು ಕರ್ನಾಟಕದ ವಿವಿಧೆಡೆಯಿಂದ ಮುಂಬೈಗೆ ಹೊರಟಿದ್ದ ಸಾವಿರಾರು ಲಾರಿಗಳು ಹೆದ್ದಾರಿಯಲ್ಲಿ ಸಾಲುಗಟ್ಟಿ ನಿಂತಿವೆ
- ಭಾರಿ ಮಳೆಯಿಂದ ಮರಗಳು ಮತ್ತು ಸಾವಿರಾರು ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿವೆ. ಮಹಾರಾಷ್ಟ್ರದ ಗ್ರಾಮೀಣ ಪ್ರದೇಶದ ಹಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ
- ಸಾತಾರಾ, ರಾಯಗಡ ಮತ್ತು ರತ್ನಗಿರಿ ಜಿಲ್ಲೆಗಳಲ್ಲಿ ಭೂಕುಸಿತ ಉಂಟಾಗಿದೆ. ಆದರೆ ಪ್ರವಾಹದ ಕಾರಣ ರಕ್ಷಣಾ ಸಾಮಗ್ರಿಗಳನ್ನು ಒಯ್ಯಲು ಸಾಧ್ಯವಾಗಿಲ್ಲ. ಈ ಕಾರಣದಿಂದ ರಕ್ಷಣಾ ಕಾರ್ಯಾಚರಣೆಗೆ ಹಿನ್ನಡೆಯಾಗಿದೆ
- ಭೂಕುಸಿತದ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದು, ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ
- ಮಳೆ ಸಂಬಂಧಿ ಅವಘಡಗಳಲ್ಲಿ ಮೃತಪಟ್ಟವರ ಕುಟುಂಬಗಳಿಗೆ ರಾಜ್ಯ ಸರ್ಕಾರವು 5 ಲಕ್ಷ ಪರಿಹಾರವನ್ನು ಘೋಷಿಸಿದೆ
- ತಾರಾ ಜಿಲ್ಲೆಯ ಮಹಾಬಲೇಶ್ವರದಲ್ಲಿ ಶುಕ್ರವಾರ ಬೆಳಿಗ್ಗೆ 8.30ಕ್ಕಿಂತ ಮೊದಲಿನ 24 ತಾಸುಗಳಲ್ಲಿ 599.5 ಮಿ.ಮೀ. ಮಳೆ ಸುರಿದಿದೆ

## ತೆಲಂಗಾಣ: ಬಿಡುವು ನೀಡಿದ ಮಳೆ

ಎರಡು ದಿನಗಳಿಂದ ತೆಲಂಗಾಣದಲ್ಲಿ ಸುರಿಯುತ್ತಿದ್ದ ಭಾರಿ ಮಳೆಯು ಶುಕ್ರವಾರ ಬಿಡುವು ನೀಡಿದೆ. ಆದರೆ ರಾಜ್ಯದ ಹಲವು ಪ್ರದೇಶಗಳಲ್ಲಿ ಪ್ರವಾಹದ ಸ್ಥಿತಿ ಎದುರಾಗಿದೆ.

ಮಹಾರಾಷ್ಟ್ರದ ಜಲಾಶಯಗಳಿಂದ ನೀರನ್ನು ಹೊರಬಿಟ್ಟಿರುವ ಕಾರಣ, ರಾಜ್ಯದ ಜಲಾಶಯಗಳಿಗೆ ಭಾರಿ ಪ್ರಮಾಣದಲ್ಲಿ ನೀರು ಹರಿದುಬಂದಿದೆ. ಜತೆಗೆ ನದಿ ಬಯಲಿನ ಪ್ರದೇಶಗಳಲ್ಲಿ ಪ್ರವಾಹ ಸ್ಥಿತಿ ಎದುರಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ: ಸ್ವಸಹಾಯ ಸಂಘಗಳಿಂದ ಲಾಭಾಂಶ ವಿತರಣೆ

# ದುರ್ಬಲ ವರ್ಗದ ಸಬಲೀಕರಣ ಯಶೋಗಾಥೆ

ಎಸ್‌ಕೆಆರ್‌ಡಿಪಿ ಕಟ್ಟಡ

ಕರ್ನಾಟಕ ರಾಜ್ಯದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಪ್ರಾಯೋಜಿಸಿರುವ ಸ್ವಸಹಾಯ ಸಂಘಗಳು ಸುಮಾರು ₹ 620 ಕೋಟಿ ಬೃಹತ್ ಮೊತ್ತದ ಲಾಭಾಂಶವನ್ನು ವಿತರಣೆ ಮಾಡಿಕೊಳ್ಳುತ್ತಿವೆ. ಬಡಜನರಿಗಾಗಿ, ಜನರಿಂದಲೇ ನಡೆಯುತ್ತಿರುವ ಕಾರ್ಯಕ್ರಮವೊಂದು ಈ ಮಟ್ಟಿಗೆ ಬೆಳೆದು, ಫಲ ನೀಡುತ್ತಿರುವುದು ಈ ಕಾರ್ಯಕ್ರಮದಲ್ಲಿ ತೊಡಗಿಕೊಂಡವರಿಗೆಲ್ಲ ಧನ್ಯತೆಯನ್ನು ಮೂಡಿಸುತ್ತಿದೆ. ಇದರ ಹಿನ್ನಲೆ ಏನು? ಇದು ಹೇಗೆ ಸಾಧ್ಯವಾಯಿತೆಂಬ ವಿವರಣೆ ಈ ಲೇಖನದಲ್ಲಿ.

## ಪ್ರಗತಿಯ ಹರಿಕಾರ ಧರ್ಮಸ್ಥಳ ಹೆಗ್ಗಡೆಯವರು:

ಸ್ವತಂತ್ರ ಭಾರತದಲ್ಲಿ ಬಡತನ ನಿವಾರಣೆ ಮತ್ತು ದುರ್ಬಲರ ಸಬಲೀಕರಣಕ್ಕಾಗಿ ಅಸಂಖ್ಯ ಸರ್ಕಾರಿ ಕಾರ್ಯಕ್ರಮಗಳನ್ನು ಅನುಷ್ಠಾನಿಸಲಾಗಿದೆ. ಇವುಗಳಿಂದ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗಳು ಸಾಕಷ್ಟು ಆಗಿದ್ದರೂ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಇನ್ನೂ ಸಾಕಷ್ಟು ಸಂಖ್ಯೆಯಲ್ಲಿ ಇವೆ. ಒಂದು ಅಂದಾಜಿನ ಪ್ರಕಾರ ನಮ್ಮ ದೇಶದಲ್ಲಿ ಶೇ 36 ರಷ್ಟು ಕುಟುಂಬಗಳು ಇನ್ನೂ ಬಡತನ ರೇಖೆಗಿಂತ ಕೆಳಗೇ ಇವೆ. ಈ ಕುಟುಂಬ ಸದಸ್ಯರ ದೈನಂದಿನ ತಲಾ ಆದಾಯ ರೂ. 150 ಕ್ಕಿಂತ ಕಡಿಮೆಯೇ ಇದೆ.

ಬಡತನವೇ ಮನುಕುಲದ ಅತೀ ದೊಡ್ಡ ದೌರ್ಬಲ್ಯವಾಗಿದ್ದರೆ, ಬಡತನದಿಂದ ಮನುಷ್ಯನ ವಿಶ್ವಾಸದಲ್ಲಿ ಕೊರತೆ ಉಂಟಾಗುವುದು ಇನ್ನೂ ದೊಡ್ಡ ಸಮಸ್ಯೆ. ಬಡತನದ ಬೇಗೆಯಲ್ಲಿ ಬೇಯುತ್ತಿರುವವರಿಗೆ ಆತ್ಮವಿಶ್ವಾಸದ ಕೊರತೆಯಿರುತ್ತದೆ. ಇದರಿಂದಾಗಿ ಅವರು ಸಮರ್ಪಕ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಹಿಂಜರಿಯುತ್ತಾರೆ. ಹೀಗೆ ಒಂದಕ್ಕೊಂದು ಕೊಂಡಿಯಾಗಿ ಬಡತನ ಅವರನ್ನು ಇನ್ನಷ್ಟು ದುರ್ಬಲರನ್ನಾಗಿ ಮಾಡುತ್ತಾ ಹೋಗುತ್ತದೆ. ಜನರಲ್ಲಿ ಬಡತನ ನಿವಾರಿಸಲು ಅನುದಾನಗಳನ್ನು ನೀಡುವುದರಿಂದ ಸಾಧ್ಯ ಎಂಬ ತರ್ಕದಲ್ಲಿ ಲಕ್ಷಾಂತರ ಕೋಟಿ ರೂಪಾಯಿಗಳ ಅನುದಾನ ಪ್ರತಿ ವರ್ಷ ವಿನಿಯೋಗವಾದರೂ, ಇದರಿಂದ ಆಗಬೇಕಾದಷ್ಟು ಪರಿಣಾಮ ಆಗಿಲ್ಲದಿರುವುದು ಎಲ್ಲರಿಗೂ ಗೊತ್ತಿರುವ ವಿಷಯವೇ.

ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಬಡತನ ನಿವಾರಣೆಯ ವಿಷಯದಲ್ಲಿ ಭಿನ್ನವಾಗಿ ಚಿಂತಿಸಿದವರು. ಬಡ ಕುಟುಂಬಗಳು ಪ್ರಗತಿ ಹೊಂದಬೇಕೆಂದರೆ ಅವರು ತಮ್ಮ ಮನಃಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕು, ಆತ್ಮವಿಶ್ವಾಸವನ್ನು ಗಳಿಸಿಕೊಳ್ಳಬೇಕು, ಸ್ವಾವಲಂಬನೆಯನ್ನು ಮಂತ್ರವನ್ನಾಗಿ ಮಾಡಿಕೊಂಡರೆ ಪ್ರಗತಿ ಸುಲಭ ಸಾಧ್ಯ ಎಂಬುದು ಅವರ ಕಾರ್ಯಕ್ರಮಗಳ ಹಿಂದಿರುವ ಸೂತ್ರ. ಇದಕ್ಕಾಗಿಯೇ ಅವರು ಶಿಕ್ಷಣ ಸಂಸ್ಥೆಗಳನ್ನೂ, ರುಡ್‌ಸೆಟ್ ಸ್ವಉದ್ಯೋಗ ಸಂಸ್ಥೆಗಳನ್ನು ಸ್ಥಾಪಿಸಿದರು.

## ಬದಲಾದ ಬಡವರ ಮನಃಸ್ಥಿತಿ:

ನಾಲ್ಕು ದಶಕಗಳ ಹಿಂದೆ ಹೆಗ್ಗಡೆಯವರು ಪ್ರಾರಂಭಿಸಿದ ಗ್ರಾಮಾಭಿವೃದ್ಧಿ ಯೋಜನೆಯಲ್ಲಿಯೂ ಅವರು ಮನುಷ್ಯ ಪ್ರಯತ್ನಕ್ಕೆ ಪ್ರೇರಣೆ ನೀಡಿದರು. ಬಡ ಕುಟುಂಬಗಳು ತಮ್ಮ ಕೃಷಿಭೂಮಿಯನ್ನು ಸ್ವಂತ ಶ್ರಮದಿಂದ ಅಭಿವೃದ್ಧಿ ಪಡಿಸಲು ಬೇಕಾಗುವ ಮನೋಸ್ಥೈರ್ಯವನ್ನು ಅವರು ಯೋಜನೆಯಿಂದ ಒದಗಿಸಿದರು. ಅಭಿವೃದ್ಧಿಯ ಪಥದಲ್ಲಿರುವ ಯೋಜನೆಯ ಸದಸ್ಯರಿಗೆ ಹಣಕಾಸಿನ ಕೊರತೆ ಉಂಟಾದಾಗ, ಅವರು ಪ್ರಾರಂಭಿಸಿದ ಕಾರ್ಯಕ್ರಮವೇ 'ಸ್ವಸಹಾಯ ಸಂಘ ಚಳವಳಿ'. ಹತ್ತು ಜನ ಸಮಾನ ಮನಸ್ಕರು ಒಂದೆಡೆ ಕಲೆತು, ಸಂಘದ ನಿಯಮಗಳನ್ನು ಪಾಲಿಸುತ್ತಾ, ಶಿಸ್ತನ್ನು ಮೈಗೂಡಿಸಿಕೊಳ್ಳುತ್ತಾ, ಜಂಟಿಯಾಗಿ ಹಣಕಾಸಿನ ವ್ಯವಹಾರವನ್ನು ಪ್ರಾರಂಭಿಸುವ ಕಲೆಯನ್ನು ಬಡವರು ಸ್ವಸಹಾಯ ಸಂಘಗಳಿಂದ ಕಲಿಯತೊಡಗಿದರು.

1991 ರಲ್ಲಿ ಬೆಳ್ತಂಗಡಿ ತಾಲ್ಲೂಕಿನ ನಾವೂರು ಗ್ರಾಮದಲ್ಲಿ ಪ್ರಾರಂಭಗೊಂಡ ಈ ಚಳವಳಿ ಇಂದು ಕರ್ನಾಟಕ ರಾಜ್ಯವನ್ನು ವ್ಯಾಪಿಸಿ 48 ಲಕ್ಷ ಕುಟುಂಬಗಳ ಬದುಕಿನ ಅವಿಭಾಜ್ಯ ಅಂಗವಾಗಿದೆ ಎಂದರೆ ಅದು ಹೆಗ್ಗಡೆಯವರು ಚಿಂತಿಸಿದ ಸಬಲೀಕರಣ ಸೂತ್ರದ ಯಶಸ್ಸು ಎಂದು ಹೇಳಬಹುದಾಗಿದೆ.ಪ್ರಾರಂಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾಡಿದ ಮೊದಲ ಕೆಲಸವೇ ಕುಟುಂಬಗಳಿಗೆ ಹಿಡುವಳಿ ಯೋಜನೆ ಹಾಕಿಕೊಡುವ ತರಬೇತಿ ನೀಡಿದ್ದು. ಪ್ರತಿಯೊಂದು ಕುಟುಂಬವೂ ತನ್ನ ಪ್ರಗತಿಗೆ ಬೇಕಾದ ಗುರಿಗಳನ್ನು ಗುರುತಿಸಿಕೊಳ್ಳುವುದು. ಇದಕ್ಕಾಗಿ ಯೋಜನೆಯ ವತಿಯಿಂದ ಕುಟುಂಬ ಕೈಪಿಡಿಯನ್ನು ನೀಡಿ, ಎಲ್ಲ ಗುರಿಗಳನ್ನು ಸ್ಪಷ್ಟವಾಗಿ ಬರೆದಿಟ್ಟುಕೊಂಡು ಅದನ್ನು ಸಾಧಿಸುವಂತೆ ಪ್ರೇರಣೆ ನೀಡಲಾಯಿತು. ಹೀಗೆ ಹಿಡುವಳಿ ಯೋಜನೆಯಿಂದ ಬಂದ ಗುರಿ, ಸ್ವಸಹಾಯ ಸಂಘದಿಂದ ಬಂದ ಶಿಸ್ತಿನೊಂದಿಗೆ ವಿಳಿತವಾಯಿತು. ಬಡವರೇ ಪ್ರಾರಂಭಿಸಿದ ಸ್ವಸಹಾಯ ಸಂಘಗಳು ತಮ್ಮ ಉಳಿತಾಯ ಖಾತೆಯನ್ನು ಬ್ಯಾಂಕಿನಲ್ಲಿ ತೆರೆಯಬಹುದೆಂಬ ರಿಸರ್ವ್ ಬ್ಯಾಂಕಿನ ಆದೇಶ ಬಡವರಿಗೆ ವರದಾನವಾಯಿತು.

**ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್**

## ಅಲ್ಪ ಹೂಡಿಕೆಯಲ್ಲಿ ಗರಿಷ್ಠ ಲಾಭಾಂಶ

ವೀರೇಂದ್ರ ಹೆಗ್ಗಡೆಯವರ ಅಭಿಪ್ರಾಯದಂತೆ ಸಂಘಗಳ ಸದಸ್ಯರು ಲಾಭಾಂಶವನ್ನು ಪಡೆಯುವಲ್ಲಿ ಅತೀ ಹೆಚ್ಚಿನ ಸಂತೋಷವನ್ನು ಪಡೆಯುತ್ತಾರೆ.

ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಸದಸ್ಯರ ಬೇಡಿಕೆಯಂತೆ ಲಾಭಾಂಶವನ್ನು ವಿತರಿಸಿಕೊಳ್ಳಲು ಸಂಘಗಳಿಗೆ ಯೋಜನೆಯು ಅನುಮತಿಸಿದೆ. ಕಳೆದ ಮೂರು ವರ್ಷಗಳಿಂದ ಸಂಘಗಳಲ್ಲಿ ಸುಮಾರು ₹670 ಕೋಟಿಯಷ್ಟು ಲಾಭಾಂಶ ಶೇಖರಣೆಯಾಗಿತ್ತು. ಕೋವಿಡ್ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಯೋಜನೆಯು ಜಾರಿಗೆ ತಂದಿರುವ ವಿಮಾ ಯೋಜನೆಗೆ ನೋಂದಾವಣೆಗೊಳ್ಳಲು ಸದಸ್ಯರಿಗೆ ತಮ್ಮ ಸಂಘದಿಂದ ಸುಮಾರು ₹50 ಕೋಟಿಯಷ್ಟು ರಿಯಾಯಿತಿಯನ್ನು ಒದಗಿಸಲಾಯಿತು.ನಂತರ ಉಳಿದ ಮೊತ್ತದಲ್ಲಿ ಶೇ 80 ರಷ್ಟನ್ನು ಅಂದರೆ ಸುಮಾರು ₹495 ಕೋಟಿಯಷ್ಟು ಮೊತ್ತವನ್ನು ಇದೀಗ ಸಂಘಗಳು ಲಾಭಾಂಶವಾಗಿ ಹಂಚಿಕೊಳ್ಳುತ್ತಿವೆ. ಹೆಚ್ಚುವರಿ ಉಳಿತಾಯ ಹೊಂದಿರುವ ಸಂಘಗಳಿಗೆ ಮತ್ತು ಸಾಲವನ್ನು ಹೆಚ್ಚುವರಿಯಾಗಿ ಮಾಡಿರುವ ಸಂಘಗಳಿಗೆ ಹೆಚ್ಚಿನ ಲಾಭಾಂಶ ಲಭ್ಯವಾಗುತ್ತಿದೆ.

ಒಟ್ಟಾರೆಯಾಗಿ ಸುಮಾರು 34 ಲಕ್ಷ ಸದಸ್ಯರು ಈ ಲಾಭವನ್ನು ಹಂಚಿಕೊಳ್ಳುತ್ತಿದ್ದಾರೆ. ಬಡವರೇ ನಡೆಸುವ ತಮ್ಮ ವ್ಯವಹಾರದಲ್ಲಿ ₹10 ರಿಂದ ₹20 ರ ವಾರದ ಉಳಿತಾಯದಿಂದ ಬರುವ ಲಾಭಾಂಶವು ಇಂದಿನ ಆಪತ್ಕಾಲದಲ್ಲಿ ಬಡವರ ಕೈಸೇರುತ್ತಿದೆ. ಲಾಕ್‌ಡೌನ್ ಸಮಯದಲ್ಲಿ ಉಂಟಾಗಿರುವ ಕಂತು ಬಾಕಿಗೆ ಈ ಮೊತ್ತವನ್ನು ಹೊಂದಾಣಿಕೆ ಮಾಡಬಾರದೆಂಬ ತಿಳಿವಳಿಕೆಯನ್ನು ಈಗಾಗಲೇ ನೀಡಲಾಗಿದೆ. ಪ್ರತಿಯೊಬ್ಬ ಸದಸ್ಯರು ಸರಾಸರಿ ₹2,000 ದಷ್ಟು ಲಾಭಾಂಶವನ್ನು ಪಡೆಯುತ್ತಿದ್ದು, ಇದೊಂದು ರಾಷ್ಟ್ರೀಯ ದಾಖಲೆಯಾಗಿಯೇ ಉಳಿಯುತ್ತದೆ.

## ಬ್ಯಾಂಕುಗಳ ಸಹಕಾರ:

ಹೀಗೆ ಬದಲಾದ ಮನಃಸ್ಥಿತಿ, ಬೆಳೆಸಿಕೊಂಡ ಶಿಸ್ತಿನಿಂದ ಸ್ವಸಹಾಯ ಸಂಘಗಳು ನೇರವಿಗಾಗಿ ಬ್ಯಾಂಕ್ ಶಾಖೆಗಳ ಕದ ತಟ್ಟಿದರೂ ಹೆಚ್ಚಿನ ಬ್ಯಾಂಕ್ ಮ್ಯಾನೇಜರ್‌ಗಳು ಇದನ್ನು ಅರ್ಥ ಮಾಡಿಕೊಳ್ಳಲಿಲ್ಲ. ಹೀಗಾಗಿ ಪ್ರಗತಿಯ ಕನಸು ಮರೀಚಿಕೆ ಆಗತೊಡಗಿದಾಗ ಕರ್ನಾಟಕದಲ್ಲಿ ಹೆಗ್ಗಡೆಯವರು ಪ್ರಾರಂಭಿಸಿದ ಕಿರು ಆರ್ಥಿಕ ವ್ಯವಹಾರ ಬಡವರ ಪಾಲಿಗೆ ಮಂತ್ರದಂಡವಾಯಿತು.
2001 ನೇ ಇಸವಿಯಲ್ಲಿ ಯೋಜನೆಯ ವತಿಯಿಂದ ಪ್ರಾರಂಭಿಸಲಾದ ಪ್ರಗತಿನಿಧಿ ಯೋಜನೆಯಲ್ಲಿ ಬ್ಯಾಂಕಿನಿಂದ ಸ್ವಸಹಾಯ ಸಂಘಗಳಿಗೆ ಅಗತ್ಯವಿರುವಷ್ಟು ಹಣಕಾಸಿನ ನೆರವನ್ನು ಒದಗಿಸಲಾಯಿತು. ಬಡವರಿಗೆ ತಾವು ಹಾಕಿಕೊಂಡ ಗುರಿಯನ್ನು ತಲುಪಲು ಬೇಕಾಗುವ ಉದ್ಯೋಗಗಳನ್ನು ಪ್ರಾರಂಭಿಸಲು ಅಗತ್ಯವಿರುವಷ್ಟು ನೆರವನ್ನು ಒದಗಿಸಲು ಯೋಜನೆಯು ಬ್ಯಾಂಕಿನೊಡನೆ ಒಪ್ಪಂದ ಮಾಡಿಕೊಂಡಿತು. ಅಕಸ್ಮಾತ್ ಫಲಾನುಭವಿಗಳು ತಾವು ಪಡೆದ ಸಾಲವನ್ನು ಮರುಪಾವತಿಸಲು ಅಸಮರ್ಥರಾದರೆ, ಇದರ ಜವಾಬ್ದಾರಿಯನ್ನು ಯೋಜನೆಯೇ ಹೊರುವುದು ಎಂದು ಬ್ಯಾಂಕಿಗೆ ತಿಳಿಸಿದ ಮೇಲೆ ಬ್ಯಾಂಕಿನ ಭಂಡಾರದ ಬಾಗಿಲುಗಳು ಬಡವರಿಗೆ ತೆರೆದುಕೊಂಡವು.ಇತ್ತ ಯೋಜನೆಯ ಮುಖಾಂತರ ಪ್ರಾರಂಭಗೊಂಡ ಸ್ವಸಹಾಯ ಸಂಘ ಚಳವಳಿಯಲ್ಲಿ ಸದಸ್ಯರು ಪ್ರತಿವಾರ ₹10 ರಿಂದ ₹20 ರಂತೆ ಉಳಿತಾಯ ಮಾಡಿದರು. ಈ ಹಣವನ್ನು ಅವರು ಬ್ಯಾಂಕಿಗೆ ಕಟ್ಟಿದರು. ತಮ್ಮ ಅಗತ್ಯಗಳಿಗೆ ತಕ್ಕಂತೆ ಅವರಿಗೆ ಯೋಜನೆಯ ಮಧ್ಯಸ್ಥಿಕೆಯಿಂದ ಬ್ಯಾಂಕ್ ಸಾಲ ದೊರೆಯುವಂತೆ ಆಯಿತು. ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಚಳವಳಿ ಕಾಡ್ಗಿಚ್ಚಿನಂತೆ ರಾಜ್ಯದೆಲ್ಲಡೆ ಹರಡತೊಡಗಿತು. ದೂರದೂರುಗಳಿಂದ ಜನರು ಧರ್ಮಸ್ಥಳಕ್ಕೆ ಬಂದು, ತಮ್ಮೂರಿನಲ್ಲಿಯೂ ಗ್ರಾಮಾಭಿವೃದ್ಧಿ ಯೋಜನೆಯಿಂದ ಸ್ವಸಹಾಯ ಸಂಘಗಳನ್ನು ಪ್ರಾರಂಭಿಸುವಂತೆ ವಿನಂತಿ ಮಾಡತೊಡಗಿದರು.

## ತಂತ್ರಜ್ಞಾನದ ಬಳಕೆ:

ಸ್ವಸಹಾಯ ಸಂಘ ಚಳವಳಿ ರಾಜ್ಯದ ಉದ್ದಗಲಕ್ಕೂ ಹಬ್ಬತೊಡಗಿದಂತೆ, ಬ್ಯಾಂಕುಗಳು ಯೋಜನೆಯ ಭದ್ರತೆಯೊಂದಿಗೆ ಸಂಘಗಳಿಗೆ ಸಾಲ ನೀಡಲು ಪ್ರಾರಂಭಿಸಿದವು. ನಂತರ ಯೋಜನೆಯು ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಸಂಘಗಳು ಲೆಕ್ಕಾಚಾರಗಳನ್ನು ನೋಡಿಕೊಳ್ಳಬೇಕಾಯಿತು. ಇದಕ್ಕಾಗಿ ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನವನ್ನು ಯೋಜನೆಯು ಬಳಸಿಕೊಳ್ಳತೊಡಗಿತು.
ಧರ್ಮಸ್ಥಳದಲ್ಲಿ ಮಾಹಿತಿ ತಂತ್ರಜ್ಞಾನ ಪ್ರಯೋಗಾಲಯವನ್ನು ಪ್ರಾರಂಭಿಸಿ, ಕಡುಬಡವರ ಕಿರು ವ್ಯವಹಾರವನ್ನು ಚಾಚು ತಪ್ಪದೇ ಕಾಪಿಟ್ಟುಕೊಳ್ಳುವ ದೈತ್ಯ ಸರ್ವರ್‌ಗಳು, ಮಾಹಿತಿಯನ್ನು ಒದಗಿಸುವ ಆ್ಯಪ್‌ಗಳು, ಸಾಫ್ಟ್‌ವೇರ್‌ಗಳು ಕ್ರಿಯಾಶೀಲಗೊಂಡವು. ಯೋಜನೆಯು ಪ್ರಾರಂಭಿಸಿದ ಯಾವುದೇ ಸ್ವಸಹಾಯ ಸಂಘದ ಯಾರೇ ಒಬ್ಬ ಸದಸ್ಯರು ತಮ್ಮ ಸಂಘದಲ್ಲಿ ಮಾಡಿದ ಯಾವುದೇ ವ್ಯವಹಾರವನ್ನು ದಾಖಲಿಸಿ, ಗಮನಿಸುವ ನೂತನ ತಂತ್ರಜ್ಞಾನ 'ಸುವಿಧಾ'ವನ್ನು ಅಭಿವೃದ್ಧಿ ಪಡಿಸಲಾಯಿತು. ಇದರಿಂದಾಗಿ ಅವ್ಯವಹಾರಗಳು ನಿಂತು ಹೋದವು. ಅಲ್ಲಲ್ಲಿ ಕಂಡುಬಂದ ಸಣ್ಣಪುಟ್ಟ ಅವ್ಯವಹಾರಗಳು ಬೆಳಕಿಗೆ ಬರುವಂತಾಯಿತು. ಸದಸ್ಯರ ಉಳಿತಾಯಕ್ಕೆ ಚಿನ್ನದ ಬೆಲೆ ಬರುವಂತಾಯಿತು.

ಯೋಜನೆಯ ಸದಸ್ಯರು ಸಭೆ ನಡೆಸುತ್ತಿರುವುದು

## ಬಿ.ಸಿ. ಮಾದರಿ:

21ನೇ ಶತಮಾನದ ಪ್ರಾರಂಭದಲ್ಲಿ ಸರ್ವರಿಗೂ ಬ್ಯಾಂಕ್ ಸೇವೆಯನ್ನು ಒದಗಿಸಬೇಕೆಂಬ ನಿಟ್ಟಿನಲ್ಲಿ ರಿಸರ್ವ್ ಬ್ಯಾಂಕ್ ಆಚರಣೆಗೆ ತಂದ ಬ್ಯಾಂಕಿಂಗ್ ಪ್ರತಿನಿಧಿ (ಬಿಸಿನೆಸ್ ಕರೆಸ್ಪಾಂಡೆಂಟ್) ಮಾದರಿ ಯೋಜನೆಯ ಆಶಯಗಳಿಗೆ ವರದಾನವಾಯಿತು. ಈ ಮಾದರಿಯಲ್ಲಿ ಯೋಜನೆಯು ಬ್ಯಾಂಕುಗಳ ಪ್ರತಿನಿಧಿಯಾಗಿ ತನ್ನ ಕಾರ್ಯಕರ್ತರ ಮುಖಾಂತರ ಬಡವರನ್ನು ಒಗ್ಗೂಡಿಸಿ ಸ್ವಸಹಾಯ ಸಂಘಗಳನ್ನು ಪ್ರಾರಂಭಿಸಿ, ಈ ಸಂಘಗಳಿಗೆ ಬ್ಯಾಂಕುಗಳಿಂದ 'ಓವರ್‌ಡ್ರಾಫ್ಟ್ ಫೆಸಿಲಿಟಿ (ಕ್ಯಾಶ್ ಕ್ರೆಡಿಟ್)' ಮಾದರಿಯಲ್ಲಿ ಸಾಲವನ್ನು ಕೊಡಿಸಲು ಯಶಸ್ವಿಯಾಯಿತು.ಇದರಿಂದಾಗಿ ಸಂಘಗಳ ಸದಸ್ಯರು ತಮ್ಮ ಸಂಘದಿಂದ ಬೇಕಾದಾಗ ಸಾಲಗಳನ್ನು ಪಡೆದುಕೊಂಡು ಹಿಂದಿರುಗಿಸಲು ಸಾಧ್ಯವಾಯಿತು. ಪದೇ ಪದೇ ಬ್ಯಾಂಕಿಗೆ ಹೋಗುವ ತಲೆಬಿಸಿ ತಪ್ಪಿತು. ಯೋಜನೆಯು ಬ್ಯಾಂಕಿನ ಪ್ರತಿನಿಧಿಯಾಗಿ ಸಂಘಗಳು ಬ್ಯಾಂಕಿನ ವ್ಯವಹಾರವನ್ನು ಮಾಡಲು ಅನುಕೂಲವಾಗುವಂತೆ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕಿನ ಗ್ರಾಹಕ ಸೇವಾ ಕೇಂದ್ರಗಳನ್ನು ನಿರ್ವಹಣೆ ಮಾಡತೊಡಗಿತು.

ಇಂದಿಗೆ ರಾಜ್ಯದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು 10,500 ಗ್ರಾಹಕ ಸೇವಾ ಕೇಂದ್ರಗಳನ್ನು ನಡೆಸುತ್ತಿದ್ದು, ಪ್ರತಿನಿತ್ಯ ಸುಮಾರು ₹200 ಕೋಟಿ ವ್ಯವಹಾರವನ್ನು ಸ್ವಸಹಾಯ ಸಂಘಗಳು ನಡೆಸುತ್ತಿವೆ. ಬ್ಯಾಂಕುಗಳು ಸಂಘಗಳಿಗೆ ₹3 ಲಕ್ಷದಿಂದ ₹25 ಲಕ್ಷದವರೆಗೆ ಓವರ್‌ಡ್ರಾಫ್ಟ್ ಮಂಜೂರು ಮಾಡಿವೆ. ಸಂಘದ ಸದಸ್ಯರು ₹1,000 ದಿಂದ ₹3 ಲಕ್ಷದವರೆಗೆ ವಿವಿಧ ಉದ್ಯೋಗ, ವಹಿವಾಟು, ಕೃಷಿ, ಸ್ವಉದ್ಯೋಗ, ತುರ್ತು ಅಗತ್ಯ, ಶಿಕ್ಷಣ, ಆಸ್ಪತ್ರೆ ವೆಚ್ಚ, ಮದುವೆ, ಗೃಹ ನಿರ್ಮಾಣ, ಶೌಚಾಲಯ, ಬಾವಿ, ನೀರು ಮುಂತಾದ ಎಲ್ಲ ಕಾರ್ಯಕ್ರಮಗಳಿಗೆ ಬೇಕಾದ ಸಾಲವನ್ನು ತಮ್ಮ ಸಂಘಗಳಿಂದ ಪಡೆಯುತ್ತಾರೆ.

ಯೋಜನೆಯ ಶಿಫಾರಸಿನ ಮೇಲೆ ಬ್ಯಾಂಕುಗಳು ಸದಸ್ಯರಿಗೆ ಹಣವನ್ನು ಬಿಡುಗಡೆ ಮಾಡುತ್ತವೆ. ಹೀಗೆ ಬಿಡುಗಡೆಯಾಗುವ ಹಣ ಅವ್ಯವಹಾರವಾಗದಂತೆ, ಸರಿಯಾದ ಸದಸ್ಯನಿಗೆ ಮುಟ್ಟುವಂತೆ ಮತ್ತು ಅವರು ಅದನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವಂತೆ ನೋಡಿಕೊಳ್ಳುವ ಜವಾಬ್ದಾರಿ ಯೋಜನೆಯದ್ದಾಗಿರುತ್ತದೆ. ಹೀಗಾಗಿ ಬಡ ಜನರು ಯಾವುದೇ ಕಿರಿಕಿರಿ ಇಲ್ಲದೇ ತಮ್ಮ ಅಭಿವೃದ್ಧಿಗೆ ತಾವೇ ಕಾರಣರಾಗಲು ಸಾಧ್ಯವಾಗಿದೆ.ಕಳೆದ ಎರಡು ದಶಕಗಳಲ್ಲಿ ಧರ್ಮಸ್ಥಳ ಯೋಜನೆಯ ಸುವಿಧಾ ಮಾದರಿಯಲ್ಲಿ ಸುಮಾರು ₹70,000 ಕೋಟಿ ಮೊತ್ತ ಬಡವರ ಮನೆ ಸೇರಿದೆ. ಯಾವುದೇ ಶಿಫಾರಸು ಇಲ್ಲದೇ, ಯಾರ ಕಾಲೂ ಹಿಡಿಯದೇ ಅಗತ್ಯವಿರುವಷ್ಟು ಹಣ ಬಡವರ ಖಜಾನೆಗೆ ಸೇರುತ್ತಿರುವುದರಿಂದ ಕುಟುಂಬಗಳ ಆದಾಯ ಮಟ್ಟವೂ ಜಾಸ್ತಿಯಾಗಿದೆ, ಸಬಲೀಕರಣವೂ ಸಾಧ್ಯವಾಗಿದೆ.

## ಕಡಿಮೆ ಬಡ್ಡಿಗೆ ಸಾಲ:

ಬಡ ಜನರಿಗೆ ಸರ್ಕಾರದ ಅನೇಕ ಯೋಜನೆಗಳಿದ್ದರೂ, ಅವರು ಬ್ಯಾಂಕಿಗೆ ಹೋಗಿ, ಬ್ಯಾಂಕಿಗೆ ಅಗತ್ಯವಿರುವ ದಾಖಲಾತಿಗಳನ್ನು ನೀಡಿ, ಸಾಲವನ್ನು ಪಡೆಯಬೇಕೆಂದರೆ ಸಾಕಷ್ಟು ಸಮಯ ತಗಲುತ್ತದೆ. ತಮ್ಮ ವೃತ್ತಿ, ಕೆಲಸವನ್ನು ಬಿಟ್ಟು ಬ್ಯಾಂಕು ಮತ್ತಿತರ ಕಚೇರಿಗಳಲ್ಲಿ ಅಲೆಯುವುದರಿಂದ ಬಡವರ ದಿನನಿತ್ಯದ ಆದಾಯ ಖೋತಾ ಆಗುತ್ತದೆ. ಬ್ಯಾಂಕಿನಿಂದ ಸಿಗುವ ಸಾಲಗಳಿಗೆ ಹೇರಳವಾದ, ಕಣ್ಣಿಗೆ ಕಾಣದ ಖರ್ಚುಗಳಿವೆ. ಎಷ್ಟೋ ಬಾರಿ ಇದರ ಮೊತ್ತ ಬಡ್ಡಿಯಷ್ಟೇ ಆಗುತ್ತದೆ. ಅಂದರೆ ಶೇ 10ರ ಬಡ್ಡಿಯಲ್ಲಿ ಸಾಲ ಪಡೆಯುವ ಒಬ್ಬ ವ್ಯಕ್ತಿಗೆ ಕಣ್ಣಿಗೆ ಕಾಣದ ಖರ್ಚುಗಳು ಶೇ 10 ರಷ್ಟೇ ಆಗಬಹುದು. ಇಷ್ಟು ಖರ್ಚು ಮಾಡಿದರೂ ತನಗೆ ಅಗತ್ಯವಿರುವಷ್ಟು ಸಾಲ ದೊರೆಯುತ್ತದೆಯೆಂಬ ಖಾತ್ರಿ ಅವನಿಗೆ ಇರುವುದಿಲ್ಲ.ಇದಕ್ಕಾಗಿಯೇ ಬಡಜನರು ಲೇವಾದೇವಿಗಾರರ ಹತ್ತಿರ ಅಥವಾ ಮೈಕ್ರೋಫೈನಾನ್ಸ್ ಸಂಸ್ಥೆಗಳಲ್ಲಿ ಹೆಚ್ಚಿನ ಬಡ್ಡಿದರದಲ್ಲಿ ಸಾಲಗಳನ್ನು ಪಡೆಯುತ್ತಾರೆ. ರಿಸರ್ವ್ ಬ್ಯಾಂಕಿನಿಂದಲೇ ಮಂಜೂರಾದಂತೆ ಈ ಬಡ್ಡಿದರಗಳು ಶೇ 20 ರಿಂದ 24 ರವರೆಗೆ ಅಥವಾ ಅದಕ್ಕಿಂತ ಹೆಚ್ಚು ವಿಧಿಸಲಾಗುತ್ತದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮುಖಾಂತರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸ್ವಸಹಾಯ ಸಂಘಗಳ ಖಾತೆಯನ್ನು ತೆರೆಯಿಸಿ, ಶೇ 100 ಮರುಪಾವತಿ ಖಾತ್ರಿಯನ್ನು ಬ್ಯಾಂಕುಗಳಿಗೆ ನೀಡಿರುವುದರಿಂದ ಬ್ಯಾಂಕುಗಳು ಬಿ.ಸಿ. ಮಾದರಿಯಲ್ಲಿ ಯೋಜನೆಯನ್ನು ಪ್ರತಿನಿಧಿಯಾಗಿ ಇಟ್ಟುಕೊಂಡು ಸಂಘಗಳಿಗೆ ಸ್ಪರ್ಧಾತ್ಮಕ ದರದಲ್ಲಿ ಸಾಲದ ವ್ಯವಸ್ಥೆಯನ್ನು ಮಾಡುತ್ತಿವೆ. ಇದೀಗ ಸಂಘಗಳಿಗೆ ಸುಮಾರು ಶೇ 12 ರಿಂದ ಶೇ 14 ರ ಬಡ್ಡಿದರದಲ್ಲಿ ಸಾಲವು ಲಭ್ಯವಾಗುತ್ತಿದೆ. ಈ ಮೊತ್ತವನ್ನು ಸಂಘಗಳು ತಮ್ಮ ಸದಸ್ಯರಿಗೆ ಶೇ 13.5 ರಿಂದ ಶೇ 14ರ ಬಡ್ಡಿಯಲ್ಲಿ ಸಾಲವಾಗಿ ನೀಡುತ್ತಿವೆ. ಇದರಿಂದಾಗಿ ಸಂಘಗಳಲ್ಲಿ ಸ್ವಲ್ಪ ಮಟ್ಟಿಗೆ ಲಾಭಾಂಶವು ಲಭ್ಯವಾಗುತ್ತದೆ. ಇದಕ್ಕಿಂತ ಮುಖ್ಯವಾಗಿ ಯಾವುದೇ ಭದ್ರತೆಯಿಲ್ಲದೆ ಮತ್ತು ಕಿರಿಕಿರಿಯಿಲ್ಲದೇ ಬಡ ಜನರಿಗೆ ಬಹಳಷ್ಟು ಕಡಿಮೆ ಬಡ್ಡಿ ದರದಲ್ಲಿ ಅಗತ್ಯವಿರುವಷ್ಟು ಹಣ ತಮ್ಮ ಮನೆ ಬಾಗಿಲಿನಲ್ಲಿಯೇ ಲಭ್ಯವಾಗುತ್ತಿದೆ. ಇದರಿಂದಾಗಿ ಸದಸ್ಯರಲ್ಲಿ ಆತ್ಮ ವಿಶ್ವಾಸವು ಹೆಚ್ಚಿದೆ. ಉತ್ಪಾದನಾ ಸಾಮರ್ಥ್ಯವೂ ಹೆಚ್ಚಾಗಿದೆ ಮತ್ತು ಲಕ್ಷಾಂತರ ಕುಟುಂಬಗಳು ಸ್ವಾವಲಂಬಿಯಾಗಿವೆ.

## ಶಿಸ್ತುಬದ್ಧ ಮರುಪಾವತಿ:

ಬಡವರಲ್ಲಿ ಆರ್ಥಿಕ ಶಿಸ್ತನ್ನು ಮೂಡಿಸಿ ಅವರು ಪಡೆದುಕೊಂಡ ಹಣವನ್ನು ವಾರದ ಕಂತುಗಳಲ್ಲಿ ಚಾಚು ತಪ್ಪದೇ ಮರುಪಾವತಿ ಮಾಡುವ ಮನಃಸ್ಥಿತಿಯನ್ನು ಮೂಡಿಸಿರುವುದು ಯೋಜನೆಯ ಬಹು ದೊಡ್ಡ ಯಶಸ್ಸು ಆಗಿರುತ್ತದೆ.
ತಮಗೆ ದೊರೆತ ಹಣವನ್ನು ಸದ್ವಿನಿಯೋಗ ಮಾಡಿಕೊಂಡದ್ದಲ್ಲದೆ, ಅದನ್ನು ಸಮರ್ಪಕವಾಗಿ ಕಟ್ಟಿದಲ್ಲಿ ಆರ್ಥಿಕವಾಗಿ ಸಬಲರಾಗಬಹುದೆಂಬ ನಂಬಿಕೆ ಬಡವರಲ್ಲಿ ಮೂಡಿದೆ. ಇದೀಗ ರಾಜ್ಯದಲ್ಲಿ ಪ್ರತಿ ವರ್ಷ ₹12,000 ಕೋಟಿಯಷ್ಟು ಮೊತ್ತ ಸಂಘಗಳಿಂದ ಬ್ಯಾಂಕುಗಳಿಗೆ ಮರುಪಾವತಿಯಾಗುತ್ತದೆ. ಬಡಜನರಲ್ಲಿ ಮರುಪಾವತಿ ಸಂಸ್ಕೃತಿ (ರಿಪೇಮೆಂಟ್ ಕಲ್ಚರ್) ಸೃಷ್ಟಿಯಾಗಿದ್ದು, ಭವಿಷ್ಯದಲ್ಲಿ ಇದರಿಂದ ಬ್ಯಾಂಕ್ ವ್ಯವಹಾರದಲ್ಲಿ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಬಹುದಾಗಿದೆ.

## ಉಳಿತಾಯ ಮತ್ತು ವ್ಯವಹಾರಗಳಿಂದ ಸಂಘಗಳಲ್ಲಿ ಹೆಚ್ಚಿದ ಲಾಭ:

ಯೋಜನೆಯು ಪ್ರಾಯೋಜಿಸಿರುವ ಸಂಘಗಳಲ್ಲಿ ಸುಮಾರು ₹2,100 ಕೋಟಿ ಉಳಿತಾಯವು ಲಭ್ಯವಿದ್ದು, ಇವುಗಳನ್ನು ಸಾಲವಾಗಿ ನೀಡುವುದರಿಂದ ₹4200 ಕೋಟಿಗೂ ಮಿಕ್ಕಿದ ವಾರ್ಷಿಕ ಆದಾಯವು ಸಂಘಗಳಿಗೆ ಲಭ್ಯವಾಗುತ್ತಿದೆ. ಈ ಲಾಭದ ಮೊತ್ತವೂ ಪುನಃ ಸಾಲ ನೀಡುವಲ್ಲಿ ಬಳಕೆಯಾಗುವುದರಿಂದ ಲಾಭವು ಮತ್ತಷ್ಟು ಹೆಚ್ಚಾಗುತ್ತದೆ. ಇದರ ಜೊತೆಯಲ್ಲಿ ಬ್ಯಾಂಕಿನವರು ಸಂಘಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿದರ ಮತ್ತು ಸಂಘಗಳು ಸದಸ್ಯರಿಗೆ ನೀಡುವ ಸಾಲದ ಮೇಲಿನ ಬಡ್ಡಿದರದ ವ್ಯತ್ಯಾಸದಿಂದಲೂ ಸಂಘಗಳಿಗೆ ಅಲ್ಪಮಟ್ಟದ ಲಾಭವು ಲಭ್ಯವಾಗುತ್ತದೆ.ಇನ್ನು ರಾಜ್ಯದ ಕೆಲ ಜಿಲ್ಲೆಗಳಲ್ಲಿ ಕೇಂದ್ರ ಸರ್ಕಾರದ ಎನ್.ಆರ್.ಎಲ್.ಎಂ (ನ್ಯಾಶನಲ್ ರುರಲ್ ಲೈವ್ಲಿಹುಡ್ ಮಿಷನ್) ವತಿಯಿಂದ ಬಡ್ಡಿ ರಿಯಾಯಿತಿಯು ಸಂಘಗಳಿಗೆ ಲಭ್ಯವಿರುತ್ತದೆ. ಅರ್ಹ ಸಂಘಗಳು ಬ್ಯಾಂಕಿನಿಂದ ₹3 ಲಕ್ಷದಷ್ಟು ಸಾಲ ಪಡೆದುಕೊಂಡಿದ್ದಲ್ಲಿ ಸುಮಾರು ₹15,000 ವಾರ್ಷಿಕ ಬಡ್ಡಿ ರಿಯಾಯಿತಿಯನ್ನು ಪಡೆದುಕೊಳ್ಳಲು ಸಾಧ್ಯವಿದೆ. ಈ ರಿಯಾಯಿತಿಯನ್ನು ಪಡೆದುಕೊಳ್ಳಲು ಬೇಕಾದ ಹಿನ್ನೆಲೆ ಕೆಲಸವನ್ನು ಯೋಜನೆಯು ಮಾಡಿರುವುದುರಿಂದ ಬಡ್ಡಿ ರಿಯಾಯಿತಿಯು ಸುಲಭವಾಗಿ ಲಭ್ಯವಾಗಿದೆ. ಹೀಗೆ ಬಡಜನರಿಂದ ಬಡಜನರಿಗಾಗಿ ಬಡವರೇ ಮಾಡುವ ವ್ಯವಹಾರದಿಂದ ವರ್ಷಕ್ಕೆ ಸುಮಾರು ₹250 ಕೋಟಿಯಷ್ಟು ಲಾಭ ಒದಗಿ ಬರುತ್ತಿದೆ.ವೀರೇಂದ್ರ ಹೆಗ್ಗಡೆಯವರು ಹೇಳುವಂತೆ 'ಹಾಲನ್ನು ಕಾಯಿಸಿ, ಕೆನೆಯನ್ನು ಬೇರ್ಪಡಿಸಿ ಬೆಣ್ಣೆ ಮಾಡುವಂತೆ, ಸಂಘಗಳು ತಮ್ಮ ವ್ಯವಹಾರವನ್ನು ಸಮರ್ಪಕವಾಗಿ ಮಾಡಿದಾಗ ಲಾಭವೆಂಬ ಬೆಣ್ಣೆ ಕೆನೆಯಲ್ಲಿ ಕಾಣುತ್ತದೆ. ಈ ಕೆನೆಯನ್ನು ಆಗಿಂದಾಗ್ಗೆ ಹಂಚಿಕೊಂಡರೆ ಸದಸ್ಯರಿಗೆ ಅಗತ್ಯದ ಮೊತ್ತವೂ, ವ್ಯವಹಾರದ ತೃಪ್ತಿಯೂ ಲಭ್ಯವಾಗುವುದು'.

## ಸದಸ್ಯರಲ್ಲಿ ಹೆಚ್ಚಿದ ಧಾರಣಾ ಶಕ್ತಿ

ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ

1982 ರಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ಪ್ರಾರಂಭಿಸಿದಾಗ ಸ್ವಸಹಾಯ ಸಂಘಗಳ ಕಲ್ಪನೆ ಇರಲಿಲ್ಲ. ತೊಂಬತ್ತರ ದಶಕದಲ್ಲಿ ನಾವು ವಿಶೇಷವಾಗಿ ಸಣ್ಣ ಕೃಷಿಕರ ಪ್ರಗತಿಬಂಧು ಸ್ವಸಹಾಯ ಸಂಘಗಳನ್ನು ರಚಿಸಿದೆವು. ನಶಿಸಿ ಹೋಗುತ್ತಿದ್ದ ಮುಯ್ಯಾಳು ಪದ್ಧತಿಯನ್ನು ಈ ಸಂಘಗಳಲ್ಲಿ ಶ್ರಮ ವಿನಿಮಯದ ಮುಖಾಂತರ ಪುನಃ ಜಾರಿಗೆ ತರಲು ನಾವು ಪ್ರಯತ್ನಿಸಿದೆವು. ಇದರಿಂದಾಗಿ ಸಣ್ಣ ಕೃಷಿಕರಲ್ಲಿ ಒಗ್ಗಟ್ಟನ್ನು ಮೂಡಿಸಲು ಸಾಧ್ಯವಾಯಿತು.

ಪರಸ್ಪರ ಸಹಕಾರದೊಂದಿಗೆ ಕೃಷಿ ತಂತ್ರಜ್ಞಾನದ ಬಗ್ಗೆ ಮಾಹಿತಿ ಮಾಡಿಕೊಳ್ಳಲು ಸಾಧ್ಯವಾಯಿತು. ಕರ್ನಾಟಕ ರಾಜ್ಯದಾದ್ಯಂತ ಇಂದು ಈ ಪ್ರಗತಿಬಂಧು ಕಾರ್ಯಕ್ರಮವೂ ಕೂಡಾ ಸಾಕಷ್ಟು ಬೆಳೆದಿದೆ. ಸುಮಾರು ಒಂದು ಲಕ್ಷಕ್ಕೂ ಮಿಕ್ಕಿದ ಪ್ರಗತಿಬಂಧು ಸ್ವಸಹಾಯ ಸಂಘಗಳು ಕಾರ್ಯಾಚರಿಸುತ್ತಿವೆ. ಎಂಟು ಲಕ್ಷ ಕೃಷಿಕರು ಈ ಚಳವಳಿಯಲ್ಲಿ ಸೇರ್ಪಡೆಗೊಂಡಿದ್ದಾರೆ. ಸಣ್ಣ ಕೃಷಿಕರಿಗೆ ನೂತನ ಬೇಸಾಯ ಪದ್ಧತಿಗಳನ್ನು ಅನುಷ್ಠಾನಿಸಲು ಹೆಚ್ಚಿನ ಮೊತ್ತದ ಅಗತ್ಯ ಬಿದ್ದಾಗ ಬ್ಯಾಂಕಿನಿಂದ ಪ್ರಗತಿನಿಧಿ ಕಾರ್ಯಕ್ರಮವನ್ನು ಪ್ರಾರಂಭಿಸಿದೆವು. ಬ್ಯಾಂಕ್ ಪ್ರತಿನಿಧಿಗಳೊಡನೆ ಚರ್ಚಿಸಿ ಅಗತ್ಯವಿರುವಷ್ಟು ಹಣ ರೈತರಿಗೆ ಲಭ್ಯವಾಗತೊಡಗಿದ ಮೇಲೆ ಆರ್ಥಿಕ ಸಬಲೀಕರಣದ ವೇಗ ಹೆಚ್ಚಾಗತೊಡಗಿತು.

ಇದೇ ದಿನಗಳಲ್ಲಿ ಶ್ರೀಮತಿ ಹೇಮಾವತಿ ಹೆಗ್ಗಡೆಯವರ ಆಶಯದಂತೆ ನಾವು ಮಹಿಳಾ ಸ್ವಸಹಾಯ ಸಂಘಗಳನ್ನು ಪ್ರಾಯೋಜಿಸ ತೊಡಗಿದೆವು. ಕ್ರಮೇಣ ಮಹಿಳೆಯರು ತಮ್ಮ ಕುಟುಂಬಗಳ ಆರ್ಥಿಕ ಚೇತರಿಕೆಗೆ ಸಹಾಯ ನೀಡಲು ಇದರಿಂದ ಸಾಧ್ಯವಾಯಿತು. ಸ್ವಸಹಾಯ ಸಂಘಗಳಲ್ಲಿ ಮೂಡಿಸಲಾದ ಶಿಸ್ತು ಅವರ ಆರ್ಥಿಕ ವ್ಯವಹಾರಗಳ ಮೇಲೆ ಬಹಳಷ್ಟು ಪರಿಣಾಮ ಬೀರಿರುವುದನ್ನು ನಾವು ಕಾಣುತ್ತೇವೆ. ಸಂಘಗಳ ಸದಸ್ಯರು ತಮ್ಮ ಸಂಘಗಳಿಂದ ಪಡಕೊಂಡ ಸಾಲಗಳ ಬಗ್ಗೆ ಜಾಗೃತರಾಗಿರುತ್ತಾರೆ. ಅವುಗಳಿಗೆ ಬ್ಯಾಂಕಿನವರು ವಿಧಿಸುವ ಬಡ್ಡಿದರದ ಬಗ್ಗೆ ಅವರು ಮಾಹಿತಿ ಹೊಂದಿರುತ್ತಾರೆ.

ಸಾಲ ಬಾಕಿಯಾದರೆ ಬಡ್ಡಿ ಹೆಚ್ಚಾಗುವುದೆಂಬ ಅರಿವು ಅವರಲ್ಲಿ ಇರುವುದರಿಂದ ಕಂತು ಬಾಕಿ ಮಾಡಲು ಹೆಚ್ಚಿನ ಸದಸ್ಯರು ಇಷ್ಟಪಡುವುದಿಲ್ಲ. ಅದೇ ರೀತಿ ಸಾಲಗಳನ್ನು ಪಡೆಯುವಾಗ ಸ್ಪಷ್ಟ ಉದ್ದೇಶವಿಟ್ಟುಕೊಂಡು ಸಾಲವನ್ನು ಬಳಸುವುದರಿಂದ ಅವರಲ್ಲಿ ಪ್ರಗತಿಯಾಗಿರುವುದು ಎಲ್ಲರಿಗೂ ಗೋಚರವಾಗುತ್ತದೆ. ಪ್ರತಿನಿತ್ಯ ಕ್ಷೇತ್ರ ಧರ್ಮಸ್ಥಳಕ್ಕೆ ಬಹಳಷ್ಟು ಸ್ವಸಹಾಯ ಸಂಘದ ಸದಸ್ಯರು ಬಂದು, ಸಂಘದಲ್ಲಿ ಸೇರಿದ ನಂತರ ತಾವು ಹೊಂದಿದ ಪ್ರಗತಿಯನ್ನು ವಿವರಿಸುವಾಗ ಧನ್ಯತಾಭಾವ ಮೂಡುತ್ತದೆ. ಈ ಮಹಿಳೆಯರಲ್ಲಿ ಮತ್ತು ಕೃಷಿಕರಲ್ಲಿ ಸ್ವಸಹಾಯ ಸಂಘ ಕಾರ್ಯಕ್ರಮದಿಂದ ಮೂಡಿರುವ ಆರ್ಥಿಕ ಶಿಸ್ತು ಅವರನ್ನು ಕೊರೊನಾದಂತಹ ಸಂಕಷ್ಟ ಕಾಲದಲ್ಲಿಯೂ ಕಾಪಾಡಿರುವುದನ್ನು ನಾನು ಗಮನಿಸಿದ್ದೇನೆ.

*ಡಾ. ಡಿ. ವೀರೇಂದ್ರ ಹೆಗ್ಗಡೆ,* ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ

### 'ಹೆಗ್ಗಡೆ ಅವರ ಕನಸು ನನಸು'

ಡಾ.ಎಲ್.ಎಚ್.ಮಂಜುನಾಥ್

*ಸ್ವಸಹಾಯ ಸಂಘಗಳ ಚಳವಳಿ ಮುಖೇನ ಸ್ವಾಭಿಮಾನಿ ಕುಟುಂಬಗಳ ನಿರ್ಮಾಣ ಆಗಬೇಕೆಂಬ ವೀರೇಂದ್ರ ಹೆಗ್ಗಡೆಯವರ ಕನಸು ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ಮಟ್ಟಿಗೆ ನನಸಾಗಿದೆ. ವಾರಕ್ಕೆ ಉಳಿತಾಯ ಮಾಡಿದ ₹10, ಇಂದು ಸಾವಿರಗಟ್ಟಲೇ ಲಾಭಾಂಶವನ್ನು ಸದಸ್ಯರಿಗೆ ತಂದುಕೊಡುತ್ತಿರುವುದು ಕಾರ್ಯಕ್ರಮದ ಯಶಸ್ಸಿನ ದ್ಯೋತಕವಾಗಿದೆ. ಬಹುಶಃ ನಮ್ಮ ದೇಶದ ಸ್ವಸಹಾಯ ಸಂಘಗಳ ಇತಿಹಾಸದಲ್ಲಿ ಇಷ್ಟು ದೊಡ್ಡ ಮೊತ್ತದ ಲಾಭಾಂಶದ ವಿತರಣೆಯ ಇನ್ನೊಂದು ಉದಾಹರಣೆ ಇರಲಿಕ್ಕಿಲ್ಲ.*

*ಡಾ.ಎಲ್.ಎಚ್.ಮಂಜುನಾಥ್, ಯೋಜನೆ ಕಾರ್ಯನಿರ್ವಾಹಕನಿರ್ದೇಶಕರು*

### 'ಅತ್ಯಂತ ದೊಡ್ಡ ಕಾರ್ಪೊರೇಟ್ ಬಿ.ಸಿ.'

ರಾಜಮಣಿ ಎ.

*ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ದೇಶದಲ್ಲೇ ಬ್ಯಾಂಕಿನ ಅತ್ಯಂತ ದೊಡ್ಡ ಕಾರ್ಪೊರೇಟ್ ಬಿ.ಸಿ. ಯಾಗಿದ್ದು ಅತ್ಯುತ್ತಮವಾಗಿ ನಿರ್ವಹಣೆ ಮಾಡುತ್ತಿದೆ. ಸಂಘದ ವ್ಯವಹಾರಗಳನ್ನು ಅತ್ಯುತ್ತಮ ಪಾರದರ್ಶಕತೆಯಿಂದ ನಿರ್ವಹಿಸುತ್ತಿದ್ದು, ಬ್ಯಾಂಕಿನಿಂದ ನೀಡಲ್ಪಡುವ ಸಾಲವನ್ನು ಸದಸ್ಯರಿಂದ ಸದ್ವಿನಿಯೋಗ ಆಗುವುದನ್ನು ಖಾತರಿಪಡಿಸಿಕೊಳ್ಳುವುದರ ಜೊತೆಗೆ ಅವರ ಆದಾಯವನ್ನು ಹೆಚ್ಚಿಸಿದ್ದಾರೆ. ಈ ಉತ್ತಮ ವ್ಯವಸ್ಥೆಯಿಂದ ಯಾವುದೇ ಕ್ಲಿಷ್ಟಕರವಿಲ್ಲದೆ ಸಾಲ ಮರುಪಾವತಿಯಾಗುತ್ತಿದ್ದು, ಒಂದು ಮಾದರಿ ಬಿ.ಸಿ. ವ್ಯವಸ್ಥೆಯಾಗಿದೆ.*

*ರಾಜಮಣಿ ಎ., ರೀಜನಲ್ ಹೆಡ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶಿವಮೊಗ್ಗ*

## 'ಇಷ್ಟೊಂದು ಲಾಭಾಂಶ ಸಿಗುತ್ತೆ ಅಂತ ಅಂದ್ಕೊಂಡಿರಲಿಲ್ಲ'

ಹನ್ನೊಂದು ವರ್ಷಗಳಿಂದ ಅಣ್ಣಪ್ಪ ಸ್ವಸಹಾಯ ಸಂಘದ ಸದಸ್ಯಳಾಗಿದ್ದೇನೆ. ಯೋಜನೆಯ ಮೂಲಕ ಬ್ಯಾಂಕಿನಿಂದ ಸಾಲ ಪಡೆದು ರೋಟಿ, ಬೇಕರಿ ತಿಂಡಿ ತಯಾರಿ, ಕ್ಯಾಟರಿಂಗ್ ಮುಂತಾದ ಸ್ವಉದ್ಯೋಗವನ್ನು ಆರಂಭಿಸಿ, ಇದೀಗ ಇತರ ಆರು ಮಂದಿಗೆ ಉದ್ಯೋಗವನ್ನು ನೀಡುತ್ತಿದ್ದೇನೆ. ಯೋಜನೆ ಇಲ್ಲದಿದ್ದರೆ ನಾನು ಇಂದಿಗೂ ಮನೆಯಲ್ಲೇ ಅಡುಗೆ ಕೆಲಸ ಮಾಡುತ್ತಾ ಇರಬೇಕಿತ್ತು. ಸಂಘದಲ್ಲಿ ₹13,000 ಉಳಿತಾಯ ಆಗಿದೆ. ಈಗ ₹16,639 ಲಾಭಾಂಶ ಸಿಗುತ್ತಿದೆ. ಇಷ್ಟೊಂದು ದೊಡ್ಡ ಮೊತ್ತದ ಲಾಭಾಂಶ ಸಿಗುತ್ತೆ ಅಂತ ನಾನು ಊಹಿಸಿರಲಿಲ್ಲ. ಈ ಮೊತ್ತವನ್ನು ಕ್ಯಾಟರಿಂಗ್ ಕೆಲಸಕ್ಕೆ ಬೇಕಾದ ಪಾತ್ರೆ ಖರೀದಿಗೆ ಉಪಯೋಗಿಸುತ್ತಿದ್ದೇನೆ. ನಾನು ಸ್ವಉದ್ಯೋಗಿಯಾಗಿ ಸ್ವಾವಲಂಬನೆಯ ಜೀವನ ನಡೆಸುತ್ತಿದ್ದೇನೆ.

*ಪ್ರಮೀಳಾ ಬಾಯಿ, ಕಸಬಾ, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ*

### 'ಯೋಜನೆಯಿಂದ ಅಭಿವೃದ್ಧಿ'

ಕಳೆದ ಹದಿನೇಳು ವರ್ಷಗಳಿಂದ ಗ್ರಾಮಾಭಿವೃದ್ಧಿ ಯೋಜನೆಯ ಸದಸ್ಯಳಾಗಿದ್ದೇನೆ. ಯೋಜನೆಯ ಕಾರ್ಯಚಟುವಟಿಕೆಗಳನ್ನು ಹತ್ತಿರದಿಂದ ಗಮನಿಸಿದ್ದೇನೆ. ನಾನು ಅವುಗಳಲ್ಲಿ ಭಾಗಿಯಾಗಿದ್ದೇನೆ. ಯೋಜನೆಗೆ ಸೇರಿ ನಾನು ಮನೆ ರಿಪೇರಿ, ಕೃಷಿ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಯೋಜನೆಗೆ ಸೇರದಿದ್ದರೆ ನಮಗಿರುವ 250 ಅಡಿಕೆ ಗಿಡಗಳನ್ನು ನಂಬಿ, ಬೀಡಿ ಕಟ್ಟಿಕೊಂಡು ಬದುಕುವುದು ಕಷ್ಟಕರವಾಗಿತ್ತು. ಇದೀಗ ಸುಮಾರು ₹12 ಸಾವಿರ ಲಾಭಾಂಶ ದೊರೆತಿದೆ. ಅದನ್ನು ಮಕ್ಕಳ ಶಾಲಾ ಫೀಸ್ ಕಟ್ಟಲು ಉಪಯೋಗಿಸುತ್ತೇನೆ.

*ನಾರಾಯಣಿ ಎಂ, ಬಲ್ನಾಡು,* ಪುತ್ತೂರು
*'ಸಮೃದ್ಧಿ' ಸ್ವಸಹಾಯ ಸಂಘದ ಸದಸ್ಯರು*

### 'ಸದ್ವಿನಿಯೋಗವಾದರೆ ಕಂತು ಹೊರೆಯಾಲ್ಲ'

ಹದಿನೈದು ವರ್ಷಗಳ ಹಿಂದೆ 'ಬೈದಶ್ರೀ' ಸಂಘಕ್ಕೆ ಸೇರಿದ ನಂತರ ಈವರೆಗೆ ಸುಮಾರು ₹12 ಲಕ್ಷ ಸಾಲವನ್ನು ಪಡೆದಿದ್ದೇನೆ. ನಾನು ಖರ್ಚಿನ ಲೆಕ್ಕಚಾರದ ಆಧಾರದ ಮೇಲೆಯೇ ಸಾಲ ಪಡೆಯುತ್ತೇನೆ. ಅದರಲ್ಲಿ ಒಂದು ರೂಪಾಯಿಯನ್ನೂ ಹಾಳು ಮಾಡುವುದಿಲ್ಲ. ಇಂತಹ ಒಂದು ಶಿಸ್ತನ್ನು ಯೋಜನೆ ಕಲಿಸಿಕೊಟ್ಟಿದೆ. ಮದುವೆ, ವ್ಯವಹಾರ, ಮನೆ ರಿಪೇರಿ, ಕಾಂಪೌಂಡ್ ರಚನೆ, ಅಗತ್ಯ ವಸ್ತು ಖರೀದಿ, ಮನೆಗೆ ಪೈಂಟಿಂಗ್ ಮುಂತಾದ ಅಭಿವೃದ್ಧಿ ಕೆಲಸಗಳಿಗೆ ಯೋಜನೆಯ ಮೂಲಕ ಸಾಲ ಪಡೆದಿದ್ದೇನೆ. ಸಾಲವನ್ನು ವಾರದ ಕಂತಿನಲ್ಲಿ ಕಟ್ಟುವ ಅವಕಾಶ ಇರುವುದರಿಂದ ಸಾಲ ಮುಕ್ತಾಯವಾದದ್ದೇ ಗೊತ್ತಾಗುವುದಿಲ್ಲ. ಇದೀಗ ಮಂಜುನಾಥ ಸ್ವಾಮಿಯ ಪ್ರಸಾದವೆಂಬಂತೆ ₹13,795 ಲಾಭಾಂಶ ದೊರೆಯುತ್ತಿದೆ. ಇದನ್ನು ನಾನು ನಿರೀಕ್ಷಿಸಿರಲಿಲ್ಲ. ಮನೆಗೆ ಅಗತ್ಯ ಇರುವ ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಬೇಕೆಂದಿದ್ದೇನೆ.

*ಅಶೋಕ, ಬ್ರಹ್ಮಾವರ, 'ಬೈದಶ್ರೀ' ಸ್ವಸಹಾಯ ಸಂಘ*

### ಆಲಬಿ ಇಂದು ಹೋಟೆಲ್ ಮಾಲಕಿ

ಹೋಟೆಲ್ ತೆರೆದು ಆ ಮೂಲಕ ಸ್ವಉದ್ಯೋಗವನ್ನು ಆರಂಭಿಸುತ್ತೇನೆಂದು ನಾನು ಕನಸಲ್ಲೂ ಊಹಿಸಿರಲಿಲ್ಲ. ಒಂಬತ್ತು ವರ್ಷಗಳ ಹಿಂದೆ ಯೋಜನೆಯ 'ಅಮೃತ' ಸ್ವಸಹಾಯ ಸಂಘಕ್ಕೆ ಸೇರಿದೆ. ಯೋಜನೆಯ ಕಾರ್ಯಕರ್ತರು ನನ್ನಲ್ಲಿ ಸ್ವಉದ್ಯೋಗ ಕನಸನ್ನು ಬಿತ್ತಿದರು. ಹೋಟೆಲ್ ತೆರೆಯಲು ಬೇಕಾದ ಮಾರ್ಗದರ್ಶನದೊಂದಿಗೆ ಹಣಕಾಸಿನ ನೆರವನ್ನು ಒದಗಿಸಿದರು. ಹೋಟೆಲ್ ತೆರೆದೆ. ದಿನಕಳೆದಂತೆ ವ್ಯವಹಾರವು ಚೆನ್ನಾಗಿ ನಡೆಯಿತು. ಇದೀಗ ನಾನು ಸ್ವಉದ್ಯೋಗಿಯಾಗಿದ್ದೇನೆ. ₹8 ಸಾವಿರ ಲಾಭಾಂಶ ದೊರೆತ್ತಿದ್ದು, ಇದರಿಂದ ಮೊಬೈಲ್ ಖರೀದಿಸಬೇಕೆಂದಿದ್ದೇನೆ. ಯೋಜನೆ ನನ್ನ ಪಾಲಿಗೆ ಬದುಕು ನೀಡಿದ ಸಂಸ್ಥೆ.

*ಆಲಬಿ,* ಮುಧೋಳ

### 'ಮಹಿಳೆಯರಿಗೆ ಹಣಕಾಸಿನ ವ್ಯವಹಾರ ಕಲಿಸಿದ ಯೋಜನೆ'

ಹಣಕಾಸಿನ ವ್ಯವಹಾರವೆಂದರೆ ಅದು ಪುರುಷರಿಗೆ ಮೀಸಲು ಎಂಬ ಧೋರಣೆ ಹಿಂದೆ ಇತ್ತು. ಆದರೆ ಗ್ರಾಮಾಭಿವೃದ್ಧಿ ಯೋಜನೆ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಿದೆ. ಯೋಜನೆಯ ಸಂಘಗಳ ಮೂಲಕ ನಮ್ಮನ್ನು ಒಟ್ಟು ಸೇರಿ ನಮ್ಮಲ್ಲಿ ಸ್ವ ಉದ್ಯೋಗದ ಕನಸನ್ನು ಬಿತ್ತಿ, ಮಾರ್ಗದರ್ಶನ ನೀಡುವ ಜೊತೆಗೆ ಬ್ಯಾಂಕ್ ಮೂಲಕ ಹಣಕಾಸಿನ ನೆರವನ್ನು ಒದಗಿಸುವ ಕೆಲಸವನ್ನು ಗ್ರಾಮಾಭಿವೃದ್ಧಿ ಯೋಜನೆ ಮಾಡಿದೆ. ಮಹಿಳೆಯರು ಪುರುಷರಂತೆ ಹಣಕಾಸಿನ ವ್ಯವಹಾರ ನಡೆಸಬಲ್ಲರು ಎಂಬುವುದನ್ನು ತೋರಿಸಿಕೊಟ್ಟಿದೆ. ಈ ಮಾತಿಗೆ ನಾನೇ ಉತ್ತಮ ಉದಾಹರಣೆ. ಒಂಬತ್ತು ವರ್ಷಗಳಿಂದ ಯೋಜನೆಯ ಸಾಲ ಪಡೆದು ಸದ್ವಿನಿಯೋಗ ಮಾಡುತ್ತಿದ್ದೇನೆ. ನಮ್ಮ ಸಂಘದ ಎಲ್ಲ ಸದಸ್ಯರಲ್ಲೂ ಆರ್ಥಿಕ ಶಿಸ್ತು ಇದೆ. ಸಕಾಲದಲ್ಲಿ ಸಾಲವನ್ನು ಮರುಪಾವತಿಸುತ್ತೇವೆ. ಸಂಘದ ಮೂಲಕ ನಂಬಿಕೆ, ಒಗ್ಗಟ್ಟು, ಪ್ರೀತಿ, ಕಷ್ಟಕ್ಕೆ ಸ್ಪಂದಿಸುವ ಗುಣವನ್ನು ಹುಟ್ಟುಹಾಕಿದ ಹೆಗ್ಗಳಿಕೆ ಯೋಜನೆಯದ್ದು.

*ತಾರಮ್ಮ ರಾಜಪ್ಪ,* ಕನಗೊಂಡನಹಳ್ಳಿ ದಾವಣಗೆರೆ,
*ತಿಪ್ಪರುದ್ರಸ್ವಾಮಿ ಸ್ವಸಹಾಯ ಸಂಘದ ಸದಸ್ಯರು*

### ಹೆಚ್ಚು ಲಾಭಾಂಶ ಪಡೆದ ಆರು ಜಿಲ್ಲೆಗಳು (₹ಲಕ್ಷಗಳಲ್ಲಿ)

| ಜಿಲ್ಲೆ | ಚಾಲ್ತಿ ಸಂಘಗಳು | ಸಂಘದ ಉಳಿತಾಯ | ಲಭ್ಯವಿರುವ ಲಾಭಾಂಶ |
|---|---|---|---|
| ತುಮಕೂರು | 27,473 | 7,472 | 6,835 |
| ದಕ್ಷಿಣ ಕನ್ನಡ | 24,814, | 14,826 | 4,950 |
| ಉಡುಪಿ | 17,877 | 15,040 | 4,528 |
| ಮೈಸೂರು | 23,103 | 6,261 | 4,585 |
| ಚಿತ್ರದುರ್ಗ | 23,836 | 6,660 | 4,343 |
| ಚಾಮರಾಜನಗರ | 13,712 | 3,557 | 2,532 |

ವೈಟ್ ಟಾಪಿಂಗ್ 3ನೇ ಹಂತದ ಯೋಜನೆ ತಡೆಹಿಡಿದಿದ್ದ ಸಿ.ಎಂ ಯಡಿಯೂರಪ್ಪ– ತರಾತುರಿಯಲ್ಲಿ ಅನುಮೋದನೆ ನೀಡಲು ಸಿದ್ಧತೆ

# ಕೊನೆ ಗಳಿಗೆ: ₹1,172 ಕೋಟಿ ಯೋಜನೆಗೆ ಒಪ್ಪಿಗೆ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾಂಗ್ರೆಸ್ ಅವಧಿಯಲ್ಲಿ ಆರಂಭಿಸಿದ್ದ ವೈಟ್ ಟಾಪಿಂಗ್ ಕಾಮಗಾರಿಯಲ್ಲಿ ಭಾರಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಯೋಜನೆಗೆ ತಡೆಹಿಡಿದಿದ್ದ ಬಿಜೆಪಿ ಸರ್ಕಾರ ಇದೀಗ ಮೂರನೇ ಹಂತದ ಕಾಮಗಾರಿಗೆ ತರಾತುರಿಯಲ್ಲಿ ಅನುಮೋದನೆ ನೀಡಲು ಸಿದ್ಧತೆ ನಡೆಸಿದೆ.

ರಾಜೀನಾಮೆ ನೀಡುವಂತೆ ಹೈಕಮಾಂಡ್‌ನಿಂದ ಸಂದೇಶ ಬರುವ ಮುನ್ನವೇ ₹1,172 ಕೋಟಿ ಮೊತ್ತದ ಯೋಜನೆಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಂದ ಅನುಮೋದನೆ ದೊರೆಯುವ ಸಾಧ್ಯತೆ ಇದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

'ಮುಖ್ಯಮಂತ್ರಿ ನವ ಬೆಂಗಳೂರು' ಯೋಜನೆಯಡಿ ಒಟ್ಟು 159 ರಸ್ತೆಗಳನ್ನು ವೈಟ್ ಟಾಪಿಂಗ್ ಮಾಡಲು ಕಾಂಗ್ರೆಸ್ ಸರ್ಕಾರ ಉದ್ದೇಶಿಸಿತ್ತು. ಅವುಗಳಲ್ಲಿ ಮೊದಲ ಹಂತಕ್ಕೆ ₹201.79 ಕೋಟಿ ಹಾಗೂ ಎರಡನೇ ಹಂತದ ಕಾಮಗಾರಿಗಳಿಗಾಗಿ ₹ 442.99 ಕೋಟಿ ಅನುದಾನ ನೀಡಿತ್ತು. ಎರಡೂ ಹಂತದ ಕಾಮಗಾರಿಗಳು ಈಗ ಬಹುತೇಕ ಪೂರ್ಣಗೊಂಡಿವೆ. ಮೂರನೇ ಹಂತದ ಕಾಮಗಾರಿಗೂ ಹಿಂದಿನ ಸರ್ಕಾರವೇ ಅನುಮೋದನೆ ನೀಡಿ ಅನುದಾನ ನಿಗದಿ ಮಾಡಿತ್ತು.

ಮೊದಲ ಎರಡು ಹಂತದ ಕಾಮಗಾರಿಯಲ್ಲಿ ಅಕ್ರಮ ನಡೆದಿದೆ ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಅವರು ಮುಖ್ಯಮಂತ್ರಿಗೆ ದೂರು ಸಲ್ಲಿಸಿದ್ದರು. ಅದರ ಆಧಾರದಲ್ಲಿ ಮುಖ್ಯಮಂತ್ರಿ ತನಿಖೆಗೆ ಆದೇಶಿಸಿದ್ದರು. ಕ್ಯಾಪ್ಟನ್ ಆರ್.ಆರ್. ದೊಡ್ಡಿಹಾಳ್ ನೇತೃತ್ವದಲ್ಲಿ ತಜ್ಞರ ಸಮಿತಿ ನೇಮಿಸಿ ವರದಿಯನ್ನೂ ಸರ್ಕಾರ ಪಡೆದುಕೊಂಡಿದೆ.

'ಹಿಂದಿನ ಸರ್ಕಾರಗಳು ಪ್ರತಿ ಕಿ.ಮೀ. ಕಾಮಗಾರಿಗೆ ₹14 ಕೋಟಿಯಷ್ಟು ವೆಚ್ಚ ಮಾಡಿದ್ದವು. 'ಒಂದು ಕಿ.ಮೀ ವೈಟ್ ಟಾಪಿಂಗ್ ಕಾಮಗಾರಿಯನ್ನು ₹ 4 ಕೋಟಿ ವೆಚ್ಚದಲ್ಲಿ ಮುಗಿಸಿ ತೋರಿಸುತ್ತೇವೆ' ಎಂದು ಯಡಿಯೂರಪ್ಪ ಅವರು 2019ರ ಸೆಪ್ಟೆಂಬರ್‌ನಲ್ಲಿ ನಡೆಸಿದ್ದ ನಗರ ಪ್ರದಕ್ಷಿಣೆ ವೇಳೆ ಸವಾಲು ಹಾಕಿದ್ದರು. ಆದರೆ, ಅದು ಕಾರ್ಯಗತ ಆಗಲಿಲ್ಲ.

'ಮೂರನೇ ಹಂತದ ಕಾಮಗಾರಿಗೆ ನಿಗದಿ ಮಾಡಿದ್ದ ಅನುದಾನವನ್ನು ಬೇರೆ ಕೆಲಸಗಳಿಗೆ ಬಳಕೆ ಮಾಡಿದೆ. ಈಗ ಅನುದಾನ ಲಭ್ಯವಿಲ್ಲದಿದ್ದರೂ ಆರು ಪ್ಯಾಕೇಜ್‌ಗಳಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಅನುಮೋದನೆಗೆ ತಯಾರಿ ನಡೆಸಲಾಗಿದೆ. ಈ ಉದ್ದೇಶದಿಂದಲೇ ಮುಖ್ಯಮಂತ್ರಿ ಶುಕ್ರವಾರ ನಗರ ಪ್ರದಕ್ಷಿಣೆ ನಡೆಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಸಾರ್ವಜನಿಕರಿಂದ ಬೇಡಿಕೆ ಇದೆ ಎಂಬ ಕಾರಣ ನೀಡಿ ಈ ಹಿಂದೆ ತಾವೇ ವಿರೋಧಿಸಿದ್ದ ಯೋಜನೆಗೆ ಕೊನೆಯ ನಾಲ್ಕು ದಿನಗಳಲ್ಲಿ ಅನುಮೋದನೆ ನೀಡಲು ಸಿದ್ಧತೆ ನಡೆದಿದೆ. ಈ ಔದಾರ್ಯವನ್ನು ಮುಖ್ಯಮಂತ್ರಿ ಯಾವ ಕಾರಣಕ್ಕೆ ತೋರಿಸುತ್ತಿದ್ದಾರೆ ಎಂಬುದೂ ರಹಸ್ಯವೇನಲ್ಲ' ಎಂದು ಹೆಸರು ಹೇಳಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

ವೈಟ್ ಟಾಪಿಂಗ್ ರಸ್ತೆ

## 'ರಾಜಕೀಯ ದುರುದ್ದೇಶದಿಂದ ಮಾಡಿದ್ದ ಆರೋಪ'

ರಾಮಲಿಂಗಾರೆಡ್ಡಿ

'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆರಂಭಿಸಿದ ವೈಟ್ ಟಾಪಿಂಗ್ ಕಾಮಗಾರಿ ಒಳ್ಳೆಯ ಉದ್ದೇಶದಿಂದ ಕೂಡಿತ್ತು ಎಂಬುದನ್ನು ಈಗ ಬಿಜೆಪಿ ಒಪ್ಪಿಕೊಂಡಂತೆ ಆಗಿದೆ.' ಎಂದು ಶಾಸಕ ರಾಮಲಿಂಗಾರೆಡ್ಡಿ ಹೇಳಿದರು.

'ವೈಟ್ ಟಾಪಿಂಗ್ ವಿಧಾನದಲ್ಲಿ ನಿರ್ಮಿಸಿದ ರಸ್ತೆ ಕನಿಷ್ಠ 25 ವರ್ಷ ಬಾಳಿಕೆ ಬರುತ್ತದೆ. ಮುಖ್ಯ ರಸ್ತೆ, ರಿಂಗ್ ರಸ್ತೆಗಳೆಲ್ಲವೂ ವೈಟ್ ಟಾಪಿಂಗ್ ಆದರೆ ಒಳ್ಳೆಯದು. ಅದಕ್ಕಾಗಿ ನಮ್ಮ ಅವಧಿಯಲ್ಲಿ ಆರಂಭಿಸಲಾಗಿತ್ತು' ಎಂದರು. 'ರಾಜಕೀಯ ದುರುದ್ದೇಶದಿಂದ ಆರೋಪ ಮಾಡಿದ್ದ ಬಿಜೆಪಿಯವರು, ಸರ್ಕಾರ ಬದಲಾದ ಬಳಿಕ ಕಾಮಗಾರಿ ತಡೆ ಹಿಡಿದಿದ್ದರು. ದೊಡ್ಡಿಹಾಳ್ ಸಮಿತಿ ಅಕ್ರಮ ನಡೆದಿಲ್ಲ ಎಂದು ವರದಿ ನೀಡಿತು. ಸತ್ಯಾಂಶ ಅರ್ಥವಾದ ಬಳಿಕ ಮುಖ್ಯಮಂತ್ರಿ ಅವರೇ 3ನೇ ಹಂತದ ಕಾಮಗಾರಿಗೆ ಅನುಮೋದನೆ ನೀಡಲು ಹೊರಟಿದ್ದಾರೆ. ಸತ್ಯ ಅರ್ಥವಾಗಿರುವುದು ಸಂತಸದ ವಿಷಯ' ಎಂದರು.

## ಕಾಂಗ್ರೆಸ್ ಅವಧಿಯ ಅನುದಾನ

ಎಂ. ಶಿವರಾಜು

ಒಳ್ಳೆಯ ಉದ್ದೇಶದ ಕಾಮಗಾರಿ ಎಂಬುದು ಗೊತ್ತಿದ್ದರೂ ದುರುದ್ದೇಶದಿಂದ ಬಿಜೆಪಿ ಸರ್ಕಾರ ಅನುದಾನ ತಡೆ ಹಿಡಿದಿತ್ತು ಎಂದು ಬಿಬಿಎಂಪಿ ಮಾಜಿ ಸದಸ್ಯ ಎಂ. ಶಿವರಾಜು ಹೇಳಿದರು.

ವೈಟ್ ಟಾಪಿಂಗ್ 3ನೇ ಹಂತದ ಕಾಮಗಾರಿಗೆ ಕಾಂಗ್ರೆಸ್ ಅವಧಿಯಲ್ಲೇ ಅನುದಾನ ನೀಡಲಾಗಿತ್ತು. ಅಕ್ರಮ ನಡೆದಿಲ್ಲ ಎಂಬುದು ಗೊತ್ತಿದ್ದರೂ ಕಾಂಗ್ರೆಸ್ ಮೇಲೆ ಆರೋಪ ಹೊರಿಸಲು ಅಮುಂದಾಗಿದ್ದರು ಎಂದರು.

ವೈಟ್ ಟಾಪಿಂಗ್ ಯೋಜನೆಯಡಿ ಅಭಿವೃದ್ಧಿಪಡಿಸಿರುವ ರಸ್ತೆಗಳ ಕುರಿತು ಮಾಹಿತಿ ನೀಡುತ್ತಿರುವ ಸಚಿವ ಆರ್. ಅಶೋಕ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಶಾಸಕ ಎಸ್.ರಘು, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಇದ್ದರು

ಟೆಂಡರ್ ಶ್ಯೂರ್, ವೈಟ್ ಟ್ಯಾಪಿಂಗ್ ಕಾಮಗಾರಿ ವೀಕ್ಷಣೆ

# 'ಸ್ಮಾರ್ಟ್ ಸಿಟಿ' ಅವ್ಯವಸ್ಥೆ ವೀಕ್ಷಿಸದ ಬಿಎಸ್‌ವೈ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜೀನಾಮೆ ವಿಷಯದ ಗೊಂದಲ ಮತ್ತು ಒತ್ತಡದ ನಡುವೆಯೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಶುಕ್ರವಾರ ನಗರ ಪ್ರದಕ್ಷಿಣೆ ನಡೆಸಿದರು.

ಸ್ಮಾರ್ಟ್ ಸಿಟಿ ಯೋಜನೆ, ಟೆಂಡರ್ ಶ್ಯೂರ್ ಮತ್ತು ವೈಟ್ ಟ್ಯಾಪಿಂಗ್ ರಸ್ತೆಗಳನ್ನು ಪರಿಶೀಲನೆ ನಡೆಸಿದರು. ಆದರೆ, ಸ್ಮಾರ್ಟ್‌ಸಿಟಿ ಯೋಜನೆಯಡಿ ಕಾಮಗಾರಿ ಪೂರ್ಣಗೊಂಡಿರುವ ರಸ್ತೆಗಳ ದರ್ಶನವನ್ನಷ್ಟೇ ಅಧಿಕಾರಿಗಳು ಮುಖ್ಯಮಂತ್ರಿಗೆ ಮಾಡಿಸಿದರು. ನಗರದ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ(ಸಿಬಿಡಿ) ಕಾಮಗಾರಿ ವಿಳಂಬದಿಂದ ಸಂಚಾರ ದಟ್ಟಣೆಯಲ್ಲಿ ಜನ ನಿತ್ಯ ಸಿಲುಕುತ್ತಿದ್ದಾರೆ.

ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಅಧಿಕಾರಿಗಳು ಮುಖ್ಯಮಂತ್ರಿ ಅವರಿಗೆ ತೋರಿಸಲೂ ಇಲ್ಲ. ಕಮರ್ಷಿಯಲ್ ಸ್ಟ್ರೀಟ್ ಪಕ್ಕದಲ್ಲೇ ಕಾಮಗಾರಿ ನಡೆಯುತ್ತಿರುವ ಸ್ಥಳವನ್ನು ಮುಚ್ಚಲಾಗಿತ್ತು. ಮುಖ್ಯಮಂತ್ರಿ ಬರುವ ಹಾದಿಯನ್ನು ಆದಷ್ಟು ಸಿಂಗರಿಸಲಾಗಿತ್ತು. ರಾಜಭವನ ರಸ್ತೆಯ ಪಾದಚಾರಿ ಮಾರ್ಗದಲ್ಲಿ ತಾತ್ಕಾಲಿಕವಾಗಿ ಸಸಿಗಳನ್ನು ಉದ್ದಕ್ಕೂ ಜೋಡಿಸಲಾಗಿತ್ತು.

ಪ್ರಗತಿಯಲ್ಲಿರುವ ಕಾಮಗಾರಿ ಬಗ್ಗೆ ಪರಿಶೀಲಿಸುವ ಗೋಜಿಗೆ ಮುಖ್ಯಮಂತ್ರಿ ಅವರೂ ಹೋಗಲಿಲ್ಲ. ಬೆಳಿಗ್ಗೆ 11ಕ್ಕೆ ಬಿಎಂಟಿಸಿ ವೋಲ್ವೊ ಬಸ್ ಏರಿ ಕುಳಿತ ಮುಖ್ಯಮಂತ್ರಿ ಮೊದಲಿಗೆ ಟೆಂಡರ್ ಶ್ಯೂರ್ ಯೋಜನೆಯಡಿ ಗಾಂಧಿನಗರದಲ್ಲಿ ನಿರ್ಮಾಣವಾಗಿರುವ ರಸ್ತೆ ಮತ್ತು ಪಾದಚಾರಿ ಮಾರ್ಗಗಳನ್ನು ವೀಕ್ಷಿಸಿದರು.

ಬಳಿಕ ನಾಯಂಡಹಳ್ಳಿ ಜಂಕ್ಷನ್ ಅಭಿವೃದ್ಧಿಪಡಿಸಿ ನಿರ್ಮಿಸಿರುವ 'ಮೈಸೂರು ದಸರಾ ದಿಬ್ಬ'ವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಲಿಂದ ರಾಜಕುಮಾರ್ ಸಮಾಧಿ ರಸ್ತೆಯಲ್ಲಿ ಪೂರ್ಣಗೊಂಡಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ಬಸ್‌ನಲ್ಲಿ ಕುಳಿತೇ ವೀಕ್ಷಿಸಿದರು. ಗೊರಗುಂಟೆ ಪಾಳ್ಯ, ಯಶವಂತಪುರ ಮೂಲಕ ಮೇಖ್ರಿ ವೃತ್ತ, ನೆಹರು ತಾರಾಲಯ ರಸ್ತೆಗೆ ತೆರಳಿದರು. ಅಲ್ಲಿಯೂ ಬಸ್‌ನಿಂದ ಇಳಿಯದೆ ಕುಳಿತಲ್ಲೇ ಪಾದಚಾರಿ ಮಾರ್ಗ ಪರಿಶೀಲಿಸಿದರು.

ಅಲ್ಲಿಂದ ಕಮರ್ಷಿಯಲ್ ಸ್ಟ್ರೀಟ್‌ಗೆ ತೆರಳಿ ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿಪಡಿಸಿರುವ ಪಾದಚಾರಿ ಮಾರ್ಗವನ್ನು ನೋಡಿದರು. ವುಡ್ಲೀಸ್ ಹೋಟೆಲ್‌ನಲ್ಲಿ ಉಪಾಹಾರ ಸೇವಿಸಿ ಕಾಫಿ ಕುಡಿದರು. ಅಲ್ಲಿಂದ ಇಂದಿರಾ ನಗರಕ್ಕೆ ತೆರಳಿ ವೈಟ್‌ಟಾಪಿಂಗ್ ಕಾಮಗಾರಿ ಪರಿಶೀಲಿಸಿದರು.

ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ ಮೂಲಕ ಶಾಂತಿನಗರಕ್ಕೆ ತೆರಳಿದರು. ಕೆ.ಆರ್. ಮಾರುಕಟ್ಟೆಯಿಂದ ಕೋರಮಂಗಲ ತನಕದ ರಾಜಕಾಲುವೆಗೆ ಯಾವುದೇ ಕೊಳಚೆ ನೀರು ಹರಿಯದಂತೆ ತಡೆದು ಮಳೆ ನೀರಷ್ಟೇ ಹರಿಯುವಂತೆ ಮಾಡುವ ಯೋಜನೆಯ ಕಾಮಗಾರಿಯನ್ನು ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣದ ಎದುರು ಮಳೆಯ ನಡುವೆ ವೀಕ್ಷಿಸಿದರು.

ಮುಖ್ಯಮಂತ್ರಿ ಜೊತೆಗೆ ಉಪಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ, ಸಚಿವರಾದ ಆರ್. ಅಶೋಕ, ಬೈರತಿ ಬಸವರಾಜ್, ಎಸ್.ಟಿ. ಸೋಮಶೇಖರ್, ವಿ. ಸೋಮಣ್ಣ, ಕೆ.ಗೋಪಾಲಯ್ಯ, ಅರವಿಂದ ಲಿಂಬಾವಳಿ ಇದ್ದರು.

ಶಾಂತಿನಗರದಲ್ಲಿ ಶಾಸಕ ಎನ್.ಎ.ಹ್ಯಾರಿಸ್ ಅವರು ಮುಖ್ಯಮಂತ್ರಿ ಅವರನ್ನು ಅಭಿನಂದಿಸಿದರು. ಇಂದಿರಾನಗರದಲ್ಲಿ ಮುಖ್ಯಮಂತ್ರಿ ಅವರನ್ನು ಶಾಸಕ ಎಸ್.ರಘು ಸನ್ಮಾನಿಸಿದರು. ಬಿಜೆಪಿ ಕಾರ್ಯಕರ್ತರು ಪಕ್ಷದ ಬಾವುಟ ಹಿಡಿದು ಸ್ವಾಗತಿಸಿದರು.

ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಕಾಮಗಾರಿ ಪರಿಶೀಲಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ –ಪ್ರಜಾವಾಣಿ ಚಿತ್ರಗಳು

ಮುಖ್ಯಮಂತ್ರಿ ನಗರ ಪ್ರದಕ್ಷಿಣೆಯಿಂದ ರಾಜರಾಮ ಮೋಹನ ರಾಯ್ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿರುವುದು

## ಎಲ್ಲೆಡೆ ಸಂಚಾರ ದಟ್ಟಣೆ

ಮುಖ್ಯಮಂತ್ರಿ ನಗರ ಪ್ರದಕ್ಷಿಣೆ ವೇಳೆ ಬೇರೆ ವಾಹನಗಳ ಸಂಚಾರ ತಡೆದು ನಿಲ್ಲಿಸಲಾಗಿತ್ತು. ಇದರಿಂದ ಎಲ್ಲೆಡೆ ಸಂಚಾರ ದಟ್ಟಣೆಯುಂಟಾಗಿ ವಾಹನ ಸವಾರರು ಪರದಾಡಿದರು.

ಮೈಸೂರು ರಸ್ತೆ, ನಾಯಂಡಹಳ್ಳಿ ಜಂಕ್ಷನ್, ಕೆ.ಆರ್. ವೃತ್ತ, ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ರಾಜಭವನ ರಸ್ತೆ, ಶಾಂತಿನಗರ, ಎಂ.ಜಿ. ರಸ್ತೆಯಲ್ಲಿ ವಾಹನ ಸವಾರರು ಕಿಲೋ ಮೀಟರ್ ತನಕ ಕಾದು ನಿಲ್ಲುವಂತಾಗಿತ್ತು.

## 'ನಿಜವಾದ ಸಿಲಿಕಾನ್ ಸಿಟಿ ಆಗಬೇಕು'

ನಗರವನ್ನು ನಿಜವಾದ ಸಿಲಿಕಾನ್ ಸಿಟಿ ಮತ್ತು ಪ್ರವಾಸಿ ತಾಣವನ್ನಾಗಿ ಮಾಡಬೇಕು ಎಂಬ ಉದ್ದೇಶದಿಂದ ವಿವಿಧ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ನಗರ ಪ್ರದಕ್ಷಿಣೆ ಮುಗಿಸಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ನಗರದ ರಾಜಕಾಲುವೆಗಳ ಅಭಿವೃದ್ಧಿ, ಕೆರೆಗಳ ಪುನರುಜ್ಜೀವನಕ್ಕೆ ಆದ್ಯತೆ ನೀಡಲಾಗಿದೆ. ಮುಂದಿನ ದಿನಗಳಲ್ಲೂ ಇದೇ ರೀತಿಯ ಕೆಲಸಗಳನ್ನು ಆದ್ಯತೆಯ ಮೇರೆಗೆ ಮಾಡಲಾಗುವುದು. ಕೆರೆ– ಕಟ್ಟೆಗಳು, ಉದ್ಯಾನಗಳ ಸಮಗ್ರ ಅಭಿವೃದ್ಧಿಗೆ ಯಾವುದೇ ರೀತಿಯಲ್ಲಿ ಹಣಕಾಸಿನ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು.

**ಟೆಂಡರ್ ಶ್ಯೂರ್**

| | |
|---|---|
| **20** ರಸ್ತೆಗಳು — ಟೆಂಡರ್ ಶ್ಯೂರ್ ಯೋಜನೆಯಡಿ ನಿರ್ಮಾಣ ಆಗಿರುವುದು | **9** ರಸ್ತೆಗಳು — ಟೆಂಡರ್ ಶ್ಯೂರ್ ಯೋಜನೆಯಡಿ ಪ್ರಗತಿಯಲ್ಲಿರುವ ಕಾಮಗಾರಿ |
| **₹224.69** ಕೋಟಿ — ಈ ಯೋಜನೆಯಡಿ ಆಗಿರುವ ಖರ್ಚು | **₹118.50** ಕೋಟಿ — ಅಂದಾಜು ಮೊತ್ತ |

**ವೈಟ್ ಟಾಪಿಂಗ್**

| | |
|---|---|
| **22** ರಸ್ತೆಗಳು — ಕಾಮಗಾರಿ ಪೂರ್ಣಗೊಂಡಿರುವ ವೈಟ್ ಟಾಪಿಂಗ್ ರಸ್ತೆಗಳು | **27** ರಸ್ತೆಗಳು — ವೈಟ್ ಟಾಪಿಂಗ್ ಕಾಮಗಾರಿ ಪ್ರಗತಿಯಲ್ಲಿರುವ ರಸ್ತೆಗಳು |
| **₹467.28** ಕೋಟಿ — ವೈಟ್ ಟಾಪಿಂಗ್ ಕಾಮಗಾರಿಗೆ ಆಗಿರುವ ವೆಚ್ಚ | **₹677.92** ಕೋಟಿ — ಪ್ರಗತಿಯಲ್ಲಿರುವ ಕಾಮಗಾರಿಗೆ ಆಗಲಿರುವ ವೆಚ್ಚ |

**ಸ್ಮಾರ್ಟ್‌ಸಿಟಿ**

| | | |
|---|---|---|
| **36** ರಸ್ತೆಗಳು — ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿಪಡಿಸುತ್ತಿರುವುದು | **₹481.65** ಕೋಟಿ — ಯೋಜನೆಯ ಒಟ್ಟು ಮೊತ್ತ | **9** ರಸ್ತೆಗಳು — ಸ್ಮಾರ್ಟ್‌ಸಿಟಿ ಯೋಜನೆ ಕಾಮಗಾರಿ |
| **29.53** ಕಿ.ಮೀ — ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿ ಆಗಲಿರುವ ರಸ್ತೆ ಪೂರ್ಣಗೊಂಡಿರುವುದು | **₹57.15** ಕೋಟಿ — ಪೂರ್ಣಗೊಂಡಿರುವ ಕಾಮಗಾರಿ ವೆಚ್ಚ | |

ನಾಯಂಡಹಳ್ಳಿ ಜಂಕ್ಷನ್ ಬಳಿ ನಿರ್ಮಿಸಿರುವ ಮೈಸೂರು ದಸರಾ ದಿಬ್ಬ

## ಕೂಡ್ಲಿ ಶೃಂಗೇರಿ ಮಠದ ವಿದ್ಯಾವಿಶ್ವೇಶ್ವರ ಭಾರತೀ ಸ್ವಾಮೀಜಿ ಚಾತುರ್ಮಾಸ್ಯ ಇಂದಿನಿಂದ

**ಬೆಂಗಳೂರು:** ಚಾಮರಾಜಪೇಟೆಯ ಅವಿಚ್ಛಿನ್ನ ಪರಂಪರಾ ಕೂಡ್ಲಿ ಶೃಂಗೇರಿ ಮಠದ ನೂತನ ಪೀಠಾಧಿಪತಿ ವಿದ್ಯಾ ವಿಶ್ವೇಶ್ವರ ಭಾರತೀ ಸ್ವಾಮೀಜಿ ಅವರ ಚಾತುರ್ಮಾಸ್ಯ ಜುಲೈ 24ರಂದು ಮಠದಲ್ಲಿ ನಡೆಯಲಿದೆ.

ಆಷಾಢ ಮಾಸದ ಹುಣ್ಣಿಮೆಯಂದು ಚಾತುರ್ಮಾಸ್ಯ ವ್ರತ ಆರಂಭಿಸಲಿದ್ದಾರೆ. ಭಾದ್ರಪದ ಮಾಸದ ಸೆಪ್ಟೆಂಬರ್ ತಿಂಗಳ ಹುಣ್ಣಿಮೆಗೆ ಸೀಮೊಲ್ಲಂಘನ ಮಾಡಿ, ವ್ರತ ಮುಗಿಸಲಿದ್ದಾರೆ. ಚಾತುರ್ಮಾಸ್ಯದಲ್ಲಿ ಭಕ್ತರಿಗೆ ಸ್ವಾಮೀಜಿ ಮಠದಲ್ಲಿ ದರ್ಶನ ನೀಡಲಿದ್ದಾರೆ. ವ್ರತಾಚರಣೆ ವೇಳೆ ಧಾರ್ಮಿಕ, ಪ್ರವಚನಾದಿ ಕೈಂಕರ್ಯ ನಡೆಯಲಿದ್ದು, ಭಕ್ತಾದಿಗಳು ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ಕಂಪ್ಯೂಟರ್ ಉಚಿತ ಶಿಕ್ಷಣ

**ಬೆಂಗಳೂರು:** ಕೆನರಾ ಬ್ಯಾಂಕ್ ಸಂಸ್ಥೆಯು ನಿರುದ್ಯೋಗಿ ಯುವಕ, ಯುವತಿಯರಿಗೆ ಮೂರು ತಿಂಗಳ ಕಂಪ್ಯೂಟರ್ ಶಿಕ್ಷಣದ ತರಬೇತಿಯನ್ನು ಉಚಿತವಾಗಿ ನೀಡಲಿದೆ.

ಕನಿಷ್ಠ ಎಸ್ಸೆಸ್ಸೆಲ್ಸಿ ಪೂರೈಸಿರುವ 18ರಿಂದ 30 ವರ್ಷದೊಳಗಿನವರು ತರಬೇತಿಯಲ್ಲಿ ಭಾಗವಹಿಸಬಹುದು. ಆಗಸ್ಟ್ ಎರಡನೇ ವಾರದಿಂದ ತರಬೇತಿ ಪ್ರಾರಂಭವಾಗಲಿದೆ.

ಆಸಕ್ತರು ಮಲ್ಲೇಶ್ವರದ ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯಲ್ಲಿ ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

**ವಿಳಾಸ:** ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, ಚಿತ್ರಾಪುರ ಭವನ, ಮಲ್ಲೇಶ್ವರ

**ಸಂಪರ್ಕ:** 9448538107

# ದರ ಏರಿಕೆ: ಎಸ್‌ಯುಸಿಐ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತೈಲ ದರ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಸಂಘಟನೆಯ ಸದಸ್ಯರು ಮಲ್ಲೇಶ್ವರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಎಸ್‌ಯುಸಿಐ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಎಂ.ಎನ್.ಶ್ರೀರಾಮ್,'ಕೋವಿಡ್ ಬಿಕ್ಕಟ್ಟಿನಿಂದ ಸಂಕಷ್ಟದಲ್ಲಿರುವ ಜನರಿಗೆ ಅಗತ್ಯ ವಸ್ತುಗಳ ಬೆಲೆ ಏರಿಸಿ, ಗಾಯದ ಮೇಲೆ ಬರೆ ಎಳೆಯಲಾಗುತ್ತಿದೆ. ಜನರ ಸಮಸ್ಯೆಗಳಿಗೆ ಸರ್ಕಾರಗಳ ನಿರ್ಲಕ್ಷ್ಯ ಖಂಡನೀಯ' ಎಂದರು.

'ಬೆಲೆ ಏರಿಕೆ ನಿಯಂತ್ರಣದ ಮೂಲಕ ಜನರಿಗೆ ನೆರವಾಗಬೇಕಿದ್ದ ಸರ್ಕಾರಗಳು, ಬೆಲೆ ಏರಿಕೆ ಪ್ರಹಾರ ನಡೆಸುತ್ತಿವೆ. ಪೆಟ್ರೋಲ್ ದರ ಶತಕ ದಾಟಿದೆ. ಗ್ಯಾಸ್ ಸಿಲಿಂಡರ್ ದರ ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ. ಇದರಿಂದ ಜನಸಾಮಾನ್ಯರ ಮೇಲೆ ಖರ್ಚಿನ ಹೊರೆಯೂ ಏರಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಸರ್ಕಾರಗಳು ಕೋವಿಡ್ ಪರಿಸ್ಥಿತಿ ಇರುವುದರಿಂದ ಜನ ಬೀದಿಗಿಳಿದು ಪ್ರತಿಭಟನೆ ಮಾಡಲಾಗದ ಸ್ಥಿತಿಯನ್ನೇ ಅವಕಾಶ ಮಾಡಿಕೊಂಡು ಬೆಲೆಗಳನ್ನು ಏರಿಸುವ ಮೂಲಕ ಜನವಿರೋಧಿ ನಡೆ ಪ್ರದರ್ಶಿಸಿವೆ. ಸಾಮಾಜಿಕ ಮಾಧ್ಯಮಗಳು ಸೇರಿದಂತೆ ಪರ್ಯಾಯ ವಿಧಾನಗಳ ಮೂಲಕ ಪ್ರತಿಭಟನೆ ಮುಂದುವರಿಸಬೇಕು' ಎಂದು ಹೇಳಿದರು.

ದರ ಏರಿಕೆ ವಿರೋಧಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಸಂಘಟನೆಯ ಸದಸ್ಯರು ಪ್ರತಿಭಟನೆ ನಡೆಸಿದರು.

### ಚರಂಡಿಗಳಲ್ಲಿ ರಂಧ್ರಯುಕ್ತ ಕಾಂಕ್ರೀಟ್ ಸ್ಲ್ಯಾಬ್ ಅಳವಡಿಕೆಗೆ ಸಲಹೆ

# ಚರಂಡಿಯಲ್ಲಿ ನೀರು ಇಂಗಿಸುವುದೇ ಪರಿಹಾರ

• ಗುರು ಪಿ.ಎಸ್.

**ಬೆಂಗಳೂರು:** ನಗರದಲ್ಲಿ ಜೋರು ಮಳೆ ಸುರಿಯುವ ವೇಳೆ ಸಂಭ್ರಮಕ್ಕಿಂತ ಹೆಚ್ಚಾಗಿ ಆತಂಕವೇ ಸೃಷ್ಟಿಯಾಗುತ್ತಿದೆ. ಮಳೆ ರಭಸವಾಗಿ ಬೀಳುತ್ತಿದ್ದಂತೆ ತಗ್ಗು ಪ್ರದೇಶದಲ್ಲಿನ ಬಡಾವಣೆಗಳಲ್ಲಿ ವಾಸವಿರುವವರು ಚಿಂತೆಗೀಡಾಗುತ್ತಿದ್ದಾರೆ. ಕೆರೆ-ಕಟ್ಟೆ, ರಾಜಕಾಲುವೆಗಳ ಒತ್ತುವರಿ, ಹೂಳನ್ನು ಸಕಾಲದಲ್ಲಿ ತೆಗೆಯದೇ ಇರುವುದು ಸಮಸ್ಯೆಗೆ ಕಾರಣವಾಗುತ್ತಿದೆ.

ಇದಲ್ಲದೆ, ಅವೈಜ್ಞಾನಿಕ ನಗರೀಕರಣದಿಂದಲೂ ಜನ ಸಂಕಷ್ಟಕ್ಕೆ ಈಡಾಗುತ್ತಿದ್ದಾರೆ. ಅಂದರೆ, ಕಾಂಕ್ರೀಟ್ ಮತ್ತು ಡಾಂಬರಿನ ರಸ್ತೆಗಳ ಮೇಲೆ ಬಿದ್ದ ಮಳೆ ನೀರು ಭೂಮಿಯೊಳಗೆ ಇಂಗುತ್ತಿಲ್ಲ. ಚರಂಡಿಗಳನ್ನು ಕೂಡ ಕಾಂಕ್ರೀಟ್‌ನಿಂದಲೇ ನಿರ್ಮಿಸಲು ಆರಂಭಿಸಿದ ಮೇಲಂತೂ ನೀರು ಇಂಗಲು ವ್ಯವಸ್ಥೆಯೇ ಇಲ್ಲದಂತಾಗಿದೆ. ಚರಂಡಿಯಲ್ಲಿ ಬೀಳುವ ನೀರು ಕೂಡ ಅಲ್ಲಿಯೇ ಇಂಗುವಂತೆ ಮಾಡುವುದೇ ಸಮಸ್ಯೆಗೆ ಪರಿಹಾರ ಎನ್ನುತ್ತಾರೆ ನಗರದ ಗೋಪಾಲನ್ ಎಂಜಿನಿಯರಿಂಗ್ ಮತ್ತು ನಿರ್ವಹಣಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಚ್.ಸಿ. ಶ್ರೇಯಸ್.

'ರಂಧ್ರಯುಕ್ತ ಕಾಂಕ್ರೀಟ್ ಸ್ಲ್ಯಾಬ್‌ಗಳನ್ನು ತಯಾರಿಸಿ ಅವುಗಳನ್ನು ರಸ್ತೆ ಬದಿಯ ಚರಂಡಿಗಳ ತಳಕ್ಕೆ ಅಲ್ಲಲ್ಲಿ ಅಳವಡಿಸುವುದರಿಂದ ಬಿದ್ದ ಮಳೆ ನೀರು ಚರಂಡಿಯನ್ನು ಸೇರಿ, ಸ್ಲ್ಯಾಬ್‌ನಲ್ಲಿನ ರಂಧ್ರಗಳ ಮೂಲಕ ಕೆಳಗಿಳಿದು ಭೂಮಿಯೊಳಗೆ ಇಂಗುತ್ತದೆ. ನಮ್ಮ ಕಾಲೇಜಿನ ಪ್ರಯೋಗಾಲಯದಲ್ಲಿ ಇದನ್ನು ಪ್ರಯೋಗಿಸಿದ್ದು, ಯಶಸ್ವಿಯಾಗಿದೆ' ಎಂದು ಅವರು ಹೇಳಿದರು.

'ರಂಧ್ರಯುಕ್ತ ಕಾಂಕ್ರೀಟ್ ಸಾಂಪ್ರದಾಯಿಕ ಕಾಂಕ್ರೀಟ್‌ಗಿಂತ ವಿಭಿನ್ನ. ಇದರ ತಯಾರಿಕೆಯಲ್ಲಿ ಮರಳನ್ನು ಉಪಯೋಗಿಸುವುದಿಲ್ಲ. ರಂಧ್ರಗಳ ಮೂಲಕವೇ ನೀರು ಕೆಳಗಿಳಿಯುತ್ತದೆ. ನಾಲ್ಕು ಇಂಚಿನಷ್ಟು ದಪ್ಪದ ಒಂದು ಚದರ ಅಡಿಯ ಸ್ಲ್ಯಾಬ್‌ಗಳನ್ನು ತಯಾರಿಸಿ ರಸ್ತೆಬದಿಯ ಚರಂಡಿಗಳಲ್ಲಿ ಅಲ್ಲಲ್ಲಿ ಹಾಸುಗಳಾಗಿ ಹಾಗೂ ಪ್ರವಾಹ ಪೀಡಿತ ಆಯಕಟ್ಟಿನ ಜಾಗಗಳಲ್ಲಿ ಅಳವಡಿಸಬಹುದು' ಎಂದರು.

'ಒಂದು ಸ್ಲ್ಯಾಬ್ ತಯಾರಿಸಲು ಹೆಚ್ಚೆಂದರೆ ₹30ರಿಂದ ₹35 ವೆಚ್ಚವಾಗುತ್ತದೆ. ಈಗಾಗಲೇ ನಿರ್ಮಾಣವಾಗಿರುವ ಚರಂಡಿಗಳಲ್ಲಿ ಈ ವ್ಯವಸ್ಥೆಯ ಅಳವಡಿಕೆ ಕಷ್ಟವಾಗಬಹುದು. ಆದರೆ, ಭವಿಷ್ಯದಲ್ಲಿ ನಿರ್ಮಾಣವಾಗುವ ಚರಂಡಿಗಳಲ್ಲದೆ, ಪಾದಚಾರಿ ಮಾರ್ಗಗಳು, ತೋಟ, ಉದ್ಯಾನಗಳು, ಆಟದ ಮೈದಾನಗಳಲ್ಲಿಯೂ ಇಂತಹ ರಂಧ್ರಯುಕ್ತ ಕಾಂಕ್ರೀಟ್ ಸ್ಲ್ಯಾಬ್ ಅಳವಡಿಸಬಹುದು. ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಗಳು ಈ ತಂತ್ರಜ್ಞಾನವನ್ನು ಅಳವಡಿಸಿದರೆ ನಗರ ಮತ್ತು ವಸತಿ ಪ್ರದೇಶಗಳಲ್ಲಿನ ಮಳೆ ನೀರಿನ ಪ್ರವಾಹವನ್ನು ಶಾಶ್ವತವಾಗಿ ತಡೆಯಬಹುದಾಗಿದೆ' ಎಂದು ಅವರು ಸಲಹೆ ನೀಡಿದರು.

### ಅತಿ ರಭಸವಿದ್ದರೂ ಚಿಂತೆಯಿಲ್ಲ!

ಶ್ರೇಯಸ್

ಸಾಮಾನ್ಯವಾಗಿ ಗರಿಷ್ಠ ಮಳೆಯ ತೀವ್ರತೆ ಗಂಟೆಗೆ 10 ಸೆಂ.ಮೀ. ಇರುತ್ತದೆ. ಆದರೆ, ಗಂಟೆಗೆ 450 ಸೆಂ.ಮೀ.ಗಿಂತ ರಭಸವಾಗಿ ಮಳೆ ಸುರಿದರೂ ಈ ಸ್ಲ್ಯಾಬ್‌ಗಳು ನೀರನ್ನು ಸೆಳೆದುಕೊಂಡು ಇಂಗಿಸುವ ಸಾಮರ್ಥ್ಯ ಹೊಂದಿರುತ್ತವೆ ಎಂದು ಶ್ರೇಯಸ್ ಹೇಳಿದರು.

'ಸ್ಲ್ಯಾಬ್‌ಗಳನ್ನು ಅಳವಡಿಸುವಾಗ ಕೆಳಗೆ ಒಂದು ಅಡಿಯಷ್ಟು ಜಲ್ಲಿ ಕಲ್ಲುಗಳ ಹಾಸುಗಳನ್ನು ಹಾಕಿದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. ಇವುಗಳ ಶಕ್ತಿ ಸಾಂಪ್ರದಾಯಿಕ ಕಾಂಕ್ರೀಟ್‌ಗಿಂತ ಕಡಿಮೆ ಇರುವುದರಿಂದ ರಸ್ತೆ ನಿರ್ಮಾಣಗಳಲ್ಲಿ ಅಥವಾ ಬೇರಾವುದೇ ಕಟ್ಟಡಗಳ ನಿರ್ಮಾಣಗಳಲ್ಲಿ ಉಪಯೋಗಿಸಲಾಗುವುದಿಲ್ಲ. ಚರಂಡಿಯಲ್ಲಿ ಇವುಗಳನ್ನು ಅಳವಡಿಸಿ ನಿರ್ವಹಿಸುವುದು ಕೂಡ ಬಹಳ ಸುಲಭ' ಎಂದು ಅವರು ಹೇಳಿದರು.



ಪ್ರಜಾವಾಣಿ ಗ್ರಾಫಿಕ್ಸ್ | ಮಂಜುನಾಥ ಹುಲಕೊಪ್ಪದ

ಕೊಚ್ಚಿ ಹೋಗದಿರಲಿ ಬದುಕು 6

ವಿಡಿಯೋ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

# ಕೋವಿಡ್ ಲಸಿಕೆ: ಗರ್ಭಿಣಿಯರು ಹಿಂದೇಟು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೋವಿಡ್ ಲಸಿಕೆ ಸುರಕ್ಷಿತ' ಎಂದು ಆರೋಗ್ಯ ಇಲಾಖೆ ಜಾಗೃತಿ ಅಭಿಯಾನ ಕೈಗೊಂಡರೂ ನಗರದಲ್ಲಿನ ಗರ್ಭಿಣಿಯರು ಲಸಿಕೆ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ.

ಕೆಲ ದಿನಗಳ ಹಿಂದಷ್ಟೇ ಕೇಂದ್ರ ಆರೋಗ್ಯ ಸಚಿವಾಲಯವು ಗರ್ಭಿಣಿಯರಿಗೆ ಲಸಿಕೆ ಒದಗಿಸುವ ಸಂಬಂಧ ಮಾರ್ಗಸೂಚಿಯನ್ನು ಹೊರಡಿಸಿ, ಮಗು ಮತ್ತು ತಾಯಿಯ ಆರೋಗ್ಯದ ದೃಷ್ಟಿಯಿಂದ ಲಸಿಕೆಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು ಎಂದು ಸೂಚಿಸಿತ್ತು. ಲಸಿಕೆ ಪಡೆಯುವುದರಿಂದ ಯಾವುದೇ ಸಮಸ್ಯೆ ಕಾಣಿಸಿಕೊಳ್ಳುವುದಿಲ್ಲ ಎಂದು ಆರೋಗ್ಯ ಇಲಾಖೆ ಜಾಗೃತಿ ಮೂಡಿಸಿತ್ತು. ಆದರೂ ಹಿಂಜರಿಕೆ, ತಪ್ಪು ಕಲ್ಪನೆ ಹಾಗೂ ಅಡ್ಡ ಪರಿಣಾಮದ ಆತಂಕದಿಂದ ಲಸಿಕೆ ಪಡೆಯಲು ಗರ್ಭಿಣಿಯರು ಮುಂದೆ ಬರುತ್ತಿಲ್ಲ ಎಂದು ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

ಕೋವಿಡ್ ಕಾಣಿಸಿಕೊಳ್ಳುವ ಮೊದಲು ನಗರದ ವಾಣಿವಿಲಾಸ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು 1,200ಕ್ಕೂ ಅಧಿಕ ಹೆರಿಗೆಗಳು ನಡೆಯುತ್ತಿದ್ದವು. ಈಗ 800ರಿಂದ 900 ಹೆರಿಗೆಗಳನ್ನು ಮಾಡಲಾಗುತ್ತಿದೆ. ಪ್ರತಿನಿತ್ಯ 300ಕ್ಕೂ ಅಧಿಕ ಗರ್ಭಿಣಿಯರು ಹೊರ ರೋಗಿ ವಿಭಾಗಕ್ಕೆ ಭೇಟಿ ನೀಡಿ, ತಪಾಸಣೆಗೆ ಒಳಪಡುತ್ತಿದ್ದಾರೆ. ಅಲ್ಲಿನ ವೈದ್ಯರು ಲಸಿಕೆ ಪಡೆದುಕೊಳ್ಳುವಂತೆ ಕೂಡ ಸೂಚಿಸುತ್ತಿದ್ದು, ಕೆಲವರಲ್ಲಿನ ತಪ್ಪು ಕಲ್ಪನೆ ಹೋಗಲಾಡಿಸಲು ಕೌನ್ಸಲಿಂಗ್ ಕೂಡ ನಡೆಸುತ್ತಿದ್ದಾರೆ. ಅಷ್ಟಾಗಿಯೂ ಪ್ರತಿನಿತ್ಯ ಸರಾಸರಿ ಮೂರರಿಂದ ನಾಲ್ಕು ಗರ್ಭಿಣಿಯರು ಮಾತ್ರ ಲಸಿಕೆ ಪಡೆದುಕೊಳ್ಳುತ್ತಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಈವರೆಗೆ 69.01 ಲಕ್ಷ ಡೋಸ್ ಲಸಿಕೆಯನ್ನು 18 ವರ್ಷ ಮೇಲ್ಪಟ್ಟವರಿಗೆ ವಿತರಿಸಲಾಗಿದೆ. 54.96 ಲಕ್ಷ ಮಂದಿ ಮೊದಲ ಡೋಸ್ ಹಾಗೂ 14.04 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಗರ್ಭಿಣಿಯರು ಮತ್ತು ಬಾಣಂತಿಯರು ಲಸಿಕೆ ನೀಡಿರುವ ಬಗ್ಗೆ ಕೋವಿನ್ ಪೋರ್ಟಲ್‌ನಲ್ಲಿ ಪ್ರತ್ಯೇಕವಾಗಿ ಮಾಹಿತಿಯನ್ನು ನಮೂದಿಸಲಾಗುತ್ತಿಲ್ಲ.

'ಕೋವಿಡ್ ಲಸಿಕೆ ಪಡೆದುಕೊಳ್ಳುವಂತೆ ಎಷ್ಟೇ ಜಾಗೃತಿ ಮೂಡಿಸಿದರೂ ಗರ್ಭಿಣಿಯರು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರುತ್ತಿಲ್ಲ. ಹೊಟ್ಟೆಯಲ್ಲಿರುವ ಶಿಶುವಿನ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದೆಂಬ ಆತಂಕವನ್ನು ಕೆಲವರಲ್ಲಿ ಕಾಣುತ್ತಿದ್ದೇವೆ. ಕುಟುಂಬದ ಸದಸ್ಯರೊಂದಿಗೆ ಬಂದವರಲ್ಲಿ ಕೆಲವರು ಮಾತ್ರ ಲಸಿಕೆ ಪಡೆದುಕೊಳ್ಳುತ್ತಿದ್ದಾರೆ. ಕೋವಿಡ್ ಲಸಿಕೆಯನ್ನು ಗರ್ಭಾವಸ್ಥೆಯ ಯಾವುದೇ ಸಮಯದಲ್ಲಾದರೂ ಪಡೆದುಕೊಳ್ಳಬಹುದು' ಎಂದು ವಾಣಿವಿಲಾಸ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.







# ಬ್ರೆಜಿಲ್: ಕೋವ್ಯಾಕ್ಸಿನ್ ಒಪ್ಪಂದ ರದ್ದು

**ಹೈದರಾಬಾದ್ (ಪಿಟಿಐ):** ಭಾರತ್ ಬಯೋಟೆಕ್ ಬ್ರೆಜಿಲ್‌ನ ಪ್ರೆಸಿಸಾ ಮೆಡಿಸಿಮೆಂಟೋಸ್ ಮತ್ತು ಎನ್ವಿಕ್ಸಿಯಾ ಫಾರ್ಮಾಸ್ಯುಟಿಕಲ್ಸ್ ಎಲ್‌ಎಲ್‌ಸಿ ಜತೆಗಿನ ಒಪ್ಪಂದವನ್ನು ಕೊನೆಗೊಳಿಸಿದೆ.

ಬ್ರೆಜಿಲ್ ಸರ್ಕಾರದೊಂದಿಗೆ ಕೋವಿಡ್ ಲಸಿಕೆಯ 2 ಕೋಟಿ ಡೋಸ್ ಪೂರೈಕೆಗೆ ಸಂಬಂಧಿಸಿದಂತೆ ಮಾಡಿಕೊಂಡ ಒಪ್ಪಂದವು ವಿವಾದಕ್ಕೀಡಾಗಿ, ತನಿಖೆಗೆ ಗುರಿಯಾದ ಬೆನ್ನಲ್ಲೆ ಭಾರತ್ ಬಯೋಟೆಕ್ ಈ ಕ್ರಮ ತೆಗೆದುಕೊಂಡಿದೆ.

ಬ್ರೆಜಿಲ್‌ನಲ್ಲಿ ಕೋವ್ಯಾಕ್ಸಿನ್ ಪರಿಚಯಿಸುವ ಉದ್ದೇಶದಿಂದ ಭಾರತ್ ಬಯೋಟೆಕ್ ಈ ಎರಡೂ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಅದರಂತೆ 2 ಕೋಟಿ ಡೋಸ್ ಲಸಿಕೆ ಪೂರೈಸಬೇಕಿತ್ತು. ಡೋಸ್‌ಗೆ 15 ಡಾಲರ್‌ನ ದರದಲ್ಲಿ ಲಸಿಕೆ ಪೂರೈಸಲು ಕಂಪನಿ ಒಪ್ಪಿಕೊಂಡಿತ್ತು.

ತಾನು ಮುಂಗಡ ಹಣ ಪಡೆದಿಲ್ಲ ಮತ್ತು ಒಂದು ಡೋಸ್ ಲಸಿಕೆಯನ್ನೂ ಅಲ್ಲಿಗೆ ಕಳುಹಿಸಿಲ್ಲ. ಸ್ಥಳೀಯ ಕಾನೂನುಗಳಿಗೆ ಅನುಗುಣವಾಗಿಯೇ ಒಪ್ಪಂದ ಮಾಡಲಾಗಿತ್ತು. ಕಂಪನಿ ಅತ್ಯುನ್ನತ ಮಟ್ಟದ ನೈತಿಕ ವ್ಯವಹಾರವನ್ನೇ ನಡೆಸುತ್ತದೆ ಎಂದು ಭಾರತ್ ಬಯೋಟೆಕ್ ಸ್ಪಷ್ಟಪಡಿಸಿದೆ.

## 'ವರಿಷ್ಠರಿಗಿಂತ ಯಾರೂ ದೊಡ್ಡವರಲ್ಲ'

**ಹೊಸಕೋಟೆ:** 'ವರಿಷ್ಠರು ಕೇಳಿದರೆ ನಾನು ರಾಜೀನಾಮೆ ನೀಡಲು ತಾವು ಸಿದ್ಧ. ವರಿಷ್ಠರಿಗಿಂತ ದೊಡ್ಡವರೂ ಯಾರೂ ಇಲ್ಲ. ನನ್ನನ್ನು ಪರಿಷತ್ ಸದಸ್ಯರು ಮತ್ತು ಸಚಿವರನ್ನಾಗಿ ಮಾಡಿದ್ದೇ ವರಿಷ್ಠರು' ಎಂದು ಪೌರಾಡಳಿತ, ಸಕ್ಕರೆ ಖಾತೆ ಸಚಿವ ಎಂ.ಟಿ.ಬಿ ನಾಗರಾಜ್ ಸುದ್ದಿಗಾರರಿಗೆ ತಿಳಿಸಿದರು.


**ನೈಋತ್ಯ ರೈಲ್ವೆ**

**E- Tender Notice No. CAO/CN/BNC/30/2021**
**Dated: 20.07.2021**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ಹೆಸರು | ಅಂದಾಜು ಮೌಲ್ಯ |
|---|---|
| ಹುಬ್ಬಳ್ಳಿ – ಚಿಕ್ಕಜಾಜೂರು ದ್ವಿಪಥೀಕರಣ ಯೋಜನೆ: ಯಲವಿಗಿ – ಗುಡಗೇರಿ ನಿಲ್ದಾಣಗಳ ನಡುವೆ ಕಿ.ಮೀ. 422–300 ರಿಂದ ಕಿ.ಮೀ. 422–800 ವರೆಗೆ ಬ್ಲ್ಯಾಂಕೆಟಿಂಗ್ ಮತ್ತು ರಿಟೇನಿಂಗ್ ವಾಲ್ ನಿರ್ಮಾಣ ಸೇರಿದಂತೆ ಭೂ ಕೆಲಸ | Rs. 4,20,76,429/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **09–08–2021, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯಇಂಜಿನೀಯರ್/ನಿರ್ಮಾಣ/ಕಾಮಗಾರಿಗಳು ಬೆಂಗಳೂರು ಕ್ಯಾಂಟೋನ್ಮೆಂಟ್

PUB/121/AAV/PRB/SWR/2021-22


# ಕೋವಿಡ್ ಇಳಿಕೆ: ಕಸಾಪ ಚುನಾವಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯ ಘಟಕ, ಜಿಲ್ಲಾ ಘಟಕಗಳು ಮತ್ತು ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಚುನಾವಣಾ ಪ್ರಕ್ರಿಯೆ ನಡೆಸಬೇಕು ಎಂದು ಆಕಾಂಕ್ಷಿಗಳು ಒತ್ತಾಯಿಸಿದ್ದಾರೆ.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತಿನ ಚುನಾವಣೆ ಕಳೆದ ಮೇ 9ರಂದು ಈ ಹಿಂದೆ ನಿಗದಿಯಾಗಿತ್ತು. ನಾಮಪತ್ರ ಪರಿಶೀಲನೆ ಸೇರಿದಂತೆ ವಿವಿಧ ಪ್ರಕ್ರಿಯೆಗಳು ಪೂರ್ಣಗೊಂಡು, ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ 21 ಮಂದಿ ಸ್ಪರ್ಧೆಯಲ್ಲಿದ್ದರು. ರಾಜ್ಯದ ಉದ್ದಗಲಕ್ಕೂ ಸಂಚರಿಸಿ, ಪ್ರಚಾರವನ್ನೂ ನಡೆಸಿದ್ದರು. ಆದರೆ, ಮಾರ್ಚ್ ಮೂರನೇ ವಾರದ ಬಳಿಕ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದು, ಏಪ್ರಿಲ್ ತಿಂಗಳಲ್ಲಿ ಗರಿಷ್ಠ ಸಂಖ್ಯೆಗೆ ತಲುಪಿದ ಕಾರಣ ಚುನಾವಣೆಯನ್ನು ಸರ್ಕಾರ ಮುಂದೂಡಿತ್ತು.

ಚುನಾವಣಾ ಪ್ರಕ್ರಿಯೆಯನ್ನು ಮುಂದೂಡಿದ ಹಂತದಿಂದ ಯಥಾವತ್ತಾಗಿ ಮುಂದುವರಿಸಲಾಗುವುದು ಎಂದು ಕಳೆದ ಏಪ್ರಿಲ್ 26ರಂದು ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿತ್ತು.

ಸದ್ಯ, ಕೋವಿಡ್ ಪ್ರಕರಣಗಳು ಇಳಿಕೆ ಕಂಡಿದ್ದು, ಸರ್ಕಾರ ನಿರ್ಬಂಧಗಳನ್ನೂ ಸಡಿಲಿಸಿದೆ. ಹೀಗಾಗಿ, ಚುನಾವಣೆ ಕೈಗೆತ್ತಿಕೊಳ್ಳಬೇಕು ಎಂದು ಆಕಾಂಕ್ಷಿಗಳು ಆಗ್ರಹಿಸಿದ್ದಾರೆ. ಈ ಬಗ್ಗೆ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರು ಸರ್ಕಾರಕ್ಕೆ ಪತ್ರ ಬರೆದಿದ್ದು, ಚುನಾವಣೆ ನಡೆಸಲು ಅವಕಾಶ ನೀಡುವಂತೆ ಮನವಿ ಮಾಡಿಕೊಂಡಿದ್ದಾರೆ.

### ಅಧಿಕಾರದ ಅವಧಿ ಅಂತ್ಯ

ಹಾಲಿ ಕಾರ್ಯಕಾರಿ ಸಮಿತಿಯ ಅಧಿಕಾರದ ಅವಧಿ 5 ವರ್ಷ ಮುಕ್ತಾಯವಾಗಿದ್ದು, ಪರಿಷತ್ತಿನ ಬೈಲಾದ ಅನುಸಾರ 6 ತಿಂಗಳು ಅಧಿಕಾರ ಅವಧಿ ವಿಸ್ತರಿಸಿಕೊಳ್ಳಲಾಗಿದೆ. ಅಂದರೇ, ಮುಂಬರುವ ಸೆ.2ಕ್ಕೆ ಅಧಿಕಾರ ಅವಧಿ ಕೊನೆಗೊಳ್ಳಲಿದೆ.

'ಈಗ ಚುನಾವಣೆ ನಡೆಸಲು ಸರ್ಕಾರ ಅವಕಾಶ ನೀಡಬೇಕಿದೆ. ಈಗಾಗಲೇ ವಿವಿಧ ನಿರ್ಬಂಧಗಳನ್ನು ಸಡಿಲಿಸಿ, ಸಾರ್ವಜನಿಕ ಸಾರಿಗೆಗಳಲ್ಲಿ ಪೂರ್ಣ ಪ್ರಮಾಣದ ಆಸನಗಳ ಭರ್ತಿ, ಚಿತ್ರಮಂದಿರಗಳ ಪುನರಾರಂಭ ಸೇರಿದಂತೆ ವಿವಿಧ ಚಟುವಟಿಕೆಗಳಿಗೆ ಅವಕಾಶ ನೀಡಲಾಗಿದೆ. ಶಾಲೆ-ಕಾಲೇಜುಗಳನ್ನು ಕೂಡ ಪ್ರಾರಂಭಿಸಲಾಗುತ್ತಿದೆ. ಕೋವಿಡ್ ಲಸಿಕೆಯೂ ಲಭ್ಯವಿದ್ದು, ಸೋಂಕು ದೃಢ ಪ್ರಮಾಣ ನಿಯಂತ್ರಣಕ್ಕೆ ಬಂದಿದೆ. ಹಾಗಾಗಿ, ಚುನಾವಣೆ ನಡೆಸಬೇಕು' ಎಂದು ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳು ಆಗ್ರಹಿಸಿದ್ದಾರೆ.'ಪರಿಷತ್ತಿನ ಚುನಾವಣೆಗೆ ಸಂಬಂಧಿಸಿ ಈಗಾಗಲೇ ಪತ್ರ ಬರೆಯಲಾಗಿದೆ. ಅವಕಾಶ ನೀಡಿದಲ್ಲಿ ಚುನಾವಣೆ ನಡೆಸಲು ಯಾವುದೇ ಸಮಸ್ಯೆಯಿಲ್ಲ' ಎಂದು ಚುನಾವಣಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಅವರು ತಿಳಿಸಿದರು.

# 2,903 ರೈಲ್ವೆ ಉದ್ಯೋಗಿಗಳ ಮರಣ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೋವಿಡ್–19ನಿಂದ ರೈಲ್ವೆ ಇಲಾಖೆಯ ಒಟ್ಟು 2,903 ನೌಕರರು ಸಾವಿಗೀಡಾಗಿದ್ದಾರೆ ಎಂದು ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರು ಶುಕ್ರವಾರ ರಾಜ್ಯಸಭೆಗೆ ಮಾಹಿತಿ ನೀಡಿದರು.

ಮೃತರಲ್ಲಿ ಇದುವರೆಗೆ 2,782 ನೌಕರರ ಕುಟುಂಬಗಳಿಗೆ ತಲುಪಬೇಕಾದ ಬಾಕಿ ಹಣವನ್ನು ನೀಡಲಾಗಿದೆ ಎಂದೂ ಅವರು ತಿಳಿಸಿದರು.


## Walk in Interview

**ಜ್ಯು.ಅಸಿಸ್ಟಂಟ್ (ಪುರುಷರಿಗಾಗಿ)**

ವಿದ್ಯಾರ್ಹತೆ : (ಪದವಿಧರರು ಕನಿಷ್ಟ ಸರಾಸರಿ 40% ಅಂಕಗಳು)/ ಸ್ನಾತಕೋತ್ತರ ಪದವಿ ಯಾವುದೇ ಕ್ಷೇತ್ರದಲ್ಲಿ. ವಯಸ್ಸಿನ ಮಿತಿ: 25 ವರ್ಷಕ್ಕಿಂತ ಒಳಗಿನವರಾಗಿರಬೇಕು.

**ಹೌಸ್ ಕೀಪಿಂಗ್ ಅಸಿಸ್ಟಂಟ್ (ಸ್ತ್ರೀಯರಿಗಾಗಿ)**

ವಿದ್ಯಾರ್ಹತೆ : (ಪಿಯುಸಿ/ ಎಸ್‌ಎಸ್‌ಎಲ್‌ಸಿ) ವಯಸ್ಸಿನ ಮಿತಿ : 30 ವರ್ಷಕ್ಕಿಂತ ಒಳಗಿನವರಾಗಿರಬೇಕು.

ದಯವಿಟ್ಟು ಪ್ರಮಾಣಪತ್ರ ತನ್ನಿ 10 ನೇ ತರಗತಿಯಿಂದ ನಂತರದ ನಿಮ್ಮ ಎಲ್ಲ ವರ್ಷಾನುಕ್ರಮ/ಸೆಮಿಸ್ಟರ್ ಆಧರಿತ ಮೂಲ ಮತ್ತು ದೃಢೀಕರಿಸಿದ ಪ್ರತಿಗಳು, ಪಾನ್ ಕಾರ್ಡ್, 4 ಪಾಸ್‌ಪೋರ್ಟ್ ಸೈಜ್ ಫೋಟೋಗಳು.

ಸಂದರ್ಶನದ ಸ್ಥಳಗಳು
ಅಭ್ಯರ್ಥಿಗಳು ತಮ್ಮ ಸಮೀಪದ ಸ್ಥಳದಲ್ಲಿ (ಶಾಖೆ) ನೇರವಾಗಿ ಸಂದರ್ಶನಕ್ಕೆ ಬರಬಹುದು

ಅತ್ತಿಬೆಲೆ ಶಾಖೆ, ಆನೇಕಲ್ ರಸ್ತೆ, ಹೀರೋಹೊಂಡ ಶೋರೂಮ್ ಹತ್ತಿರ, **Call : 7022547761, 9072602581**

ಗರ್ಭಾವಿಪಾಳ್ಯ ಶಾಖೆ, ರಾಜ್ ಆರ್ಕೇಡ್, ಹೊಂಗಸಂದ್ರ ರಸ್ತೆ, **Call : 9072690583, 9072602580**

ಕೆಂಗೇರಿ ಸೆಟ್‌ಲೈಟ್ ಶಾಖೆ, ಸುಪ್ರಭಾ ಆರ್ಕೇಡ್, ಕಾರ್ಪೊರೇಷನ್ ಬ್ಯಾಂಕ್, **Call : 9845150908, 9353049405**

ಕುಣಿಗಲ್ ಶಾಖೆ, ಬಿ ಎಂ ರಸ್ತೆ, ರಾಜ್ ಕುಮಾರ್ ರಸ್ತೆ ಎದುರುಗಡೆ **Call : 9895861155, 9488402788**

ಜಬಿಎನ್ ರಸ್ತೆ ಮಧುಗಿರಿ ಶಾಖೆ, ಮಹಾತ್ಮಾಗಾಂಧಿ ಲೇಔಟ್, ಹೆಚ್‌ಪಿ ಪೆಟ್ರೋಲ್ ಬಂಕ್ ಹತ್ತಿರ **Call : 9633030244, 8973178034**

ಕೋಲಾರ ಗಡಿಯಾರ ಕಂಬ ಶಾಖೆ, ಎಂ ಎಂ ಬಿಲ್ಡಿಂಗ್, ಎಂ ಬಿ ಬಿಲ್ಡಿಂಗ್, **Call : 8549927037, 9655717856**

ದಿನಾಂಕ : 25.07.2021, ರವಿವಾರ
ಸಮಯ : 9.30 ಮುಂಜಾನೆಯಿಂದ 4.00 ಸಾ.

ಆಕರ್ಷಕ ವೇತನ ಲಾಭಗಳು. ಹೊರ ಊರಿನ ಅಭ್ಯರ್ಥಿಗಳಿಗಾಗಿ ಉಚಿತ ಉಳಿದುಕೊಳ್ಳುವ ಹಾಸ್ಟೆಲ್ ವ್ಯವಸ್ಥೆ ಮಾಡಲಾಗುತ್ತದೆ.

ಮಣಪ್ಪುರಂ ಫೈನಾನ್ಸ್ ಲಿಮಿಟೆಡ್ Make Life Easy



## PUBLIC NOTICE

This is to inform the general public that there is a dispute pending between the partners of **M/S. MANYATA REALLTY,** No.9/1, Classic Court, Richmond Road, Bangalore, a Partnership Firm represented by its Managing Partners **MR. TEJRAJ GULECHA AND MR. REDDY VEERANNA.** My clients Mr. Rajkumar Mehta and Mr.Tejraj Nagori being the other partners of the Firm have raised arbitration dispute and Commercial A.A. No.107/2020 before the Commercial Court Bangalore City. The arbitration proceedings has also been initiated by issuing Arbitration Notice. Therefore the members of the General Public are hereby intimated not to deal with the following properties belonging to the said Firm which is subject matter of the dispute.

**SCHEDULE PROPERTY**

All that piece and parcel of the residentially converted lands all situated at **Rachenahalli Village, K R Puram Hobli, Bangalore East Taluk, Bangalore** as mentioned below :

| Sl. No | Survey No's | Acres | Guntas | Sl. No | Survey No's | Acres | Guntas |
|---|---|---|---|---|---|---|---|
| 1 | 7/1 | 0 | 15 | 60 | 64/2 | 1 | 08 |
| 2 | 7/2 | 0 | 09 | 61 | 65/1a | 0 | 18 |
| 3 | 7/3 | 0 | 13 | 62 | 65/1b | 0 | 17 |
| 4 | 8/1 | 1 | 02 | 63 | 65/2 | 0 | 17 |
| 5 | 8/2 | 0 | 04 | 64 | 65/3 | 0 | 24 |
| 6 | 8/3 | 0 | 26 | 65 | 65/4 | 0 | 24 |
| 7 | 8/4 | 0 | 06.29 | 66 | 66/1 | 0 | 39.75 |
| 8 | 44/1 | 0 | 20.50 | 67 | 66/2 | 0 | 24 |
| 9 | 44/2 | 0 | 3.45 | 68 | 67/1 | 0 | 13 |
| 10 | 44/3 | 0 | 4.89 | 69 | 67/2 | 0 | 15 |
| 11 | 45/2 | 0 | 7.35 | 70 | 67/3 | 0 | 25 |
| 12 | 46/1 | 0 | 22.52 | 71 | 67/4 | 0 | 29 |
| 13 | 46/2 | 0 | 0.0018 | 72 | 68 | 1 | 24 |
| 14 | 46/3 | 0 | 0.0012 | 73 | 78/2 | 1 | 14 |
| 15 | 47/1 | 0 | 36 | 74 | 78/3 | 0 | 20 |
| 16 | 47/2A | 0 | 10 | 75 | 78/4 | 1 | 07 |
| 17 | 47/2b | 1 | 14 | 76 | 78/5 | 1 | 10 |
| 18 | 48/1 | 0 | 10 | 77 | 78/6 | 0 | 14 |
| 19 | 48/2 | 0 | 17 | 78 | 78/7 | 0 | 07 |
| 20 | 48/3 | 0 | 36 | 79 | 78/8 | 0 | 06 |
| 21 | 48/4 | 0 | 34 | 80 | 78/9 | 0 | 04 |
| 22 | 48/5 | 0 | 19 | 81 | 78/10 | 0 | 05 |
| 23 | 48/6 | 0 | 05 | 82 | 79/1 | 0 | 06 |
| 24 | 49 | 1 | 39 | 83 | 79/2 | 0 | 27 |
| 25 | 50/1 | 0 | 26 | 84 | 79/4 | 3 | 09 |
| 26 | 50/2 | 0 | 04 | 85 | 79/5 | 0 | 10 |
| 27 | 50/3 | 0 | 04 | 86 | 83/4 | 0 | 11 |
| 28 | 50/4 | 0 | 07 | 87 | 83/5 | 0 | 08 |
| 29 | 50/5 | 0 | 36 | 88 | 83/6 | 0 | 16 |
| 30 | 50/6 | 0 | 18 | 89 | 83/7 | 0 | 13 |
| 31 | 50/7 | 0 | 09 | 90 | 5 | 5 | 00 |
| 32 | 50/8 | 0 | 22 | 91 | 7/1 | 1 | 12 |
| 33 | 50/9 | 0 | 02 | 92 | 8/1a | 0 | 11 |
| 34 | 51/1 | 0 | 39 | 93 | 8/1b | 0 | 15 |
| 35 | 51/2 | 1 | 20 | 94 | 8/2a | 0 | 16 |
| 36 | 51/3 | 0 | 24 | 95 | 8/2b | 0 | 06 |
| 37 | 52 | 0 | 10.5 | 96 | 8/2c | 0 | 08 |
| 38 | 53 | 1 | 07 | 97 | 9/1a | 3 | 02 |
| 39 | 54/1a | 0 | 12.5 | 98 | 9/1b | 0 | 34 |
| 40 | 54/1b | 0 | 19 | 99 | 9/2 | 0 | 37 |
| 41 | 55/1 | 0 | 26 | 100 | 10 | 7 | 03 |
| 42 | 55/2 | 0 | 5 | 101 | 11/1 | 0 | 01 |
| 43 | 55/3 | 0 | 07 | 102 | 11/3 | 0 | 05 |
| 44 | 55/4 | 1 | 00 | 103 | 12/1 | 2 | 08.35 |
| 45 | 56/1 | 0 | 28 | 104 | 12/2a | 3 | 07 |
| 46 | 56/2 | 0 | 16 | 105 | 12/2b | 0 | 02 |
| 47 | 57/1 | 0 | 12 | 106 | 62 | 0 | 28 |
| 48 | 57/1 | 0 | 12 | 107 | 63/2 | 6 | 28 |
| 49 | 57/2 | 0 | 20 | 108 | 63/3 | 1 | 10 |
| 50 | 57/3 | 0 | 20 | 109 | 78/5 | 0 | 35 |
| 51 | 58/1 | 1 | 01 | 110 | 52 | 0 | 10.5 |
| 52 | 58/2 | 0 | 29 | 111 | 54/2 | 0 | 30 |
| 53 | 59 | 1 | 09 | 112 | 55/1 | 0 | 25 |
| 54 | 60/1 | 0 | 22 | 113 | 66/2 | 0 | 29 |
| 55 | 60/2 | 0 | 16 | 114 | 79/1 | 0 | 22 |
| 56 | 61 | 1 | 24 | 115 | 79/3 | 0 | 14 |
| 57 | 62 | 1 | 00 | 116 | 83/5 | 0 | 08 |
| 58 | 63 | 0 | 24 | 117 | 83/6 | 0 | 27 |
| 59 | 64/1 | 1 | 38 | **Grand Total** | | **92** | **0-33** |

Bangalore
Dated : 24/07/2021

Sd/- **PRAKASH.M.H,** Advocate


## ಆಗಸ್ಟ್ 5ರಿಂದ ನೇರ ಸಂದರ್ಶನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಂಚೆ ಜೀವ ವಿಮಾ ಪ್ರತಿನಿಧಿಗಳ ನೇರ ಸಂದರ್ಶನ ಆಗಸ್ಟ್ 5ರಿಂದ 7ರವರೆಗೆ ಬೆಳಿಗ್ಗೆ 10.30ರಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ.

ಆಸಕ್ತರು ಎಸ್ಸೆಸ್ಸೆಲ್ಸಿ ಅಂಕಪಟ್ಟಿ, ವಿಳಾಸ ದಾಖಲೆ, ಮೂರು ಭಾವಚಿತ್ರಗಳೊಂದಿಗೆ ಸಂದರ್ಶನದಲ್ಲಿ ಭಾಗವಹಿಸುವಂತೆ ಅಂಚೆ ಇಲಾಖೆ ಪ್ರಕಟಣೆ ತಿಳಿಸಿದೆ.

**ವಿಳಾಸ:** ಮುಖ್ಯ ಅಂಚೆ ಪಾಲಕರ ಕಚೇರಿ, ಜಿಪಿಒ ಕಟ್ಟಡ, ಬೆಂಗಳೂರು

**ಸಂಪರ್ಕ:** 9901354022, 080–22850002


## PUBLIC NOTICE

**M/s. Godrej Properties Limited.,**
**Level 10, Prestige Obelisk**
**Kasturba Road, Bengaluru- 560001**

State Level Environment Impact Assessment Authority, Bangalore, Karnataka State, (Constituted by Ministry of Environment Clearance and Forest, Government of India), have accorded Environment clearance for proposed **Residential Development Project at Sy. No. 77,175/1, 175/2A, 175/2B, 176/2A, 176/2B and 177 of Kodathi Village, Varthur Hobli, Bangalore East Taluk, Bangalore Urban District, Vide Letter No. SEIAA: 150: CON: 2020 Dated: 28th June 2021**. The Copies of clearance letter are available with Karnataka State Pollution Control Board, Bangaluru and may also be seen on the website of Karnataka State Forest, Environment and Ecology Department. **http://www.seiaa.kar,nic.in.**



## ರಕ್ಷಣಾ ಖಾತೆಗಳ ಪ್ರಧಾನ ನಿಯಂತ್ರಕರು

ಸಂ. 107, ಲೋವರ್ ಅಗರಮ್ ರಸ್ತೆ, ಬೆಂಗಳೂರು–560 007
ಫೋನ್ ನಂ. 29710474, 29710475
ಫ್ಯಾಕ್ಸ್ ನಂ. 29710132

150 YEARS OF CELEBRATING THE MAHATMA

ನಂ.: ಎಎನ್/1/053/ಕ್ಯಾಂಟೀನ್ ಅಟೆಂಡಂಟ್/2021 ದಿನಾಂಕ: 01/07/2021

**ಪ್ರಕಟಣೆ**

**ರಕ್ಷಣಾ ಖಾತೆಗಳ ಪ್ರಧಾನ ನಿಯಂತ್ರಕರು, ಬೆಂಗಳೂರು ಇವರಲ್ಲಿ ಕ್ಯಾಂಟೀನ್ ಅಟೆಂಡಂಟ್ ನೇಮಕಾತಿ**

ರಕ್ಷಣಾ ಸಚಿವಾಲಯ [ಹಣಕಾಸು] ಅಡಿಯಲ್ಲಿನ ರಕ್ಷಣಾ ಖಾತೆಗಳ ಪ್ರಧಾನ ನಿಯಂತ್ರಕರು, ಬೆಂಗಳೂರು ಇವರು ಕೆಳಕಂಡ ವಿವರಗಳ ಪ್ರಕಾರ, ಕ್ಯಾಂಟೀನ್ ವಿಭಾಗದಲ್ಲಿ ಕ್ಯಾಂಟೀನ್ ಅಟೆಂಡಂಟ್, ಸೆಂಟ್ರಲ್ ಸರ್ವೀಸಸ್, ಗ್ರೂಪ್ 'ಸಿ', ನಾನ್ ಗೆಜೆಟೆಡ್, ನಾನ್–ಮಿನಿಸ್ಟರಿಯಲ್, ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ:

| ಹುದ್ದೆಯ ಹೆಸರು | ಖಾಲಿ ಹುದ್ದೆಗಳು | | | | ವಯಸ್ಸು | ವೇತನ ಶ್ರೇಣಿ ಮತ್ತು ಗ್ರೇಡ್ ಪೇ/ಪೇ ಮ್ಯಾಟ್ರಿಕ್ಸ್ | ಶೈಕ್ಷಣಿಕ ವಿದ್ಯಾರ್ಹತೆ |
|---|---|---|---|---|---|---|---|
| | ಎಸ್‌ಟಿ | ಒಬಿಸಿ | ಇಡಬ್ಲ್ಯುಎಸ್ | ಷರಾ | | | |
| ಕ್ಯಾಂಟೀನ್ ಅಟೆಂಡಂಟ್ | 01 | 01 | 01 | ಮಾಜಿ ಯೋಧರಿಗೆ ಸಮನಾಂತರ ಮೀಸಲಾತಿ ಅನ್ವಯವಾಗುತ್ತದೆ | 18 ರಿಂದ 25 ವರ್ಷ | 6ನೇ ಸಿಪಿಸಿ ವೇತನ ಶ್ರೇಣಿ–1 [ರೂ. 5200–20200] + ಗ್ರೇಡ್ ಪೇ ರೂ. 1800 [7ನೇ ಸಿಪಿಸಿ ಬಳಿಕದ ಪರಿಷ್ಕೃತ ಪೇ ಸ್ಕೇಲ್: ರೂ. 18,000/– ಪೇ ಮ್ಯಾಟ್ರಿಕ್ಸ್ ಲೆವೆಲ್–1] | 10ನೇ ತರಗತಿ ಉತ್ತೀರ್ಣ ಅಥವಾ ಯಾವುದೇ ಮಾನ್ಯತೆ ಪಡೆದಿರುವ ಮಂಡಳಿಯಿಂದ ಪಡೆದಿರುವ ತತ್ಸಮಾನ ಅರ್ಹತೆ |

ಸಂಪೂರ್ಣ ವಿವರಣೆಯುಳ್ಳ ಜಾಹೀರಾತನ್ನು ಪರಿಶೀಲಿಸಬಯಸುವ ಅಭ್ಯರ್ಥಿಗಳು, ಪಿಸಿಡಿಎ ಬೆಂಗಳೂರು ರವರ **pcdablr.gov.in** ವೆಬ್‌ಸೈಟ್ ಪರಿಶೀಲಿಸಬೇಕೆಂದು ಸೂಚಿಸಲಾಗಿದೆ. ಸದರಿ ಪ್ರಕಟಣೆಯು ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 60 ದಿನಗಳೊಳಗೆ ಪಿಸಿಡಿಎ, ಬೆಂಗಳೂರು ವಿಳಾಸದಲ್ಲಿ ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕವಾಗಿರುತ್ತದೆ. ಪಿಸಿಡಿಎ, ಬೆಂಗಳೂರು ಇವರು ಯಾವುದೇ ಕಾರಣ ನೀಡದೆಯೆ, ನೇಮಕಾತಿಯ ಖಾಲಿ ಹುದ್ದೆಗಳ ಸಂಖ್ಯೆಯನ್ನು ಬದಲಾಯಿಸುವ (ಹೆಚ್ಚಿಸುವ ಅಥವಾ ಕಡಿತಗೊಳಿಸುವ) ಅಥವಾ ರದ್ದುಪಡಿಸುವ ಅಥವಾ ಮುಂದೂಡುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/– ವಿ.ಎಸ್. ಮಂಜುಳಾ
ಎಸ್‌ಎಒ (ಎಎನ್)

davp 10501/11/0002/2122



## ರಾಷ್ಟ್ರೀಯ ಕ್ರೀಡಾ ವಿಶ್ವವಿದ್ಯಾಲಯ, ಇಂಫಾಲ, ಮಣಿಪುರ

(ಕೇಂದ್ರಿಯ ವಿಶ್ವವಿದ್ಯಾಲಯ)
(ಭಾರತ ಸರ್ಕಾರ, ಯುವಜನ ಕ್ರೀಡೆ ಮತ್ತು ವ್ಯವಹಾರಗಳ ಸಚಿವಾಲಯ)

ನಂ.ಎಫ್.20.ಎನ್‌ಎಸ್‌ಯು/ಎಡಿಎಂಎನ್‌ಎಸ್/20/21 ದಿನಾಂಕ:21/07/2021

**ಪ್ರವೇಶಾತಿ ಪ್ರಕಟಣೆ 2021–22**

ರಾಷ್ಟ್ರೀಯ ಕ್ರೀಡಾ ವಿಶ್ವವಿದ್ಯಾಲಯ ಇವರು, 2021–22ನೇ ಸಾಲಿನ ಕೆಳಕಂಡ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲು ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

**ಲಭ್ಯವಿರುವ ಕೋರ್ಸ್‌ಗಳು**

| ಲೆವೆಲ್ | ಕಾರ್ಯಕ್ರಮದ ಹೆಸರು | ಪದವಿ | ಅವಧಿ | |
|---|---|---|---|---|
| | | | ವರ್ಷ | ಸೆಮಿಸ್ಟರ್ |
| ಪದವಿಧರರು | ಕ್ರೀಡಾ ತರಬೇತಿ ವಿಜ್ಞಾನ ವಿಷಯದಲ್ಲಿ ಪದವಿ | ಬಿ.ಎಸ್ಸಿ (ಸ್ಪೋರ್ಟ್ಸ್ ಕೋಚಿಂಗ್) | 4 | 8 |
| | ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳ ಪದವಿ | ಬಿಪಿಇಎಸ್ | 3 | 6 |
| ಸ್ನಾತಕೋತ್ತರ ಪದವೀಧರರು | ಕ್ರೀಡಾ ತರಬೇತಿ ವಿಷಯದಲ್ಲಿ ಸ್ನಾತಕೋತ್ತರ ಪದವಿ | ಎಂ.ಎಸ್ಸಿ (ಸ್ಪೋರ್ಟ್ಸ್ ಕೋಚಿಂಗ್) | 2 | 4 |
| | ಕ್ರೀಡಾ ಮನೋವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಕಲಾಪದವಿ | ಎಂ.ಎ (ಸ್ಪೋರ್ಟ್ಸ್ ಸೈಕಾಲಜಿ) | 2 | 4 |
| | ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಷಯದಲ್ಲಿ ಸ್ನಾತಕೋತ್ತರ ಪದವಿ | ಎಂಪಿಇಎಸ್ | 2 | 4 |

ಸದರಿ ಕೋರ್ಸ್‌ಗಳಿಗೆ, ಅಭ್ಯರ್ಥಿಯ ಲಿಖಿತ ಪ್ರವೇಶಾತಿ (ಎಂಸಿಕ್ಯುಎಸ್) ಪರೀಕ್ಷೆ, ದೈಹಿಕ ಕ್ಷಮತೆ ಪರೀಕ್ಷೆ, ವಿವಾ ವೊಸ್ ಮತ್ತು ಕ್ರೀಡಾ ಸಾಧನೆಗಳ ಆಧಾರದ ಮೇರೆಗೆ ಪ್ರವೇಶ ನೀಡಲಾಗುತ್ತದೆ. ಲಿಖಿತ ಪರೀಕ್ಷೆಯನ್ನು (ಎಂಸಿಕ್ಯುಎಸ್) ಇಂಟರ್‌ನೆಟ್ ಆಧಾರಿತ ಪ್ರಾಕ್ಟರ್ಡ್ ಆನ್‌ಲೈನ್ ಪರೀಕ್ಷೆ ಮುಖಾಂತರ ಕೈಗೊಳ್ಳಲಾಗುತ್ತದೆ.

ಎನ್‌ಟಿಎ'ರವರ **https://nsu.nta.ac.in** ವೆಬ್‌ಸೈಟ್ ಮುಖಾಂತರ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು 28 ಜುಲೈ 2021 ರಿಂದ 19 ಆಗಸ್ಟ್ 2021 ರವರೆಗೆ ಅವಕಾಶ ಇರುತ್ತದೆ.

ಅರ್ಹತಾ ಮಾನದಂಡ, ವಿವರಣಾ ಪತ್ರಿಕೆ, ಅರ್ಜಿ ಸಲ್ಲಿಸುವ ವಿಧಾನ, ಶುಲ್ಕ, ಪಾವತಿ ವಿವರಗಳು, ಪರೀಕ್ಷಾ ಕೇಂದ್ರ, ಪ್ರವೇಶಾತಿ ಸಮಯಸೂಚಿ ಇತ್ಯಾದಿಗಳ ಕುರಿತಂತೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ವಿಶ್ವವಿದ್ಯಾಲಯದ www.nsu.ac.in ವೆಬ್‌ಸೈಟ್‌ನ್ನು ದಯವಿಟ್ಟು ಪರಿಶೀಲಿಸಿರಿ.

ಪರೀಕ್ಷಾ ಫಲಿತಾಂಶಗಳ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು ಕೂಡ ಅರ್ಜಿ ಸಲ್ಲಿಸಬಹುದಾಗಿದೆ. ಅದಾಗ್ಯೂ, ಇಂತಹ ಅಭ್ಯರ್ಥಿಗಳ ಪ್ರವೇಶಾತಿಯು ತಾತ್ಕಾಲಿಕವಾಗಿ ಅವರ ಪರೀಕ್ಷಾ ಫಲಿತಾಂಶ ಹಾಗೂ ಸಂಬಂಧಿತ ದಾಖಲಾತಿಗಳ ಸಲ್ಲಿಕೆಯ ನಿಬಂಧನೆಗಳಿಗೆ ಒಳಪಡುತ್ತದೆ.

ಭೌತಿಕ ಪರೀಕ್ಷೆ/ವಿವಾ–ವೊಸ್ ಕೈಗೊಳ್ಳುವ ದಿನಾಂಕವನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುತ್ತದೆ.

ಪ್ರಸ್ತುತ ಕೊರೊನಾ ಸಂದಿಗ್ಧ ಪರಿಸ್ಥಿತಿಯ ಕಾರಣದಿಂದಾಗಿ ಸದರಿ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆ ಕುರಿತಾದ ಪ್ರಚಲಿತ ಮಾಹಿತಿ ಮತ್ತು ಘೋಷಣೆ ಹಾಗೂ ಇನ್ನಿತರ ಸೂಚನೆಗಳ ಬಗ್ಗೆ ನಿರಂತರ ಮಾಹಿತಿ ಪಡೆಯುತ್ತಿರಲು, ಅಭ್ಯರ್ಥಿಗಳಿಗೆ ನಿಯಮಿತವಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ಪರಿಶೀಲಿಸಬೇಕೆಂದು ಸೂಚಿಸಲಾಗಿದೆ.

davp 47116/11/0001/2122 ರಜಿಸ್ಟ್ರಾರ್

# ವೇದವ್ಯಾಸ: ಭಾರತೀಯ ಸಂಸ್ಕೃತಿಯ ಮಹಾಗುರು

• ಎಸ್. ಸೂರ್ಯಪ್ರಕಾಶ ಪಂಡಿತ್

ವ್ಯಾಸಾಯ ವಿಷ್ಣುರೂಪಾಯ
ವ್ಯಾಸರೂಪಾಯ ವಿಷ್ಣವೇ
ನಮೋ ವೈ ಬ್ರಹ್ಮನಿಧಯೇ
ವಾಸಿಷ್ಠಾಯ ನಮೋ ನಮಃ

ಭಗವಾನ್ ವೇದವ್ಯಾಸರನ್ನು ಕುರಿತು ಪರಂಪರೆ ಸಲ್ಲಿಸುತ್ತಿರುವ ನಮನ ಇದು. ವಿಷ್ಣುವನ್ನೂ ವ್ಯಾಸರನ್ನೂ ಇಲ್ಲಿ ಅಭೇದವಾಗಿ ನೋಡಲಾಗಿದೆ. ವಿಷ್ಣು ಎಂದರೆ ಸರ್ವವ್ಯಾಪಕನಾದವನು ಎಂದು ಅರ್ಥ. ವೇದವ್ಯಾಸರೂ ಹೀಗೆ ಸರ್ವವ್ಯಾಪಕತೆಯನ್ನು ಪಡೆದವರು ಎಂಬುದು ಪರಂಪರೆಯ ಒಕ್ಕಣೆ. ಪ್ರತಿವರ್ಷ ಆಷಾಢ ಶುಕ್ಲ ಹುಣ್ಣಿಮೆಯಂದು ವ್ಯಾಸರ ಜಯಂತಿಯನ್ನು ಆಚರಿಸುತ್ತೇವೆ. ಇದೇ ವ್ಯಾಸಪೂರ್ಣಿಮಾ. ಇದನ್ನು ಗುರು ಪೂರ್ಣಿಮಾ ಎಂದೂ ಆಚರಿಸಲಾಗುತ್ತದೆ.

ಭಾರತೀಯ ಸಂಸ್ಕೃತಿಗೆ ವ್ಯಾಸರ ಕೊಡುಗೆ ತುಂಬ ಮಹತ್ವವಾದುದು. ಭಾರತಕ್ಕೆ ಮಹಾಭಾರತವನ್ನು ಕೊಟ್ಟವರು ಅವರು; ಜೊತೆಗೆ ವೇದ ಗಳನ್ನು ವಿಂಗಡಿಸಿದರು; ಹದಿನೆಂಟು ಪುರಾಣಗಳನ್ನು ರಚಿಸಿದರು; ಉಪನಿಷತ್ತುಗಳ ಸಾರವಾದ ಬ್ರಹ್ಮಸೂತ್ರಗಳನ್ನೂ ರಚಿಸಿದರು. ಹೀಗೆ ಭಾರತೀಯ ಪ್ರಜ್ಞಾವಾಹಿನಿಗೆ, ವೈಚಾರಿಕ ನಿಲವಿಗೆ, ಸಾಂಸ್ಕೃತಿಕ ಶ್ರೀಮಂತಿಕೆಗೆ, ಸಾಹಿತ್ಯಿಕ ವೈಭವಕ್ಕೆ ವ್ಯಾಸರ ಕೊಡುಗೆ ಅಪಾರ. ಆದುದರಿಂದಲೇ ಅವರು ಭಾರತೀಯ ಸಂಸ್ಕೃತಿಗೇ ಗುರುವಾದರು. ವ್ಯಾಸರಲ್ಲಿ ನಮ್ಮ ಎಲ್ಲ ಗುರುಪರಂಪರೆಯನ್ನೂ ಕಾಣಲಾಗುತ್ತದೆ.

ವೇದವ್ಯಾಸ

ಇಂದು ಗುರುಪೂರ್ಣಿಮಾ

ಬುದ್ಧ

ವ್ಯಾಸರ ಹಿರಿಮೆಯನ್ನು ಎತ್ತಿ ಹಿಡಿಯಲು ಮಹಾಭಾರತ ಒಂದೇ ಸಾಕು; ಗಾತ್ರದಲ್ಲಿಯಾಗಲೀ ಗುಣದಲ್ಲಿಯಾಗಲೀ ಇದಕ್ಕೆ ಸಾಟಿಯಾದ ಇನ್ನೊಂದು ಗ್ರಂಥ ಜಗತ್ತಿನಲ್ಲಿಯೇ ಇಲ್ಲ ಎಂದು ವಿಶ್ವದ ಹಲವರು ವಿದ್ವಾಂಸರು ಘೋಷಿಸಿದ್ದಾರೆ. 'ಮಹತ್ತ್ವಾದ್ ಭಾರವತ್ತ್ವಾಚ್ಚ ಮಹಾಭಾರತಮುಚ್ಯತೇ' – ಮಹತ್ತ್ವದಿಂದಲೂ ಗಾತ್ರದಿಂದಲೂ ತೂಕವಾಗಿರುವುದರಿಂದಲೇ ಮಹಾಭಾರತ ಎಂಬ ಹೆಸರು ಇದ್ದಕ್ಕೆ ಸಂದಿರುವುದು. ಮಹಾಭಾರತದ ಬಗ್ಗೆ ಇನ್ನೊಂದು ಮಾತಿದೆ:

ಧರ್ಮೇ ಚಾರ್ಥೇ ಚ ಕಾಮೇ ಚ
ಮೋಕ್ಷೇ ಚ ಭರತರ್ಷಭ
ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ
ತತ್ ಕ್ವಚಿತ್

'ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ವಿಷಯವಾಗಿ ಮಹಾಭಾರತದಲ್ಲಿ ಏನೆಲ್ಲ ಉಂಟೋ ಅವೆಲ್ಲವೂ ಬೇರೆಡೆಯಲ್ಲೂ ಇವೆ; ಇದರಲ್ಲಿ ಏನೇನಿಲ್ಲವೋ ಅವು ಇನ್ನೆಲ್ಲಿಯೂ ಇರಲು ಸಾಧ್ಯವಿಲ್ಲ' ಎಂಬುದು ಈ ಮಾತಿನ ಸಾರಾಂಶ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನೇ 'ಪುರುಷಾರ್ಥ' ಎಂದು ಕರೆದಿರುವುದು. ಇದೇ ನಮ್ಮೆಲ್ಲರ ಜೀವನವನ್ನು ಆವರಿಸಿರುವ ಮಹಾತತ್ತ್ವ. ಇದರ ಬಗ್ಗೆ ಮಹಾಭಾರತ ಅತ್ಯಂತ ಸಮಗ್ರವಾದ ಚರ್ಚೆಯನ್ನು ನಡೆಸಿದೆ. ಹೀಗೆ ನಮ್ಮ ಜೀವನಕ್ಕೆ ಬೇಕಾದ ವಿವೇಕವನ್ನು ಇದು ತಿಳಿಸಿಕೊಡುತ್ತದೆ; ಜೀವನಕ್ಕೆ ಬೇಕಾದ ಬೆಳಕನ್ನು ನೀಡುತ್ತದೆ. ಇಂಥ ಮಹಾಕೃತಿಯನ್ನು ನೀಡಿರುವ ವ್ಯಾಸಮಹರ್ಷಿಗಳ ಸ್ಮರಣೆಯಲ್ಲಿ ಗುರುಪೂರ್ಣಿಮಾ ಆಚರಣೆ ನಡೆಯುತ್ತಿರುವಂಥದ್ದು ಅತ್ಯಂತ ಉಚಿತವಾಗಿದೆ.

ಮಹಾಭಾರತ ಕಟ್ಟಿಕೊಡುವ ಜೀವನಮೀಮಾಂಸೆಯಷ್ಟು ಆಳ-ವಿಸ್ತಾರಗಳನ್ನು ಇನ್ನೊಂದು ಕೃತಿ ಕಟ್ಟಿಕೊಡದು ಎಂಬುದು ಉತ್ಪ್ರೇಕ್ಷೆಯ ಮಾತಾಗದು. ಮಹಾಭಾರತದ ಭಾಗವೇ ಆಗಿರುವ ಭಗವದ್ಗೀತೆಯ ಅಪೂರ್ವತೆಯನ್ನು ಕಂಡುಕೊಂಡರೂ ಸಾಕು, ಮಹಾಭಾರತದ ಮಹಿಮೆ ಅರಿವಿಗೆ ಬರುತ್ತದೆ. ಭಗವದ್ಗೀತೆಯಲ್ಲಿರುವಂಥ ಪುರುಷಾರ್ಥಗಳ ಜಿಜ್ಞಾಸೆಯನ್ನು ಮಹಾಭಾರತದುದ್ದಕ್ಕೂ ಕಾಣಬಹುದು. 'ಸೂಕ್ಷ್ಮಾ ಗತಿರ್ಹಿ ಧರ್ಮಸ್ಯ ಬಹು ಶಾಖಾ ಹ್ಯನಂತಿಕಾ'. ಇದು ಧರ್ಮವನ್ನು ಕುರಿತು ಮಹಾಭಾರತದ ಮಾತು; ಧರ್ಮದ (ಧರ್ಮ, ಇಲ್ಲಿ 'ರಿಲಿಜನ್' ಅಲ್ಲ) ನಡೆಯು ಅತ್ಯಂತ ಸೂಕ್ಷ್ಮವಾಗಿದೆ; ಮಾತ್ರವಲ್ಲ, ಅದರ ಹರಹು ಕೂಡ ವಿಸ್ತಾರವಾಗಿದೆ, ಅದು ಅನಂತವೂ ಆಗಿದೆ – ಇದು ಈ ಮಾತಿನ ತಾತ್ಪರ್ಯ. ಹೀಗೆ ಧರ್ಮದ ಹಲವು ಆಯಾಮಗಳನ್ನು ಮಹಾಭಾರತ ಅತ್ಯಂತ ಸೂಕ್ಷ್ಮವಾಗಿಯೂ ಗಹನವಾಗಿಯೂ, ಮನಮುಟ್ಟುವಂತೆ ವಿಶ್ಲೇಷಿಸುತ್ತದೆ. ಇಂಥ ಮಹಾಕೃತಿಯ ಕರ್ತೃವಾದ ಮಹರ್ಷಿ ವೇದವ್ಯಾಸರು ನಮ್ಮ ಸಂಸ್ಕೃತಿಗೆ ಗುರುವಲ್ಲದೆ ಮತ್ತೇನು?

## ಚಾತುರ್ಮಾಸ್ಯವ್ರತ

ಆಷಾಢ ಶುದ್ಧ ಪೂರ್ಣಿಮೆಯಂದು ಚಾತುರ್ಮಾಸ್ಯವ್ರತವೂ ಆರಂಭವಾಗುತ್ತದೆ; ನಾಲ್ಕು ತಿಂಗಳ ವ್ರತ – ಎಂಬುದು ಇದರ ತಾತ್ಪರ್ಯ. ಇದನ್ನು ಸನ್ಯಾಸಿಗಳೂ ಸಂಸಾರಿಗಳೂ ಆಚರಿಸುತ್ತಾರೆ. ಮಹಾವಿಷ್ಣುವು ಇಂದಿನಿಂದ ನಾಲ್ಕು ತಿಂಗಳು ಯೋಗನಿದ್ರೆಯಲ್ಲಿರುತ್ತಾನೆ ಎಂಬ ಎಣಿಕೆಯೂ ಉಂಟು.

ಸನ್ಯಾಸಿಗಳು ಎಂದರೆ ಪರಿವ್ರಾಜಕರು; ಎಂದರೆ ಲೌಕಿಕವಾದ ಸುಖ–ಭೋಗಗಳನ್ನು ತೊರೆದು ನಿರಂತರ ಸಂಚಾರದಲಲ್ಲಿರುವವರು. ಆದರೆ ಈ ಸಮಯ ಮಳೆಗಾಲವಾದ್ದರಿಂದ ಅವರ ಸಂಚಾರಕ್ಕೆ ತೊಂದರೆ ಒದಗುತ್ತದೆ; ಮಾತ್ರವಲ್ಲ, ಅವರ ಸಂಚಾರದಿಂದ ನಿಸರ್ಗದಲ್ಲಿರುವ ಹಲವು ಜಂತುಗಳಿಗೂ ತೊಂದರೆ ಎದುರಾಗುವ ಸಂಭವ ಉಂಟು. ಹೀಗಾಗಿ ಈ ಸಮಯದಲ್ಲಿ ಸನ್ಯಾಸಿಗಳಿಗೆ, ಯತಿಗಳಿಗೆ ಸಂಚಾರವನ್ನು ಶಾಸ್ತ್ರಗಳು ನಿಷೇಧಿಸಿವೆ. ಇಷ್ಟು ಮಾತ್ರವಲ್ಲದೆ, ಸನ್ಯಾಸಿಗಳಿಗೆ ಅಧ್ಯಯನಕ್ಕೂ ಮನನಕ್ಕೂ ಅವಕಾಶವನ್ನೂ ಈ ಸಮಯ ಒದಗಿಸುತ್ತದೆ. ಅಂಥವರಿಂದ ಶ್ರದ್ಧಾಳುಗಳಿಗೆ ಧರ್ಮೋಪದೇಶವನ್ನು ಕೇಳುವ ಅವಕಾಶವೂ ಸಿಕ್ಕಂತಾಗುತ್ತದೆ. (ಕೆಲವರು ನಾಲ್ಕು ತಿಂಗಳನ್ನು ನಾಲ್ಕು ಪಕ್ಷಗಳಂತೆ ಎಣಿಸುವುದುಂಟು.) ಚಾತುರ್ಮಾಸ್ಯವ್ರತದ ಆಚರಣೆಯನ್ನು ಕೇವಲ ವೈದಿಕಮಾರ್ಗದ ಸನ್ಯಾಸಿಗಳು ಮಾತ್ರವೇ ಆಚರಿಸುವುದಿಲ್ಲ, ಜೈನ ಮತ್ತು ಬೌದ್ಧರಲ್ಲೂ ಇದರ ಆಚರಣೆ ಉಂಟು. ಸಂಬೋಧಿಯನ್ನು ಪಡೆದ ಬಳಿಕ ಬುದ್ಧ ಭಗವಂತನು ಮೊದಲ ಧರ್ಮಪ್ರವಚನ ನೀಡಿದ್ದು ಇದೇ ದಿನ. ಈ ಹಿನ್ನೆಲೆಯಲ್ಲೂ ಗುರುಪೂರ್ಣಿಮಾದ ಆಚರಣೆಗೆ ವಿಶೇಷತೆಯುಂಟು.

ಸಂಸಾರಿಗಳು ಚಾತುರ್ಮಾಸ್ಯದಲ್ಲಿ ಸಾಧನೆಯ ಭಾಗವಾಗಿ ಹಲವು ರೀತಿಯ ಆಚರಣೆಗಳಲ್ಲಿ ತೊಡಗುತ್ತಾರೆ. ಆಹಾರಸೇವನೆಯಲ್ಲಿ ಕೆಲವೊಂದು ತರಕಾರಿಗಳನ್ನೂ ಧಾನ್ಯಗಳನ್ನೂ ಈ ಕಾಲದಲ್ಲಿ ತ್ಯಾಗಮಾಡುತ್ತಾರೆ.

ಇಂದು ಸನ್ಯಾಸದ ವ್ಯಾಪ್ತಿಯನ್ನು ಹಲವರು ಸಂಕುಚಿತಗೊಳಿಸುತ್ತಿರುವುದು ಖೇದಕರ. ಮತ್ತೊಮ್ಮೆ ನಮ್ಮ ದೇಶದಲ್ಲಿ ಸನ್ಯಾಸದ ಹಿರಿಮೆ–ಗರಿಮೆಗಳು ಅದರ ದಿಟವಾದ ನೆಲೆಯಲ್ಲಿ ಸ್ಥಾಪನೆಯಾಗಲಿ ಎಂಬುದು ಎಲ್ಲ ಶ್ರದ್ಧಾಳುಗಳ ಪ್ರಾರ್ಥನೆ.

## ಸುದ್ದಿ 2 ನಿಮಿಷ

### 'ಬಿಜೆಪಿಗೆ ಜನರ ಸಂಕಷ್ಟ ನಗಣ್ಯ ಸಿ.ಎಂ ಬದಲಾವಣೆಯೇ ಮುಖ್ಯ'

ಬೆಂಗಳೂರು: ಕೋವಿಡ್ ಬಿಕ್ಕಟ್ಟು, ಮಳೆ ಅನಾಹುತದ ನಡುವೆಯೇ ಮುಖ್ಯಮಂತ್ರಿ ಬದಲಾವಣೆಗೆ ಬಿಜೆಪಿ ಪ್ರಯತ್ನಿಸುತ್ತಿದೆ. ಇಂತಹ ಸಂಕಷ್ಟದ ಸ್ಥಿತಿಯಲ್ಲಿ ಸರ್ಕಾರದಲ್ಲಿ ಗೊಂದಲ ಸೃಷ್ಟಿಸಿರುವ ಬಿಜೆಪಿ, ಜನರ ಸಮಸ್ಯೆಗಳನ್ನು ತನಗೆ ನಗಣ್ಯ ಎಂಬುದಾಗಿ ತೋರಿಸುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಪ್ರತಿ ಬಾರಿಯೂ ರಾಜ್ಯದಲ್ಲಿ ಮಳೆ, ಪ್ರವಾಹದಂತಹ ಸ್ಥಿತಿ ಇರುವಾಗ ಬಿಜೆಪಿ ನಾಯಕರು ಗೊಂದಲ ಸೃಷ್ಟಿಸುತ್ತಾರೆ. ಹಿಂದೆಯೂ ಹೀಗೆಯೇ ಆಗಿತ್ತು. ಆಡಳಿತ ಪಕ್ಷವು ಜನರ ಸಮಸ್ಯೆಗಿಂತಲೂ ನಾಯಕತ್ವ ಬದಲಾವಣೆಗೇ ಆದ್ಯತೆ ನೀಡುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಠಾಧೀಶರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮೂಲಕ ಸಂದೇಶ ರವಾನೆಗೆ ಯತ್ನಿಸಿದ್ದಾರೆ. ಆ ಬಗ್ಗೆ ತಾವು ಲಘುವಾಗಿ ಮಾತನಾಡುವುದಿಲ್ಲ. ಮಠಾಧೀಶರ ವರ್ತನೆ ಸರಿಯೋ ಅಥವಾ ತಪ್ಪೋ ಎಂಬುದನ್ನು ನಿರ್ಧರಿಸುವುದನ್ನು ಜನರ ವಿವೇಚನೆಗೆ ಬಿಡುವುದಾಗಿ ಹೇಳಿದರು.

**ಪಾದಯಾತ್ರೆಗೆ ಸಜ್ಜು:** ಮೇಕೆದಾಟು, ಮಹದಾಯಿ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಒತ್ತಾಯಿಸಿ ಜೆಡಿಎಸ್‌ನಿಂದ ಪಾದಯಾತ್ರೆ ನಡೆಸಲಾಗುವುದು. ಈ ಮೂರೂ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಇನ್ನೂ ಅಧಿಸೂಚನೆ ಹೊರಡಿಸಿಲ್ಲ. ಇದರಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಿರುವುದನ್ನು ಮನವರಿಕೆ ಮಾಡಲು ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು ಎಂದು ಕುಮಾರಸ್ವಾಮಿ ತಿಳಿಸಿದರು.



ಮೊದಲ ಹಂತದಲ್ಲಿ 26 ಜಿಲ್ಲೆಗಳ ಪಕ್ಷದ ಮುಖಂಡರ ಜತೆ ಸಭೆ ನಡೆಸಲಾಗಿದೆ. ಆಷಾಢ ಮಾಸ ಮುಗಿದ ಬಳಿಕ ಎರಡನೇ ಹಂತದ ಸಭೆಗಳನ್ನು ಆರಂಭಿಸಲಾಗುವುದು ಎಂದು ಹೇಳಿದರು.

### ರಿಸಲ್ಟ್ ಬಂದಾಯಿತು, ಇನ್ನು ಆ ಬಗ್ಗೆ ಮಾತನಾಡೊಲ್ಲ –ಯೋಗೇಶ್ವರ್

ಚಿಕ್ಕಬಳ್ಳಾಪುರ: 'ರಿಸಲ್ಟ್ (ಫಲಿತಾಂಶ) ಬಂದಾಯ್ತಲ್ಲ' –ಇದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬದಲಾವಣೆಗೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ನೀಡಿದ ಪ್ರತಿಕ್ರಿಯೆ.

ತಾಲ್ಲೂಕಿನ ನಂದಿಬೆಟ್ಟಕ್ಕೆ ರೋಪ್ ವೇ ಅಳವಡಿಸುವ ಸಂಬಂಧ ಸ್ಥಳ ಪರಿಶೀಲನೆಗೆ ಬಂದಿದ್ದ ಸಚಿವರು ಮುಖ್ಯಮಂತ್ರಿ ಬದಲಾವಣೆಯ ವಿದ್ಯಮಾನದ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದರು.

'ಮುಖ್ಯಮಂತ್ರಿ ಹಿರಿಯರಿದ್ದಾರೆ. ಆ ವಿಚಾರದ ಬಗ್ಗೆ ನಾನು ಮಾತನಾಡುವುದಿಲ್ಲ' ಎಂದು ಹೇಳಿದರು. ಪರೀಕ್ಷೆ ಬರೆದಿದ್ದೇನೆ ಎಂದು ನೀವು ಹೇಳಿದ್ದೀರಲ್ಲಾ ಎಂಬ ಪ್ರಶ್ನೆಗೆ 'ರಿಸಲ್ಟ್ (ಫಲಿತಾಂಶ) ಬಂದಾಯ್ತಲ್ಲ. ಹಿಂದೆ ನನ್ನ, ನಮ್ಮ ಜಿಲ್ಲೆಯ ಸಮಸ್ಯೆ, ನಮಗಾಗುತ್ತಿರುವ ತೊಂದರೆ ಬಗ್ಗೆ ಮಾತನಾಡಿದ್ದೆ' ಎಂದರು.

ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವಕಾಶವಾದಿ. ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲು ಯಡಿಯೂರಪ್ಪ ಅವರ ಮನೆಗೆ ಹೋಗುತ್ತಿದ್ದರು. ಅವರನ್ನು ದೂರವಿಡಿ ಎಂದು ನಾವು ಹೇಳುತ್ತಲೇ ಇದ್ದೆವು. ಈಗ ಯಡಿಯೂರಪ್ಪ ಅವರನ್ನೇ ದೂಷಿಸುತ್ತಿದ್ದಾರೆ ಎಂದು ಹೇಳಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್‌ಗೆ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು

# 'ಬಿಜೆಪಿ ದಲಿತ ಸಿ.ಎಂ ಆಯ್ಕೆ ಮಾಡಲಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರಾಜೀನಾಮೆ ನೀಡುವ ಸಾಧ್ಯತೆ ಇದ್ದು, ತೆರವಾಗುವ ಮುಖ್ಯಮಂತ್ರಿ ಸ್ಥಾನಕ್ಕೆ ಬಿಜೆಪಿ ದಲಿತ ನಾಯಕನನ್ನು ಆಯ್ಕೆ ಮಾಡಲಿ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರಿಗೆ ಸವಾಲು ಹಾಕಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಅವರ ಬದಲಾವಣೆ ಆಗುತ್ತದೆ ಎಂದು ನಾಲ್ಕು ತಿಂಗಳ ಹಿಂದೆಯೇ ಹೇಳಿದ್ದೆ. ಈಗ ಅದು ಖಚಿತವಾಗುತ್ತಿದೆ. ಆದರೆ, ಮುಂದಿನ ಮುಖ್ಯಮಂತ್ರಿ ಯಾರು ಎಂಬುದು ನನಗೆ ಗೊತ್ತಿಲ್ಲ' ಎಂದರು.

ಸಿದ್ದರಾಮಯ್ಯ

'ಯಾವುದೇ ಮಠಾಧೀಶರು ರಾಜಕೀಯದ ಬಗ್ಗೆ ಅಭಿಪ್ರಾಯ ಹೇಳಲಿ. ಆದರೆ ನೇರ ರಾಜಕಾರಣಕ್ಕೆ ಕೈ ಹಾಕಬಾರದು. ಜನರ ಅಭಿಪ್ರಾಯಕ್ಕೆ ಮಠಾಧೀಶರು ಮನ್ನಣೆ ನೀಡಲಿ' ಎಂದರು.

ಪೆಗಾಸಸ್ ಗೂಢಚರ್ಯೆ ಕುರಿತು ಪ್ರತಿಕ್ರಿಯಿಸಿ, 'ಫೋನ್ ಕದ್ದಾಲಿಕೆ ಇದೇ ಮೊದಲಲ್ಲ. 2019ರಲ್ಲಿ ನನ್ನ ಪಿಎ ವೆಂಕಟೇಶ್ ಫೋನ್ ಕದ್ದಾಲಿಸಲಾಗಿದೆ. ಕುಮಾರಸ್ವಾಮಿ, ಡಾ.ಜಿ. ಪರಮೇಶ್ವರ್ ಸೇರಿ ಹಲವರ ಫೋನ್ ಕದ್ದಾಲಿಕೆ ಮಾಡಿದ್ದಾರೆ. ಈ ಬಗ್ಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಿಂದ ತನಿಖೆ ನಡೆಸಬೇಕು' ಎಂದು ಅವರು ಒತ್ತಾಯಿಸಿದರು.

### 'ಅವನ್ಯಾರು ಹೇಳುವುದಕ್ಕೆ?'

ಚಾಮರಾಜನಗರ: ಬಿಜೆಪಿ ದಲಿತ ರನ್ನು ಸಿಎಂ ಮಾಡಲಿ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಸಂಸದ ವಿ.ಶ್ರೀನಿವಾಸ ಪ್ರಸಾದ್, 'ಅವನ್ಯಾರು ಹೇಳುವುದಕ್ಕೆ' ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ವಿರೋಧ ಪಕ್ಷದಲ್ಲಿರುವವರು ಈ ರೀತಿ ಹೇಳಿಕೆ ಕೊಡುವುದೇ? ಅವರು ಸಿ.ಎಂ ಆಗಿದ್ದಾಗ ಮುಂದಿನ ಬಾರಿಗೆ ದಲಿತರನ್ನು ಮುಖ್ಯಮಂತ್ರಿ ಮಾಡುತ್ತೇನೆ' ಎನ್ನುತ್ತಿದ್ದರು. ಆಮೇಲೆ ಮಾತು ಬದಲಿಸಿ, ನಾನೇ ಮುಂದಿನ ಮುಖ್ಯಮಂತ್ರಿ ಎಂದು ಅಂಬಾರಿ ಮೇಲೆ ಕುಳಿತುಕೊಂಡು ಬಂದರು' ಎಂದು ವ್ಯಂಗ್ಯವಾಡಿದರು.

ಶ್ರೀನಿವಾಸ ಪ್ರಸಾದ್

### ಎಷ್ಟು ದಲಿತರನ್ನು ಸಿ.ಎಂ ಮಾಡಿದ್ದೀರಿ?

ಚಿತ್ರದುರ್ಗ: 'ಸ್ವಾತಂತ್ರ್ಯ ಸಿಕ್ಕ ಬಳಿಕ ಹಲವು ವರ್ಷ ಅಧಿಕಾರ ನಡೆಸಿದ ಕಾಂಗ್ರೆಸ್ ಎಷ್ಟು ಮಂದಿ ದಲಿತರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದಲಿತರನ್ನು ಮುಖ್ಯಮಂತ್ರಿ ಮಾಡಲಿ' ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ತಿರುಗೇಟು ನೀಡಿದರು.

'ರಾಜ್ಯದ ದಲಿತ ನಾಯಕರನ್ನು ಮುಖ್ಯಮಂತ್ರಿ ಮಾಡಲು ಕಾಂಗ್ರೆಸ್‌ಗೆ ಈವರೆಗೆ ಸಾಧ್ಯವಾಗಿಲ್ಲ. ದಲಿತ ಸಮುದಾಯವನ್ನು ತುಳಿದಿದ್ದೇವೆ ಎಂಬುದನ್ನು ಕಾಂಗ್ರೆಸ್ ಒಪ್ಪಿಕೊಳ್ಳಬೇಕು. ಯೋಗ್ಯತೆ ಇಲ್ಲದ ಸಿದ್ದರಾಮಯ್ಯ ಅವರು ಬಿಜೆಪಿಗೆ ಸವಾಲು ಹಾಕುವ ನೈತಿಕತೆ ಉಳಿಸಿಕೊಂಡಿಲ್ಲ' ಎಂದು ಕಿಡಿಕಾರಿದರು.

'ಸಾಮಾಜಿಕ ನ್ಯಾಯದ ಸೂತ್ರದಡಿ ಧರ್ಮಸಿಂಗ್ ಅವರನ್ನು ಸಿ.ಎಂ ಮಾಡಿದರೂ ಉದ್ಧಾರ ಆಗಲು ಬಿಡಲಿಲ್ಲ. ಡಾ.ಜಿ. ಪರಮೇಶ್ವರ ಅವರನ್ನು ಸಿದ್ದರಾಮಯ್ಯ ಅವರೇ ಸೋಲಿಸಿದರು. ಮತ್ತೆ ಸಿ.ಎಂ ಆಗುವ ಕನಸು ಕಾಣುತ್ತಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ. ದಲಿತರನ್ನು ಮುಖ್ಯಮಂತ್ರಿ ಮಾಡುವುದಿಲ್ಲ' ಎಂದು ಹೇಳಿದರು.


ಕೆ.ಎಸ್. ಈಶ್ವರಪ್ಪ

'ರಾಷ್ಟ್ರಭಕ್ತಿ ಇರುವವರಿಗೆ ಬಿಜೆಪಿ ಹುದ್ದೆ ನೀಡುತ್ತದೇ ಹೊರತು ಜಾತಿ ಹುಡುಕುವುದಿಲ್ಲ. ದಲಿತ ಸಮುದಾಯದ ನಾಯಕರನ್ನು ರಾಷ್ಟ್ರಪತಿ ಮಾಡಿದ್ದೇವೆ. ಹಲವರನ್ನು ಮುಖ್ಯಮಂತ್ರಿ ಮಾಡಿದ್ದೇವೆ. ರಾಜ್ಯದ ರಾಜ್ಯಪಾಲರು ಕೂಡ ದಲಿತ ನಾಯಕ' ಎಂದು ತಿರುಗೇಟು ನೀಡಿದರು.

## 'ಒಪ್ಪಂದದ ಪ್ರಕಾರ ಬಿಎಸ್‌ವೈ ರಾಜೀನಾಮೆ ನೀಡಲಿದ್ದಾರೆ'

ಚಾಮರಾಜನಗರ: 'ಬಿಜೆಪಿ ಹೈಕಮಾಂಡ್ ಜೊತೆ ಆಗಿದ್ದ ಒಪ್ಪಂದದಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಈಗ ರಾಜೀನಾಮೆ ನೀಡಲು ಮುಂದಾಗಿದ್ದಾರೆ' ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಶುಕ್ರವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '75 ವರ್ಷ ಮೀರಿದವರು ಮುಖ್ಯ ಹುದ್ದೆಗಳಲ್ಲಿ ಇರಬಾರದು ಎಂಬುದು ಪಕ್ಷದ ನಿಲುವು. ಹಾಗಿದ್ದರೂ ಎರಡು ವರ್ಷ ಮುಖ್ಯಮಂತ್ರಿಯಾಗಲು ಅವಕಾಶ ಕೊಡುವುದಾಗಿ ಹೈಕಮಾಂಡ್ ಹೇಳಿತ್ತು. ಯಡಿಯೂರಪ್ಪನವರ ಮಾತು ಕೇಳಿದರೆ ಇದು ಸ್ಪಷ್ಟವಾಗುತ್ತದೆ' ಎಂದರು. 'ಸ್ವಾಮೀಜಿಗಳು ಸೂಪರ್ ಹೈಕಮಾಂಡ್‌ಗಳಲ್ಲ. ಪಕ್ಷಕ್ಕೆ ಧಕ್ಕೆಯಾಗುವಂತೆ ಯಾರೂ ನಡೆದುಕೊಳ್ಳಬಾರದು ಎಂದು ಯಡಿಯೂರಪ್ಪನವರೇ ಹೇಳಿದ್ದಾರೆ. ರಾಜ್ಯದಲ್ಲಿ ಪಕ್ಷ ಬೆಳೆಸಿದ ಅವರನ್ನು ಪಕ್ಷ ಗೌರವದಿಂದ ನಡೆಸಿಕೊಂಡಿದೆ. ಹೊಸ ಸಿ.ಎಂ ಯಾರು ಎಂಬುದನ್ನು ಹೈಕಮಾಂಡ್ ನಿರ್ಧರಿಸುತ್ತದೆ' ಎಂದರು.

ಬಿಜೆಪಿ ವರಿಷ್ಠರಿಗೆ ಹಿಂದುಳಿದ ವರ್ಗಗಳ ಮುಖಂಡರ ಆಗ್ರಹ

# 'ಸಚಿವ ಕೆ.ಎಸ್. ಈಶ್ವರಪ್ಪಗೆ ಸಿ.ಎಂ ಸ್ಥಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು. ಅವರನ್ನು ಬದಲಾವಣೆ ಮಾಡಿದರೆ, ಕುರುಬ ಸಮುದಾಯದ ಬಿಜೆಪಿ ನಾಯಕ ಕೆ.ಎಸ್.ಈಶ್ವರಪ್ಪ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು' ಎಂದು ಹಿಂದುಳಿದ ವರ್ಗಗಳ ಮುಖಂಡರು ಬಿಜೆಪಿ ವರಿಷ್ಠರಿಗೆ ಮನವಿ ಮಾಡಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಹಿಂದ ಮುಖಂಡ ಕೆ.ಮುಕುಡಪ್ಪ ಅವರು, 'ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಕ್ಕಲಿಗ ಸಮುದಾಯದ ಡಿ.ವಿ.ಸದಾನಂದಗೌಡ ಹಾಗೂ ಲಿಂಗಾಯತ ಸಮುದಾಯದ ಜಗದೀಶ್ ಶೆಟ್ಟರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಲಾಗಿತ್ತು. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕುರುಬ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿದೆ. ಹಾಗಾಗಿ, ಕುರುಬ ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನ ನೀಡಬೇಕು' ಎಂದರು.

ಕೋಲಿ ಸಮಾಜದ ಮುಖಂಡ ತಿಪ್ಪಾರೆಡ್ಡಿ, ಸವಿತಾ ಸಮಾಜದ ಶಿವಪ್ಪ, ಮಾಲಿ ಸಮಾಜದ ಬಸವರಾಜ ಬಾಳೇಕಾಯಿ, ಯಾದವ ಸಮಾಜದ ಪ್ರಸನ್ನ ಕುಮಾರ್, ವಿಶ್ವಕರ್ಮ ಸಮುದಾಯದ ವಿಶ್ವನಾಥ್ ವಿಶ್ವಕರ್ಮ, ಈಡಿಗ ಸಮಾಜದ ಬಸವರಾಜ ಓಟೂರು ಸೇರಿದಂತೆ ಹಿಂದುಳಿದ ವರ್ಗಗಳ ಮುಖಂಡರು ಕೆ.ಎಸ್.ಈಶ್ವರಪ್ಪ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಒತ್ತಾಯಿಸಿದರು.

### ಹಿಂದುಳಿದ ವರ್ಗಕ್ಕೆ ಮುಖ್ಯಮಂತ್ರಿ ಸ್ಥಾನ ಪ್ರೊ.ನರಸಿಂಹಪ್ಪ ಆಗ್ರಹ

'ಹಿಂದುಳಿದ ವರ್ಗಗಳ ಮುಂಚೂಣಿ ನಾಯಕರಾದ ಸಚಿವ ಕೆ.ಎಸ್. ಈಶ್ವರಪ್ಪ, ಕೋಟ ಶ್ರೀನಿವಾಸ ಪೂಜಾರಿ, ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಹಾಗೂ ಶಾಸಕ ಸುನೀಲ್ ಕುಮಾರ್ ಈ ನಾಲ್ವರಲ್ಲಿ ಒಬ್ಬರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು' ಎಂದು ಹಿಂದುಳಿದ ವರ್ಗದ ಮುಖಂಡ ಹಾಗೂ ಹಿರಿಯ ಹೋರಾಟಗಾರ ಪ್ರೊ.ನರಸಿಂಹಪ್ಪ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'ಈಗ ಸಾಮಾನ್ಯ ವರ್ಗದ ಜನರೂ ಕೇಂದ್ರದ ಮಂತ್ರಿಗಳಾಗಿದ್ದಾರೆ. ಇದಕ್ಕಾಗಿ ಪ್ರಧಾನಿ ಮೋದಿ ಅವರಿಗೆ ಕೃತಜ್ಞತೆಗಳು. ರಾಜ್ಯದ ಮಂತ್ರಿಮಂಡಲ ಕೆಲವೇ ವರ್ಗಗಳಿಗೆ ಸೀಮಿತಗೊಂಡಿದ್ದು, ಎಲ್ಲ ವರ್ಗಗಳಿಗೆ ಅವಕಾಶ ಸಿಗಬೇಕು. ಹಿಂದುಳಿದ ಜಾತಿಯವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು' ಎಂದು ಒತ್ತಾಯಿಸಿದರು.

ರಾಜು ಕ್ಷತ್ರಿಯ ಸಮಾಜದ ಮುಖಂಡ ಲಕ್ಷ್ಮೀಕಾಂತ ರಾಜು, 'ಸ್ವಾಮೀಜಿಗಳಿಗೆ ಮಠಗಳಲ್ಲಿ ಮಾಡಲು ಬಹಳಷ್ಟು ಕೆಲಸ ಇದೆ. ಅದನ್ನು ಬಿಟ್ಟು ಮಂತ್ರಿಗಳಂತೆ ಕೆಲಸ ಮಾಡುವುದು ಸರಿಯಿಲ್ಲ' ಎಂದರು.

## ಕೋವಿಡ್ ಸಕ್ರಿಯ ಪ್ರಕರಣ: 24 ಸಾವಿರಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 1,705 ಮಂದಿ ಕೋವಿಡ್ ಪೀಡಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 24,127ಕ್ಕೆ ಇಳಿಕೆಯಾಗಿದೆ.

ಕಳೆದ ತಿಂಗಳು ಈ ವೇಳೆ 1.16 ಲಕ್ಷ ಸಕ್ರಿಯ ಪ್ರಕರಣಗಳಿದ್ದವು. ಒಂದು ದಿನದಲ್ಲಿ 1.25 ಲಕ್ಷ ಮಾದರಿಗಳ ಪರೀಕ್ಷೆ ನಡೆದಿದ್ದು, ಶೇ 1.35ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. 15 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 11 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ಬೆಂಗಳೂರಿನಲ್ಲಿ 400, ದಕ್ಷಿಣ ಕನ್ನಡದಲ್ಲಿ 295, ಮೈಸೂರಿನಲ್ಲಿ 157 ಹಾಗೂ ಉಡುಪಿಯಲ್ಲಿ 131 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗಿವೆ. ಕೋವಿಡ್ ಪೀಡಿತ ಒಟ್ಟು ಸಂಖ್ಯೆ 28.91 ಲಕ್ಷ ದಾಟಿದೆ. ಕೋವಿಡ್ ಪೀಡಿತರಲ್ಲಿ 30 ಮಂದಿ ಮೃತಪಟ್ಟಿದ್ದಾರೆ. 18 ಜಿಲ್ಲೆಗಳಲ್ಲಿ ಈ ಪ್ರಕರಣಗಳು ವರದಿಯಾಗಿವೆ.

ದಕ್ಷಿಣ ಕನ್ನಡ, ಕೋಲಾರದಲ್ಲಿ ತಲಾ 4 ಮಂದಿ, ಬೆಂಗಳೂರು, ಮೈಸೂರಿನಲ್ಲಿ ತಲಾ 3 ಮಂದಿ, ಧಾರವಾಡ, ಶಿವಮೊಗ್ಗದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.75ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,323ಕ್ಕೆ ಏರಿಕೆಯಾಗಿದೆ.

**ರಾಜ್ಯ ಕೋವಿಡ್ ಅಂಕಿ–ಅಂಶ**

28,91,699 ಒಟ್ಟು ಸೋಂಕಿತರು
(28,89,994 ನಿನ್ನೆಯ ವಿವರ)
24,127 ಸಕ್ರಿಯ ಪ್ರಕರಣಗಳು
28,31,226 ಗುಣಮುಖರಾದವರು
36,323 ಒಟ್ಟು ಸಾವು

ದಿನದ ಏರಿಕೆ

| | |
|---|---|
| ಹೊಸ ಪ್ರಕರಣ | 1,705 |
| ಗುಣಮುಖ | 2,243 |
| ಸಾವು | 30 |

ಪ್ರಜಾವಾಣಿ ಗ್ರಾಫಿಕ್ಸ್

## 'ಬಿಎಸ್‌ವೈ ಪದಚ್ಯುತಿಗೊಳಿಸಿದರೆ ದಂಗೆ'

ಬಳ್ಳಾರಿ: 'ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿ, ಬೆಳೆಸಿ ಅಧಿಕಾರಕ್ಕೆ ತಂದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಪದಚ್ಯುತಿಗೊಳಿಸಿದರೆ ವೀರಶೈವ ಲಿಂಗಾಯತ ಸಮಾಜ ದಂಗೆ ಏಳುತ್ತದೆ' ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಎನ್.ತಿಪ್ಪಣ್ಣ ಎಚ್ಚರಿಕೆ ನೀಡಿದರು.

'ಯಡಿಯೂರಪ್ಪ ಅವರನ್ನು ಯಾವ ಕಾರಣಕ್ಕೆ ತೆಗೆಯುತ್ತೀರಿ? ಅವರೇನು ತಪ್ಪು ಮಾಡಿದ್ದಾರೆ? ವಯಸ್ಸಿನ ಕಾರಣಕ್ಕೆ ತೆಗೆಯುವುದಾದರೆ, ಅವರನ್ನು ಮುಖ್ಯಮಂತ್ರಿ ಮಾಡುವಾಗ ಗೊತ್ತಿರಲಿಲ್ಲವೇ? ನಮ್ಮ ಸಮಾಜದ ಪ್ರಶ್ನಾತೀತ ನಾಯಕನನ್ನು ಗೌರವದಿಂದ ನಡೆಸಿಕೊಳ್ಳಬೇಕು' ಎಂದು ಪತ್ರಿಕಾಗೋಷ್ಠಿಯಲ್ಲಿ ಅವರು ತಾಕೀತು ಮಾಡಿದರು.

'ಎಲ್ಲ ಜಾತಿ, ಸಮಾಜದ ಜನರನ್ನು ಯಡಿಯೂರಪ್ಪ ಒಟ್ಟುಗೂಡಿಸಿದ್ದಾರೆ. ಎಲ್ಲ ಸಮಾಜದ ಬೆಂಬಲವೂ ಅವರಿಗಿದೆ. ಅವರಿಲ್ಲದಿದ್ದರೆ ಬಿಜೆಪಿ ಇರುತಿತ್ತಾ ಎಂಬುದನ್ನು ಪಕ್ಷದ ನಾಯಕರು ಅರ್ಥ ಮಾಡಿಕೊಳ್ಳಬೇಕು' ಎಂದರು.

'ಕಾಂಗ್ರೆಸ್‌ನಲ್ಲಿರುವ ಶಾಮನೂರು ಶಿವಶಂಕರಪ್ಪ, ಎಂ.ಬಿ. ಪಾಟೀಲ ಅವರು ಯಡಿಯೂರಪ್ಪನವರ ರಾಜೀನಾಮೆ ಪಡೆಯಬಾರದು ಎಂದು ಆಗ್ರಹಿಸಿದ್ದಾರೆ. ಇದು ಯಡಿಯೂರಪ್ಪನವರ ಜನಪ್ರಿಯತೆಗೆ ಸಾಕ್ಷಿ' ಎಂದು ಸ್ಪಷ್ಟಪಡಿಸಿದರು.

### 'ಯತ್ನಾಳ್‌ಗೆ ಬುದ್ಧಿ ಭ್ರಮಣೆ'

'ಯಡಿಯೂರಪ್ಪನವರ ವಿರುದ್ಧ ಕೆಲಸ ಮಾಡುತ್ತಿರುವ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಬುದ್ಧಿ ಭ್ರಮಣೆಯಾಗಿದೆ' ಎಂದು ತಿಪ್ಪಣ್ಣ ಅಭಿಪ್ರಾಯಪಟ್ಟರು.

# ಶಕ್ತಿ ಪ್ರದರ್ಶನಕ್ಕೆ ಮಠಾಧೀಶರು ಸಜ್ಜು

ಒಂದನೇ ಪುಟದಿಂದ

'ಬೆಳಿಗ್ಗೆಯಿಂದಲೇ ಸಮಾವೇಶ ನಡೆಯಲಿದೆ. ಸದ್ಯಕ್ಕೆ ಯಾವುದೇ ಕಾರ್ಯಸೂಚಿ ರೂಪಿಸಿಲ್ಲ. ಎಲ್ಲ ಮಠಾಧೀಶರು ಸೇರಿಯೇ ಚರ್ಚಿಸುತ್ತೇವೆ. ಇದರಲ್ಲಿ ಯಡಿಯೂರಪ್ಪ ಅವರು ರಾಜೀನಾಮೆ ವಿಚಾರ ಬರಬಹುದು, ಬರದೇ ಇರಬಹುದು' ಎಂದು ಸೂಚ್ಯವಾಗಿ ತಿಳಿಸಿದರು.

'ಈ ಸಮಾವೇಶಕ್ಕೆ ಸಾರ್ವಜನಿಕರು ಹಾಗೂ ರಾಜಕಾರಣಿಗಳಿಗೆ ಪ್ರವೇಶ ಇರುವುದಿಲ್ಲ' ಎಂದು ಸ್ವಾಮೀಜಿ ಸ್ಪಷ್ಟಪಡಿಸಿದರು.

'ಯಡಿಯೂರಪ್ಪ ಅವರನ್ನು ಮುಂದುವರಿಸಬೇಕೇ ಬಿಡಬೇಕೇ ಎಂಬುದು ಪಕ್ಷಕ್ಕೆ ಬಿಟ್ಟ ತೀರ್ಮಾನ. ಪ್ರಸ್ತುತ ವಿದ್ಯಮಾನಗಳ ಕುರಿತು ಚರ್ಚಿಸುತ್ತೇವೆ. ಅಲ್ಲಿ ಏನು ಚರ್ಚೆ ಮಾಡುತ್ತೇವೆ ಎಂಬುದನ್ನು ಈಗ ಹೇಳಲಾಗದು. ಸಮಾವೇಶದಲ್ಲಿ ಆ ವಿಚಾರ ಪ್ರಸ್ತಾಪಿಸಲಾಗುತ್ತದೆಯೋ ಇಲ್ಲವೋ ಎಂದು ಹಿರಿಯ ಮಠಾಧೀಶರು ತೀರ್ಮಾನಿಸುತ್ತಾರೆ' ಎಂದರು.

'ಸಮಾಜದಲ್ಲಿ ಸಂಕಷ್ಟ ಎದುರಾದಾಗ, ಅನ್ಯಾಯ ಎದುರಾದಾಗ ಸನ್ಯಾಸಿಗಳು ಮಧ್ಯಪ್ರವೇಶಿಸುವುದು ಹೊಸತಲ್ಲ. ವೇದಗಳು, ರಾಮಾಯಣ, ಮಹಾಭಾರತ, ದಾಸ, ಶರಣರ ಕಾಲದಲ್ಲೂ ನಡೆದಿತ್ತು. ಈಗಲೂ ನಡೆದಿದೆ. ತಪ್ಪೇನು ಇಲ್ಲ' ಎಂದು ತಮ್ಮ ನಿಲುವು ಸಮರ್ಥಿಸಿಕೊಂಡರು.

ಯಾವುದೇ ಒಬ್ಬ ಗುರು ಯಾವುದೇ ಭಕ್ತನ ಮನೆಗೂ ಹೋದರೂ ಗೌರವಿಸಿ ಕಳಿಸಲಾಗುತ್ತದೆ. ಅದೇ ರೀತಿ ಮುಖ್ಯಮಂತ್ರಿ ಮನೆಗೆ ಹೋದಾಗಲೂ ಲಕೋಟೆ ನೀಡಿದ್ದರು. ಆದರೆ, ಅದನ್ನು ಮಾಧ್ಯಮಗಳಲ್ಲಿ ವಿಕೃತವಾಗಿ ಬಿಂಬಿಸಿರುವುದು ಸರಿಯಲ್ಲ ಎಂದು ಸ್ವಾಮೀಜಿ ಹೇಳಿದರು.

**ಸಚಿವರ ಹೆಸರೂ ಪರಿಶೀಲನೆಯಲ್ಲಿ - ಅಶೋಕ:** ಉತ್ತಮವಾಗಿ ಕೆಲಸ ಮಾಡಿರುವ ಸಚಿವರ ಹೆಸರುಗಳು ಮುಖ್ಯಮಂತ್ರಿ ಆಯ್ಕೆಗಾಗಿ ಪಕ್ಷದ ವರಿಷ್ಠರ ಪರಿಶೀಲನೆಯಲ್ಲಿವೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದ್ದಾರೆ.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ನಮ್ಮದು ರಾಷ್ಟ್ರೀಯ ಪಕ್ಷ, ಇಲ್ಲಿನ ಮಾಹಿತಿಗಳನ್ನು ಪಡೆಯಲು ವರಿಷ್ಠರು ಅವರದ್ದೇ ಆದ ಮೂಲಗಳನ್ನು ಹೊಂದಿದ್ದಾರೆ. ಕೆಲವು ಶಾಸಕರ ಹೆಸರುಗಳು ಅವರ ಮುಂದಿವೆ' ಎಂದು ಅವರು ತಿಳಿಸಿದ್ದಾರೆ.

### ಬಿಎಸ್‌ವೈ ಕೈಬಿಟ್ಟರೆ ಬಿಜೆಪಿಗೆ ಕಷ್ಟ ಅಮಿತ್ ಶಾಗೆ ಸ್ವಾಮೀಜಿ ಪತ್ರ

ಶರಣಬಸವಶಿವಲಿಂಗ ಶಿವಯೋಗಿ ಸ್ವಾಮೀಜಿಯವರು ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದು, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಹುದ್ದೆಯಿಂದ ಕೈಬಿಡಬಾರದು. ಒಂದು ವೇಳೆ ಬಿಟ್ಟರೆ, ಭವಿಷ್ಯದಲ್ಲಿ ಕರ್ನಾಟಕದಲ್ಲಿ ಬಿಜೆಪಿಗೆ ಕಷ್ಟವಾಗಬಹುದು ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ಬಹುಮತ ಗಳಿಸುವಲ್ಲಿ ಎಡವಿತ್ತು. ಆಗ ಯಡಿಯೂರಪ್ಪ ಅವರು ಕಷ್ಟಪಟ್ಟು ಸರ್ಕಾರವನ್ನು ರಚಿಸುವಲ್ಲಿ ಯಶಸ್ವಿಯಾದರು. ಜನರರಿಗೆ ಅವರ ಮೇಲೆ ಅಪಾರ ವಿಶ್ವಾಸವಿದೆ. ಆದ ಕಾರಣ ಅವರಿಗೆ ಅವಧಿ ಪೂರ್ಣಗೊಳಿಸಲು ಅವಕಾಶ ನೀಡಬೇಕು ಎಂದು ತಿಳಿಸಿದ್ದಾರೆ.

### ನಡ್ಡಾ ಭೇಟಿ ಮಾಡಿದ ವಿಜಯೇಂದ್ರ

ನವದೆಹಲಿ: ಮುಖ್ಯಮಂತ್ರಿ ಬದಲಾವಣೆ ನಿಶ್ಚಿತವಾಗಿರುವುದರಿಂದ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಶುಕ್ರವಾರ ಭೇಟಿ ಮಾಡಿ ಚರ್ಚಿಸಿದ್ದಾರೆ.

ವಿವಿಧ ಮಠಾಧೀಶರು ಯಡಿಯೂರಪ್ಪ ಅವರ ಬೆಂಬಲಕ್ಕೆ ನಿಂತಿರುವುದು, ವೀರಶೈವ-ಲಿಂಗಾಯತ ಸಮುದಾಯದ ಬೆಂಬಲವನ್ನು ನಿರ್ಲಕ್ಷಿಸದಂತೆ ಅವರು ಮನವರಿಕೆ ಮಾಡಿದರು ಎಂದು ತಿಳಿದುಬಂದಿದೆ.

ಆದರೆ, ಮಠಾಧೀಶರ ಹಸ್ತಕ್ಷೇಪಕ್ಕೆ ಅನಗತ್ಯ ಅವಕಾಶ ನೀಡಿರುವುದು ಸರಿಯಲ್ಲ ಎಂದೇ ನಡ್ಡಾ ಅವರು ತರಾಟೆಗೆ ತೆಗೆದುಕೊಂಡರು ಎಂದು ತಿಳಿದು ಬಂದಿದೆ.

'ಒಂದೊಮ್ಮೆ ನನ್ನ ರಾಜೀನಾಮೆ ಪಡೆದಲ್ಲಿ ಪುತ್ರನಿಗೆ ಸೂಕ್ತ ಸ್ಥಾನಮಾನ ನೀಡಬೇಕು' ಎಂಬ ಯಡಿಯೂರಪ್ಪ ಅವರ ಬೇಡಿಕೆಯ ಕುರಿತೂ ಚರ್ಚೆ ನಡೆಸಲಾಯಿತು. ಪಕ್ಷ ಸಂಘಟನೆ ಹಾಗೂ ಸರ್ಕಾರದಲ್ಲಿ ಸ್ಥಾನ ನೀಡುವ ಭರವಸೆಯನ್ನೂ ನೀಡಲಾಯಿತು' ಎಂದು ಪಕ್ಷದ ಮೂಲಗಳು ಹೇಳಿವೆ.

ಪ್ರಜಾವಾಣಿ
ಜಸ್ಟ್ ಮ್ಯೂಸಿಕ್– ಹಿತಾನುಭವ

ಮಲೆನಾಡಿನಿಂದ ಹಿಮಾಲಯದವರೆಗೆ...
ಪಂಡಿತ್ ರಾಜನ್–ಸಾಜನ್ ಮಿಶ್ರಾ ಅವರು ತಮ್ಮ ಶಿಷ್ಯ ಪಂಡಿತ್ ಹೆಗ್ಗಾರ ಅನಂತ ಹೆಗಡೆ ಅವರನ್ನು ಬನಾರಸ್ ಘರಾಣೆಯ ದಕ್ಷಿಣ ಭಾರತದ ಪ್ರತಿನಿಧಿಯಾಗಿ ತಯಾರಿ ಮಾಡಿದ್ದಾರೆ.
https://youtu.be/-N2IcluEAws

ಕ್ಲಬ್‌ಹೌಸ್‌ಗೆ ಬನ್ನಿ
ಪ್ರಜಾವಾಣಿ ಆಲದಮರ
ಪುಸ್ತಕ- ಲೇಖಕ - ಓದುಗ - ಉದ್ಯಮ
ಹೀಗೊಂದು ಸಮುದ್ರ ಮಥನ

ಕೇಶವ ಮಳಗಿ
ಓದುಗ- ಲೇಖಕ

ರಮೇಶ ಉಡುಪ
ನವಕರ್ನಾಟಕ ಪಬ್ಲಿಕೇಷನ್ಸ್

ಜಿ.ಎನ್.ಮೋಹನ್
ಬಹುರೂಪಿ ಬುಕ್ ಹಬ್

ಗುರುಪ್ರಸಾದ್ ಡಿ.ಎನ್.
ಆಕೃತಿ ಬುಕ್ಸ್

ವಸಂತ ಶೆಟ್ಟಿ
ಮೈಲ್ಯಾಂಗ್ ಬುಕ್ಸ್
ಮತ್ತು ನೀವು
25-7-2021 ಭಾನುವಾರ, ಬೆಳಿಗ್ಗೆ 10.30ರಿಂದ 12.30ರವರೆಗೆ

## ಸಿಯುಕೆ ಕುಲಪತಿಯಾಗಿ ಡಾ.ಬಿ.ಸತ್ಯನಾರಾಯಣ ನೇಮಕ

ಕಲಬುರ್ಗಿ: ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿಯನ್ನಾಗಿ ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದ ಪರಿಸರ ರಸಾಯನ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಬಟ್ಟು ಸತ್ಯನಾರಾಯಣ ಅವರನ್ನು ನೇಮಕ ಮಾಡಲಾಗಿದೆ.

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಗುರುವಾರ ಈ ನೇಮಕಾತಿಗೆ ಅನುಮೋದನೆ ನೀಡಿದ್ದಾರೆ.

ಸತ್ಯನಾರಾಯಣ ಅವರು ಸೋಮವಾರ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಇವರ ಅಧಿಕಾರಾವಧಿ ಗರಿಷ್ಠ 5 ವರ್ಷ ಅಥವಾ ಅವರ 70 ವರ್ಷ ವಯೋಮಿತಿಯವರೆಗೆ ಇರಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಇತ್ತೀಚೆಗೆ ನಿಧನರಾದ ಪ್ರೊ.ಎಚ್.ಎಂ. ಮಹೇಶ್ವರಯ್ಯ ಅವರ ಅವಧಿ 2020ರ ನವೆಂಬರ್ 14ರಂದು ಮುಕ್ತಾಯವಾಗಿತ್ತು. ಅವರ ಬಳಿಕ ಪ್ರೊ.ರೊನೆಟೊ ಜಾನ್ ಕೆಲ ದಿನ ಹಂಗಾಮಿ ಕುಲಪತಿ ಆಗಿದ್ದರು.

## ಬಾಲಕಿ ಮೇಲೆ ಅತ್ಯಾಚಾರ, ಕೊಲೆ

ಭರಮಸಾಗರ (ಚಿತ್ರದುರ್ಗ): ಬಹಿರ್ದೆಸೆಗೆ ತೆರಳಿದ್ದ 13 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ ಘಟನೆ ಠಾಣೆ ಭರಮಸಾಗರ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ಹಾಡಹಗಲೇ ನಡೆದಿದೆ.

ಮಧ್ಯಾಹ್ನ 12.30ಕ್ಕೆ ಗ್ರಾಮದಿಂದ 150 ಮೀಟರ್ ದೂರದ ರಸ್ತೆಯಲ್ಲಿ ಬಾಲಕಿ ಬಹಿರ್ದೆಸೆಗೆ ಹೋಗಿದ್ದಳು. ತುಂಬಾ ಹೊತ್ತಿನ ನಂತರವೂ ಬಾಲಕಿ ಮರಳದ್ದರಿಂದ ಆತಂಕಗೊಂಡ ಪೋಷಕರು ಹುಡುಕಾಡಿದಾಗ ಮೆಕ್ಕೆಜೋಳದ ಜಮೀನಿನಲ್ಲಿ ವಿವಸ್ತ್ರವಾದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

# ಸಚಿವೆ ಮೀನಾಕ್ಷಿ ಲೇಖಿ ಹೇಳಿಕೆಗೆ ಖಂಡನೆ

ನವದೆಹಲಿ: ರೈತರನ್ನು ಆಕ್ಷೇಪಾರ್ಹ ಪದಗಳಿಂದ ನಿಂದಿಸಿರುವ ಕೇಂದ್ರ ಸಚಿವೆ ಮೀನಾಕ್ಷಿ ಲೇಖಿ ಅವರ ಕ್ರಮವನ್ನು ಸಂಯುಕ್ತ ಕಿಸಾನ್ ಮೋರ್ಚಾ ತೀವ್ರವಾಗಿ ಖಂಡಿಸಿದೆ.

ಕೃಷಿ ಕಾಯ್ದೆ ವಿರೋಧಿಸಿ ಸಂಸತ್ ಭವನದ ಬಳಿಯ ಜಂತರ್‌–ಮಂತರ್ ಎದುರು ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆ ಶುಕ್ರವಾರ ಎರಡನೇ ದಿನಕ್ಕೆ ಕಾಲಿರಿಸಿದ್ದು, ಪ್ರತಿಭಟನಾಕಾರರು ಲೇಖಿ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಲೇಖಿ ರೈತರನ್ನು ಮವಾಲಿಗಳು (ಶಾಂತಿ ಕದಡುವವರು, ಕೊಲೆಗಡುಕರು) ಎಂದು ಜರಿದಿರುವ ಲೇಖಿ, ಕೂಡಲೇ ಕ್ಷಮೆ ಯಾಚಿಸಿದ್ದಾರಾದರೂ, ಈ ರೀತಿಯ ಹೇಳಿಕೆ ರೈತ ಸಮುದಾಯಕ್ಕೆ ಅವಮಾನ ಮಾಡಿದಂತೆ ಎಂದು ಪ್ರತಿಭಟನಾಕಾರರು ಹೇಳಿದರು. ರೈತರ ವಿರುದ್ಧ ಸುಳ್ಳು ಆರೋಪ ಮಾಡಿರುವ ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಅವರೂ ಬೇಷರತ್ ಕ್ಷಮೆ ಕೋರಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಸಿರ್ಸಾ ಬಳಿ ಬಂಧನಕ್ಕೆ ಒಳಗಾಗಿದ್ದ ಐವರು ಸತ್ಯಾಗ್ರಹನಿರತ ರೈತರನ್ನು ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ರೈತ ಮುಖಂಡ ಬಲದೇವ್ ಸಿಂಗ್ ಸಿರ್ಸಾ ಅವರು ಐದು ದಿನಗಳಿಂದ ನಡೆಸುತ್ತಿದ್ದ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಹಿಂದಕ್ಕೆ ಪಡೆದಿದ್ದಾರೆ.

ಮೋರ್ಚಾದ ಪ್ರತಿನಿಧಿಗಳೊಂದಿಗೆ ಈ ಮೊದಲೇ ನಡೆಸಲಾದ ಮಾತುಕತೆ ವೇಳೆ ನೀಡಿರುವ ಭರವಸೆಯಿಂದ ಹಿಂದೆ ಸರಿಯದಂತೆ ಸರ್ಕಾರವನ್ನು ಎಚ್ಚರಿಸಿದರು.

---

## ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ
ತುಮಕೂರು ಜಿಲ್ಲೆ, ತುಮಕೂರು.
Ph.No.0816-2254638, Fax: 2278312
e-mail:dudc_tkr@yahoo.co.in

ನಂ.ಡಿಯುಡಿಸಿ/ತಾಂತ್ರಿಕ/ಎಲ್‌ಇಡಿ/ಸಿಆರ್/01/2021–22 ದಿನಾಂಕ: 14.07.2021

**ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)**

ತುಮಕೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಸಗಿ ಸಹಭಾಗಿತ್ವದಲ್ಲಿ LED ಇಂಧನ ಕ್ಷಾಮತೆಯ ಬೀದಿ ದೀಪಗಳ ಅಳವಡಿಕೆ ಮತ್ತು CCMS ವ್ಯವಸ್ಥೆ ಸ್ಥಾಪಿಸುವ ಸಲುವಾಗಿ Concessionaire ಆಯ್ಕೆ ಮಾಡಲು ಅರ್ಹ ನೊಂದಾಯಿತ ಸಂಸ್ಥೆಗಳಿಂದ 'ಇ' ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ನೊಂದಾಯಿತ ಸಂಸ್ಥೆ ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಮಾಹಿತಿಯುನ್ನು 'ಇ' ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. (INDENT No :DUDC/TECH/LED/CR/01/2021-22). ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಇವರನ್ನು ಸಂಪರ್ಕಿಸಬಹುದಾಗಿದೆ. ಇಮೇಲ್ ವಿಳಾಸ: dudc_tkr@yahoo.co.in

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ.

DIPR/TUM/171/MCA/2021-22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ
ನಿರ್ದೇಶಕರವರ ಕಛೇರಿ, ನಂ. 34, ಲೋಟಸ್ ಟವರ್ಸ್,
ಮೊದಲನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.

ಸಂಖ್ಯೆ: ಪವಕನಿ/ಇಡಿ–2/ಸಿಆರ್–30/31/2020–21(ಭಾಗ–2) Re-Call
ದಿನಾಂಕ: 23.07.2021

**ಟೆಂಡರ್ ಪ್ರಕಟಣೆ**

(ಇ–ಟೆಂಡರ್ ಮುಖಾಂತರ ಮಾತ್ರ)

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಇವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://eproc.karnataka.gov.in ಮುಖಾಂತರ ಪರಿಶಿಷ್ಟ ವರ್ಗದ ಸರ್ಕಾರಿ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಮ ಶಾಲೆಗಳಿಗೆ ಟೂ–ಟಯರ್ ಕಾಟ್ ಹಾಗೂ ಡೈನಿಂಗ್ ಟೇಬಲ್‌ಗಳನ್ನು ಖರೀದಿಸಲು ಆಸಕ್ತ ಟೆಂಡರ್‌ದಾರರಿಂದ ಈ ಕೆಳಕಂಡ ವಿವರಗಳಂತೆ ಅಲ್ಪಾವಧಿ ಮರು–ಟೆಂಡರನ್ನು ಆಹ್ವಾನಿಸಿರುತ್ತಾರೆ.

| ಕ್ರ. ಸಂ. | ಟೆಂಡರ್ ವಿವರ | ಅಂದಾಜು ಟೆಂಡರ್ ಮೌಲ್ಯ ರೂ. ಲಕ್ಷಗಳಲ್ಲಿ |
|---|---|---|
| 1 | ಟೂ–ಟಯರ್ ಕಾಟ್ ವಿತ್ ಲಾಕರ್ | 297.57 |
| 2 | ಡೈನಿಂಗ್ ಟೇಬಲ್ ವಿತ್ ಫೋಲ್ಡಿಂಗ್ ಸ್ಟೂಲ್ಸ್ | 393.60 |
| ಟೆಂಡರ್ ಕರೆದ ದಿನಾಂಕ: 23.07.2021 ಪ್ರತಿಯೊಂದು ಟೆಂಡರ್‌ಗೆ | | |
| ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 06.08.2021 ಪ್ರತಿಯೊಂದು ಟೆಂಡರ್‌ಗೆ | | |

**ವಿಶೇಷ ಸೂಚನೆ:** ಹೆಚ್ಚಿನ ವಿವರಗಳಿಗಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ನಿರ್ದೇಶಕರು
ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ

DIPR/DDU/926/2021-22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ
ನಿರ್ದೇಶಕರವರ ಕಛೇರಿ, ನಂ. 34, ಲೋಟಸ್ ಟವರ್ಸ್,
ಮೊದಲನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.

ಸಂಖ್ಯೆ: ಪವಕನಿ/ಇಡಿ–2/ಸಿಆರ್–45/46/2020–21(ಭಾಗ–2) Re-Call
ದಿನಾಂಕ: 23.07.2021

**ಟೆಂಡರ್ ಪ್ರಕಟಣೆ**

(ಇ–ಟೆಂಡರ್ ಮುಖಾಂತರ ಮಾತ್ರ)

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಇವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://eproc.karnataka.gov.in ಮುಖಾಂತರ ಪರಿಶಿಷ್ಟ ವರ್ಗದ ಸರ್ಕಾರಿ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಮ ಶಾಲೆಗಳಿಗೆ ಟೂ–ಟಯರ್ ಕಾಟ್ ಹಾಗೂ ಡೈನಿಂಗ್ ಟೇಬಲ್‌ಗಳನ್ನು ಖರೀದಿಸಲು ಆಸಕ್ತ ಟೆಂಡರ್‌ದಾರರಿಂದ ಈ ಕೆಳಕಂಡ ವಿವರಗಳಂತೆ ಅಲ್ಪಾವಧಿ ಮರು–ಟೆಂಡರನ್ನು ಆಹ್ವಾನಿಸಿರುತ್ತಾರೆ.

| ಕ್ರ. ಸಂ. | ಟೆಂಡರ್ ವಿವರ | ಅಂದಾಜು ಟೆಂಡರ್ ಮೌಲ್ಯ ರೂ. ಲಕ್ಷಗಳಲ್ಲಿ |
|---|---|---|
| 1 | ಟೂ–ಟಯರ್ ಕಾಟ್ ವಿತ್ ಲಾಕರ್ | 310.93 |
| 2 | ಡೈನಿಂಗ್ ಟೇಬಲ್ ವಿತ್ ಫೋಲ್ಡಿಂಗ್ ಸ್ಟೂಲ್ಸ್ | 381.38 |
| ಟೆಂಡರ್ ಕರೆದ ದಿನಾಂಕ: 23.07.2021 ಪ್ರತಿಯೊಂದು ಟೆಂಡರ್‌ಗೆ | | |
| ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 06.08.2021 ಪ್ರತಿಯೊಂದು ಟೆಂಡರ್‌ಗೆ | | |

**ವಿಶೇಷ ಸೂಚನೆ:** ಹೆಚ್ಚಿನ ವಿವರಗಳಿಗಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ನಿರ್ದೇಶಕರು
ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ

DIPR/DDU/929/2021-22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಮಲ್ಲೇಶ್ವರಂ ವಿಭಾಗ, 2ನೇ ಅಡ್ಡರಸ್ತೆ,
ಜಲದರ್ಶಿನಿ ಬಡಾವಣೆ, ಎಂಎಸ್‌ಆರ್ ನಗರ, ಮತ್ತಿಕೆರೆ, ಬೆಂಗಳೂರು-54.

ಸಂಖ್ಯೆ: ಕಾಅ/ಮಲ್ಲೇ/ಇ-ಪ್ರೊ/06/2021-22 ದಿನಾಂಕ: 23-07-2021

**ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)**
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಡಬ್ಲ್ಯೂ-2, 3 ಮತ್ತು 4 ಪ್ರಕಾರ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಮೂಲಕ ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ವಿಭಾಗ, ಇವರು ಬೃಬೆಂಮಪಾ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ರೈಲ್ವೆ / ಎಂಇಎಸ್ / ಇತರೆ ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕೆಲಸದ ಹೆಸರು | ನಿಗದಿಪಡಿಸಿದ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|
| 1. | ವಾರ್ಡ್ ನಂ.35ರ (ಸದಾಶಿವನಗರ ಗೇಟ್ ಮತ್ತು 18ನೇ ಅಡ್ಡರಸ್ತೆ ಮುಖ್ಯ ದ್ವಾರ ಸುತ್ತಮುತ್ತಲಿನ ಪ್ರದೇಶ) ಸ್ಯಾಂಕಿ ಟ್ಯಾಂಕ್ ಉದ್ಯಾನವನಕ್ಕೆ ಪಾದಚಾರಿ ಮಾರ್ಗಗಳಿಗೆ ಅಲಂಕಾರಿಕ ಲೈಟ್ ಪಿಟಿಂಗ್‌ಗಳನ್ನು ಒದಗಿಸುವುದು. | 100.00 |
| 2. | ವಾರ್ಡ್ ನಂ.66ರ ಸುಬ್ರಮಣ್ಯನಗರದ ಬ್ರಿಗೇಡ್ ಗೇಟ್ ಹತ್ತಿರ (ರೈಲ್ವೆ ಸಮನಾಂತರ ರಸ್ತೆ) ಪಾದಚಾರಿ ಮಾರ್ಗ ಹಾಗೂ ಒಳಚರಂಡಿಗಳ ಸುಧಾರಣಾ ಕಾಮಗಾರಿ. 2ನೇ ಕರೆ. | 70.00 |

ಇಎಂಡಿ ರೂ.: ಕರ್ನಾಟಕ ಸರ್ಕಾರದ ಆದೇಶದ ಸಂ:ಆಇ675 ವೆಚ್ಚ-12/2020 ಬೆಂಗಳೂರು ದಿನಾಂಕಃ 22-12-2020

**ಟೆಂಡರ್‌ನ ಕಾರ್ಯಸೂಚಿ: 1) ಪೂರ್ವ-ಬಿಡ್ ಸಭೆಯ ದಿನಾಂಕ: 07–08–2021ರ ಸಂಜೆ 4:30 ಗಂಟೆಗೆ. 2) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 11–08–2021ರ ಸಂಜೆ 4:00 ಗಂಟೆಯವರೆಗೆ. 3) ಟೆಂಡರ್ ವ್ಯತ್ಯಾಸ ಮೊತ್ತದ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 12–08–2021ರ ಸಂಜೆ 4:30 ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16–08–2021ರ ಸಂಜೆ 4:00 ಗಂಟೆಗೆ. 5) ಆರ್ಥಿಕ ಬಿಡ್ ದಾಖಲೆಗಳನ್ನು ತೆರೆಯುವುದುಃ ಯಶಸ್ವಿ ತಾಂತ್ರಿಕ ಅರ್ಹತಾ ಬಿಡ್ದಾರರಿಗೆ ನಂತರ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ವಿಭಾಗ, ಬೃಬೆಂಮಪಾ.

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರ ರವರ ಕಛೇರಿ,
ಕ.ನೀ.ನಿ.ನಿ, ನಂ.5 ಕಾಲುವೆ ವಿಭಾಗ, ಯರಮರಸ್ ಶಿಬಿರ–584135

ಸಂ:ಕನೀನಿನಿ/ಕಾ.ಅ–5/ಶಾಶಾ–3/ಮಾ.ಸಂ21–22/ಟೆಂಡರ್.ಕರೆ–3/2021–22/407 ದಿನಾಂಕ:23.07.2021

**ಅಲ್ಪಾವಧಿ ಟೆಂಡರ್ ಕರೆ–3 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)**

2021–22ನೇ ಸಾಲಿಗೆ ಟಿ.ಎಸ್.ಪಿ/ಎಸ್.ಸಿ.ಪಿ ಯೋಜನೆಯ ಕಾಲುವೆಗಳ, ಶಿಬಿರಗಳ ನಿರ್ವಹಣೆಗೆ ಮಾನವ ಸಂಪನ್ಮೂಲ ಒದಗಿಸುವ ಕಾಮಗಾರಿಗಾಗಿ ಈ ಕಛೇರಿಯಿಂದ ಒಂದು ಕಾಮಗಾರಿಯ ರೂ.229.54 ಲಕ್ಷಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಶೇಕಡವಾರು ಟೆಂಡರ್ ಕರೆ–3 ಕರೆಯಲಾಗಿರುತ್ತದೆ. ಅರ್ಹ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರ್‌ಗಳನ್ನು ದಿನಾಂಕ:30.07.2021 ರ ಸಂಜೆ 4.00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ. ಕಾಮಗಾರಿಯ ಹೆಸರು, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ, ಟೆಂಡರ್ ನಿಬಂಧನೆ ಹಾಗೂ ಇನ್ನಿತರೆ ವಿವರಗಳನ್ನು ಕಛೇರಿ ಸಮಯದಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ www.eproc.Karnataka.gov.in ಪಡೆಯಬಹುದಾಗಿದೆ.

ಮುಂದುವರೆದು ಇನ್ನಿತರೆ ಯಾವುದಾದರೂ ತಿದ್ದುಪಡಿ, ಮಾರ್ಪಾಡು ಅಥವಾ ಇತರೆ ಬದಲಾವಣೆಗಳಿದ್ದಲ್ಲಿ www.eproc.Karnataka.gov.in ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ, ನಂ.5 ಕಾಲುವೆ ವಿಭಾಗ, ಯರಮರಸ್ ಶಿಬಿರ.

ವಾ.ಸಾ.ಸಂ.ಇ/ರಾಯಚೂರು/226/ಎಂ.ಸಿ.&ಎ/2021–22

---

## ಕೃಷ್ಣಾ ಭಾಗ್ಯ ಜಲ ನಿಗಮ ನಿ೦ಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಅಧೀಕ್ಷಕ ಅಭಿಯಂತರವರ ಕಚೇರಿ,
ಕೃಭಾಜನಿ(ನಿ) ಅಣೆಕಟ್ಟು ವೃತ್ತ, ಆಲಮಟ್ಟಿ.

**ತಿದ್ದುಪಡಿ ಪ್ರಕಟಣೆ**

ಈ ಕಛೇರಿಯ ಟೆಂಡರ ಪ್ರಕಟಣೆ ಸಂಖ್ಯೆ: ಕೃಭಾಜನಿನಿ/ಆವಅ/ಸಇಂ–4/ನೀಸಸ/2021–22/856 ದಿನಾಂಕ:19–07–2021

ಉಲ್ಲೇಖ:ದಿನಾಂಕ:17–07–2021 ರಂದು ಜರುಗಿದ 2021–22 ನೇ ಸಾಲಿನ ಮುಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆಯ ನಡುವಳಿ ದಿನಾಂಕ 21/ 07/2021 ರಂದು ಪ್ರಕಟಣೆ ಮಾಡಲಾಗಿತ್ತು ಆದರೆ ಸದರಿ ನೀರು ನಿಲ್ಲಿಸುವ ದಿನಾಂಕಗಳು ತಪ್ಪಾಗಿ ಪ್ರಕಟಗೊಂಡಿದ್ದು ಈ ಕೆಳಗಿನಂತೆ ತಿದ್ದುಪಡಿ ಪ್ರಕಟಣೆಯನ್ನು ಹೊರಡಿಸಲಾಗಿದೆ.

| ನೀರು ನಿಲ್ಲಿಸುವ ದಿನಾಂಕಗಳು | ದಿನಗಳು |
|---|---|
| 03–08–2021 ರಿಂದ 10–08–2021 | 8 |
| 25–08–2021 ರಿಂದ 01–09–2021 | 8 |
| 16–09–2021 ರಿಂದ 23–09–2021 | 8 |
| 08–10–2021 ರಿಂದ 15–10–2021 | 8 |
| 30–10–2021 ರಿಂದ 06–11–2021 | 8 |
| ಒಟ್ಟು: | 40 |

ಸಹಿ/–(ಬಸವರಾಜ ಡಿ) ಅಧೀಕ್ಷಕ ಅಭಿಯಂತರರು,
ಕೃಭಾಜನಿನಿ ಅಣೆಕಟ್ಟು ವೃತ್ತ ಆಲಮಟ್ಟಿ

---

## ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ, ಭಾರತ ಸರ್ಕಾರ
ಬಿ–15, ಸೆಕ್ಟರ್ –62, ನೋಯ್ಡ.
ಜಿಲ್ಲೆ ಜಿ.ಬಿ.ನಗರ. ಉತ್ತರ ಪ್ರದೇಶ ಪಿನ್–201309

**ಅಧಿಸೂಚನೆ**

2021–22ನೇ ಸಾಲಿನಲ್ಲಿ 6ನೇ ತರಗತಿಯ ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲಾತಿಗಾಗಿ ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ 2021ನ್ನು ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ದಿನಾಂಕ 11.08.2021ಕ್ಕೆ ಮರುನಿಗದಿಪಡಿಸಲಾಗಿದೆ.
ಈ ಪರೀಕ್ಷೆಗೆ ನೋಂದಾಯಿಸಿರುವ ಎಲ್ಲಾ ಅಭ್ಯರ್ಥಿಗಳು ಮರು ನಿಗದಿಪಡಿಸಿದ ದಿನಾಂಕದೊಂದಿಗಿರುವ ಪ್ರವೇಶಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕಾಗಿ ಮನವಿ ಮತ್ತು ಅದನ್ನೇ ಪರೀಕ್ಷಾ ಕೇಂದ್ರಗಳಿಗೆ ತರುವುದು. ಎಲ್ಲಾ ಅಭ್ಯರ್ಥಿಗಳು ಪ್ರವೇಶ ಪತ್ರದಲ್ಲಿ ಸೂಚಿಸಿರುವ ಕೋವಿಡ್ ಶಿಷ್ಟಾಚಾರ ಮಾರ್ಗಸೂಚಿಯನ್ನು ಅನುಸರಿಸಬೇಕು.

ಉಪ ಆಯುಕ್ತರು (ಪರೀಕ್ಷೆ)

---

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ
ಕೆ.ಎನ್.ಟಿ.ಬಿ ಸ್ಯಾನಿಟೋರಿಯಂ ಆಸ್ಪತ್ರೆ ಆವರನ, ಬಂಗಾರಪೇಟೆ ರಸ್ತೆ, ಕೋಲಾರ – 563 102

ಸಂಖ್ಯೆ: ಜಿಆಕುಕ/ಕೋ/ಕೋವಿಡ್–19/ ಸಾ.ಆ.ಬಂ/09/2021–22 ದಿನಾಂಕ: 17.07.2021

**ಟೆಂಡರ್ ಪ್ರಕಟಣೆ**
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕೋಲಾರ ವತಿಯಿಂದ ಅವಶ್ಯಕತೆಯಿರುವ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000ರ ಪ್ರಕಾರ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

1) ಟೆಂಡರ್‌ದಾರರು ನಿಗಧಿಪಡಿಸಿರುವ ಅರ್ಹತೆ ಮತ್ತು ಅನುಭವಗಳು ಇರತಕ್ಕದ್ದು. 2) ಟೆಂಡರ್ ದಸ್ತಾವೇಜುಗಳನ್ನು **ದಿನಾಂಕ; 22.07.2021 ರಿಂದ ದಿನಾಂಕ: 02.08.2021ರ ಸಂಜೆ 4:00 ಗಂಟೆಯೊಳಗೆ** ಸಲ್ಲಿಸುವುದು. 3) ಟೆಂಡರ್ ಡಾಕ್ಯೂಮೆಂಟ್ ಸಲ್ಲಿಸಲು ಕೊನೆಯ **ದಿನಾಂಕ: 02.08.2021ರ ಸಂಜೆ 4:00 ಗಂಟೆಯವರೆಗೆ.** 4) ಟೆಂಡರ್ ತಾಂತ್ರಿಕ ಲಕೋಟೆಯನ್ನು **ದಿನಾಂಕ: 04.08.2021ರ ಬೆಳಿಗ್ಗೆ 11:00 ಗಂಟೆಗೆ ತೆರೆಯಲಾಗುವುದು.** 5) ಟೆಂಡರ್ ದಸ್ತಾವೇಜುಗಳು ಲಭ್ಯವಿದ್ದು **www.eproc.karnataka.gov.in** ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಯನ್ನು **ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ, ಕೋಲಾರ ಜಿಲ್ಲೆ, ಕೆ.ಎನ್.ಟಿ.ಬಿ ಆಸ್ಪತ್ರೆ ಆವರಣ, ಬಂಗಾರಪೇಟೆ ರಸ್ತೆ, ಕೋಲಾರ–563102** ಇಲ್ಲಿ ಕಛೇರಿ ವೇಳೆ ಸಮಯದಲ್ಲಿ ಪಡೆಯಬಹುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,
ಕೋಲಾರ

ವಾಸಾಸಂಇ/ಕೋಲಾರ/ಜಿಎ/146/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001.
ದೂ.080-25586520/25589112 ಫ್ಯಾಕ್ಸ್ : 080-25886321
ಇ-ಮೇಲ್: ho@kspcb.gov.in ವೆಬ್‌ಸೈಟ್: http://kspcb.gov.in

ನಂ.ಕರಾಮಾನಿಮಂ/160/ಹಿಪಅ/ಗಣಿ/ಪಸಾಸ/2021–22/1592 ದಿನಾಂಕ:15.07.2021

**ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ**

ಮೆ. ಪಿ.ವಿ.ಎಸ್.ಆರ್. ಸ್ಟೀಲ್ ಅಂಡ್ ಪವರ್ ಪ್ರೈ. ಲಿ. ಇವರು **ಸರ್ವೆ ನಂ. 228/1, 228/2 ಮತ್ತು 228/3, ಹಲಕುಂದಿ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ** 7.34 ಹೆಕ್ಟೇರ್ ಪ್ರದೇಶದಲ್ಲಿ 2x100 ಟಿ.ಪಿ.ಡಿ. ಸಾಮರ್ಥ್ಯದ ಸ್ಪಾಂಜ್ ಐರನ್ (ಡಿ.ಆರ್.ಐ) ಸ್ಥಾವರ, ಪ್ರತಿ ಗಂಟೆಗೆ 2 ಮೆ.ವ್ಯಾ. ಸಾಮರ್ಥ್ಯದ ಸಹ ವಿದ್ಯುತ್ ಘಟಕ ಮತ್ತು 2X5 ಟಿ.ಪಿ.ಹೆಚ್. ಸಾಮರ್ಥ್ಯದ ಬಾಯ್ಲರ್ ಸ್ಥಾಪನೆಯ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ಕೇಂದ್ರ ಅರಣ್ಯ ಪರಿಸರ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ:F.No. J-11011/42/2020-IA.II(I) ದಿನಾಂಕ 05.05.2020 ಮತ್ತು ತಿದ್ದುಪಡಿ ದಿನಾಂಕ: 15.12.2020 ಮತ್ತು ದಿನಾಂಕ:04.01.2021 ರಂದು ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ. ಈ ಹಿಂದೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯು **ದಿನಾಂಕ 27.04.2021 ರಂದು ನಿಗದಿಯಾಗಿತ್ತು** ಮತ್ತು ಈ ಬಗ್ಗೆ ದಿನಾಂಕ 27.03.2021 ರಂದು ಪತ್ರಿಕಾ ಪ್ರಕಟಣೆಯು (ಕನ್ನಡ: ಪ್ರಜಾವಾಣಿ ಮತ್ತು ಆಂಗ್ಲ: ಡೆಕ್ಕನ್ ಹೆರಾಲ್ಡ್) ಸಹ ನೀಡಲಾಗಿತ್ತು. ಆದರೆ, ಕೋವಿಡ್–19 ಸಾಂಕ್ರಾಮಿಕ ಹರಡುವಿಕೆಯಿಂದ ಆಲಿಕೆ ಸಭೆಯನ್ನು ಮುಂದೂಡಲಾಗಿತ್ತು. ಈಗ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು **ದಿನಾಂಕ 24.08.2021 (ಮಂಗಳವಾರ) ರಂದು ಮರುನಿಗದಿಪಡಿಸಲಾಗಿದೆ.**

**ಯೋಜನೆಯ ವಿವರಗಳು ಕೆಳಕಂಡಂತಿವೆ.**

| | |
|---|---|
| 1. | **ಕಂಪನಿಯ ಹೆಸರು ಮತ್ತು ವಿಳಾಸ: ಮೆ. ಪಿ.ವಿ.ಎಸ್.ಆರ್. ಸ್ಟೀಲ್ ಅಂಡ್ ಪವರ್ ಪ್ರೈ. ಲಿ.** ಟಿ.ಎಸ್. ನಂ. 715/ಬಿ4/ಎ ಭಾಗ, ಪ್ಲಾಟ್ ನಂ. 80 ಭಾಗ, ಸಿ.ಎಂ.ಸಿ ವಾರ್ಡ್ ನಂ. 18, ಸಿ.ಟಿ.ಸಿ. ವಾರ್ಡ್ ನಂ. 16, ಬ್ಲಾಕ್ ನಂ. 20, ಬಾಲ ಭಾರತಿ ಶಾಲೆ ಹತ್ತಿರ, 3ನೇ ಕ್ರಾಸ್, ಗಾಂಧಿ ನಗರ, ಬಳ್ಳಾರಿ – 583 103. |
| 2. | **ಉದ್ದೇಶಿತ ಯೋಜನೆಯ ಸ್ಥಳ : ಸರ್ವೆ ನಂ. 228/1, 228/2 ಮತ್ತು 228/3, ಹಲಕುಂದಿ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ.** |
| 3. | **ಯೋಜನೆಯ ಕಾರ್ಯ ಚಟುವಟಿಕೆ:** 2X100 ಟಿ.ಪಿ.ಡಿ. ಸಾಮರ್ಥ್ಯದ ಸ್ಪಾಂಜ್ ಐರನ್ (ಡಿ.ಆರ್.ಐ) ಸ್ಥಾವರ, ಪ್ರತಿ ಗಂಟೆಗೆ 2 ಮೆ.ವ್ಯಾ. ಸಾಮರ್ಥ್ಯದ ಸಹ ವಿದ್ಯುತ್ ಘಟಕ ಮತ್ತು 2X5 ಟಿ.ಪಿ.ಹೆಚ್. ಸಾಮರ್ಥ್ಯದ ಬಾಯ್ಲರ್ ಸ್ಥಾಪನೆಯ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. |
| 4. | **ಮಾಲಿನ್ಯ ನಿಯಂತ್ರಣ ಕ್ರಮಗಳು:** ಉದ್ಯಮದ ಕಾರ್ಮಿಕರಿಂದ ಉತ್ಪತ್ತಿಯಾಗುವ ಗೃಹ ಬಳಕೆಯ ತ್ಯಾಜ್ಯ ನೀರನ್ನು 10 ಕೆ.ಎಲ್.ಡಿ. ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸಲಾಗುವುದು. ಈ ಪ್ರಕ್ರಿಯೆಯಿಂದ ತ್ಯಾಜ್ಯನೀರಿನ ಉತ್ಪಾದನೆಯಾಗುವುದಿಲ್ಲ. ಉತ್ಪತ್ತಿಯಾದ ನೀರನ್ನು ಮರುಬಳಕೆ ಮಾಡಲಾಗುವುದು ಮತ್ತು ಪ್ರಕ್ರಿಯೆಯಲ್ಲಿ ಬಳಸಲಾಗುವುದು. ನೀರಿನ ನಿಶ್ಚಲತೆಯನ್ನು ತಪ್ಪಿಸಲು ನಿರ್ಮಾಣದ ಸ್ಥಳದ ಸುತ್ತಲೂ ತಾತ್ಕಾಲಿಕ ದಂಡೆ ಚರಂಡಿಗಳ ವ್ಯವಸ್ಥೆಯನ್ನು ಕೈಗೊಳ್ಳಲಾಗುವುದು. ಸದರಿ ನೀರನ್ನು ಕ್ಯಾಚ್ ಪಿಟ್‌ಗಳಲ್ಲಿ ಸಂಗ್ರಹಿಸಲಾಗುತ್ತದೆ ಮತ್ತು ಯೋಜನಾ ಸ್ಥಳದ ಸುತ್ತಲೂ ಧೂಳು ನಿಗ್ರಹಿಸಲು ಮರುಬಳಕೆ ಮಾಡಲಾಗುತ್ತದೆ. ಸಂಚಾರ ಧೂಳನ್ನು ನಿಗ್ರಹಿಸಲು ನೀರು ಚಿಮುಕಿಸುವ ವ್ಯವಸ್ಥೆಯನ್ನು ಮಾಡಲಾಗುವುದು. ಕಣಗಳ ಹೊರಸೂಸುವಿಕೆಯನ್ನು ನಿಯಂತ್ರಿಸಲು ಎಲ್ಲಾ ಆಂತರಿಕ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗುತ್ತದೆ. ವಾಯುಮಾಲಿನ್ಯವನ್ನು ತಗ್ಗಿಸಲು ಉದ್ಯಮದ ಪರಧಿಯ ಉದ್ದಕ್ಕೂ ಹಸಿರುಪಟ್ಟಿಯನ್ನು ಅಭಿವೃದ್ಧಿಪಡಿಸಲಾಗುತ್ತದೆ. |
| 5. | **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ಉದ್ದೇಶಿತ ಯೋಜನಾ ಸ್ಥಳ, ಸರ್ವೆ ನಂ. 228/1, 228/2 ಮತ್ತು 228/3, ಹಲಕುಂದಿ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ. ದಿನಾಂಕ:24.08.2021(ಮಂಗಳವಾರ) ರಂದು ಪೂರ್ವಾಹ್ನ 11:00 ಗಂಟೆಗೆ.** |
| 6. | **ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ :** (ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ. ಬಳ್ಳಾರಿ (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಳ್ಳಾರಿ (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ (ಈ) ತಾಲ್ಲೂಕು ಪಂಚಾಯಿತಿ, ಬಳ್ಳಾರಿ (ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಹಲಕುಂದಿ (ಊ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ (ಋ) ಕೇಂದ್ರ ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. (ಎ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001. |

**ಸೂಚನೆ:** ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ. ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಸಮಗ್ರ ಶಿಕ್ಷಣ – ಕರ್ನಾಟಕ
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ,
ಕೆ.ಆರ್. ವೃತ್ತ, ಬೆಂಗಳೂರು–560001.
ವೆಬ್‌ಸೈಟ್: www.schooleducation.kar.nic.in ಇ–ಮೇಲ್: ssakarnataka@gmail.com

ಸಂಖ್ಯೆ: ಸಶಿಕ/ಸಶಿ/ಎಸ್.ಆರ್.ಪಿ.ಟೆಂಡರ್/18/2020–21 ದಿನಾಂಕ: 22.07.2021

**ಮರು ಟೆಂಡರ್ ಪ್ರಕಟಣೆ**

ವಿಷಯ: ರಾಜ್ಯದ ಆಯ್ದ 25 ಶಾಲಾ ಸಿದ್ಧತಾ ಕೇಂದ್ರಗಳಿಗೆ ಸಾಮಗ್ರಿಗಳನ್ನು ಒದಗಿಸುವ ಕುರಿತು 25 ಜಿಲ್ಲೆಯ 25 ಬ್ಲಾಕ್‌ಗಳಿಗೆ ಸರಬರಾಜು ಮಾಡಲು ಮರು–ಟೆಂಡರ್ ಕರೆಯುವ ಬಗ್ಗೆ.
ಸಮಗ್ರ ಶಿಕ್ಷಣ – ಕರ್ನಾಟಕ ವತಿಯಿಂದ ಆಯ್ದ 25 ಶಾಲಾ ಸಿದ್ಧತಾ ಕೇಂದ್ರಗಳಿಗೆ ಸಾಮಗ್ರಿಗಳನ್ನು ಒದಗಿಸುವ ಕುರಿತು 25 ಜಿಲ್ಲೆಯ 25 ಬ್ಲಾಕ್‌ಗಳಿಗೆ ಸರಬರಾಜು ಮಾಡುವ ಸಂಬಂಧ ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮರು–ಟೆಂಡರ್ ಆಹ್ವಾನಿಸಿದೆ.
(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ: **05.08.2021 ಸಂಜೆ 5:30 ಗಂಟೆ.** (2) ಪ್ರಿ ಬಿಡ್ ಸಭೆಯ ದಿನಾಂಕ: **29.07.2021**ರಂದು **ಮಧ್ಯಾಹ್ನ 3:00 ಗಂಟೆಗೆ.** (3) ವಿವರಗಳಿಗಾಗಿ **https://eproc.karnataka.gov.in** ಗಮನಿಸುವುದು.

ಸಹಿ/–
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ – ಕರ್ನಾಟಕ

DIPR/DDU/918/2021-22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಹೊಲಗಾಲುವೆ ವಿಭಾಗ ಸಂ–4, ಆಲಮೇಲ–586202.
ತಾ:ಸಿಂದಗಿ. ಜಿ:ವಿಜಯಪುರ. ದೂರವಾಣಿ ಸಂ:08488–232016.
ಇ–ಮೇಲ್:eefic4@gmail.com.

ಸಂ:ಕೃಭಾಜನಿನಿ/ಹೊವಿ–4/ತಾಂತ್ರಿಕ/ಹೊ.ಗು/2021–22/109 ದಿನಾಂಕ:20.07.2021

**ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ**
**ಶೇಕಡಾವಾರು ಟೆಂಡರ್ ಆಹ್ವಾನ(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)**

ಮಾನ್ಯ ಆಡಳಿತಾಧಿಕಾರಿಗಳು ಕೃಷ್ಣಾ–ಕಾಡಾ,ಭೀಮರಾಯನಗುಡಿ ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಹೊಲಗಾಲುವೆ ವಿಭಾಗ–4, ಆಲಮೇಲ ಇವರಿಂದ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ನಿರ್ದೇಶನಾಲಯ, ಬೆಂಗಳೂರು ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಮ್ಯಾನ ಪವರ್ ಏಜೆನ್ಸಿ ಮೂಲಕ ಸಿಬ್ಬಂದಿ ಪಡೆಯಲು **ಬೆರಳಚ್ಚುಗಾರರು/ಕಂಪ್ಯೂಟರ ಅಪರೇಟರಗಳು–04, ವಾಹನ ಚಾಲಕರು –04, ಹಾಗೂ ದಲಯತ್ (ಅಟೆಂಡರ್/ಕಾವಲುಗಾರ ಆಫೀಸ್ ಕ್ಲೀನರ್–06 ಹುದ್ದೆಗಳಿಗೆ** ಹೊರಗುತ್ತಿಗೆ ಆಧಾರದ ಮೇಲೆ ಮ್ಯಾನ ಪವರ್ ಏಜೆನ್ಸಿಗಳಿಂದ **ಒಂಬತ್ತು ತಿಂಗಳ (ದಿ: 01–08–2021 ರಿಂದ 31–03–2022 ರ)** ಅವಧಿಗೆ ಮಾತ್ರ ಕೆಲಸಕ್ಕಾಗಿ ಸೇವೆ ನೀಡಲು ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರನ್ನು(ಒಂದು ಲಕೋಟೆ) ಈ–ಪ್ರೊಕ್ಯೂರಮೆಂಟ್ ಪೊರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕೆಳಗೆ ಸಹಿಮಾಡಿರುವರಿಂದ ಕಚೇರಿ ಸಮಯದಲ್ಲಿ / ಇ–ಪ್ರೊಕ್ಯೂರಮೆಂಟ್ ಪೊರ್ಟಲ್‌ನಲ್ಲಿ ಪಡೆಯಬಹುದಾಗಿದೆ.

**ಟೆಂಡರ್ ಪ್ರಕ್ರಿಯೆಯ ದಿನಾಂಕಗಳು:–** 1) ಟೆಂಡರ್ ಪ್ರಕಟಣೆ ಸಂಖ್ಯೆ: 109 ದಿನಾಂಕ:20.07.2021 2) ಈ–ಟೆಂಡರ್ ಲಭ್ಯವಾಗುವ **ದಿನಾಂಕ: 23.07.2021,** ಮುಂಜಾನೆ 11.00 ಗಂಟೆಯ ನಂತರ. 3) ಟೆಂಡರ್ ವಿಚಾರಣೆಗಾಗಿ ಕೊನೆಯ **ದಿನಾಂಕ:27.07.2021,** ಸಂಜೆ 4.00 ಗಂಟೆ. 4) ಈ–ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:30.07.2021,** 5.30 ಗಂಟೆವರೆಗೆ. 5) ಆರ್ಥಿಕ ಲಕೋಟೆ ತೆರೆಯುವ **ದಿನಾಂಕ:01.08.2021,** ಮುಂಜಾನೆ 11.00 ಗಂಟೆಯ ನಂತರ.

ಸಹಿ/– (ಎಸ್.ಎಮ್.ಜಮಾದಾರ) ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ,ಹೊಲಗಾಲುವೆ ವಿಭಾಗ–4,ಆಲಮೇಲ.

ವಾಸಾಸಂಇ/ವಿಜಯಪುರ/177/ಎಂಸಿಎ/2021–22

---

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
## ಅಲ್ಪಸಂಖ್ಯಾತರ ನಿರ್ದೇಶನಾಲಯ
20ನೇ & 21ನೇ ಮಹಡಿ, ವಿ.ವಿ. ಗೋಪುರ, ಡಾ।। ಬಿ.ಆರ್ ಅಂಬೇಡ್ಕರ್ ವೀಧಿ,
ಬೆಂಗಳೂರು 560001. Website: https://dom.karnataka.gov.in

ಸಂಖ್ಯೆ: ಅಸಂನಿ/ಸ್ಮಾರ್ಟ್‌ಫೋನ್/ಸಿಆರ್–55/2021–22 ದಿನಾಂಕ: 24-07-2021

**ಅಲ್ಪಾವಧಿ ಟೆಂಡರ್ ಪ್ರಕಟಣೆ**

**ಬೆಳಗಾವಿ ಜಿಲ್ಲೆಯ ಅಲ್ಪಸಂಖ್ಯಾತರ ಎಂಡಿಆರ್‌ಎಸ್ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಸ್ಮಾರ್ಟ್‌ಫೋನ್ ಸರಬರಾಜು ಮಾಡಲು**

ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಬೆಳಗಾವಿ ಜಿಲ್ಲೆಯ ಅಲ್ಪಸಂಖ್ಯಾತರ ಎಂಡಿಆರ್‌ಎಸ್ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಸ್ಮಾರ್ಟ್‌ಫೋನ್ ಸರಬರಾಜು ಮಾಡಲು ಸಿದ್ದರಿರುವ ಆಸಕ್ತ ಬಿಡ್‌ದಾರರಿಂದ ದ್ವಿ–ಲಕೋಟೆ ಪದ್ಧತಿಯಡಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

| | | |
|---|---|---|
| 1 | ಟೆಂಡರ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ | ಅಸಂನಿ/ಆ/ವಶಾ/ ಸೆಲ್‌ಫೋನ್/ಸಿಆರ್–55/ 2021–22 ದಿನಾಂಕ: 23.07.2021 |
| 2 | ಟೆಂಡರ್ ಪ್ರಕಟಣೆಯ ದಿನಾಂಕ | 23/07/2021 |
| 3 | ಟೆಂಡರ್‌ಗಿಟ್ಟ ಮೊತ್ತ | ರೂ. 90,00,000 |
| 4 | ಬಿಡ್ ಪೂರ್ವ ಸಭೆ ದಿನಾಂಕ, ಸ್ಥಳ ಮತ್ತು ಸಮಯ | 29/07/2021, ಮಧ್ಯಾಹ್ನ 3.00 ಗಂಟೆ, ಅಲ್ಪಸಂಖ್ಯಾತರ ನಿರ್ದೇಶನಾಲಯ, 21 ನೇ ಮಹಡಿ, ವಿವಿ ಗೋಪುರ, ಬೆಂಗಳೂರು. |
| 5. | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 06/08/2021, ಸಂಜೆ 5.00 ಗಂಟೆ |
| 6. | ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ | 09/08/2021, ಬೆಳಿಗ್ಗೆ 11.00 ಗಂಟೆ |
| 7. | ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ | ತಾಂತ್ರಿಕ ಮೌಲ್ಯಮಾಪನ ಪೂರ್ಣಗೊಂಡನಂತರ |
| 8. | ಇಎಂಡಿ ಮೊತ್ತ | ರೂ. 1,80,000 |
| 9. | ಟೆಂಡರ್ ತೆರೆಯುವ ಸ್ಥಳ ಮತ್ತು ಸಂವಹನಕ್ಕೆ ವಿಳಾಸ: | 20 ಮತ್ತು 21 ನೇ ಮಹಡಿ, ವಿ.ವಿ.ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–01. |

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿತ ಆಸಕ್ತ ಬಿಡ್‌ದಾರರು ಬಿಡ್ಡನ್ನು ವೆಬ್‌ಸೈಟ್: https://eproc.karnataka.gov.in ಗೆ ಭೇಟಿ ನೀಡಿ ಸಲ್ಲಿಸಬಹುದು.

ಸಹಿ/– ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು

---

## ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22267899
website: www.kiadb.in, e-mail: cof@kiadb.in

ಸಂಖ್ಯೆ: ಕೆಐಎಡಿಬಿ/ಸಿಎಫ್/ಇ–ಹರಾಜು–01/4412/2021–22 ದಿನಾಂಕ: 22.07.2021

**ಪತ್ರಿಕಾ ಪ್ರಕಟಣೆ**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ), ತನ್ನ ಹೆಚ್ಚುವರಿ ನಿಧಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅಲ್ಪಾವಧಿ ಠೇವಣಿ ಮಾಡಲು ಉದ್ದೇಶಿಸಿದೆ. ನಿಗದಿತ ಮೊತ್ತ, ಅಲ್ಪಾವಧಿ ಠೇವಣಿಯ ಅವಧಿ ಮತ್ತು ಇತರೆ ವಿವರಗಳು ಈ ಕೆಳಕಂಡಂತಿವೆ.

1) ರೂ .75.00 ಕೋಟಿ – ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 31 ದಿನಗಳವರೆಗೆ.
2) ರೂ .75.00 ಕೋಟಿ – ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 46 ದಿನಗಳವರೆಗೆ.
3) ರೂ .75.00 ಕೋಟಿ – ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 61 ದಿನಗಳವರೆಗೆ.
4) ರೂ .75.00 ಕೋಟಿ – ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 91 ದಿನಗಳವರೆಗೆ.

ಇ–ಹರಾಜಿಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇ–ಹರಾಜಿಗೆ ಸಂಬಂಧಿಸಿದ ವೇಳಾಪಟ್ಟಿ ಈ ಕೆಳಗಿನಂತಿದೆ:
1) ಇ–ಹರಾಜು ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: 27.07.2021,
2) ಅನುಬಂಧ–ಬಿ ಘೋಷಣೆಯನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 04.08.2021 ರ ಮಧ್ಯಾಹ್ನ 3.30 ಗಂಟೆ ಒಳಗೆ,
3) ಟೆಂಡರ್ ತೆರೆಯುವ ದಿನಾಂಕ: 05.08.2021, ಸಂಜೆ 4.00 ಗಂಟೆ ನಂತರ
4) ನೇರ ಹರಾಜು: 07.08.2021ರ ಬೆಳಗ್ಗೆ 11.00ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 1.00 ಗಂಟೆಗೆ ಮುಕ್ತಾಯಗೊಳ್ಳಲಿದೆ.

ಸಹಿ/–
ಹಣಕಾಸು ನಿಯಂತ್ರಣಾಧಿಕಾರಿ, ಕೆಐಎಡಿಬಿ.

DIPR/DDU/Zen/R.O:913/2021-22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
ಶರಾವತಿ ವಿದ್ಯುತ್ ಯೋಜನೆ
ಸಿಐಎನ್: U85110KA1970SGC001919

ಸಂಖ್ಯೆ: ಇಇಸಿಕೆ/ಡಬ್ಲ್ಯೂಆರ್‌ಎ/ ದಿನಾಂಕ: 23.07.2021

**ಲಿಂಗನಮಕ್ಕಿ ಜಲಾಶಯದ ಪ್ರವಾಹದ ಮೊದಲನೇ ಮುನ್ನೆಚ್ಚರಿಕೆಯ ಸೂಚನೆ**

ಶರಾವತಿ ಯೋಜನೆಯ ಲಿಂಗನಮಕ್ಕಿ ಜಲಾನಯನ ಪ್ರದೇಶದಲ್ಲಿ ಸತತವಾಗಿ ಮಳೆ ಬೀಳುತ್ತಿರುವುದರಿಂದ **ಲಿಂಗನಮಕ್ಕಿ ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಮಟ್ಟವು ಸತತವಾಗಿ ಏರುತ್ತಿರುತ್ತದೆ. ಜಲಾಶಯದ ಗರಿಷ್ಠ ಮಟ್ಟವು 1819.00 ಅಡಿಗಳಾಗಿದ್ದು ಇಂದಿನ ಅಂದರೆ ದಿನಾಂಕ: 23.07.2021ರಂದು ಮಧ್ಯಾಹ್ನ 3.00ಗಂಟೆಗೆ ಜಲಾಶಯದ ನೀರಿನ ಮಟ್ಟ 1800.90 ಅಡಿಗಳಾಗಿರುತ್ತದೆ. ಈ ದಿನದ ಲಿಂಗನಮಕ್ಕಿ ಜಲಾಶಯದ ಒಳ ಹರಿವು ಸುಮಾರು ಒಂದು ಲಕ್ಷ ಕ್ಯೂಸೆಕ್ಸ್‌ಗಳಿಗಿಂತಾ ಅಧಿಕವಾಗಿದ್ದು,** ಇದೇ ರೀತಿಯಲ್ಲಿ ಜಲಾಶಯಕ್ಕೆ ಬರುವ ನೀರಿನ ಹರಿವು ಮುಂದುವರೆದ ಪಕ್ಷದಲ್ಲಿ ಜಲಾಶಯವು ಶೀಘ್ರದಲ್ಲಿ ಗರಿಷ್ಠ ಮಟ್ಟವನ್ನು ತಲುಪುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅಣೆಕಟ್ಟೆಯ ಸುರಕ್ಷತಾ ದೃಷ್ಠಿಯಿಂದ, ಹೆಚ್ಚುವರಿ ನೀರನ್ನು ಜಲಾಶಯದಿಂದ ಯಾವುದೇ ಸಮಯದಲ್ಲಿ ಹೊರಬಿಡಲಾಗುವುದು.
**ಆದ್ದರಿಂದ, ಅಣೆಕಟ್ಟೆಯ ಕೆಳದಂಡೆಯಲ್ಲಿ ಹಾಗೂ ನದಿಯ ಪಾತ್ರದುದ್ದಕ್ಕೂ ವಾಸಿಸುತ್ತಿರುವ ಸಾರ್ವಜನಿಕರು ತಮ್ಮ ಜನ, ಜಾನುವಾರು ವಗೈರೆಗಳೊಂದಿಗೆ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.**

ಸಹಿ/– ಕಾರ್ಯನಿರ್ವಾಹಕ ಅಭಿಯಂತರು(ಕಾಮಗಾರಿ), ಕೆಪಿಸಿಎಲ್,
ಕಾರ್ಗಲ್ ಕಾಲೋನಿ– 577 421, ಸಾಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ, ದೂರವಾಣಿ ಸಂಖ್ಯೆ: 08186–240344.

---

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ವಿಭಾಗ,
ಪಶ್ಚಿಮ ವಲಯ, ಜಂಟಿ ಆಯುಕ್ತರು (ಪಶ್ಚಿಮ) ಕಛೇರಿ ಆವರಣ,
2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560 020

ನಂ.: ಕಾಪಾಅ/ಯೋ–ಪ/ಟೆಂಡರ್/12/2021–22 ದಿನಾಂಕ: 22.07.2021

**ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)**

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಪಶ್ಚಿಮ ವಲಯ ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

| ಕ್ರ ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ರಾಜಾಜಿನಗರ ವಿಧಾನಸಭಾ ಕ್ಷೇತ್ರ, **ವಾರ್ಡ್ ನಂ. 101**ರಲ್ಲಿ ಸಮಗ್ರ ಅಭಿವೃದ್ಧಿ ಮತ್ತು ಬಹುಪಯೋಗಿ ಕಟ್ಟಡ ಮತ್ತು ಸಾರ್ವಜನಿಕ ಶೌಚಾಲಯ ನಿರ್ಮಾಣ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳು ಪ್ಯಾಕೇಜ್ 03. **ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್: ಕೆಡಬ್ಲ್ಯೂ–4** | 500.00 |

**ಸೂಚನೆ:** ಜಿಒಕೆ ಆದೇಶ ಸಂಖ್ಯೆ: ಅಇ 675 ವೆಚ್ಚ–12/2020, ಬೆಂಗಳೂರು (ದಿನಾಂಕ: 22–12–2020 ರಿಂದ 31–12–2021ರ ವರೆಗೆ ಮಾತ್ರ) ರಂತೆ ಈ ಕಾಮಗಾರಿಗೆ ಇಎಂಡಿ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

**ವೇಳಾಪಟ್ಟಿ:** (1) ಟೆಂಡರ್ ದಸ್ತಾವೇಜುಗಳನ್ನು ಇ–ಪೋರ್ಟಲ್ ಮೂಲಕ **26.07.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ: **16.08.2021ರ ಸಂಜೆ 4:00 ಗಂಟೆಗೆ.** (3) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **17.08.2021ರ ಸಂಜೆ 4:00 ಗಂಟೆಯ** ವರೆಗೆ. (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **25.08.2021ರ ಸಂಜೆ 4:00 ಗಂಟೆವರೆಗೆ.** (5) ಬಿಡ್‌ಗಳನ್ನು ತೆರೆಯುವುದು (ತಾಂತ್ರಿಕ ಬಿಡ್): **27.08.2021ರ ಸಂಜೆ 4:30 ಗಂಟೆಗೆ.** (6) ಬಿಡ್‌ಗಳನ್ನು ತೆರೆಯುವುದು (ಆರ್ಥಿಕ ಬಿಡ್): **30.08.2021**ಕ್ಕೆ (ಸಾಧ್ಯವಾದಲ್ಲಿ). ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಪಶ್ಚಿಮ ವಲಯ, ಬಿಬಿಎಂಪಿ

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

ಕರ್ನಾಟಕ ಸರ್ಕಾರ
## ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ:ಕಾನಿಇಂ/ಲೋ.ಇ/ವಿ.ಜೆ.ಪಿ/ಪಿ.ಬಿ/8443/2021–22/1012
ದಿನಾಂಕ:21.07.2021

**ಅಲ್ಪಾವಧಿ ಟೆಂಡರ್ ತಿದ್ದುಪಡಿ ಹಾಗೂ ಅವಧಿ ವಿಸ್ತರಣೆ ಪ್ರಕಟಣೆ**
**(ಇ–ಪ್ರೊಕ್ಯೂರ್‌ಮೆಂಟ್)**

ಉಲ್ಲೇಖ:– 1) ಈ ಕಛೇರಿ ಪ್ರಕಟಣೆ ಐ.ಎಫ್.ಟಿ. ನಂ. **ಕಾ.ನಿ.ಇಂ./ಲೋ.ಇ/ ವಿ.ಜೆ.ಪಿ/ಪಿ.ಬಿ/8443/2021–22**/330 ದಿನಾಂಕ:29–05–2021.
ಮೇಲಿನ **ಉಲ್ಲೇಖದಲ್ಲಿ ಪ್ರಕಟಿಸಲಾದ ಕಾಮಗಾರಿಯ ಟೆಂಡರ ಪ್ರಕಟಣೆಯನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಿ ಹಾಗೂ ಈ ಕೆಳಗಿನಂತೆ ತಿದ್ದುಪಡಿ** ಮಾಡಿ ಅವಧಿ ವಿಸ್ತರಿಸಲಾಗಿದೆ.
ಕಾರ್ಯನಿರ್ವಾಹಕ ಇಂಜನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ ಅಡಿಯಲ್ಲಿ ವಿಜಯಪುರ ನಗರದ ಎ.ಟಿ.ಆರ್–72–600 ಎರ್‌ಕ್ರಾಪ್ಟ ಹಗಲು ವ್ಹಿ.ಎಫ್.ಆರ್ ಕಾರ್ಯಾಚರಣೆಯ ವಿಮಾಣ ನಿಲ್ದಾಣ ನಿರ್ಮಾಣ. (ಹಂತ–2) **(ಇಂಡೆಂಟ ನಂ. 137623) ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಅಂದಾಜು ಮೊತ್ತ ರೂ. 7200.00 ಲಕ್ಷಗಳು.** ಸದರಿ ಕಾಮಗಾರಿಯ ಟೆಂಡರ ಅವಧಿ 11 ತಿಂಗಳು ಮಳೆಗಾಲ ಸಹಿತ. & ಸರ್ಕಾರದ ಆದೇಶದನ್ವಯ ಮುಂಗಡ ಠೇವಣಿ ಮೊತ್ತಕ್ಕೆ ವಿನಾಯಿತಿ ನೀಡಲಾಗಿದೆ. (Contractor Should enclose EMD Declation in Declaration in priscribed format vide GO No. FD/675/Expenditure/12/2020 Bangalore Dated-11/12/2020). ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಗುತ್ತಿಗೆದಾರರ ಪೂರ್ವ ಭಾವಿ ಸಭೆ **ದಿನಾಂಕ:02.08.2021** ರ ಮುಂಜಾನೆ 11.00 ಗಂಟೆಗೆ, ಟೆಂಡರಗಳನ್ನು ಸ್ವೀಕರಿಸುವ **ದಿನಾಂಕ:09.08.2021** ರ ಸಂಜೆ 4.30 ಗಂಟೆಯವರೆಗೆ, ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ **ದಿನಾಂಕ: 10.08.2021** ರ ಸಂಜೆ 4.31 ಘಂಟೆಯ ನಂತರ ಮತ್ತು ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ **ದಿನಾಂಕ: 12.08.2021** ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/178/ಎಂಸಿಎ/2021–22

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



# ಅಭಿಮತ



## ಸುಭಾಷಿತ

ನನ್ನ ಬಳಿ ಶೂಗಳಿಲ್ಲ ಎಂದು ನಾನು ದೂರುತ್ತಲೇ ಇದ್ದೆ,
ಪಾದಗಳೇ ಇಲ್ಲದ ವ್ಯಕ್ತಿಯನ್ನು ಭೇಟಿಯಾಗುವವರೆಗೂ...
–ಕನ್‌ಫ್ಯೂಷಿಯಸ್

## ಆಮ್ಲಜನಕದ ಕೊರತೆಯಿಂದ ಸಾವು ವಾಸ್ತವವನ್ನು ನಿರಾಕರಿಸುವುದು ಏಕೆ?

**ಕೋವಿಡ್** ಚಿಕಿತ್ಸೆಯ ಸಂದರ್ಭದಲ್ಲಿ 'ಆಮ್ಲಜನಕದ ಕೊರತೆಯ ಕಾರಣದಿಂದಾಗಿ ರೋಗಿಗಳು ಮೃತಪಟ್ಟಿರುವ ಬಗ್ಗೆ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ನಿರ್ದಿಷ್ಟವಾಗಿ ವರದಿಗಳು ಬಂದಿಲ್ಲ' ಎಂಬ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ರಾಜ್ಯ ಸಚಿವೆ ಭಾರತಿ ಪ್ರವೀಣ್ ಪವಾರ್ ಅವರ ಹೇಳಿಕೆಯು ಸಂಪೂರ್ಣವಾಗಿ ತಪ್ಪು. ಈ ಉತ್ತರವು ಮನುಷ್ಯರ ಸಾವಿಗೆ ಸಂಬಂಧಿಸಿದ್ದಾಗಿಲ್ಲದೆ ಇದ್ದಿದ್ದರೆ, ಇದನ್ನು ಬಹುದೊಡ್ಡ ತಮಾಷೆ ಎಂದು ಭಾವಿಸಬಹುದಿತ್ತು. ಸಚಿವರು ತೀರಾ ಯಾಂತ್ರಿಕವಾಗಿ ಉತ್ತರ ನೀಡಿದ್ದಾರೆ. ವಾಸ್ತವ ಏನು ಎಂಬುದನ್ನು ಉಪೇಕ್ಷಿಸಿದ್ದಾರೆ. ದೇಶದ ಹಲವು ಪ್ರದೇಶಗಳಲ್ಲಿನ ಸ್ಥಿತಿ ಏನಿತ್ತು ಎಂಬುದನ್ನು ಅರಿತುಕೊಳ್ಳದೆ, ಕಣ್ಣುಮುಚ್ಚಿ ಕುಳಿತುಕೊಂಡಿದ್ದಾರೆ ಎಂದು ಹೇಳಬೇಕಾಗುತ್ತದೆ. ರಾಜ್ಯಗಳಿಂದ ಬಂದ ವರದಿಗಳನ್ನು ಆಧರಿಸಿ ಸಚಿವರು ಈ ಉತ್ತರ ನೀಡಿದ್ದಾರೆ. ರಾಜ್ಯಗಳು, ತಮ್ಮಲ್ಲಿ ಕೋವಿಡ್ ರೋಗಿಗಳು ಸತ್ತಿದ್ದಕ್ಕೆ ಆಮ್ಲಜನಕದ ಕೊರತೆ ಕಾರಣ ಎಂದು ಹೇಳಿಲ್ಲ ಎನ್ನಲಾಗಿದೆ. ಕೋವಿಡ್‌ನಿಂದಾಗಿ ವ್ಯಕ್ತಿಯೊಬ್ಬ ಮೃತಪಟ್ಟಾಗ, ಅದಕ್ಕೆ ಕಾರಣ ಆಮ್ಲಜನಕದ ಕೊರತೆ ಅಥವಾ ಇತರ ಯಾವುದೋ ನಿರ್ದಿಷ್ಟ ಲೋಪ ಎಂದು ಮರಣ ಪ್ರಮಾಣಪತ್ರಗಳಲ್ಲಿ, ವೈದ್ಯಕೀಯ ದಾಖಲೆಗಳಲ್ಲಿ ನಮೂದಾಗದೆ ಇರಬಹುದು. ಹೀಗಿದ್ದರೂ, ಕಣ್ಣಿಗೆ ರಾಚಿರುವ ಸತ್ಯವನ್ನು ಈ ಆಧಾರದಲ್ಲಿ ಸರ್ಕಾರಗಳು ನಿರಾಕರಿಸಬೇಕಾಗಿಲ್ಲ. ನಿರ್ದಿಷ್ಟವಾಗಿ ಆಮ್ಲಜನಕದ ಕೊರತೆಯಿಂದಲೇ ಆಗಿರುವ ಸಾವುಗಳ ಸಂಖ್ಯೆಯನ್ನು ನೀಡುವುದು ಕೇಂದ್ರ ಸರ್ಕಾರಕ್ಕೆ ಕಷ್ಟವಾಗುತ್ತಿತ್ತೇನೋ. ಆದರೂ, ಆಮ್ಲಜನಕದ ಕೊರತೆಯಿಂದ ಸಾವು ಸಂಭವಿಸಿದ ವರದಿಗಳೇ ಇಲ್ಲ ಎಂದು ಉತ್ತರಿಸುವ ಅಗತ್ಯ ಇರಲಿಲ್ಲ. ಮಾನವೀಯ ಬಿಕ್ಕಟ್ಟಿನ ಸಂದರ್ಭಗಳಲ್ಲಿ ನೀಡುವ ಉತ್ತರಗಳು ತೀರಾ ಯಾಂತ್ರಿಕವಾಗಿ ಇರಬಾರದು; ಉತ್ತರಗಳು ವಾಸ್ತವವನ್ನು ನಿರಾಕರಿಸುವಂತೆಯೂ ಇರಬಾರದು.

**ಆಮ್ಲಜನಕ ಸಕಾಲದಲ್ಲಿ ಸಿಗದ ಕಾರಣದಿಂದಾಗಿ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರ ಪಾಲಿಗೆ ಈ ಉತ್ತರ ಯಾವ ಸಂದೇಶವನ್ನು ರವಾನಿಸಬಹುದು?**

ಈ ವರ್ಷದ ಏಪ್ರಿಲ್, ಮೇ ತಿಂಗಳುಗಳಲ್ಲಿ ಕೊರೊನಾ ಸಾಂಕ್ರಾಮಿಕದ ಎರಡನೆಯ ಅಲೆ ಬಹಳ ತೀವ್ರವಾಗಿತ್ತು. ಈ ಸಂದರ್ಭದಲ್ಲಿ ಕರ್ನಾಟಕ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆ ಎದುರಾಗಿತ್ತು. ಹಲವು ಆಸ್ಪತ್ರೆಗಳು ವೈದ್ಯಕೀಯ ಆಮ್ಲಜನಕ ಪೂರೈಸುವಂತೆ ಮನವಿ ಮಾಡಿದ್ದವು, ಆಮ್ಲಜನಕ ಸಿಗದ ಕಾರಣದಿಂದಾಗಿಯೇ ರೋಗಿಗಳಲ್ಲಿ ಕೆಲವರು ಮೃತಪಟ್ಟರು. ಕುಟುಂಬದ ಸದಸ್ಯರನ್ನು ಆಸ್ಪತ್ರೆಗೆ ದಾಖಲಿಸಿದ್ದವರು, ತಮ್ಮವರಿಗೆ ಆಮ್ಲಜನಕ ಬೇಕಿದೆ ಎಂಬ ಮನವಿಯನ್ನು ಸಾಮಾಜಿಕ ಜಾಲತಾಣಗಳ ಮೂಲಕ ಮಾಡಿಕೊಳ್ಳುತ್ತಿದ್ದರು. ರೋಗಿಗಳಿಗೆ ಆಮ್ಲಜನಕ ತಂದುಕೊಡಲು ಹಲವಾರು ಸಂಘ–ಸಂಸ್ಥೆಗಳು ಶ್ರಮಿಸಿದವು. ರಾಜ್ಯದ ಚಾಮರಾಜನಗರ ಜಿಲ್ಲೆಯಲ್ಲಿಯೂ ಆಮ್ಲಜನಕದ ಕೊರತೆಯಿಂದಲೇ ಕೆಲವು ರೋಗಿಗಳು ಮೃತಪಟ್ಟಿದ್ದಾರೆ. ದೇಶದ ರಾಜಧಾನಿ ದೆಹಲಿಯ ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಕೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು. ಕರ್ನಾಟಕ ಕೂಡ ತನ್ನ ಪಾಲಿನ ಆಮ್ಲಜನಕ ಪಡೆದುಕೊಳ್ಳಲು ನ್ಯಾಯಾಲಯದಲ್ಲಿ ವಾದ ಮಂಡನೆ ಮಾಡಬೇಕಾದ ಸ್ಥಿತಿ ಎದುರಾಗಿತ್ತು. ವೈದ್ಯಕೀಯ ಆಮ್ಲಜನಕದ ಕೊರತೆ ಹಾಗೂ ಅದರ ಪರಿಣಾಮವಾಗಿ ಜನರ ಮನಸ್ಸಿನಲ್ಲಿ ಸೃಷ್ಟಿಯಾದ ಭೀತಿ, ರೋಗಿಗಳು ಸಾವನ್ನಪ್ಪಿದ್ದು... ಇವೆಲ್ಲ ದೇಶದ ಪ್ರಜ್ಞೆಯಲ್ಲಿ ಅಚ್ಚೊತ್ತಿ ನಿಂತಿವೆ. ಸಾಮಾಜಿಕ ಜಾಲತಾಣಗಳನ್ನು ತಡಕಾಡಿದರೆ, ಎರಡನೆಯ ಅಲೆಯು ಉತ್ತುಂಗದಲ್ಲಿದ್ದ ಸಂದರ್ಭದ ಮಾಧ್ಯಮ ವರದಿಗಳನ್ನು ಗಮನಿಸಿದರೆ ಇವೆಲ್ಲ ಗೊತ್ತಾಗುತ್ತವೆ. ಹೀಗಿರುವಾಗ, ಆಮ್ಲಜನಕದ ಕೊರತೆಯಿಂದ ಸಾವು ಸಂಭವಿಸಿರುವ ಬಗ್ಗೆ ವರದಿಗಳು ಇಲ್ಲ ಎಂದು ಹೇಳುವುದು ಆತ್ಮವಂಚನೆ ಆಗುತ್ತದೆ. ಆಮ್ಲಜನಕ ಸಕಾಲದಲ್ಲಿ ಸಿಗದ ಕಾರಣದಿಂದಾಗಿ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರ ಪಾಲಿಗೆ ಈ ಉತ್ತರ ಯಾವ ಸಂದೇಶವನ್ನು ರವಾನಿಸಬಹುದು? ಅಹಿತಕರ ಸತ್ಯಗಳನ್ನು ಅಲ್ಲಗಳೆಯುವ ಕೆಲಸವನ್ನು, ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದನ್ನು, ತಪ್ಪುಗಳಿಗೆ ಇನ್ನೊಬ್ಬರನ್ನು ಹೊಣೆ ಮಾಡುವುದನ್ನು ಹಲವರು, ಹಲವು ಸಂದರ್ಭಗಳಲ್ಲಿ ಮಾಡುತ್ತಾರೆ ಎಂಬುದು ನಿಜ. ಆದರೆ, ನುಣುಚಿಕೊಳ್ಳುವುದು ಇಷ್ಟು ಅಸಮರ್ಥನೀಯ ಮಟ್ಟಕ್ಕೆ ಇಳಿಯಬಾರದು.

ದೇಶದ ಬಹುತೇಕರಿಗೆ ಗೊತ್ತಿರುವ ಸತ್ಯವನ್ನು ಸುಳ್ಳು ಎಂದು ಹೇಳುವ ಇಂತಹ ಉತ್ತರಗಳು ಸರ್ಕಾರದ ವಿಶ್ವಾಸಾರ್ಹತೆಯನ್ನು ಹಾಳು ಮಾಡುತ್ತವೆ. ಸಾಂಕ್ರಾಮಿಕದ ವಿಚಾರವಾಗಿ ಕೇಂದ್ರವು ನೀಡಿರುವ ಇತರ ವಿವರಗಳು, ಕೋವಿಡ್ ಅಲ್ಲದೆ ಇನ್ನಿತರ ಬಿಕ್ಕಟ್ಟುಗಳ ಬಗ್ಗೆ ಕೊಟ್ಟಿರುವ ಮಾಹಿತಿ ಕೂಡ ತಪ್ಪಾಗಿರಬಹುದೇ ಎಂಬ ಅನುಮಾನ ಜನರಲ್ಲಿ ಮೂಡಬಹುದು. ಜನ ತೀರಾ ಅಸಹಾಯಕರಾಗಿದ್ದ ಸಂದರ್ಭಕ್ಕೆ ಸಂಬಂಧಿಸಿದ ಉತ್ತರ ಇದಾಗಿರುವ ಕಾರಣ, ಸರ್ಕಾರದ ವಿವರಣೆಯು ಅಸೂಕ್ಷ್ಮದ್ದು ಎಂದು ಜನ ಭಾವಿಸಬಹುದು. ಬಿಕ್ಕಟ್ಟಿನ ಸಂದರ್ಭಗಳಲ್ಲಿ ಸರ್ಕಾರವು ಜನರ ವಿಶ್ವಾಸಕ್ಕೆ ಪಾತ್ರವಾಗಬೇಕು. ಜನರ ಕಷ್ಟಗಳ ಬಗ್ಗೆ ಸೂಕ್ಷ್ಮ ಮನಸ್ಸಿನಿಂದ ಸ್ಪಂದಿಸಬೇಕು. ಇದು ಬಹಳ ಮಹತ್ವದ್ದು. ಆದರೆ, ಕೋವಿಡ್ ಸಾಂಕ್ರಾಮಿಕಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹ, ದಾಖಲಿಸುವಿಕೆ ಮತ್ತು ಅದರ ಅರ್ಥೈಸುವಿಕೆಯು ಆರಂಭದಿಂದಲೂ ಸೂಕ್ತವಾಗಿ ನಡೆದಿಲ್ಲ. ಹಲವು ಹಂತಗಳಲ್ಲಿ ಮಾಹಿತಿ ಸಮರ್ಪಕವಾಗಿ ದಾಖಲಾಗಿಲ್ಲ ಎಂಬ ವರದಿಗಳು ಇವೆ. ಸಾಂಕ್ರಾಮಿಕದ ವಿರುದ್ಧದ ಹೋರಾಟದಲ್ಲಿ, ಮಾಹಿತಿಯನ್ನು ತಪ್ಪಾಗಿ ಹೇಳುವುದು ಅಥವಾ ಪಾರದರ್ಶಕವಾಗಿ ನಡೆದುಕೊಳ್ಳದೆ ಇರುವುದು, ಉತ್ತರದಾಯಿತ್ವ ಇಲ್ಲದವರಂತೆ ವರ್ತಿಸುವುದು ಯಾರಿಗೂ ಒಳಿತು ಮಾಡುವುದಿಲ್ಲ.

### ದಿನದ ಟ್ವೀಟ್

**ಉತ್ತಮ ಬೋಧನೆ**

**ಚಂದನ ವಾಹಿನಿಯಲ್ಲಿ 1ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗಾಗಿ ಪ್ರಸಾರವಾಗುತ್ತಿರುವ ಶೈಕ್ಷಣಿಕ ತರಗತಿಗಳು ಚೆನ್ನಾಗಿ ಮೂಡಿಬರುತ್ತಿವೆ. ಯಾವ ಪ್ರೈವೇಟ್ ಸ್ಕೂಲ್ ಟೀಚರ್ಸ್‌ಗಿಂತ ಕಮ್ಮಿ ಇಲ್ಲ ನಮ್ಮ ಸರ್ಕಾರಿ ಶಾಲೆ ಶಿಕ್ಷಕರು. ಬಡ ಮಕ್ಕಳಿಗೆ ಸರ್ಕಾರ ಏನ್ ಮಾಡಿದೆ ಅನ್ನೋರು ಈ ಕ್ಲಾಸ್‌ಗಳನ್ನ ಸ್ವಲ್ಪ ಕೇಳಿ.**

**ಅರ್ಪಿತಾ,** ಪೋಷಕಿ

### ಕಿಡಿನುಡಿ

**ಕಾಂಗ್ರೆಸ್‌ನಿಂದ ಬಂದವರಿಗೆ ಸಚಿವ ಸ್ಥಾನ ಕೊಡಬಾರದು ಎಂಬ ಅಡಗೂರು ಎಚ್. ವಿಶ್ವನಾಥ್ ಅವರ ಹೇಳಿಕೆ ವೈಯಕ್ತಿಕ ವಾದದ್ದು. ಅದಕ್ಕೆ ಚಿಕ್ಕಾಸಿನ ಬೆಲೆಯೂ ಇಲ್ಲ. ಹತಾಶರಾಗಿ ಹೇಳಿಕೆ ನೀಡುತ್ತಿರುವ ಅವರೇನು ಹೈಕಮಾಂಡಾ? ನಾನು, ವಿಶ್ವನಾಥ್ ಪಕ್ಷವನ್ನು ಕಟ್ಟಿಲ್ಲ. ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದಿರುವ ನಮಗೆ ಜವಾಬ್ದಾರಿ ನೀಡಲಾಗಿದೆ. ಪಕ್ಷಕ್ಕೆ ಹೊರೆಯಾಗದಂತೆ ಕರ್ತವ್ಯ ನಿರ್ವಹಿಸಬೇಕು.**

**ವಿ.ಶ್ರೀನಿವಾಸ ಪ್ರಸಾದ್,** ಬಿಜೆಪಿ ಸಂಸದ, ಚಾಮರಾಜನಗರ

### 25 ವರ್ಷಗಳ ಹಿಂದೆ

ಬುಧವಾರ, 24-7-1996

- **ಮಲಪ್ರಭಾ ಜಲಾಶಯಕ್ಕೆ ಮಹದಾಯಿ ನದಿ ನೀರು**

**ಬೆಂಗಳೂರು, ಜುಲೈ 23–** ಸುಮಾರು 2.18 ಲಕ್ಷ ಹೆಕ್ಟೇರ್ ಭೂಮಿಗೆ ನಿರಂತರ ನೀರಾವರಿ ಕಲ್ಪಿಸುವ ಉದ್ದೇಶದಿಂದ ಮಲಪ್ರಭಾ ಜಲಾಶಯಕ್ಕೆ ಮಹದಾಯಿ ನದಿಯಿಂದ ನೀರನ್ನು ಪಡೆಯುವ ಸಮಾರು 200 ಕೋಟಿ ರೂ. ವೆಚ್ಚದ ಯೋಜನೆಯನ್ನು ರಾಜ್ಯ ಸರ್ಕಾರ ರೂಪಿಸಿದೆ.

'ಈ ವಿಚಾರದಲ್ಲಿ ಕರ್ನಾಟಕ ಮತ್ತು ಗೋವಾ ಮುಖ್ಯಮಂತ್ರಿಗಳ ನಡುವೆ ಈ ತಿಂಗಳ ಅಂತ್ಯದೊಳಗಾಗಿ ಚರ್ಚೆ ನಡೆಯಲಿದೆ' ಎಂದು ಭಾರಿ ನೀರಾವರಿ ಖಾತೆ ಸಚಿವ ಕೆ.ಎನ್. ನಾಗೇಗೌಡ ವಿಧಾನ ಸಭೆಯಲ್ಲಿ ಇಂದು ಪ್ರಕಟಿಸಿದರು.

'ಮಲಪ್ರಭಾ ಜಲಾಶಯ 1972ರಷ್ಟು ಹಿಂದೆಯೇ ಪೂರ್ಣಗೊಂಡಿದ್ದರೂ ಈ 24 ವರ್ಷಗಳಲ್ಲಿ ಅದು ಐದು ಬಾರಿ ಮಾತ್ರ ಭರ್ತಿಯಾಗಿದೆ. ಇದಕ್ಕೆ ಮಹದಾಯಿ ನದಿಯಿಂದ ನೀರನ್ನು ತಿರುಗಿಸದೇ ಇದ್ದಲ್ಲಿ ಈ ಜಲಾಶಯದ ಅಚ್ಚುಕಟ್ಟಿನ 2.18 ಲಕ್ಷ ಹೆಕ್ಟೇರಿಗೂ ಅಧಿಕ ಪ್ರದೇಶಕ್ಕೆ ನೀರನ್ನು ಪೂರೈಕೆ ಮಾಡುವುದು ಸಾಧ್ಯವೇ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

### 50 ವರ್ಷಗಳ ಹಿಂದೆ

ಶನಿವಾರ, 24-7-1971

- **ಗ್ರಾಮಾಂತರ ಶಿಕ್ಷಕರಿಗೆ ವಿಮೆ ಸಂಗ್ರಹಣೆ ಕಾರ್ಯ: ಅನುಮತಿ ರದ್ದು**

**ಬೆಂಗಳೂರು, ಜುಲೈ 24–** ತಮ್ಮ ವೃತ್ತಿಯ ಜೊತೆಗೆ ಜೀವವಿಮೆ ಮಾಡುವ ಕಾರ್ಯವನ್ನೂ ಕೈಗೊಳ್ಳಬಹುದೆಂದು ಗ್ರಾಮಗಳಲ್ಲಿ ಕೆಲಸ ಮಾಡುವ ಅಧ್ಯಾಪಕರಿಗೆ ನೀಡಲಾಗಿದ್ದ ಅನುಮತಿಯನ್ನು ಸರ್ಕಾರ ವಾಪಸು ಪಡೆದಿದೆ.

ಪಾಠ ಹೇಳುವುದಕ್ಕಿಂತ ಜೀವವಿಮೆ ಸಂಗ್ರಹಣೆ ಕೆಲಸವೇ ನಡೆಯುತ್ತಿದೆ ಎಂದು ಅನೇಕ ದೂರುಗಳು ಬಂದ ಕಾರಣ, ಅನುಮತಿಯನ್ನು ವಾಪಸು ಪಡೆಯಲಾಗಿದೆ ಎಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ವರದಿಗಾರರಿಗೆ ತಿಳಿಸಿದರು.

- **ಭಾರತದ ವಾಯುಪ್ರದೇಶ ಉಲ್ಲಂಘಿಸುವ ಪಾಕ್ ವಿಮಾನಕ್ಕೆ ಗುಂಡೇಟಿಗೆ ಆದೇಶ**

**ನವದೆಹಲಿ, ಜುಲೈ 24–** ನಮ್ಮ ವಾಯುಪ್ರದೇಶ ಉಲ್ಲಂಘಿಸುವ ಪಾಕಿಸ್ತಾನದ ಯಾವುದೇ ವಿಮಾನವನ್ನು ಗುಂಡಿಕ್ಕಿ ಹೊಡೆಯುವಂತೆ ಸರ್ಕಾರ ಆದೇಶ ನೀಡಿರುವುದನ್ನು ರಕ್ಷಣಾ ಮಂತ್ರಿ ಜಗಜೀವನರಾಂ ಇಂದು ರಾಜ್ಯಸಭೆಯಲ್ಲಿ ಪ್ರಕಟಿಸಿದರು.

## ರಾಜಕಾರಣದ ಹಲವು ಹತ್ತು ಬಗೆಯ ಗಣಿಗಾರಿಕೆಯೆಂದರೆ ಸಾಮಾನ್ಯವೇ?

# ಗಣಿಯ ಆಳದ ಉಸಿರಾಟದಲ್ಲಿ...

ವಿಶ್ಲೇಷಣೆ

**ಕೃಷ್ಣಮೂರ್ತಿ ಹನೂರು**

ನಿತ್ಯ ದುಡಿದೇ ಬದುಕಬೇಕಾದವರ ಅತಿ ವಾಸ್ತವ ಚಿತ್ರಣ ಕಟ್ಟಿಕೊಡುವುದರ ಹೆಸರಿನಲ್ಲಿ ಬಡತನದ ಕೃತಕ ದಾರುಣ ದೃಶ್ಯಗಳನ್ನು ತೋರಿಸಿ ಪ್ರೇಕ್ಷಕರ ಕರುಣೆ ಗಿಟ್ಟಿಸುವ ಉದ್ದೇಶ ಇಲ್ಲಿ ಇಲ್ಲ. ಕೋಟಿಗಟ್ಟಲೆ ವೆಚ್ಚ ಮಾಡಿ, ಬೃಹತ್ ಸೆಟ್ಟುಗಳನ್ನು ನಿರ್ಮಿಸಿ, ಅದಕ್ಕೆ ಭಾರಿ ಪ್ರಚಾರ ಕೊಟ್ಟು ಪ್ರೇಕ್ಷಕರನ್ನು ಹುಚ್ಚೆಬ್ಬಿಸುವ ಪರಿಪಾಟವನ್ನು ನಮ್ಮ ವ್ಯಾಪಾರಿ ಸಿನಿಮಾರಂಗ ರೂಢಿಸಿಕೊಂಡಿದೆ. ಆದರೆ, ಇದ್ಯಾವುದರ ಹಂಗಿಲ್ಲದೆ ಈ ದೇಶದ ಕೋಟ್ಯಂತರ ಜನಸಮೂಹದ ಗತಿಗೆಟ್ಟ ಬದುಕು ಇರುವುದೇ ಹೀಗೆಂದು ಹೇಳುವ 'ರಿಕ್ಟರ್ ಸ್ಕೇಲ್ 7.6' ಎಂಬ ಮಲಯಾಳಂ ಚಲನಚಿತ್ರವು ತದೇಕಚಿತ್ತದಿಂದ ನೋಡುವಂತಿದೆ.

ಧರ್ಮ ಕರ್ಮದ ಕಾರಣಕ್ಕೋ ದೈವ ತಮ್ಮನ್ನು ಇಟ್ಟಿರುವುದು ಹೀಗೆಯೇ ಎಂಬುದರ ನಿಮಿತ್ತವೋ ಈ ಸಿನಿಮಾದ ನಾಯಕ ಹೆಚ್ಚೆಂದರೆ ಬೀದಿ ಭವಿಷ್ಯದವನನ್ನು ಒಮ್ಮೆ ಶಾಸ್ತ್ರ ಕೇಳುತ್ತಾನೆ. ಶಾಸ್ತ್ರದವನಾದರೋ, 'ನಿನ್ನ ಸ್ಥಿತಿಗೆ ದೇವರನ್ನು, ಹಿರಿಯರನ್ನು ಮರೆತಿರುವುದೇ ಕಾರಣ, ಅದಕ್ಕೆ ಶಾಂತಿಯಾಗಬೇಕು' ಎಂದು, ನಿಮಿತ್ತ ಹೇಳಿದ್ದಕ್ಕೆ ಕಾಣಿಕೆ ಕೊಡು ಎಂದು ಕೈಯೊಡ್ಡುತ್ತಾನೆ. ಶಾಸ್ತ್ರ ಕೇಳಿದ ಕಥಾನಾಯಕ ಮುದುಕನ ದುಃಸ್ಥಿತಿ ಅಂದರೆ, ಅವನ ಕಾಲು ಕೊಂಚ ಕುಂಟಾಗಿ ಯಾರೂ ನೋಡುವವರಿಲ್ಲದೆ, ತಲೆ ಕೆಟ್ಟ ಈ ಮುದುಕ ಎಲ್ಲಾದರೂ ಹೋಗಿಬಿಡುವನೋ ಎಂದು ಬೆಳಗ್ಗೆ ಗಣಿ ಕೂಲಿಗೆ ಹೋಗುವ ಮಗ ತಂದೆಯ ಕಾಲಿಗೆ ಸರಪಳಿ ಬಿಗಿದು ಅದರ ಇನ್ನೊಂದು ತುದಿಯನ್ನು ಮಂಚಕ್ಕೆ ಕಟ್ಟಿ ಹೋಗುತ್ತಾನೆ!

ನಿತ್ಯ ದುಡಿಮೆಯ ಈ ತಂದೆ ಮಗನ ವಾಸದ ಸೂರು ಅಂದರೆ ಒಂದು ಗುಡಿಸಲು. ಅದರೊಳಗೆ ಅತ್ತ ಸೌದೆಯ ಒಲೆ, ಇತ್ತ ಮುದುಕ ಮಲಗುವ ಮಂಚ. ಇದರ ಕೆಳಗೆ ದುಡಿದು ಬಂದ ಮಗ ಮಲಗುತ್ತಾನೆ. ಒಂದು ಬಡಕಲು ಬೆಕ್ಕಿನ ಮರಿ ಮಾತ್ರ ಅತ್ತಿತ್ತ ಸುಳಿದಾಡುತ್ತದೆ. ಆಗಾಗ ಹೊತ್ತೆ ಸೆತ್ತೆಯಿಂದ ಹಾವು ಹರಿದು ಬರುತ್ತದೆ. ಒಬ್ಬನೇ ಮುದುಕನಿಗೆ ಯಾರೂ ಇಲ್ಲದ ಪಾಳುಬಿದ್ದಂತಿರುವ ಈ ಗುಡಿಸಲೊಳಗೆ ಹರಿದಾಡುವ ಹಾವು ಕಂಡಲ್ಲಿ ಭಯವಿಲ್ಲ. ಹಾಗಾಗಿ ಮುದುಕ ಹಾವಿನತ್ತ ಸಂತೋಷದಿಂದ ಕಣ್ಣರಳಿಸಿ 'ಆಡು ಪಾಂಬೆ, ಆಡು ಪಾಂಬೆ' ಎಂದು ಹಾಡುತ್ತಾನೆ. ಇದಿಲ್ಲದಿದ್ದರೆ ಎದ್ದು ನಿಂತು ಮೈ ಮುರಿಯುತ್ತಾನೆ. ಆ ಕ್ರಮ ಮಾತ್ರ ಶಿವನ ತಾಂಡವ ನೃತ್ಯದ ತುಣುಕಿನಂತೆ, ಎದ್ದೇಳುವ ಬೆಂಕಿಯ ಕಿಡಿಯಂತೆ ಗೋಚರವಾಗುತ್ತದೆ.

ಕುಟುಂಬ ಸಂಬಂಧಕ್ಕೆ ಆರ್ಥಿಕ ಸುವ್ಯವಸ್ಥೆ ಅಥವಾ ಅವ್ಯವಸ್ಥೆ ಕಾರಣವೇ? ಇದರ ವ್ಯಾಖ್ಯಾನ ಕಷ್ಟ. ಮನುಷ್ಯ ಸಮೂಹಜೀವಿಯೇ ಇಲ್ಲಾ ಅವನ ಅಂತರಂಗದಾಳದ ಅಹಂನಿಂದ ತಾನೊಬ್ಬನೇ ಅಂದುಕೊಳ್ಳುತ್ತಾನೆಯೇ? ಆರ್ಥಿಕ ಸಬಲತೆ, ಸಾಮೂಹಿಕ ಜೀವನದಿಂದ ಮನುಷ್ಯ ತಾನು ಸುಖಿ ಎಂದುಕೊಳ್ಳಬಹುದು. ಆದರೆ ಈ ತಾತ್ಕಾಲಿಕ ಸ್ಥಿತಿ ಯಾವ ಬಗೆಯದೆಂದರೆ, ಇದ್ದರೆ ಬೇಡವೆಂತಲೂ ಇಲ್ಲದಿದ್ದರೆ ಬೇಕೆಂತಲೂ ಕಾಡುವ ದ್ವಂದ್ವವೂ ಇರಬಹುದು. ಈ ಪರಿಕ್ರಮದಲ್ಲಿ ತಂದೆ ಮಕ್ಕಳು, ಪತಿ ಪತ್ನಿ, ಸಹೋದರ ಸಂಬಂಧಗಳ ಕೂಡುವಿಕೆ ಮತ್ತು ಬಿಡುಗಡೆಯ ಸಂಘರ್ಷಗಳು ಇರುವವರಲ್ಲೂ ಇಲ್ಲದವರಲ್ಲೂ ನಿರಂತರ ನಡೆಯುತ್ತಲೇ ಇರುತ್ತವೆ. ಇದಕ್ಕೆ ಭೌತಿಕ ಮತ್ತು ಮಾನಸಿಕ ಹಿನ್ನೆಲೆಯ ಹಲವು ಹತ್ತು ಕಾರಣಗಳಿರುತ್ತವೆ.

ಈ ರಿಕ್ಟರ್ ಸ್ಕೇಲ್ 7.6 ಮಲಯಾಳಂ ಚಿತ್ರದ ಆರಂಭದಲ್ಲಿ, ದುಡಿಮೆಗೆ ಹೋಗುವ ಮಗ ಬೆಳಗ್ಗೆ ಅಪ್ಪನಿಗೆ ಅನ್ನ ಬೇಯಿಸಿ ಹಾಕುತ್ತಾನೆ ಸರಿ; ಆದರೆ ಕೂಲಿಗೆ ಹೋಗುವಾಗ ತಂದೆಯ ಕಾಲಿಗೆ ಸರಪಳಿ ಬಿಗಿಯುವಲ್ಲಿ ತಂದೆ ಗದ್ದಲವೆಬ್ಬಿಸುವುದಿಲ್ಲ, ಬದಲಾಗಿ ತಾನೇ ಬಲಗಾಲು ನೀಡುತ್ತಾನೆ. ಇದು ಅನಿವಾರ್ಯ ಬಂಧನ.

ಹುಲುಮಾನವರಿಗೆ, ಬಲುಮಾನವರಿಗೆ ತಮ್ಮ ವ್ಯಥೆ, ಸಂತೋಷದ ವೇಳೆ ಒದಗಬಹುದಾದ ನೆರವುಗಳಲ್ಲಿ ಮದ್ಯಪಾನವೂ ಒಂದು! ತಂದೆ ಅವನ ವಯಸ್ಕ ಮಿತ್ರರೊಂದಿಗೆ ಕೂಡಿ ಜನಪದ ಹಾಡು ಗುನುಗಿದರೆ, ಮಗ ಆಗಾಗ ಮಿತ್ರರೊಡನೆ ರಾತ್ರಿಯ ಕತ್ತಲಲ್ಲಿ ಗಂಟಲಿಗೆ ಹೆಂಡ ಇಳಿಸುವಾಗ ಎದೆಯಾಳದ ಸತ್ಯ ಎದ್ದೆದ್ದು ಕುಣಿಯುತ್ತದೆ. ಯಾರಿಗಾದರೂ ಸರಿ ಆ ಕ್ಷಣವು ಕುಟುಂಬದೊಂದಿಗೋ ಇಲ್ಲ ಸಮಾಜದೊಂದಿಗೋ ಇರುವ ಸಂಬಂಧದ ಬಿಕ್ಕಟ್ಟನ್ನು, ಸಿಟ್ಟನ್ನು ರಟ್ಟು ಮಾಡುತ್ತದೆ. ಅಂಥ ವೇಳೆ ಈ ಚಿತ್ರದ ಪಾತ್ರಧಾರಿ ಮಗನಿಗೆ ಕುಡಿಯುವಾಗ ಎದುರು ಕಾಣುವ ಶತ್ರು ಅಂದರೆ ಮಂಚದಲ್ಲಿ ಬಿದ್ದ ಅಪ್ಪನೇ. ಈ ಐಲು ಅಪ್ಪ ಇರುವವರೆಗೆ ತನಗೊಂದು ಹೆಣ್ಣು ಸಿಗುವುದಿಲ್ಲ ಎಂಬ ಅಸಹನೆಯನ್ನು ಮಿತ್ರರ ಮುಂದೆ ಮಂಡಿಸುತ್ತ, ಸಿಟ್ಟು ಏರಿ, ಅಂಥವನನ್ನು ಕೊಂದು ಹಾಕುವುದೇ ಮಾರ್ಗ ಎಂಬ ನಿರ್ಧಾರಕ್ಕೆ ಬಂದರೂ ಅದು ನೆರವೇರದ ಕಾರ್ಯ. ಹೀಗೆಂದವನು ಬೆಳಗೆದ್ದು ಅಪ್ಪನಿಗಾಗಿ ಅನ್ನ ಬೇಯಿಸುತ್ತಾನೆ!

ತಂದೆ ಮಗನ ಜಗಳದ ನಡುವೆ ಮುದುಕನಿಗೆ ಕೇಳುವ ಸಂತೋಷದ ಕರೆ ಅಂದರೆ ಗುಡಿಸಲ ಆಚೆ ನಿಂತು ತನ್ನನ್ನು ಕರೆಯುವ ಪುಟ್ಟ ಹುಡುಗನ ಆತ್ಮೀಯ ದನಿ. ಇದೆಂಥಾ ಮನಮುಟ್ಟುವ ದೃಶ್ಯವೆಂದರೆ ಅಲ್ಲಿ ಹುಡುಗನೇ ಇಲ್ಲ, ಗುಡಿಸಲಾಚೆಯಿಂದ ಅವನ ಕರೆ ಮಾತ್ರ ಕೇಳಿಬರುವುದು. ತಡಿಕೆ ಸಂದಿಯಿಂದಲೇ ಮುದುಕ ಹುಡುಗನಿಗೆ ಕ್ಯಾಂಡಿ ಕೊಳ್ಳಲು ಇದ್ದ ಒಂದು ಕಾಸು ಕೊಡುವನು. ಇದರೊಂದಿಗೆ ಅದಾಗಲೇ ಒಬ್ಬ ಹೆಣ್ಣುಮಗಳು ಒಂದು ಹೊತ್ತು ಊಟ ತರುತ್ತಾಳೆ. ಮುದುಕನಿಗೆ ಅದು ಆಪ್ಯಾಯಮಾನ. ಆ ಹಿಡಿಯನ್ನದ ರುಚಿಗೆ ಹೆಣ್ಣುಮಗಳ ಕೈ ಸ್ಪರ್ಶವಿದೆ. ಹೆಣ್ಣುಮಗಳು ಹಾಗೆಯೇ ಒಮ್ಮೆ ಮುದುಕನ ಮಗನನ್ನೂ ಕಂಡು ಆಡುವ ಮಾತು, ಸೂಸುವ ಒಂದೆರಡು ನಗು ಅದಾಗ ಗುಡಿಸಲಿಗೆ ಜೀವ ತುಂಬಿಕೊಂಡಂತಾಗುತ್ತದೆ. ಇದು ಬಣ್ಣ ಬಣ್ಣದ ಪ್ರೇಮಗೀತೆಗಳ ಭಾವವನ್ನು ದಾಟಿದ ಸೂಕ್ಷ್ಮ ದೃಶ್ಯ. ಜೀವ ಭಾವಗಳೆಂಬವು ಗುಡಿಸಲಲ್ಲೂ ಒಂದೇ ಅರಮನೆಯಲ್ಲೂ ಒಂದೇ. ಕುವೆಂಪು ಅವರ ಐತ, ಪೀಂಚಲರ ದೇಹ ಭಾವ ಮತ್ತು ಶಿವಶಿವೆಯರ ದೈವಾಂಶವನ್ನು ಮುಚ್ಚಿಕೊಂಡ ಗುಡಿಸಲ ಮಟ್ಟಾಳೆಯಂತೆ! ಜಗತ್ತಿನ ಕ್ರೌರ್ಯದ ಪ್ರತಿರೂಪವನ್ನು ಅದರೊಳಗೇ ಜಿನುಗುವ ಪ್ರೀತಿಯನ್ನು ಗುಡಿಸಲಲ್ಲಷ್ಟೇ ತೋರಿಸುವ ಉದ್ದೇಶ ನಿರ್ದೇಶಕಿಗಿರುವಂತಿದೆ.

ಚಿತ್ರದ ಕೊನೆಯ ದೃಶ್ಯ ಮತ್ತಷ್ಟು ಮಾನವೀಯ. ಮಗನಿಗೆ ಅವನ ದುಡಿಮೆಯ ಸ್ಥಳದಲ್ಲಿ ಬಹುಶಃ ಮದ್ದು ಸಿಡಿದು ಕಾಲು ಮುರಿಯುತ್ತದೆ. ಆದರೆ ಗಣಿ ಮದ್ದಿನ ಸಿಡಿತದ ದೃಶ್ಯ ಕಾಣುವುದಿಲ್ಲ. ಸ್ನೇಹಿತರು ಕಾಲು ಮುರಿದ ಮಗನನ್ನು ಗುಡಿಸಲಿಗೆ ಹೊತ್ತು ತಂದು ಹಾಕುತ್ತಾರೆ. ಅಪ್ಪ ತನ್ನ ಕುಂಟುಕಾಲಿನಿಂದ ಸುಧಾರಿಸಿಕೊಂಡು ಮಂಚದಿಂದ ಇಳಿದರೆ, ಮಗ ಆ ಜಾಗಕ್ಕೆ ಭರ್ತಿ ಆಗುತ್ತಾನೆ. ಕಾಲು ಮುರಿಯುವ ದುರಂತ, ಅದರ ದುಃಖಕ್ಕಿಂತ ಅವರಿಗೆ ದುಡಿಮೆಯೇ ಅನಿವಾರ್ಯ ಗತಿ; ಸಂಕಟಕ್ಕೆ ಹೊತ್ತಿಲ್ಲ. ಕಾಲು ಮುರಿದುಕೊಂಡ ಮಗನಿಗೆ ಅಪ್ಪ ಅನ್ನ ಬೇಯಿಸಿ ಇಟ್ಟು ಸುತ್ತಿಗೆ ಹೆಗಲಿಗಿಟ್ಟು ಗುಡಿಸಲ ಹೊರಗಾಗಿ ನಡೆಯುವಲ್ಲಿ ಅವನು ಕಾಣಿಸುವುದೇ ಇಲ್ಲ. ಯಾಕೆಂದರೆ ಅಲ್ಲೆಲ್ಲ ಆಳಕ್ಕೆ, ಇನ್ನೂ ಆಳಕ್ಕೆ ತೋಡಿದ ಕಲ್ಲು, ಮಣ್ಣಿನ ಗಣಿಯ ಗುಂಡಿಗಳೇ ಪ್ರೇಕ್ಷಕರಿಗೆ ಕಾಣಿಸುತ್ತವೆ.

ಒಂದು ಗಂಟೆ ಹನ್ನೆರಡು ನಿಮಿಷದ ಈ ಚಿತ್ರದಲ್ಲಿರುವುದು ಗುಡಿಸಲ ಒಂದೇ ದೃಶ್ಯ. ವಸ್ತ್ರವಿನ್ಯಾಸವಿಲ್ಲ. ಯಾಕೆಂದರೆ ಪಾತ್ರಧಾರಿಗಳು ಕೂಲಿಕಾರ್ಮಿಕರು. ಸತ್ಯಜಿತ್ ರೇ ಅವರ 'ಪಥೇರ್ ಪಾಂಚಾಲಿ'ಯಲ್ಲಿ ಒಂದೆಡೆಯಾದರೂ ತೀವ್ರ ದುಃಖದ ಅಳುವಿನ ದೃಶ್ಯವಿದೆ. ರಿಕ್ಟರ್ ಸ್ಕೇಲ್ 7.6 ಚಿತ್ರದಲ್ಲಿ ಅಂಥ ದೃಶ್ಯವೇ ಇಲ್ಲ. ದುಃಖ ಸತ್ತಂತಿದೆ. ಈ ಚಿತ್ರದ ನಿರ್ದೇಶಕಿ ಜೀವಾ, ಹೆಣ್ಣುಮಗಳು. ಚೋಮನದುಡಿ ಚಿತ್ರ ಭೂ ಹಂಚಿಕೆ ಸಮಸ್ಯೆಯದು. ರಿಕ್ಟರ್ ಸ್ಕೇಲ್ ಗಣಿಗಾರಿಕೆಯ ಭೂಕಂಪನದಲ್ಲಿ ದುಡಿದು ಕಾಲು ಮುರಿದುಕೊಳ್ಳುವವರ ಭಂಗದ ಕಥೆ.

ರಾಜಕಾರಣದ ಹಲವು ಹತ್ತು ಬಗೆಯ ಗಣಿಗಾರಿಕೆಯೆಂದರೆ ಸಾಮಾನ್ಯವೇ? ಬಡವರು ಅಲ್ಲಿ ಕೂಲಿಗಳು, ಶ್ರೀಸಾಮಾನ್ಯರು ಅದರ ಮೂಕಪ್ರೇಕ್ಷಕರು. ಕೋಟ್ಯಧಿಪತಿಗಳು ಅದರ ಒಡೆಯರು, ಲೋಕನಾಯಕರು!

## ಚುರುಮುರಿ

### ಬಾರು– ಬಾಹ್ಯಾಕಾಶ

• ಎಸ್.ಬಿ.ರಂಗನಾಥ್

**ಲಾಕ್‌ಡೌನ್** ತೆರವುಗೊಂಡ ಸಂತೋಷಾರ್ಥ ಬಾರ್‌ನಲ್ಲಿ ಪಾರ್ಟಿ ರಂಗೇರುತ್ತಿತ್ತು. ಚಿಕ್ಕೇಶಿ ಚೆಡ್ಡಿ ದೋಸ್ತ್‌ನನ್ನು ಕೇಳಿದ- 'ಮೇಲಕ್ಕೆ ಜಾಯ್‌ರೈಡ್ ಹೋಗಿ ಬರೋಣ್ವೇನಯ್ಯಾ?'

'ಮೇಲಕ್ಕೆ ಹೋದ್ಮೇಲೆ ವಾಪಸ್ ಬರೋದೆಲ್ಲಿದೆ?' ಎಂದ ದೋಸ್ತ್.

'ಮೇಲಕ್ಕೆ ಅಂದ್ರೆ ಸೀದಾ ಮೇಲಕ್ಕೆ ಅಲ್ವೋ ಮಂಕುದಿಣ್ಣೆ, ಅಂತರಿಕ್ಷ ಪ್ರವಾಸ ಹೋಗಿ ಬರೋದು. ಕಳೆದ ವಾರ ರಿಚರ್ಡ್ ಬ್ರಾನ್ಸನ್ ಹೋಗಿ ಬಂದ್ರಲ್ಲಾ ಹಾಗೆ'.

'ಬೇಡಪ್ಪಾ, ನಂಗೆ ಭಯವಾಗುತ್ತೆ'.

'ಏ ಪುಕ್ಕಲಾ, ಬ್ರಾನ್ಸನ್‌ನ ಜೊತೆ ಭಾರತ ಮೂಲದ ಮಹಿಳೆ ಶಿರೀಷಾ ಬಂಡ್ಲ ಕೂಡಾ ಹಾರಾಡಿ ಬಂದ್ರಲ್ಲೋ. ಮೊನ್ನೆ ಜೆಫ್ ಬಿಜೋಸ್ ಸಹ ಹೋಗಿ ಬಂದಿದಾರೆ. ಅವ್ರ ಪ್ರಾಜೆಕ್ಟ್‌ನಲ್ಲಿ ಮಹಾರಾಷ್ಟ್ರ ಮೂಲದ ಮಹಿಳೆಯೂ ಇದಾರೆ. ಇನ್ನು ನಿಂಗ್ಯಾಕೋ ಭಯ?'

'ಆಗ್ಲಿ, ಹೋಗಿ ಬರೋಣ ಅಲ್ಲಿ ಅರ್ಜೆಂಟ್ ಕೆಲ್ಸಗಳೂ ಇವೆ'.

'ಏನಪ್ಪಾ ಅಂಥ ಅರ್ಜೆಂಟ್ ಕೆಲ್ಸಗಳು?'

'ಈ ಕೊರೊನಾ ವೈರಾಣು ರೂಪಾಂತರಿ ತಳಿಗಳ ಮೂಲ ಅಲ್ಲೇನಾದ್ರೂ ಇದೆಯಾಂತ ತಿಳ್ಕೊಳ್ಳೋದು, ಡೀಸೆಲ್, ಪೆಟ್ರೋಲ್, ಅಡುಗೆ ಸಿಲಿಂಡರ್‌ಗಳ ಗಗನಕ್ಕೇರ್ತಾನೇ ಇರೋ ಬೆಲೆಗಳು ಮೇಲಕ್ಕೇರದಂತೆ ಸೀಲಿಂಗ್ ಹಾಕಿ ಬರೋದು'.

'ಗುಂಡು ಹಾಕಿದಾಗ್ಲೂ ಸಮಾಜೋಪಕಾರಿ ಚಿಂತನೆ ಮಾಡ್ತಿರೋ ದೇಶಭಕ್ತ ಕಣಯ್ಯ ನೀನು. ಗೂಗಲ್ ಪೇನಲ್ಲಿ ಸೀಟ್ ಬುಕ್ ಮಾಡ್ತೀನಿ ಕೊಡು ನಿನ್ನ ಮೊಬೈಲನ್ನ'.

'ನನ್ನಲ್ಲಿ ಐನೂರು ರೂಪಾಯಿ ಮಾತ್ರ ಇದೆ, ನಿನ್ನ ಮೊಬೈಲಲ್ಲೇ ಮಾಡಪ್ಪಾ'.

'ನನ್ನಲ್ಲಿರೋದೂ ಅಷ್ಟೇ. ಎರಡೂ ಸೇರಿದ್ರೂ ಈ ಬೈಠಕ್‌ನ ಬಿಲ್ ಕೊಡೋಕೂ ಸಾಲಲ್ಲ. ಲಕ್ಷಾಂತರ ಡಾಲರ್‌ಗೆ ಬಾಹ್ಯಾಕಾಶ ಪ್ರವಾಸದ ಟಿಕೆಟ್ ರಿಸರ್ವ್ ಮಾಡಿಸೋದೆಲ್ಲಿ ಬಂತು!'

'ಹಾಗಾದ್ರೆ ಉದ್ರೆ ಹೇಳಿ ಇನ್ನೊಂದು ಪೆಗ್ ಏರಿಸೋಣ. ಆಗ ಈ ಬಾರೇ ಗಗನನೌಕೆ ಆಗುತ್ತೆ...!'

'...ಕಣ್ಮುಚ್ಚಿದ್ರೆ ಶೂನ್ಯ ಗುರುತ್ವದಲ್ಲಿ ತೇಲಾಡ್ತೀವಿ!'

ಇಬ್ಬರೂ ವಿಕ್ಟರಿ ಸನ್ನೆ ತೋರಿಸಿದರು.

## ಸಂಗತ

# ಕರಗತವಾಗಿದೆಯೇ ಬದುಕುವ ಕಲೆ?!

### ಬದುಕುವ ರೀತಿಗಿಂತ ಬದುಕುವ ಕಲೆ ಮುಖ್ಯವಾಗುತ್ತಿರುವುದು ಸಮಾಜದ ದುರಂತ

• ರಾಜಕುಮಾರ ಕುಲಕರ್ಣಿ

**ನನ್ನೂರಿಗೆ** ಭೇಟಿ ನೀಡಿದ ಸಂದರ್ಭದಲ್ಲೆಲ್ಲ ಅಲ್ಲಿನ ಶಾಲೆಯ ಶಿಕ್ಷಕರೊಬ್ಬರನ್ನು ಸಂಧಿಸಿ ಮಾತನಾಡುವುದು ಲಾಗಾಯ್ತಿನಿಂದಲೂ ನಾನು ರೂಢಿಸಿಕೊಂಡು ಬಂದ ಪದ್ಧತಿ. ಆದರೆ ಕಳೆದ ಬಾರಿ ಊರಿಗೆ ಹೋಗಿದ್ದಾಗ ಅವರು ಶಾಲೆಯಲ್ಲಿರಲಿಲ್ಲ. ಜಿಲ್ಲಾ ಕೇಂದ್ರದಲ್ಲಿರುವ ಇಲಾಖೆಯ ಕಚೇರಿಗೆ ಡೆಪ್ಯುಟೇಷನ್ ಮೇಲೆ ನಿಯೋಜಿತರಾಗಿರುವರೆಂದು ಮುಖ್ಯೋಪಾಧ್ಯಾಯರು ಹೇಳಿದರು.

ಕೆಲವು ದಿನಗಳ ನಂತರ ಅವರಿಗೆ ಫೋನ್ ಮಾಡಿ ಆರೋಗ್ಯ ವಿಚಾರಿಸಿದಾಗ, ತಾವು ಡೆಪ್ಯುಟೇಷನ್ ಮೇಲೆ ವರ್ಗ ಮಾಡಿಸಿಕೊಂಡಿರುವ ಸ್ಥಳದಲ್ಲಿ ಮೇಲುಸಂಪಾದನೆ ಚೆನ್ನಾಗಿದೆಯೆಂದೂ, ಈ ಕಾರಣದಿಂದ ಮಕ್ಕಳನ್ನು ಪ್ರತಿಷ್ಠಿತ ಖಾಸಗಿ ಶಾಲೆಗಳಿಗೆ ಸೇರಿಸಲು ಮತ್ತು ಸೈಟು ಖರೀದಿಸಲು ಸಾಧ್ಯವಾಗಿದೆಯೆಂದೂ ಹೇಳಿದರು. ಅವರ ಧ್ವನಿಯಲ್ಲಿ ಸಂತೃಪ್ತಿಯ ಭಾವ ತುಂಬಿ ತುಳುಕುತ್ತಿತ್ತು.

ಈ ಘಟನೆಗೆ ವಿರುದ್ಧವಾದ ಮತ್ತು ನಂಬಲು ಅಸಾಧ್ಯವಾದ ಇನ್ನೊಂದು ಸಂಗತಿ ನನ್ನೂರಿನ ಆ ನೆಲದಲ್ಲೇ ನಡೆದದ್ದು. ನನ್ನ ಕಣ್ಣೆದುರು ಬೆಳೆದು ಓದಿ ವಿದ್ಯಾವಂತನಾದ ಹುಡುಗ ಲೋಕೋಪಯೋಗಿ ಇಲಾಖೆಯಲ್ಲಿ ಅಸಿಸ್ಟೆಂಟ್ ಎಂಜಿನಿಯರ್ ಆಗಿ ನೌಕರಿಗೆ ಸೇರಿದ. ಆ ಕ್ಷಣ 'ಅಂವ ಇನ್ಮುಂದ ಹ್ಯಾಂಗ ಮನುಷ್ಯಾ ಆಗ್ತಾನ ನೋಡ್ರಿ' ಎಂದು ಇಡೀ ಊರು ಸಂಭ್ರಮಿಸಿತು.

'ಅಂವ ಕೇಳದೆ ಮನ್ಯಾಗ ರೊಕ್ಕ ಬಂದು ಬೀಳ್ತದ. ರೊಕ್ಕ ಎಣಿಸಾಕ ಆಳು ಇಟ್ಗೊಬೇಕಾಗ್ತದ' ಎಂದು ಜನ ಮಾತನಾಡಿಕೊಂಡರು. ಆದರೆ ಆ ಹುಡುಗ ನೌಕರಿಗೆ ರಾಜೀನಾಮೆ ನೀಡಿ ಊರಿನ ಜನರನ್ನು ನಿರಾಸೆಗೊಳಿಸಿದ. ವಿಚಾರಿಸಿದಾಗ, ಅಲ್ಲಿನ ವಾತಾವರಣಕ್ಕೆ ತನಗೆ ಹೊಂದಿಕೊಳ್ಳಲಾಗಲಿಲ್ಲ, ಇನ್ನಷ್ಟು ದಿನಗಳ ಕಾಲ ನೌಕರಿಯಲ್ಲೇ ಮುಂದುವರಿದಿದ್ದರೆ ತಾನು ಮಾನಸಿಕ ಕ್ಷೋಭೆಗೆ ಒಳಗಾಗುತ್ತಿದ್ದೆ ಎಂದು ಅಳಲು ತೋಡಿಕೊಂಡ.

ಸಹಜವಾಗಿಯೇ ಅವನ ಈ ನಿರ್ಧಾರದಿಂದ ಅಪ್ಪ ಅಮ್ಮನಿಗೆ ಬೇಸರವಾಯಿತು. 'ಮನುಷ್ಯಾ ಆಗೋ ಅವಕಾಶ ಮನೆ ಬಾಗಿಲಿಗಿ ಹುಡ್ಕೊಂಡು ಬಂದ್ರ ಖೋಡಿ ಹುಡುಗ ಚಾನ್ಸ್ ಕಳ್ಕೊಂಡ್ತು' ಎಂದು ಊರ ಜನ ಲೊಚಗುಟ್ಟಿದರು. ಮುಂದೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಉಪನ್ಯಾಸಕನಾಗಿ ನೇಮಕಗೊಂಡು, ಈಗ ವಿದ್ಯಾರ್ಥಿಗಳಿಂದ ಉತ್ತಮ ಶಿಕ್ಷಕನೆಂದು ಮೆಚ್ಚುಗೆ ಗಳಿಸಿ ಸಂತೃಪ್ತಿಯ ಜೀವನ ನಡೆಸುತ್ತಿದ್ದಾನೆ.

ಒಂದೇ ಕಾಲದ, ಒಂದೇ ನೆಲದ ಎರಡು ಪರಸ್ಪರ ವಿರುದ್ಧದ ಘಟನೆಗಳಿವು. ಒಬ್ಬರು ಪವಿತ್ರ ವೃತ್ತಿಯನ್ನು ತೊರೆದು ಮೇಲುಸಂಪಾದನೆಯತ್ತ ಮುಖ ಮಾಡಿದರೆ, ಇನ್ನೊಬ್ಬರು ಮೇಲುಸಂಪಾದನೆಗೆ ಬೆನ್ನುಮಾಡಿ ಪಾಠ ಹೇಳುವ ಪವಿತ್ರ ಶಿಕ್ಷಕ ವೃತ್ತಿಯನ್ನು ಆಯ್ದುಕೊಂಡವರು. ಇಲ್ಲಿ ಯಾವ ಘಟನೆಯನ್ನು ಆದರ್ಶವೆಂದು ನೋಡಬೇಕು ಎನ್ನುವ ಪ್ರಶ್ನೆ ಎದುರಾಗುತ್ತದೆ. ಪ್ರಶ್ನೆಗೆ ಉತ್ತರ ಕೂಡ ಸರಳವಾಗಿದೆ. ಸಮಾಜ ಆಯ್ದುಕೊಳ್ಳುವುದು ಮೊದಲನೆಯ ಘಟನೆಯನ್ನು. ಏಕೆಂದರೆ ಮನುಷ್ಯನಾಗುವ ಪ್ರಕ್ರಿಯೆಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಸಮಾಜ 'ಪ್ರೀತಿ ಮತ್ತು ಯುದ್ಧದಲ್ಲಿ ಎಲ್ಲವೂ ನ್ಯಾಯಸಮ್ಮತ' ಎನ್ನುವ ಮನೋಭಾವವನ್ನು ರೂಢಿಸಿಕೊಂಡಿದೆ. ಹೀಗಾಗಿ ವೃತ್ತಿಯಲ್ಲಿ ಮೇಲುಸಂಪಾದನೆ ಬೇಡ ಎನ್ನುವವನು ಸಮಾಜದ ಅವಹೇಳನಕ್ಕೆ, ಅವಮಾನಕ್ಕೆ ಒಳಗಾಗುತ್ತಾನೆ. ಬೇಕು ಎನ್ನುವವನು ಸಮಾಜಕ್ಕೆ ಆದರ್ಶಪ್ರಾಯನಾಗುತ್ತಾನೆ.

ಎಸ್.ಎಲ್.ಭೈರಪ್ಪನವರ 'ತಂತು' ಕಾದಂಬರಿಯಲ್ಲಿ ಪಾತ್ರವೊಂದರ ಸಂಭಾಷಣೆ ಹೀಗಿದೆ: 'ನಾನು ಒಂದು ಕಾಸೂ ಸಂಬಳ ತಗೊಳ್ಳದೆ ಕೆಲಸ ಮಾಡಬೇಕು ಅಂತಿದ್ದೆ. ಆ ಮೇಲೆ ದೊಡ್ಡಪ್ಪ ನನ್ನೇ ಕೇಳಿದೆ. ಅವರು ಏನಂತಾರೆ ಗೊತ್ತಾ? ಸಂಬಳ ತಗೊಂಡರೆ ತಪ್ಪಿಲ್ಲ. ವಿಶ್ವೇಶ್ವರಯ್ಯನೋರು ತಗೋತಿದ್ದರು. ಆದರೆ ಇಪ್ಪತ್ತನಾಲ್ಕು ಗಂಟೆಯೂ ಕೆಲಸದಲ್ಲೇ ಮನಸ್ಸಿಟ್ಟು, ಒಂದು ಕಾಸೂ ಲಂಚ, ರುಷುವತ್ತು ಮುಟ್ಟದೆ ನಮ್ಮ ಸಂಬಳದಲ್ಲಿ ಮಾತ್ರ ಜೀವನ ಮಾಡಬೇಕು. ವಿಶ್ವೇಶ್ವರಯ್ಯನೋರು ಟೂರ್ ಹೋದಾಗ ಸರ್ಕಾರಿ ಕೆಲಸ ಮಾಡುಕ್ಕೆ ಸರ್ಕಾರದ ಮೋಂಬತ್ತಿ ಉರಿಸುತ್ತಿದ್ದರಂತೆ. ಅದು ಮುಗಿದ ಮೇಲೆ ಮಲಗುವ ಮುಂಚೆ ತಮ್ಮ ಜ್ಞಾನಾರ್ಜನೆಗೆ ಬೇರೆ ಪುಸ್ತಕ ಓದುವಾಗ ಸ್ವಂತ ಖರ್ಚಿನಿಂದ ಕೊಂಡು ಹೋಗಿದ್ದ ಬೇರೆ ಮೋಂಬತ್ತಿ ಹತ್ತಿಸಿ ಸರ್ಕಾರದ ಮೋಂಬತ್ತಿಯನ್ನು ಆರಿಸಿಬಿಡ್ತಿದ್ದರಂತೆ'.



ಇಂಥ ಉದಾತ್ತ ನಡೆ ಆದರ್ಶವಾಗಿರಬೇಕಿದ್ದ ಸಮಾಜದಲ್ಲಿ, ಸರ್ಕಾರಿ ನೌಕರಿ ಎಂದಾಕ್ಷಣ ಮೇಲುಸಂಪಾದನೆ ಎಷ್ಟು ಎಂದು ನಾಚಿಕೆ ಬಿಟ್ಟು ಕೇಳುತ್ತಾರೆ. ಅದೆಷ್ಟೋ ಪಾಲಕರು ತಮ್ಮ ಮಕ್ಕಳಿಗೆ ಸಂಬಳದ ಜೊತೆ ಗಿಂಬಳವೂ ಸಿಗುತ್ತಿದೆ ಎಂದು ಹೆಮ್ಮೆ ಮತ್ತು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಒಟ್ಟಾರೆ ಸರ್ಕಾರಿ ಉದ್ಯೋಗ ಎನ್ನುವುದು ಮೇಲುಸಂಪಾದನೆಗೆ ಸರಳವಾದ ಮಾರ್ಗ ಎನ್ನುವ ಮನೋಭಾವ ನಮ್ಮ ವಿದ್ಯಾವಂತ ಯುವಪೀಳಿಗೆಯಲ್ಲಿ ಹೆಚ್ಚುತ್ತಿದೆ.

ಇಲ್ಲಿ ಬದುಕುವ ರೀತಿಗಿಂತ ಬದುಕುವ ಕಲೆ ಮುಖ್ಯ ಎನಿಸಿಕೊಳ್ಳುತ್ತದೆ. ಹೀಗೇ ಬದುಕ ಬೇಕೆನ್ನುವುದಕ್ಕಿಂತ ಹೇಗಾದರೂ ಸರಿ ಬದುಕಬೇಕೆನ್ನುವುದು ನಿಯಮವಾಗುತ್ತದೆ. ಬದುಕುವ ಕಲೆ ಗೊತ್ತಿರುವಾತ ಸಮಾಜದ ಮೆಚ್ಚುಗೆಗೆ ಪಾತ್ರನಾಗುತ್ತಾನೆ. ಹೀಗೇ ಬದುಕಬೇಕೆಂದು ಹೊರಡುವವನು ಸಮಾಜದ ಅವಕೃಪೆಗೆ ಮತ್ತು ನಿಂದನೆಗೆ ಒಳಗಾಗಿ ಶತಮೂರ್ಖನೆಂದು ಕರೆಸಿಕೊಳ್ಳುತ್ತಾನೆ.

ಅನೀತಿಯ ಮಾರ್ಗದ ಮೂಲಕ ಮೇಲುಸಂಪಾದನೆ ಮಾಡುತ್ತ ಕೆಲವರು 'ಮನುಷ್ಯ'ರಾಗುತ್ತ ಸಮಾಜದ ಗೌರವಕ್ಕೆ ಪಾತ್ರರಾಗುತ್ತಾರೆ. ಹಾಗಾದರೆ ಮನುಷ್ಯನಾಗುವುದೆಂದರೇನು? ಇಂಥದ್ದೊಂದು ಜಿಜ್ಞಾಸೆ ಬದುಕುವ ಕಲೆ ಗೊತ್ತಿಲ್ಲದವರನ್ನು ಅವರ ಬದುಕಿನುದ್ದಕ್ಕೂ ಕಾಡುತ್ತಲೇ ಇರುವ ಯಕ್ಷಪ್ರಶ್ನೆಯಾಗಿ ಉಳಿಯುತ್ತದೆ.

## ವಾಚಕರ ವಾಣಿ

### ಪ್ರಯೋಗಿಸಿ ನೋಡಿ ಪೆಗಾಸಸ್!

ನಾನೊಬ್ಬ ಸಾಮಾನ್ಯ ರೈತ. ನನ್ನ ಮೇಲೆ 'ಪೆಗಾಸಸ್' ಕುತಂತ್ರಾಂಶ ಪ್ರಯೋಗಿಸಿ ನೋಡಿ, ನಿಮಗೆ ತಿಳಿಯುತ್ತದೆ... ನನ್ನ ಅಂಗೈಯಗಲದ ಜಮೀನಿನ ಖಾತೆ ಕಿರ್ದಿಗಾಗಿ ಅದೆಷ್ಟು ಬಾರಿ ತಹಶೀಲ್ದಾರ್ ಕಚೇರಿಗೆ ಎಡತಾಕಿದ್ದೇನೆಂದು... ಬಿತ್ತನೆ ಬೀಜಕ್ಕಾಗಿ ಕಿಕ್ಕಿರಿದ ಸಾಲಿನಲ್ಲಿ ನಿಂತು, ಲಾಠಿ ಪ್ರಹಾರವಾದಾಗ ಯಾವ್ಯಾವ ಗಲ್ಲಿಗೆ ಬಿದ್ದು ಬಚಾವಾದೆನೆಂದು... ಅದೆಷ್ಟು ಬಾರಿ ಬೆಳೆಸಾಲ ಕೇಳಲು ಕಂಡ ಕಂಡ ಬ್ಯಾಂಕುಗಳಿಗೆ ಅಲೆದಿದ್ದೇನೆಂದು... ಸರಿರಾತ್ರಿಗಳಲ್ಲಿ ಬಂದುಹೋಗುವ ಕರೆಂಟನ್ನು ಕಾಯ್ದುಕೊಂಡು ನಿಶಾಚರಿಯಂತೆ ಅಂಡಲೆಯುತ್ತಿದ್ದೇನೆಂದು... ಬೆಳೆದ ಬೆಳೆಗೆ ಬೆಲೆ ಇಲ್ಲದಾದಾಗ ಬಿಸಿಲು ಬೆಳದಿಂಗಳ ಬೀದಿಯಲಿ ಮಾರಾಟ ಮಾಡಲು ಕೂಗಿ ಕೂಗಿ ದನಿ ಕಳೆದುಕೊಂಡಿದ್ದೇನೆಂದು ತಿಳಿಯಲು... ನನ್ನ ಮೇಲೊಮ್ಮೆ ಪ್ರಯೋಗಿಸಿ ನೋಡಿ...ಪೆಗಾಸಸ್.

**ಜೆ.ಬಿ.ಮಂಜುನಾಥ,** ಪಾಂಡವಪುರ

### ಸಂಸದರ ಸೈಕಲ್ ಸವಾರಿ

ನಮ್ಮ ಸಂಸದ ಡಿ.ಕೆ.ಸುರೇಶ್ ಮೊನ್ನೆ ಸಂಸತ್ ಅಧಿವೇಶನಕ್ಕೆ ಸೈಕಲ್ ಮೇಲೆ ಹೋದರೆಂಬ ಸುದ್ದಿ ಓದಿ ನನ್ನಂಥ ಅನೇಕ ಪರಿಸರಪ್ರೇಮಿಗಳಿಗೆ ತುಂಬ ಸಂತೋಷವಾಗಿದೆ. ಪೆಟ್ರೋಲ್, ಡೀಸೆಲ್ ಸುಡುವುದರಿಂದ ಇಡೀ ಭೂಮಿಯ ತಾಪಮಾನ ಏರುತ್ತಿದೆ; ನೆರೆ ಹಾವಳಿ, ಸುಂಟರಗಾಳಿ, ತೀವ್ರ ಬರಗಾಲ, ಕಾಡಿಗೆ ಬೆಂಕಿ, ಭೂಕುಸಿತಗಳಂಥ ಸಂಕಟಗಳ ವರ್ತಮಾನ ಎಲ್ಲ ದೇಶಗಳಿಂದ ದಿನೇ ದಿನೇ ಬರುತ್ತಿದೆ. ಇದರ ಕುರಿತು ಜನಜಾಗೃತಿ ಮೂಡಿಸಲೆಂದು ಬ್ರಿಟನ್, ಕೆನಡಾ, ನಾರ್ವೆ ದೇಶಗಳ ಪ್ರಧಾನಮಂತ್ರಿಗಳು ಅದೆಷ್ಟೋ ಬಾರಿ ಸೈಕಲ್ ಸವಾರಿ ಮಾಡಿದ್ದಾರೆ.

ನೊಬೆಲ್ ವಿಜ್ಞಾನಿ ವೆಂಕಟರಾಮನ್ ರಾಮಕೃಷ್ಣನ್ ಕೂಡ ಬೆಂಗಳೂರಿಗೆ ಬಂದಾಗ ಐಐಎಸ್‌ಸಿ ಕ್ಯಾಂಪಸ್‌ನಲ್ಲಿ ಸೈಕಲ್ ತುಳಿದೇ ಸುತ್ತಿದ್ದಾರೆ. ಪೆಡಲ್ ತುಳಿಯುವುದು ನಮಗೂ ಒಳ್ಳೆಯದು, ಜಗತ್ತಿಗೂ ಒಳ್ಳೆಯದೆಂಬ ಪ್ರಾತ್ಯಕ್ಷಿಕೆಯನ್ನು ನಮ್ಮ ಒಬ್ಬ ಸಂಸದರಾದರೂ ತೋರಿಸಿದ್ದು ಇದು ಇತರ ಸಂಸದರಿಗೆ, ಶಾಸಕರಿಗೆ, ಪಂಚಾಯಿತಿ ಸದಸ್ಯರಿಗೆ, ಮಾಸ್ತರರುಗಳಿಗೆ, ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕು. ಸ್ವತಃ ಡಿ.ಕೆ.ಸುರೇಶ್ ತಾವು ಪ್ರತಿನಿಧಿಸುವ ಮತಕ್ಷೇತ್ರದಲ್ಲಿ ಸುತ್ತುವಾಗ ಮಾಮೂಲು ಹತ್ತಾರು ಕಾರುಗಳ ಮೆರವಣಿಗೆಯ ಬದಲು ಸೈಕಲ್ ತುಳಿದರೆ ಬಿಡದಿ, ರಾಮನಗರ, ಚನ್ನಪಟ್ಟಣಗಳ ಯುವಜನರಿಗೂ ಮಾರ್ಗ ತೋರಿದಂತಾಗುತ್ತದೆ.

**ನಾಗೇಶ ಹೆಗಡೆ**, ಕೆಂಗೇರಿ

### ಸಭ್ಯತೆ ಮೀರದಿರುವುದೇ ವಸ್ತ್ರಸಂಹಿತೆಯ ಆಶಯ

'ಅವಳನ್ನು ಕಾಣುವ ನೋಟ ಬದಲಾಗಬೇಕೇ ವಿನಾ ಅವಳಲ್ಲ' ಎಂದು ಡಾ. ಗೀತಾ ವಸಂತ ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಜುಲೈ 22) ವಿಶ್ಲೇಷಿಸಿದ್ದಾರೆ. ಹೆಣ್ಣಿಗೆ ತನ್ನ ಉಡುಗೆ-ತೊಡುಗೆಯೂ ಒಂದು ಆಭರಣ. ಅದು ಸಭ್ಯತೆ ಮೀರಬಾರದು. ಸಭ್ಯತೆಯನ್ನು ಮೀರುವಂತಿದ್ದರೆ ಅದು ಬೇರೆ ಆಯಾಮಕ್ಕೆ ನೆಲೆಯಾಗುತ್ತದೆ. ಹೆಣ್ಣಿಗೆ ಸೌಂದರ್ಯವೂ ಒಂದು ಶಾಪ ಎನ್ನುತ್ತಾರೆ. ಇದಕ್ಕೆ ನಮ್ಮ ಪುರಾಣ, ಇತಿಹಾಸಗಳಲ್ಲೂ ಬಹಳಷ್ಟು ಉದಾಹರಣೆಗಳು ಸಿಗುತ್ತವೆ. ವಿಕಸಿಸುವುದು ಅವಳ ಪ್ರಾಕೃತಿಕ ಹಕ್ಕು ನಿಜ. ಆದರೆ ಅದು ವಿಕೃತವಾಗಬಾರದು. ಈಗಲೂ ಕೆಲವು ಸಿನಿಮಾ, ರಿಯಾಲಿಟಿ ಷೋಗಳಲ್ಲಿ ಹೆಣ್ಣಿನ ಉಡುಪು ಸಭ್ಯತೆ ಮೀರಿ ಸೆಳೆಯುತ್ತದೆ. ಇಂಥವು ಅಗತ್ಯವಿಲ್ಲದಿದ್ದರೂ ಕೆಲವರಿಗೆ ತಮ್ಮ ಮೈಮಾಟ ತೋರಿಸುವುದು ಒಂಥರಾ ಫ್ಯಾಷನ್ ಎಂಬಂತಾಗಿದೆ! ಗಾಳಿ ಬೇಕು, ಬಿರುಗಾಳಿ ಬೇಡ. ಹಾಗೆಯೇ ಸಭ್ಯತೆ ಮೀರದಿರುವುದೇ ವಸ್ತ್ರಸಂಹಿತೆಯ ಆಶಯವೇ ಹೊರತು ಯಾವುದೇ ನಿರ್ಬಂಧದ ಮುದ್ರೆ ಹಾಕುವುದಲ್ಲ.

**ಗಣಪತಿ ಶಿರಳಗಿ,** ಸಾಗರ

### ಮೈ ಶುಗರ್: ರೈತರ ಹಿತ ಮುಖ್ಯ

ಸರ್ಕಾರಿ ಒಡೆತನದ ಮಂಡ್ಯ ಮೈ ಶುಗರ್ ಸಕ್ಕರೆ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವ ಕೂಗು ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಲೇ ಇದೆ. ಹಳೆಯ ಮೈಸೂರು ಭಾಗದ ಕಬ್ಬು ಬೆಳೆಗಾರರ ಜೀವನಾಡಿಯಂತಿದ್ದ ಮೈ ಶುಗರ್ ರೋಗಗ್ರಸ್ತವಾಗಿ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಿ ನಾಲ್ಕೈದು ವರ್ಷಗಳು ಕಳೆದರೂ ಪುನಶ್ಚೇತನವೆಂಬುದು ಕೇವಲ ನಾಮಕಾವಸ್ತೆಯ ನಾಟಕವಾಗಿದೆ. ರೈತರ ಹಿತಾಸಕ್ತಿಯ ಉದ್ದೇಶ ಅಲ್ಲಿ ಕಾಣದಿರುವುದು ದುರದೃಷ್ಟಕರ. ಸಂಪೂರ್ಣವಾಗಿ ಸರ್ಕಾರಿ ಒಡೆತನದಲ್ಲಿ ಕಾರ್ಖಾನೆಯನ್ನು ಮುಂದುವರಿಸಿಕೊಂಡು ಹೋಗುವುದಾದರೆ, ಆಡಳಿತ ಮಂಡಳಿಯು ಅತ್ಯಂತ ರಚನಾತ್ಮಕವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಸಾಧ್ಯ. ಇನ್ನೂ ಸರಳವಾಗಿ ಹೇಳುವುದಾದರೆ, ಕಾರ್ಖಾನೆಯ ಒಳಾಡಳಿತ ವಿಭಾಗಗಳಾದ ಕಬ್ಬು ವಿಭಾಗ, ಯಂತ್ರೋಪಕರಣ ಮೇಲ್ವಿಚಾರಣೆ, ಕಾರ್ಮಿಕ ಪೂರೈಕೆ ಈ ಮೂರು ಮೂಲ ವಿಭಾಗಗಳನ್ನು ಸಮರ್ಥವಾಗಿ ನಿರ್ವಹಿಸುವ ಸಂಪನ್ಮೂಲ ವ್ಯಕ್ತಿಗಳು ಕಾರ್ಖಾನೆಗೆ ಅತ್ಯಗತ್ಯವಾಗಿ ಬೇಕೇ ಬೇಕು.

ಇಂದು ಖಾಸಗಿ ವಲಯದ ಕಾರ್ಖಾನೆಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸಲು ಈ ವಿಭಾಗಗಳ ಭದ್ರ ಬುನಾದಿಯೇ ಕಾರಣ. ಹಾಗಾಗಿ ಸರ್ಕಾರ ಅದೆಷ್ಟೇ ಬಂಡವಾಳ ಹೂಡಿಕೆ ಮಾಡಿದರೂ ರಚನಾತ್ಮಕವಾಗಿ ಕಾರ್ಯ ನಿರ್ವಹಿಸದೇ ಹೋದರೆ ಮೈ ಶುಗರ್ ಪುನಶ್ಚೇತನ ಖಂಡಿತ ಸಾಧ್ಯವಿಲ್ಲ. ರೈತರ ಹಿತದೃಷ್ಟಿಯಿಂದ ಇನ್ನೊಂದು ಮಜಲಿನಲ್ಲಿ ಯೋಚಿಸುವುದಾದರೆ, ಸರ್ಕಾರದ ಒಡೆತನದಲ್ಲಿ ಕಾರ್ಖಾನೆ ಮುಂದುವರಿಸಿದರೆ ರೈತರಿಗೆ ನಷ್ಟವೇ ಹೊರತು ಲಾಭವಿಲ್ಲ. ಅದಕ್ಕೆ ಕಾರಣ, ಕಬ್ಬು ಬೆಲೆಯು ಇಳುವರಿ ಆಧಾರದ ಮೇಲೆ ಕೇಂದ್ರ ಸರ್ಕಾರದ ಎಫ್.ಆರ್.ಪಿ ದರದ (ನ್ಯಾಯಸಮ್ಮತ ಹಾಗೂ ಮೌಲ್ಯಾಧಾರಿತ ಬೆಲೆ) ಅನ್ವಯ ನಿರ್ಧಾರವಾಗುತ್ತದೆ. ಆದ್ದರಿಂದ ಸರ್ಕಾರಿ ವಲಯದ ಕಾರ್ಖಾನೆಯಲ್ಲಿ ಬಿಳಿ ಆನೆಯಂತಹ ಅಧಿಕಾರ ವರ್ಗದಿಂದ ಖಾಸಗಿ ಕಾರ್ಖಾನೆಯಂತೆ ಸ್ಪರ್ಧಾತ್ಮಕ ಇಳುವರಿ ನಿರೀಕ್ಷಿಸುವುದು ಸಾಧ್ಯವಾಗದ ಮಾತು. ಹಾಗಾಗಿ ಸಹಜವಾಗಿಯೇ ರೈತರಿಗೆ ನಷ್ಟವಾಗುತ್ತದೆ.

ಕಬ್ಬು ನಾಟಿಯಿಂದ ಕಟಾವು ಅವಧಿಯತನಕ ತಗಲುವ ಖರ್ಚು ವೆಚ್ಚ ತುಲನೆ ಮಾಡಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅಧಿಕ ಇಳುವರಿ ಗಳಿಸುವ ಕಾರ್ಖಾನೆ ಮುಖ್ಯವೇ ಹೊರತು ಸರ್ಕಾರಿ ವಲಯದಲ್ಲಿ ಅಥವಾ ಖಾಸಗಿ ವಲಯದಲ್ಲಿ ಕಾರ್ಖಾನೆ ನಡೆಸಬೇಕೇ ಎಂಬ ಪ್ರಶ್ನೆಯೇ ಅಪ್ರಸ್ತುತ ಎನಿಸುತ್ತದೆ. ಸರ್ಕಾರಿ ವಲಯದಲ್ಲೇ ಕಾರ್ಖಾನೆ ಮುಂದುವರಿಸಿದರೆ ಅಧಿಕ ಇಳುವರಿ ತೆಗೆಯುವ ಸಾಮರ್ಥ್ಯ ಇದೆಯೇ ಎಂಬ ಬಗ್ಗೆ ಯೋಚಿಸಿ, ಇಲ್ಲವಾದರೆ ರಾಜಕೀಯ ಹಿತಾಸಕ್ತಿಗಾಗಿ ರೈತರನ್ನು ಬಲಿಪಶು ಮಾಡದಿರಿ.

**ವಿಜಯಕುಮಾರ್ ಎಸ್.,** ಮೈಸೂರು

Printed and published by B A Ravi on behalf of The Printers (Mysore) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124 ಎ ರದ್ದುಪಡಿಸಬೇಕೇ?

# ಬ್ರಿಟಿಷ್ ಕಾಲದ ಕಾನೂನು ಕೈಬಿಡಲು ಸಕಾಲ

ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಟೀಕೆಯು ಅಗತ್ಯವೇ ಹೊರತು ಅಪರಾಧ ಅಲ್ಲ. ಇಲ್ಲಿ ದೇಶದ್ರೋಹ ಕಾನೂನು ಜಾರಿ ಮಾಡಿದ್ದ ಬ್ರಿಟನ್, ಸ್ವದೇಶದಲ್ಲಿ ಈ ಕಾನೂನನ್ನು ಈಗಾಗಲೇ ರದ್ದು ಮಾಡಿದೆ. ಆಧುನಿಕ ಸಾಂವಿಧಾನಿಕ ಪ್ರಜಾಪ್ರಭುತ್ವದಲ್ಲಿ ಇಂತಹ ಸೆಕ್ಷನ್‌ಗೆ ಜಾಗವೇ ಇಲ್ಲ. ಹಾಗಾಗಿ, ಈ ಕಾನೂನು ರದ್ದತಿಗೆ ಇದು ಸಕಾಲ

ಪ್ರಜಾವಾಣಿ ಚರ್ಚೆ

• ಅನಿಂದಿತಾ ಪಟ್ಟನಾಯಕ್, ಲಿಯಾ ವರ್ಗೀಸ್

ನಿವೃತ್ತ ಮೇಜರ್ ಜನರಲ್ ಎಸ್.ಜಿ. ಒಂಬತ್ತುಕೆರೆ ಅವರು ಭಾರತೀಯ ದಂಡ ಸಂಹಿತೆಯ (ಐಪಿಸಿ) 124 ಎ ಸೆಕ್ಷನ್‌ನ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ವಸಾಹತುಶಾಹಿ ಆಳ್ವಿಕೆಯ ಅವಧಿಯಲ್ಲಿ ಸ್ವಾತಂತ್ರ್ಯವನ್ನು ದಮನ ಮಾಡುವುದಕ್ಕಾಗಿ ಈ ಕಾನೂನು ಬಳಕೆ ಆಗುತ್ತಿತ್ತು ಮತ್ತು ಸ್ವಾತಂತ್ರ್ಯಾನಂತರದ ಈಗಿನ ದಿನಗಳಲ್ಲಿ ಈ ಕಾನೂನಿನ ಅಗತ್ಯ ಏನು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಪ್ರಶ್ನಿಸಿದ್ದಾರೆ. 'ಸರ್ಕಾರದ ಬಗ್ಗೆ ದ್ವೇಷ ಅಥವಾ ಅಸಹನೆ, ಅಥವಾ ಸರ್ಕಾರದ ವಿರುದ್ಧ ಅಸಮಾಧಾನ ಸೃಷ್ಟಿಸುವುದು ಅಥವಾ ಸೃಷ್ಟಿಸಲು ಯತ್ನಿಸುವುದು' ದೇಶದ್ರೋಹ ಎಂದು ಐಪಿಸಿಯ 124 ಎ ಸೆಕ್ಷನ್ ವಿವರಿಸುತ್ತದೆ. ದೇಶದ್ರೋಹವು ವಿಚಾರಣಾಯೋಗ್ಯ ಮತ್ತು ಜಾಮೀನುರಹಿತ ಅಪರಾಧವಾಗಿದ್ದು, ಜೀವಾವಧಿವರೆಗೆ ಶಿಕ್ಷೆ ವಿಧಿಸಲು ಅವಕಾಶ ಇದೆ.

ಸರ್ಕಾರದ ಮೇಲಿನ ಅಸಮಾಧಾನವನ್ನು ದಮನ ಮಾಡಲು ದೇಶದ್ರೋಹ ಕಾನೂನು ದುರ್ಬಳಕೆ ಆಗುತ್ತಿರುವುದು ಹೆಚ್ಚುತ್ತಲೇ ಇದೆ. ಎಲ್ಲ ರೀತಿಯ ಟೀಕಾಕಾರರ ವಿರುದ್ಧವೂ ದೇಶದ್ರೋಹ ಕಾನೂನು ಬಳಕೆ ಆಗಿದೆ. ಪತ್ರಕರ್ತರು, ಕೂಡಂಕುಳಂನಲ್ಲಿ ಅಣುವಿದ್ಯುತ್ ಕೇಂದ್ರದ ವಿರುದ್ಧ ಪ್ರತಿಭಟನೆ ನಡೆಸಿದ ಗ್ರಾಮೀಣ ಜನರು, ಮಣಿರತ್ನಂ ಅವರಂತಹ ಸಿನಿಮಾ ನಿರ್ದೇಶಕರು, ನಾಟಕ ಮಾಡಿದ ಶಾಲಾ ಮಕ್ಕಳು, ಅರಣ್ಯ ಹಕ್ಕು ಕಾರ್ಯಕರ್ತರು ಅಷ್ಟೇ ಅಲ್ಲದೆ, ಪಾಕಿಸ್ತಾನವೇನು ನರಕ ಅಲ್ಲ ಎಂದ ರಮ್ಯಾ ಅವರಂತಹ ನಟಿ ಮತ್ತು ರಾಜಕಾರಣಿಯ ವಿರುದ್ಧವೂ ದೇಶದ್ರೋಹ ಸೆಕ್ಷನ್ ಅಡಿಯಲ್ಲಿ ದೂರುಗಳು ದಾಖಲಾಗಿವೆ.

ಕಳೆದ ಒಂದು ದಶಕದಲ್ಲಿ ದೇಶದ್ರೋಹ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದ (ಎನ್‌ಸಿಆರ್‌ಬಿ) 2019ರ ವರದಿ ಹೇಳಿದೆ. 2019ರಲ್ಲಿ ದಾಖಲಾದ ಪ್ರಕರಣಗಳ ಒಟ್ಟು ಸಂಖ್ಯೆ 93, 2016ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ 35. ಹೀಗಾಗಿ ಈ ಅವಧಿಯಲ್ಲಿ ಆಗಿರುವ ಏರಿಕೆ ಪ್ರಮಾಣವು ಶೇ 165ರಷ್ಟು. 2019ರಲ್ಲಿ ದೇಶದ್ರೋಹದ ಅತಿ ಹೆಚ್ಚು ಪ್ರಕರಣಗಳು ಕರ್ನಾಟಕದಲ್ಲಿ ದಾಖಲಾಗಿವೆ. 23 ವ್ಯಕ್ತಿಗಳ ವಿರುದ್ಧ 22 ಪ್ರಕರಣಗಳು ದಾಖಲಾಗಿದ್ದವು. ಸಾಮಾಜಿಕ ಜಾಲತಾಣಗಳ ಪೋಸ್ಟ್‌ಗಳಿಗೆ ಸಂಬಂಧಿಸಿ ಕೂಡ ಕರ್ನಾಟಕದಲ್ಲಿಯೇ ದೇಶದ್ರೋಹ ಪ್ರಕರಣಗಳು ಹೆಚ್ಚು ದಾಖಲಾಗಿವೆ ಎಂದು 'ಆರ್ಟಿಕಲ್ 14' ಹೇಳಿದೆ. ಇವರಲ್ಲಿ ಬಹಳ ಮಂದಿ ಗ್ರಾಮೀಣ ಪ್ರದೇಶದ ಅಂತರ್ಜಾಲ ಬಳಕೆದಾರರು ಮತ್ತು ಇದೇ ಮೊದಲಿಗೆ ಸ್ಮಾರ್ಟ್ ಫೋನ್ ಬಳಸುತ್ತಿರುವವರು.

**ಇತಿಹಾಸ:** ಮಹಾತ್ಮ ಗಾಂಧಿಯೂ ಸೇರಿದಂತೆ ಸರ್ಕಾರದ ವಿರುದ್ಧ ಮಾತನಾಡಿದ ಭಾರತೀಯ ನಾಯಕರನ್ನು ಜೈಲಿಗೆ ಅಟ್ಟಲು 124 ಎ ಸೆಕ್ಷನ್ ಅನ್ನು ಬ್ರಿಟಿಷ್ ಸರ್ಕಾರವು ಬಳಸಿಕೊಂಡಿತ್ತು. 'ಪೌರರ ಸ್ವಾತಂತ್ರ್ಯವನ್ನು ದಮನ ಮಾಡಲು ರೂಪಿಸಲಾದ ಐಪಿಸಿಯ ಸೆಕ್ಷನ್‌ಗಳಲ್ಲಿ ಇದು ಬಹಳ ಮುಖ್ಯವಾದುದು' ಎಂದು ಗಾಂಧೀಜಿ ಹೇಳಿದ್ದರು. ಈ ಕಾನೂನು, ಸರ್ಕಾರದ ವಿರುದ್ಧ ಮಾತನಾಡಿದವರನ್ನು ಗುರಿ ಮಾಡಿಕೊಂಡಿದೆಯೇ ವಿನಾ ದೇಶದ ವಿರುದ್ಧ ಮಾತನಾಡಿದವರನ್ನು ಅಲ್ಲ ಎಂಬುದೇ ವಸಾಹತುಶಾಹಿ ಸರ್ಕಾರದ ಉದ್ದೇಶ ಏನಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ದೇಶದ್ರೋಹ ಕಾನೂನು ವಾಕ್ ಸ್ವಾತಂತ್ರ್ಯವನ್ನು ದಮನ ಮಾಡುತ್ತದೆ ಎಂಬ ವಿಚಾರವು ಸಂವಿಧಾನ ರಚನಾ ಸಭೆಯಲ್ಲಿ ಚರ್ಚೆಗೆ ಒಳಗಾಗಿದೆ. 'ದೇಶದ್ರೋಹ'ವು ಸಂವಿಧಾನದ 19ನೇ ವಿಧಿಯ ಅಡಿಯಲ್ಲಿ ವಾಕ್ ಸ್ವಾತಂತ್ರ್ಯಕ್ಕೆ ನಿರ್ಬಂಧ ಹೇರಬಹುದಾದ ಅಪರಾಧ ಎಂದು ಪರಿಗಣಿಸಬಹುದು ಎಂಬ ಪ್ರಸ್ತಾವವನ್ನು ಸಂವಿಧಾನದ ಕರಡು ಹೊಂದಿತ್ತು. ಆದರೆ, ಕೆ.ಎಂ. ಮುನ್ಷಿ ಅವರು ಇದಕ್ಕೆ ತಿದ್ದುಪಡಿಯನ್ನು ಮಂಡಿಸಿದರು. ಈ ತಿದ್ದುಪಡಿಯನ್ನು ಸಂವಿಧಾನ ರಚನಾ ಸಭೆಯು ಅಂಗೀಕರಿಸಿತು. ಹಾಗಾಗಿ, 'ದೇಶದ್ರೋಹವು' ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ಬಂಧಿಸುವ ವಿಚಾರವಾಗಿ 1949ರಲ್ಲಿ ಅಳವಡಿಕೆಯಾದ ಸಂವಿಧಾನದಲ್ಲಿ ಸೇರ್ಪಡೆ ಆಗಲಿಲ್ಲ.

ದೇಶದ್ರೋಹದ ಕಾರಣಕ್ಕೆ ವಾಕ್ ಸ್ವಾತಂತ್ರ್ಯವನ್ನು ನಿರ್ಬಂಧಿಸಬಹುದು ಎಂಬ ಅಂಶವನ್ನು ಸಂವಿಧಾನದಲ್ಲಿ ಸೇರ್ಪಡೆಗೊಳಿಸುವುದು ತಿರಸ್ಕೃತಗೊಂಡರೂ, ಐಪಿಸಿಯ ಅಡಿಯಲ್ಲಿ ಅದು ಅಪರಾಧವಾಗಿಯೇ ಉಳಿಯಿತು. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧ ಹೇರುವ ಸರ್ಕಾರದ ಅಧಿಕಾರವನ್ನು ಹಲವು ಮಹತ್ವದ ತೀರ್ಪುಗಳು ಮೊಟಕುಗೊಳಿಸಿದವು. ಅದಕ್ಕೆ ಪ್ರತಿಕ್ರಿಯೆಯಾಗಿ, ಅಗಿನ ಸರ್ಕಾರವು 'ಸಾರ್ವಜನಿಕ ಸುವ್ಯವಸ್ಥೆ' ಕಾರಣಕ್ಕೆ ವಾಕ್ ಸ್ವಾತಂತ್ರ್ಯಕ್ಕೆ ನಿರ್ಬಂಧ ಹೇರಬಹುದು ಎಂದು ಸಂವಿಧಾನಕ್ಕೆ ಮೊದಲ ತಿದ್ದುಪಡಿ ಮಾಡಿತು. ದೇಶದ್ರೋಹ ಕಾನೂನನ್ನು ಸಾರ್ವಜನಿಕ ಸುವ್ಯವಸ್ಥೆಯ ಕಾನೂನು ಎಂದು ಗುರುತಿಸಿ, ವಾಕ್ ಸ್ವಾತಂತ್ರ್ಯಕ್ಕೆ ನಿರ್ಬಂಧ ಹೇರಲು ಸಾಧ್ಯವಾಗುವಂತೆ ಪರಿವರ್ತಿಸಲಾಯಿತು.

ಇದರ ಸಿಂಧುತ್ವವು ಕೇದಾರನಾಥ್ ಸಿಂಗ್ ಮತ್ತು ಬಿಹಾರ ಸರ್ಕಾರದ ನಡುವಣ ಪ್ರಕರಣದಲ್ಲಿ (ಎಐಆರ್ 1962 ಎಸ್‌ಸಿ 955) ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠದ ಮುಂದೆ ಬಂತು. ದೇಶದ್ರೋಹ ಕಾನೂನನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿಯಿತು. ಆದರೆ, ಅದರ ವ್ಯಾಪ್ತಿಯನ್ನು ಕುಗ್ಗಿಸಿತು. ಸರ್ಕಾರದ ವಿರುದ್ಧದ ಟೀಕೆಯು ಹಿಂಸೆಗೆ ಕಾರಣವಾಗದಿದ್ದರೆ ಅಥವಾ ಹಿಂಸೆಗೆ ಕುಮ್ಮಕ್ಕು ನೀಡದೇ ಇದ್ದರೆ ಅದು ದೇಶದ್ರೋಹ ಅಲ್ಲ ಎಂದಿತು.

**ಕಾನೂನು ಈಗ ಪ್ರಸ್ತುತವೇ?:** ಕೇದಾರನಾಥ್ ಪ್ರಕರಣದಲ್ಲಿ ರೂಪಿಸಲಾದ ಮಾರ್ಗಸೂಚಿಗಳು ಕಾನೂನು ಜಾರಿ ಸಂಸ್ಥೆಗಳ ಮೇಲೆ ಯಾವ ಪರಿಣಾಮವನ್ನೂ ಬೀರಿಲ್ಲ. ಸರ್ಕಾರವನ್ನು ಟೀಕಿಸಿದ ಭಿನ್ನಮತೀಯರಿಗೆ ಕಿರುಕುಳ ನೀಡಲು ಈ ಸಂಸ್ಥೆಗಳು ಈ ಕಾನೂನನ್ನು ಬಳಸಿಕೊಳ್ಳುತ್ತಿವೆ. ಬಂಧನದ ಸಂಖ್ಯೆಗೆ ಹೋಲಿಸಿದರೆ ಶಿಕ್ಷೆ ಆಗುವ ಸಂಖ್ಯೆಯು ಅತ್ಯಂತ ಕಡಿಮೆ ಇದೆ ಎಂಬ ಎನ್‌ಸಿಆರ್‌ಬಿ ದತ್ತಾಂಶದಿಂದಲೇ ಇದು ಸ್ಪಷ್ಟ. 2019ರಲ್ಲಿ ದಾಖಲಾದ ಪ್ರಕರಣಗಳ ಪೈಕಿ ಶೇ 70ಕ್ಕೂ ಹೆಚ್ಚಿನ ಪ್ರಕರಣಗಳಲ್ಲಿ ಆರೋಪಪಟ್ಟಿಯೇ ದಾಖಲಾಗಿಲ್ಲ. 2019ರಲ್ಲಿ ವಿಚಾರಣೆಗೆ ಒಳಪಟ್ಟ 116 ಪ್ರಕರಣಗಳಲ್ಲಿ ಒಂದು ಪ್ರಕರಣದಲ್ಲಿ ಮಾತ್ರ ಶಿಕ್ಷೆ ಆಗಿದೆ. ಇಂತಹ ಪ್ರಕರಣದಲ್ಲಿ ಸಿಲುಕಿಕೊಂಡ ವ್ಯಕ್ತಿಗಳು ಭಾರಿ ಸಂಕಷ್ಟಕ್ಕೆ ಒಳಗಾಗುವುದರ ಜತೆಗೆ, ವಿಚಾರಣಾಪೂರ್ವ ಕಸ್ಟಡಿ ಮತ್ತು ಮಾಧ್ಯಮ ವಿಚಾರಣೆಯ ನೋವು ಅನುಭವಿಸಬೇಕಾಗುತ್ತದೆ. ಇತ್ತೀಚೆಗಂತೂ, ದೇಶದ್ರೋಹ ಪ್ರಕರಣದ ಆರೋಪ ಹೊತ್ತ ಜನರನ್ನು ದೇಶದ್ರೋಹಿಗಳು ಎಂದೇ ಬಿಂಬಿಸಲಾಗುತ್ತಿದೆ. ಹಾಗಾಗಿಯೇ, ಖುಲಾಸೆ ಆದರೂ ಇದರೊಂದಿಗೆ ಇರುವ ಕಳಂಕವೇ ದೊಡ್ಡ ಶಿಕ್ಷೆಯಾಗಿ ಬಿಡುತ್ತದೆ.

ಇಂತಹದೊಂದು ಸಂಕಷ್ಟದ ಬೆದರಿಕೆಯೇ ವಾಕ್ ಸ್ವಾತಂತ್ರ್ಯದ ಮೇಲೆ ದಮನಕಾರಿ ಪರಿಣಾಮ ಬೀರುತ್ತದೆ. ಇಂತಹದೊಂದು ಅವಕಾಶ ಇರುವುದೇ ಟೀಕಾಕಾರರ ಬಾಯಿ ಮುಚ್ಚಿಸಲು ಸಾಕಾಗುತ್ತದೆ. ನಿಜವಾಗಿಯೂ ಅದನ್ನು ಬಳಸುವ ಅಗತ್ಯವೇ ಇರುವುದಿಲ್ಲ. ಹಾಗಿದ್ದರೂ, ಈ ಕಾನೂನು ಉಪಯುಕ್ತವೇ ಆಗಿದ್ದು, ಕೆಲವು ಮಾರ್ಗಸೂಚಿ ಮೂಲಕ ದುರ್ಬಳಕೆ ತಡೆಯಬೇಕು ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅಂಥವರು ವಾದಿಸುತ್ತಾರೆ. ಆದರೆ, ಕೇದಾರನಾಥ್ ಪ್ರಕರಣದಲ್ಲಿ ರೂಪಿಸಲಾದ ಮಾರ್ಗಸೂಚಿಯೇ ಈಗ ಪಾಲನೆ ಆಗುತ್ತಿಲ್ಲ; ಆಡಳಿತಾರೂಢ ಪಕ್ಷವು ತನ್ನ ರಾಜಕೀಯ ಕಾರ್ಯಸೂಚಿಗಾಗಿ ಅಧಿಕಾರಿಗಳ ಮೂಲಕ ಇದನ್ನು ಬಳಸಿಕೊಳ್ಳುತ್ತದೆ ಮತ್ತು ಇದನ್ನು ಬಳಸಿದವರು ಯಾವುದೇ ಪರಿಣಾಮಕ್ಕೆ ಒಳಗಾಗದೇ ತಪ್ಪಿಸಿಕೊಳ್ಳುತ್ತಾರೆ.

ಹಿಂಸೆಗೆ ಕಾರಣವಾಗುವ ಮಾತಿನ ವಿರುದ್ಧ ಪ್ರಯೋಗಿಸಲು ಐಪಿಸಿಯಲ್ಲಿ ಹಲವು ಅವಕಾಶಗಳು ಇವೆ. ಅವುಗಳೆಂದರೆ, ಗಲಭೆಯ ಉದ್ದೇಶದ ಪ್ರಚೋದನಕಾರಿ ಮಾತು (ಸೆಕ್ಷನ್ 153), ವರ್ಗಗಳ ನಡುವೆ ದ್ವೇಷ ಬಿತ್ತುವುದು (ಸೆಕ್ಷನ್ 153 ಎ), ಶಾಂತಿ ಕದಡುವ ಉದ್ದೇಶದ ಉದ್ದೇಶಪೂರ್ವಕ ಅವಮಾನ (ಸೆಕ್ಷನ್ 504), ಸಾರ್ವಜನಿಕ ಸಮಸ್ಯೆಗೆ ಕಾರಣವಾಗುವ ರೀತಿಯ ಹೇಳಿಕೆ (ಸೆಕ್ಷನ್ 505). ಹಾಗಾಗಿಯೇ ಐಪಿಸಿಯಲ್ಲಿ ದೇಶದ್ರೋಹವನ್ನು ಉಳಿಸಿಕೊಳ್ಳುವುದಕ್ಕೆ ಯಾವ ಸಮರ್ಥನೆಯೂ ಇಲ್ಲ.

ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಟೀಕೆಯು ಅಗತ್ಯವೇ ಹೊರತು ಅಪರಾಧ ಅಲ್ಲ. ಇಲ್ಲಿ ದೇಶದ್ರೋಹ ಕಾನೂನನ್ನು ಜಾರಿ ಮಾಡಿದ್ದ ಬ್ರಿಟನ್‌ನಲ್ಲಿ ಈ ಕಾನೂನು ಈಗಾಗಲೇ ರದ್ದಾಗಿದೆ. ಆಧುನಿಕ ಸಾಂವಿಧಾನಿಕ ಪ್ರಜಾಪ್ರಭುತ್ವದಲ್ಲಿ ಇಂತಹ ಸೆಕ್ಷನ್‌ಗೆ ಜಾಗವೇ ಇಲ್ಲ. ಹಾಗಾಗಿ, ಈ ಕಾನೂನು ರದ್ದತಿಗೆ ಇದು ಸಕಾಲ.

ಲೇಖಕಿಯರು: ಅನಿಂದಿತಾ ಅವರು ವಕೀಲೆ, ಲಿಯಾ ಅವರು 'ದಕ್ಷ್' ಸಂಸ್ಥೆಯಲ್ಲಿ ಸಂಶೋಧನಾ ವ್ಯವಸ್ಥಾಪಕಿ

## ಜ್ಞಾನದ ಸಂಕೇತವೇ ಗುರು

ನಮ್ಮ ಸಮಾಜದಲ್ಲಿ ತಂದೆ-ತಾಯಿಗಿರುವಷ್ಟೆ ಗೌರವವನ್ನು ಗುರುವಿಗೆ ನೀಡಲಾಗಿದೆ. ತಂದೆ-ತಾಯಿ ಜೀವ ನೀಡಿದರೆ, ಗುರು ಜೀವನ ನೀಡುತ್ತಾರೆ. ಹೆತ್ತವರು ವ್ಯಕ್ತಿಯನ್ನು ರೂಪಿಸಿದರೆ, ಗುರು ವ್ಯಕ್ತಿತ್ವ ರೂಪಿಸುತ್ತಾರೆ. ಹೀಗಾಗಿ ನಾವು ಹೆತ್ತವರಿಗೆ ನೀಡುವ ಪೂಜನೀಯ ಸ್ಥಾನವನ್ನು ಗುರುವಿಗೆ ನೀಡಿದ್ದೇವೆ. ಎಲ್ಲಾ ವೃತ್ತಿಗಿಂತ ಶಿಕ್ಷಕ ವೃತ್ತಿ ಶ್ರೇಷ್ಠ ಅಂತ ಗೌರವಿಸುತ್ತೇವೆ. ಗುರು ಇಲ್ಲದೆ ಅರಿವೂ ಇಲ್ಲ, ಗುರಿಯೂ ಇಲ್ಲ. ಮಾನವಕುಲವನ್ನು ಪೊರೆದ ಬಹು ದೊಡ್ಡ ಶಕ್ತಿ ಗುರು. ನಮ್ಮ ಭಾರತೀಯ ಪರಂಪರೆಯಲ್ಲಂತೂ ಗುರುವೇ ನಮಗೆ ದೈವಸಮಾನ. ಬದುಕನ್ನು ಕಲ್ಪಿಸಿದ, ಬದುಕುವುದನ್ನು ಕಲಿಸಿದ ಶಿವ ನಮಗೆ ದೇವರೂ ಮಾತ್ರವಲ್ಲ, ಆದಿ ಗುರುವೂ ಹೌದು.

ನಮ್ಮಲ್ಲಿ ಗುರುಪರಂಪರೆಯ ದೊಡ್ಡ ಇತಿಹಾಸವೇ ಇದೆ. ಆದಿಗುರು ಶಿವನಿಂದ ಉಪದೇಶಿತರಾದ ಸಪ್ತರ್ಷಿಗಳು ಜಗತ್ತಿನ ಗುರುಪರಂಪರೆಗೆ ನಾಂದಿಯಾದರು. ಅಂದಿನಿಂದ ಇಂದಿನವರೆಗೂ ಗುರು-ಶಿಷ್ಯ ಪರಂಪರೆ ಮುಂದುವರೆಯುತ್ತಾ ಬಂದಿದೆ. ಶಿವನಿಂದ ಸಪ್ತರ್ಷಿಗಳು ಜ್ಞಾನದೀಕ್ಷೆ ಪಡೆದ ದಿನವಾಗಿ ಮತ್ತು ಸಪ್ತರ್ಷಿಗಳಲ್ಲಿ ಒಬ್ಬರಾದ ವಸಿಷ್ಠರ ಮುಮ್ಮಗ ವೇದವ್ಯಾಸರ ಜನ್ಮದಿನವಾಗಿ ಆಷಾಢ ಮಾಸದ ಹುಣ್ಣಿಮೆಯನ್ನು ಗುರು ಪೂರ್ಣಿಮವಾಗಿ ಆಚರಿಸಿ, ಗುರುವರ್ಯರನ್ನು ಆರಾಧಿಸುತ್ತೇವೆ. 'ಗು-ರು' ಎಂಬ ಎರಡಕ್ಷರದಲ್ಲೇ ಗುರುವಿನ ಮಹತ್ವವಿದೆ. 'ಗು' ಎಂದರೆ ಕತ್ತಲು ಅಥವಾ ಅಜ್ಞಾನ. 'ರು' ಎಂದರೆ ಬೆಳಕು ಅಥವಾ ಜ್ಞಾನ. ಕತ್ತಲಿನಿಂದ ಬೆಳಕಿನೆಡೆಗೆ ಮಾರ್ಗದರ್ಶನ ನೀಡುವವನೇ 'ಗುರು' ಎಂಬ ಅರ್ಥವಿದೆ. ಮೌಢ್ಯವನ್ನು ನಾವು ಕತ್ತಲೆಗೆ ಹೋಲಿಸುತ್ತೇವೆ. ಬೆಳಕನ್ನು ಜ್ಞಾನವೆನ್ನುತ್ತೇವೆ. ಇದಕ್ಕಾಗಿಯೇ ನಮ್ಮಲ್ಲಿ ಯಾವುದೇ ಶುಭ ಕಾರ್ಯಕ್ಕೂ ಜ್ಯೋತಿ ಬೆಳಗಿಸುವ ಸತ್ಸಂಪ್ರದಾಯ ಬೆಳೆದುಬಂದಿದೆ.

ಗುರುವಿನಂತೆ ಶಿಷ್ಯ ಎಂಬ ಲೋಕರೂಢಿ ಮಾತು ಹೇಗೆ ಸತ್ಯವೋ, ಹಾಗೇ ಗುರುವಿನ ಮನಃಸ್ಥಿತಿಯಂತೆಯೇ ಇಡೀ ಸಮಾಜ ಅನ್ನೋದು ಅಷ್ಟೇ ಸತ್ಯ. ಗುರು ಹೇಳಿದ್ದನ್ನೆಲ್ಲ ನಂಬುವ ಶಿಷ್ಯರು, ಅವರು ಹೇಳಿದಂತೆ ನಡೆಯುತ್ತಾರೆ. ಹೀಗಾಗಿ ಗುರು ತಪ್ಪು ಮಾಡಿದರೆ, ಇಡೀ ಸಮಾಜ ತಪ್ಪು ದಾರಿಯಲ್ಲಿ ನಡೆಯುತ್ತೆ. ಅದಕ್ಕಾಗಿ ಗುರುವಾದವನು ಸರಿಯಾಗಿರಬೇಕು. ಕಾಮ-ಕ್ರೋಧ-ಮದ-ಮಾತ್ಸರ್ಯಗಳಿಂದ ಮುಕ್ತನಾಗಿ ಪರಿಶುದ್ಧ ಮನಸ್ಸಿನವನಾಗಿರಬೇಕು. ಶುದ್ಧ ಮನಸ್ಸಿಲ್ಲದ ಗುರುವಿನಿಂದ ಕಲಿತ ಶಿಷ್ಯರ ಮನಸ್ಸು ಸಹ ಬಗ್ಗಡವಾಗಿ ಇಡೀ ಸಮಾಜ ಹಾಳಾಗುತ್ತೆ. ಆದ್ದರಿಂದ ಗುರುವಾದವನು ಮೊದಲಿಗೆ ತನ್ನ ಮನಸ್ಸನ್ನು ಉತ್ತಮವಾಗಿಟ್ಟುಕೊಳ್ಳಬೇಕು. ಅಲ್ಲಿ ತಾರತಮ್ಯದ ಸಣ್ಣ ಕುಂದು ಕಾಣಬಾರದು. ಏಕೆಂದರೆ, ಗುರು ಶುದ್ಧನಾದರೆ, ಇಡೀ ನಾಡು ಸುಭಿಕ್ಷವಾಗಿರುತ್ತದೆ. ಇದನ್ನೇ ಬಸವಣ್ಣನವರು ನಮ್ಮ ಅಂತರಂಗ ಶುದ್ಧವಾಗಿದ್ದರೆ, ಸಮಾಜದ ಬಹಿರಂಗ ಶುದ್ಧವಾಗಿರುತ್ತದೆ ಎಂದು ಸಾರಿದ್ದರು.

ಇಡೀ ಮಾನವಸಮಾಜವನ್ನು ರೂಪಿಸುವ ಮಹತ್ವದ ಹೊಣೆಗಾರಿಕೆ ಗುರುವಿನ ಹೆಗಲ ಮೇಲೆ ಇದ್ದಿದ್ದರಿಂದಲೇ, ನಮ್ಮಲ್ಲಿ ಋಷಿಸಂಸ್ಕೃತಿ ಬೆಳೆದು ಬಂತು. ಗುರುಕುಲದಲ್ಲಿ ವಿದ್ಯೆ ಕಲಿಯುವ ಪರಂಪರೆ ಬೆಳೆಯಿತು. ಮನಃಶುದ್ಧಿಯಿಂದ ಮಾತ್ರ ಜ್ಞಾನ ಬೆಳಗುತ್ತದೆ ಅಂತ ಋಷಿಗಳು ಧ್ಯಾನಕ್ಕೆ ಆದ್ಯತೆ ಕೊಟ್ಟರು. ಮನಸ್ಸಿನಲ್ಲೇ ವಿಶ್ವಗುರು ಶಿವನನ್ನು ಧ್ಯಾನಿಸುತ್ತಾ, ಮನಸ್ಸಿನೊಳಗಿನ ಕಶ್ಮಲ-ಗೊಂದಲಗಳನ್ನೆಲ್ಲ ಕರಗಿಸಿಕೊಳ್ಳುವುದನ್ನು ಕಲಿಸಿದರು. ದುರಾಸೆ-ದ್ವೇಷಗಳಂಥ ಕಶ್ಮಲಗಳು ಇದ್ದಷ್ಟು ಮನಸ್ಸು ದುರ್ಬಲವಾಗುತ್ತದೆ ಎಂದು ಎಚ್ಚರಿಸಿದರು. ನಿತ್ಯ ಯೋಗ-ಧ್ಯಾನದಿಂದ ಮನಸ್ಸನ್ನು ಆರೋಗ್ಯಕರವಾಗಿಟ್ಟುಕೊಂಡು, ಸಂಕುಚಿತ ಬುದ್ಧಿಯಿಂದ ಹೊರಬರುವುದನ್ನು ಹೇಳಿಕೊಟ್ಟರು. ಆರೋಗ್ಯಕರ ದೇಹಕ್ಕೆ ಪೌಷ್ಟಿಕ ಆಹಾರ ನೀಡಿದಂತೆ, ಆರೋಗ್ಯಕರವಾದ ಮನಸ್ಸಿಗೆ ಸಾತ್ವಿಕ ವಿಚಾರಧಾರೆಗಳ ಅಗತ್ಯವನ್ನು ತಿಳಿಸಿಕೊಟ್ಟರು. ಸಾಧಕನ ಹಿಂದೆ ಗುರು ಮತ್ತು ಸಾಧನೆಯ ಮುಂದೆ ಗುರಿ ಇದ್ದಾಗಲೇ, ಮಾನವರ ಬದುಕು 'ಸಚ್ಚಿದಾನಂದ'ದಲ್ಲಿ ಬೆಳಗುವುದೆಂಬುದನ್ನು ತೋರಿಸಿಕೊಟ್ಟರು.

# 'ದೇಶ ದ್ರೋಹಿ'ಗಳನ್ನು ದಂಡಿಸಲು ಕಾನೂನು ಬೇಕು

ದೇಶವನ್ನು ಅಲ್ಲಾಡಿಸಲು ನೆಪಕ್ಕಾಗಿ ಕಾದು ಕುಳಿತಿರುತ್ತಾರೆ. ಪ್ರತಿಯೊಂದು ಅವಕಾಶವನ್ನು ತಮ್ಮ ಸಿದ್ಧಾಂತ ಮತ್ತು ನಿರೂಪಣೆಗೆ ತಕ್ಕಂತೆ ಸನ್ನಿವೇಶ ಬದಲಿಸಲು, ಕಥೆ ಕಟ್ಟಲು ಕಾದಿರುತ್ತಾರೆ.... ಇದನ್ನು ಕೇವಲ ಅಭಿಪ್ರಾಯ ಸ್ವಾತಂತ್ರ್ಯ ಎಂದು ಹೇಳಿ ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವೇ? ಇಂತಹ ವಿಚ್ಛಿದ್ರ ಶಕ್ತಿಗಳ ಮೇಲೆ ಲಂಗುಲಗಾಮು ಇಲ್ಲದಿದ್ದರೆ, ದೇಶದ ಕಥೆ ಏನು? ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮಿತಿ ಇರಬೇಕು

• ಡಿ.ಎಚ್.ಶಂಕರಮೂರ್ತಿ

**1948ರಲ್ಲಿ** ಸೆಕ್ಷನ್ 124 ಎ ಜತೆಗೆ ಬಳಸುತ್ತಿದ್ದ 'ದೇಶದ್ರೋಹ' ಪದವನ್ನು ತೆಗೆಯಲಾಯಿತು. ಈ ಬಗ್ಗೆ ಸಂವಿಧಾನ ರಚನಾ ಸಭೆಯಲ್ಲಿ ವ್ಯಾಪಕ ಚರ್ಚೆ ನಡೆದು, ಕೆ.ಎಂ.ಮುನ್ಷಿ ಅವರು ಬ್ರಿಟಿಷ್ ಕಾಲದಿಂದ ಬಳಕೆಯಲ್ಲಿದ್ದ 'ದೇಶದ್ರೋಹ' ಪದ ತೆಗೆಯಲು ಪ್ರಸ್ತಾವನೆ ಮಂಡಿಸಿದ್ದರು. 1949ರಲ್ಲಿ ಸಂವಿಧಾನವನ್ನು ಒಪ್ಪಿಕೊಂಡಾಗ ಅದರಲ್ಲಿ 'ದೇಶದ್ರೋಹ' ಪದ ಇರಲಿಲ್ಲ. ಸಂಪೂರ್ಣ ವಾಕ್ ಸ್ವಾತಂತ್ರ್ಯ ನೀಡುವ 19(ಎ) ಅನ್ನು ಸೇರಿಸಲಾಗಿತ್ತು. 'ದೇಶದ್ರೋಹ' ಪದ ತೆಗೆದರೂ ಅದರ ಆಶಯವುಳ್ಳ 124 ಎ ಸೆಕ್ಷನ್ ಅನ್ನು ಐಪಿಸಿಯಲ್ಲಿ ಮುಂದುವರಿಸಲಾಯಿತು. 1951ರಲ್ಲಿ ಅಂದಿನ ಪ್ರಧಾನಿ ಹಾಗೂ 'ಸ್ವಾತಂತ್ರ್ಯ ಪ್ರೇಮಿ' ಎಂದು ಕರೆಸಿಕೊಳ್ಳುತ್ತಿದ್ದ ಜವಾಹರಲಾಲ್ ನೆಹರೂ ಅವರು ಸಂವಿಧಾನಕ್ಕೆ ತಿದ್ದುಪಡಿ ತಂದು ಸಂಪೂರ್ಣ ವಾಕ್ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿ, ಕೆಲವು ನಿರ್ಬಂಧಗಳನ್ನು ವಿಧಿಸಿದರು. ಸರ್ಕಾರಕ್ಕೆ ದಂಡನೆಯ 'ಅಧಿಕಾರ' ನೀಡಿದರು. 'ದೇಶ ದ್ರೋಹ' ಸೆಕ್ಷನ್ ಮರುಸ್ಥಾಪನೆ ಮಾಡಿದರು. ಇತಿಹಾಸದಲ್ಲಿ ಮೊದಲ ಬಾರಿಗೆ ಇಂದಿರಾಗಾಂಧಿ ಅವರು ಸೆಕ್ಷನ್ 124 ಎ ಅನ್ನು 'ದಂಡಾರ್ಹ ಅಪರಾಧ'ದ ವ್ಯಾಪ್ತಿಗೆ ಒಳಪಡಿಸಿ, ವಾರಂಟ್ ಇಲ್ಲದೆ ಬಂಧಿಸುವ ಅಧಿಕಾರವನ್ನೂ ಪೊಲೀಸರಿಗೆ ನೀಡಿದರು. ಈ ಕಾಯ್ದೆ ರದ್ದು ಮಾಡಬೇಕು ಎಂದು ವಾದಿಸುವವರು ಇದನ್ನು ಪ್ರಸ್ತಾಪಿಸುತ್ತಿಲ್ಲ ಏಕೆ?

ಇಂದಿನ ಸಂದರ್ಭದಲ್ಲಿ ಕಾಯ್ದೆಯ ಅಗತ್ಯವಿದೆ. ಆದರೆ, ಅದನ್ನು ವಿವೇಚನೆಯಿಂದ ಬಳಸಬೇಕು. ತುರ್ತುಪರಿಸ್ಥಿತಿ ವಿರೋಧಿಸಿ ಹೋರಾಟ ಮಾಡಿದ್ದ ನನ್ನನ್ನೂ ಅದೇ ಕಾಯ್ದೆ ಬಳಸಿ 19 ತಿಂಗಳು ಜೈಲಿಗೆ ಹಾಕಿದ್ದರು. ನಾವು ಹೋರಾಟ ಮಾಡಿದ್ದು ತುರ್ತುಪರಿಸ್ಥಿತಿ ವಿರುದ್ಧವೇ ಹೊರತು, ದೇಶದ ವಿರುದ್ಧ ಅಲ್ಲ.

ಆದರೆ, ದೇಶದ ವಿರುದ್ಧ ಪಿತೂರಿ ಮಾಡುವವರು, ದೇಶದಲ್ಲಿ ಭಯೋತ್ಪಾದನೆ ಸೃಷ್ಟಿಸುವವರನ್ನು ನೋಡಿಕೊಂಡು ಸುಮ್ಮನೆ ಬಿಡಬೇಕೇ? ಅವರನ್ನು ಶಿಕ್ಷಿಸಬಾರದೇ? ದೇಶವನ್ನು ತುಂಡು ತುಂಡು ಮಾಡುತ್ತೇವೆ ಎನ್ನುವವರನ್ನು, ದೇಶದ ವಿರುದ್ಧ ಭಯೋತ್ಪಾದನೆ ಸಾರಿದ್ದ ಅಫ್ಜಲ್ ಗುರುವನ್ನು ಬೆಂಬಲಿಸಿ ಮಾತನಾಡುವವರನ್ನು 'ವಾಕ್ ಸ್ವಾತಂತ್ರ್ಯ'ದ ಹೆಸರಿನಲ್ಲಿ ಸಹಿಸಿಕೊಂಡು ಸುಮ್ಮನಿರಬೇಕೇ? ಪ್ರಜಾತಂತ್ರ ವ್ಯವಸ್ಥೆಯನ್ನು ಕಿತ್ತೊಗೆದು 'ಪರ್ಯಾಯ' ವ್ಯವಸ್ಥೆ ಹೇರುವ ಪಿತೂರಿಗಳಿಗೆ ಅವಕಾಶ ನೀಡಬೇಕೇ? ಇದನ್ನು ದೇಶದ ಎಲ್ಲ ಜನರೂ ಯೋಚಿಸಬೇಕು.

ದೇಶದಲ್ಲಿ ವಿವಿಧ ಕಾಲ ಘಟ್ಟಗಳಲ್ಲಿ ಬಂದ ಸರ್ಕಾರಗಳು ಈ ಕಾನೂನನ್ನು ತಮಗೆ ಬೇಕಾದಂತೆ ಬಳಸಿವೆ. ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗ, 2012ರಲ್ಲಿ ಕೂಡಂಕುಳಂ ಹಿಂಸಾಚಾರ ಪ್ರಕರಣದಲ್ಲಿ ಒಂದೇ ದಿನ 9,000 ಜನರ ಮೇಲೆ 'ದೇಶದ್ರೋಹ' ಪ್ರಕರಣ ದಾಖಲಿಸಲಾಗಿತ್ತು. ಅಲ್ಲದೆ, ಒಟ್ಟು 55,795 ಸಾವಿರ ಜನರ ಮೇಲೆ ವಿವಿಧ ರೀತಿಯ ಪ್ರಕರಣಗಳನ್ನು ದಾಖಲಿಸಿದ್ದರು. 23,000 ಜನರನ್ನು ಬಂಧಿಸಲಾಯಿತು. ಆಗಲೂ ಪತ್ರಕರ್ತರು, ಹೋರಾಟಗಾರರು, ಚಿಂತಕರ ಮೇಲೆ 'ದೇಶದ ವಿರುದ್ಧ ಸಮರ ಸಾರಿದ್ದಾರೆ' ಎಂದೇ ಕೇಸು ದಾಖಲಿಸಲಾಗಿತ್ತು. ಅತ್ಯಲ್ಪ ಸಮಯದಲ್ಲಿ ಅತಿ ಹೆಚ್ಚು ದೇಶ ದ್ರೋಹದ ಪ್ರಕರಣ ದಾಖಲಿಸಿದ ಕೀರ್ತಿ ಯುಪಿಎ ನೇತೃತ್ವದ ಸರ್ಕಾರಕ್ಕೆ ಸಲ್ಲುತ್ತದೆ. ಈಗ ದೊಡ್ಡ ಭಾಷಣ ಬಿಗಿಯುವ ಪಿ.ಚಿದಂಬರಂ ಆಗ ಗೃಹ ಸಚಿವರಾಗಿದ್ದರು. ಕಪಿಲ್ ಸಿಬಲ್ ಕಾನೂನು ಮಂತ್ರಿ ಆಗಿದ್ದರು. ಈಗ ಇವರೇ ಈ ಕಾಯ್ದೆ ಕಿತ್ತು ಹಾಕಬೇಕು ಎನ್ನುತ್ತಿದ್ದಾರೆ.

ನರೇಂದ್ರ ಮೋದಿ ಪ್ರಧಾನಿ ಆದ ಬಳಿಕ ಈ ಕಾನೂನಿನ ಬಳಕೆ ಹಿಂದೆಂದಿಗಿಂತಲೂ ಕಡಿಮೆ ಆಗಿದೆ. ಅವರನ್ನು ಟೀಕಿಸಿದ ಕಾರಣಕ್ಕೆ 'ದೇಶದ್ರೋಹ' ಸೆಕ್ಷನ್ ಅಡಿಯಲ್ಲಿ ದೂರು ದಾಖಲು ಮಾಡಿದ ಒಂದೇ ಒಂದು ಪ್ರಕರಣ ಇದ್ದರೆ ತೋರಿಸಿ? ಯುಪಿಎ ಸರ್ಕಾರವನ್ನು ಟೀಕಿಸಿ ವ್ಯಂಗ್ಯ ಚಿತ್ರ ಬರೆದವರನ್ನು ಜೈಲಿಗೆ ಹಾಕಿದ ಹಲವು ನಿದರ್ಶನಗಳಿವೆ. ಕೆಲವರು ದಿನವೂ ಸುಳ್ಳು ಹೇಳುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ. ಅದನ್ನೇ ಮತ್ತೆ ಮತ್ತೆ ದೊಡ್ಡ ಧ್ವನಿಯಲ್ಲಿ ಪ್ರಸಾರ ಮಾಡುವುದೇ ಅವರಿಗೆ ಒಂದು ಕೆಲಸವಾಗಿದೆ. ವಾಕ್ ಸ್ವಾತಂತ್ರ್ಯಕ್ಕೂ ಒಂದು ಮಿತಿ ಇರಬೇಕು. ನಿತ್ಯವೂ ಬಾಯಿಗೆ ಬಂದ ಹಾಗೆ ಕೀಳು ಮಟ್ಟದ ಭಾಷೆಯಲ್ಲಿ ಪ್ರಧಾನಿ ಮೋದಿಯವರನ್ನು ನಿಂದಿಸುತ್ತಾರೆ. ಅವರು ಚುನಾವಣೆಯಲ್ಲಿ ಅತ್ಯಧಿಕ ಬಹುಮತ ಪಡೆದು ಪ್ರಧಾನಿ ಆದವರು. ಆದರೂ ಅವರನ್ನು ನಿಂದಿಸುವವರ ವಿರುದ್ಧ ಒಂದೇ ಒಂದು ದೇಶ ದ್ರೋಹದ ಪ್ರಕರಣ ದಾಖಲಿಸಲಿಲ್ಲ. ಯಾರಾದರೂ ಹಾಗೆ ಹೇಳುತ್ತಿದ್ದರೆ ಅದು ಅಪ್ಪಟ ಸುಳ್ಳು.

ಮೋದಿ ನೇತೃತ್ವದ ಸರ್ಕಾರ ತಂದ ಕೃಷಿ ಕಾಯ್ದೆ, ಸಿಎಎ ಸೇರಿದಂತೆ ಯಾವುದೇ ಕಾಯ್ದೆ, ಕಾನೂನಿನ ಬಗ್ಗೆ ಅಭಿಪ್ರಾಯ ಬೇಧವಿದ್ದರೆ ಅದನ್ನು ಚುನಾವಣೆಯಲ್ಲಿ ಪ್ರಸ್ತಾಪಿಸಿ, ಗೆದ್ದು ಬಂದು ಬದಲಿಸಲಿ. ಯಾರು ಬೇಡ ಎನ್ನುತ್ತಾರೆ. ಆದರೆ, ಇಲ್ಲಿ ದೇಶದ ವಿರುದ್ಧ ದಂಗೆ ಸೃಷ್ಟಿಸುವ ಪ್ರಯತ್ನವನ್ನು ಕೆಲವು ಹಿತಾಸಕ್ತಿಗಳು ಮಾಡುತ್ತಿವೆ. ಇದು ದೊಡ್ಡ ಮಟ್ಟದ ಪಿತೂರಿ. ಇವರಿಗೆ ಮೋದಿ ಸರ್ಕಾರ ಇರುವುದು ಬೇಕಿಲ್ಲ. ದೇಶವನ್ನು ಅಲ್ಲಾಡಿಸಲು ನೆಪಕ್ಕಾಗಿ ಕಾದು ಕುಳಿತಿರುತ್ತಾರೆ. ಪ್ರತಿಯೊಂದು ಅವಕಾಶವನ್ನು ತಮ್ಮ ಸಿದ್ಧಾಂತ ಮತ್ತು ನಿರೂಪಣೆಗೆ ತಕ್ಕಂತೆ ಸನ್ನಿವೇಶ ಬದಲಿಸಲು, ಕಥೆ ಕಟ್ಟಲು ಕಾದಿರುತ್ತಾರೆ. ಬೌದ್ಧಿಕ ವಲಯದ ಒಂದು ವರ್ಗ ಇದಕ್ಕೆ ಪ್ರಚೋದನೆ ನೀಡುತ್ತಿದೆ. ಇದನ್ನು ಕೇವಲ ಅಭಿಪ್ರಾಯ ಸ್ವಾತಂತ್ರ್ಯ ಎಂದು ಹೇಳಿ ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವೇ? ಇಂತಹ ವಿಚ್ಛಿದ್ರ ಶಕ್ತಿಗಳ ಮೇಲೆ ಲಂಗುಲಗಾಮು ಇಲ್ಲದಿದ್ದರೆ, ದೇಶದ ಕಥೆ ಏನು? ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮಿತಿ ಇರಬೇಕು. ಬಾಯಿ ಇದೆ ಎಂದು, ಮನಸ್ಸಿನಲ್ಲಿ ಕಂಡಿದ್ದು ಕಾರುವುದು ಮತ್ತು ಅದನ್ನು ಸಮರ್ಥಿಸಿಕೊಳ್ಳುವುದು ಅಭಿವ್ಯಕ್ತಿ ಸ್ವಾತಂತ್ರ್ಯ ಆಗಲು ಸಾಧ್ಯವಿಲ್ಲ. ಕೆಲವೇ ಮಂದಿಯ 'ವಿಚ್ಛಿದ್ರ ಚಿಂತನೆ'ಗಳನ್ನು ದೇಶದ ಮೇಲೆ ಹೇರುವುದನ್ನು ಒಪ್ಪಲು ಸಾಧ್ಯವಿಲ್ಲ.

ನಾವು (ಬಿಜೆಪಿ) ಹಲವು ದಶಕ ವಿರೋಧ ಪಕ್ಷದಲ್ಲಿ ಇದ್ದೆವು. ಹಲವು ಕಾಯ್ದೆ, ಕಾನೂನುಗಳನ್ನು ಪ್ರಜಾತಂತ್ರದ ಚೌಕಟ್ಟಿನಲ್ಲಿ ವಿರೋಧಿಸಿದ್ದೆವು. ಆದರೆ, ದೇಶವನ್ನು ಭಂಜನೆ ಮಾಡುವ ಕೆಲಸ ಮಾಡಲಿಲ್ಲ. 370ನೇ ವಿಧಿಯ ಅಡಿಯಲ್ಲಿ ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡುವ ವಿಚಾರವನ್ನು ನಮ್ಮ ಪಕ್ಷ ಪೂರ್ಣ ಬಹುಮತ ಬಂದ ಬಳಿಕ ಸಂಸತ್ತಿನ ಒಪ್ಪಿಗೆ ಪಡೆದೇ ಮಾಡಿದೆ. ಸಿಎಎ ಅಥವಾ ಕೃಷಿ ಕಾನೂನು ಕೂಡ ಸಂಸತ್ತಿನ ಒಪ್ಪಿಗೆ ಪಡೆದೇ ಮಾಡಿದ್ದೇವೆ. ಇದು ಬೇಡ ಎನ್ನುವವರು ಮುಂದೆ ಅಧಿಕಾರಕ್ಕೆ ಬಂದಾಗ ಬದಲಿಸಲಿ. ಪ್ರಜಾತಂತ್ರದಲ್ಲಿ ಅದಕ್ಕೆ ಅವಕಾಶ ಇದೆ. ಆದರೆ, ದೇಶ ವಿರೋಧಿ ಶಕ್ತಿಗಳ ಅಟ್ಟಹಾಸ ಅದು ಯಾವುದೇ ರೂಪದ 'ಮುಸುಕು' ಹಾಕಿಕೊಂಡ ಬಂದರೂ ಬಿಡುವ ಅಗತ್ಯವಿಲ್ಲ. ಎಲ್ಲದಕ್ಕಿಂತ ದೇಶದ ಸಾರ್ವಭೌಮತೆ, ಅಖಂಡತೆ ಮುಖ್ಯ. ಅದಕ್ಕೆ ಕುತ್ತು ತರುವವರನ್ನು ಸುಮ್ಮನೆ ಬಿಡುವ ಅಗತ್ಯವೂ ಇಲ್ಲ.

ಲೇಖಕ: ವಿಧಾನಪರಿಷತ್ತಿನ ಮಾಜಿ ಸಭಾಪತಿ

ನಿರೂಪಣೆ: **ಎಸ್. ರವಿಪ್ರಕಾಶ್**

## ಪದಬಂಧ 4667

– ವಿದ್ಯಾ ವಿನಯ್



**ಎಡದಿಂದ ಬಲಕ್ಕೆ**

1.ಯೋಗವಿದ್ದರೆ ಮಾತ್ರ ಪ್ರಯೋಜನ (4)
3.ಓಲಗದ ಸದ್ದಿರುವ ರಾಜ ದರ್ಬಾರು (4)
5.ಒಲುಮೆಯಿಂದ ಮಾಡಿರುವ ಒತ್ತಾಯ (3)
6.ಕಾರಿದ್ದವನು ಹಿಡಿದಿರುವ ಅಂಕವಣಿ (3)
8.ಸಹಿಸಲಸಾಧ್ಯವಾದದು (3)
9.ಒಂದು ಗಂಟೆಯ ಅರವತ್ತನೆ ಒಂದು ಭಾಗದ ಕಾಲ (3)
10.ನಗ ಖರೀದಿಗಾಗಿ ಕೈಯಲ್ಲಿರುವ ದುಡ್ಡು (3)
12.ತಾಲುವಿಗೆ ತಗಲಿ ಉಚ್ಚರಿಸಲ್ಪಡುವ ವರ್ಣ (3)
14.ಯುದ್ಧಕ್ಕೆ ಅಂಜುವವನು (4)
15.ಅದೃಷ್ಟವೇ ಇಲ್ಲದವನೀತ (4)

**ಮೇಲಿಂದ ಕೆಳಕ್ಕೆ**

1.ಬೇರೆಯವರಿಗೆ ಸಹಾಯ ಮಾಡುವವನು (4)
2.ಛೇ, ಜಗಲಿಯ ಆಜುಬಾಜು ಎಲ್ಲಾ ಕೊಳೆ, ಕಸ! (3)
3.ಜುಲುಮೆಯಿಂದ ಮೂಡಬಲ್ಲುದೇ ಈ ಪ್ರೀತಿ? (3)
4.ದೇವಾಲಯದಲ್ಲಿ ಮೂಲ ವಿಗ್ರಹವಿರುವ ಒಳಭಾಗ (4)
7.ಹರುಷಪಡುತ್ತಿರುವ ಗಂಡು ವ್ಯಕ್ತಿ (3)
8.ಸನ್ಮಾನ ಮಾಡಿದರೂ ಸಹ ದುಗುಡ? (3)
9.ಕೊನೆಗೆ ಉತ್ತರವಿದ್ದರೂ ಮೌನ! (4)
11.ದೂರ ದೃಷ್ಟಿ ಇದ್ದವನದು, ಕೆಟ್ಟ ಅದೃಷ್ಟ (4)
12.ಮಾತೃಭಾಷೆಯಿದು (3)
13.ವ್ಯವಸಾಯಗಾರನ ಅಳಲು (3)

**4666ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:** 1.ಪರಮಪದ 4.ಕಟಾಕ್ಷ 5.ನಿಗ್ರ 37.ಸರಸ 9.ಸತ್ವಂಗ 10.ಜೇರಿಗೆ 13.ಸುಜನ 15.ವಲ್ಮೀಕ 17.ಬುದ್ಧದ 18.ವಿಧಾನಸೌಧ

**ಮೇಲಿಂದ ಕೆಳಕ್ಕೆ:** 1.ಪಕ್ಷ 2.ಮತ್ಸರ 3.ದನಿ 4.ಕಲ್ಲೋಲ 6.ತಲಜ 7.ಸವಿಗನಸು 8.ಸಹಜೀವನ 11.ಪ್ರಭವ 12.ಪ್ರಮಾದ 14.ಜವಾನ 16.ಕವಿ 17.ಬುಧ

## ಸುಡೊಕು 5053

| | | | | | | | | |
|---|---|---|---|---|---|---|---|---|
| | | 1 | | 8 | | | | 5 |
| | | | 2 | | 7 | | 1 | |
| 7 | | 3 | | 9 | | 8 | | 2 |
| | 5 | | | | 1 | | | |
| 6 | | 7 | | 5 | | 2 | | 8 |
| | 3 | | 9 | | | | | 1 |
| | 2 | | | | 8 | | 6 | |
| | | | | 3 | | | | 7 |
| 1 | | 8 | 5 | | | 3 | | 4 |

5052 ಸುಡೊಕು

| | | | | | | | | |
|---|---|---|---|---|---|---|---|---|
| 9 | 4 | 3 | 8 | 5 | 1 | 7 | 2 | 6 |
| 8 | 1 | 7 | 6 | 3 | 2 | 4 | 5 | 9 |
| 6 | 2 | 5 | 4 | 7 | 9 | 1 | 8 | 3 |
| 1 | 6 | 2 | 9 | 4 | 5 | 3 | 7 | 8 |
| 5 | 7 | 4 | 1 | 8 | 3 | 9 | 6 | 2 |
| 3 | 9 | 8 | 2 | 6 | 7 | 5 | 4 | 1 |
| 7 | 8 | 9 | 3 | 2 | 4 | 6 | 1 | 5 |
| 2 | 5 | 1 | 7 | 9 | 6 | 8 | 3 | 4 |
| 4 | 3 | 6 | 5 | 1 | 8 | 2 | 9 | 7 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## ಗುಂಡಣ್ಣ




## ದಿನ ಭವಿಷ್ಯ

ಶನಿವಾರ ಜುಲೈ 24, 2021

**ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುಷ್ಯ ಪೂರ್ಣಿಮಾ ಗಂ. 4-22 (ಬೆ. 7-55) ಶನಿವಾರ ನಿತ್ಯ ನಕ್ಷತ್ರ ಉತ್ತರಾಷಾಢ ಗಂ. 18-26 (ಹ. 1-33) ವಿಷ್ಕಂಭ ನಾಮ ಯೋಗ ಗಂ. 3-31 ಉಪರಿ ಪ್ರೀತಿನಾಮ ಯೋಗ ಗಂ. 54-25 ಬವ ಕರಣ ಗಂ. 4-22 ವಿಷ ಗಂ. 28-7 ಅಮೃತ ಗಂ. 3-48 ಪುನರಮೃತ ಗಂ. 51-23 ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-06 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 3**

**ಮೇಷ:** ಅಭಿರುಚಿಗೆ ತಕ್ಕಂತೆ ಸ್ವಾವಲಂಬಿ ಕಾರ್ಯಗಳಲ್ಲಿ ತೊಡಗುವಿರಿ. ಆದರ್ಶ ಹೊಂದಿದ ಕೆಲಸ–ಕಾರ್ಯಗಳಿಗೆ ಸಹಾಯ ದೊರಕಿ ಕಾರ್ಯಸಾಧನೆ ಮಾಡಲಿದ್ದೀರಿ. ಘನತೆ ಗೌರವಗಳು ನಿಮ್ಮದಾಗಲಿವೆ.

**ವೃಷಭ:** ಸದಾಚಾರ ಕಾರ್ಯಗಳಲ್ಲಿ ಸ್ವಸ್ಥ ಮನಸ್ಸಿನಿಂದ ತೊಡಗುವಿರಿ. ಇಷ್ಟ ಮಿತ್ರರ ಮಧ್ಯಸ್ಥಿಕೆಯಲ್ಲಿ ಗಂಭೀರ ಸಮಾಲೋಚನೆಗಳು ನಡೆಯುವ ಸಾಧ್ಯತೆಯಿದ್ದು ಶುಭದಾಯಕವಾಗಿ ಪರಿಣಮಿಸಲಿದೆ. ಗಣಪತಿ ಆರಾಧನೆ ಶ್ರೇಷ್ಠ.

**ಮಿಥುನ:** ನಂಬಿ ಬಂದವರಿಗೆ ಉತ್ತಮ ಆಸರೆ ನೀಡಿ ಹರ್ಷದಾಯಕ ಸಂದೇಶ ನೀಡುವ ಸಾಧ್ಯತೆ. ಚಮತ್ಕಾರಿಕವಾಗಿ ಸತ್ಕಾರ್ಯಗಳಲ್ಲಿ ತೊಡಗಿ ನಿರ್ವಹಿಸುವ ಅವಕಾಶ ನಿಮ್ಮದಾಗಲಿದೆ. ಪ್ರಶಂಸೆಗೆ ಪಾತ್ರರಾಗುವಿರಿ.

**ಕರ್ಕಾಟಕ:** ನಿಮ್ಮ ವಿರುದ್ಧ ಪಿತೂರಿ ನಡೆಸುತ್ತಿರುವವರ ಬಣ್ಣ ಇಂದು ಬಯಲಾಗಲಿದೆ. ಮೇಧಾವಿತನದಿಂದಾಗಿ ಹಿತಕರ ವಾತಾವರಣ ನಿಮ್ಮದಾಗುವುದು. ಗೊಂದಲದ ನಿವಾರಣೆಗಾಗಿ ಖರ್ಚು.

**ಸಿಂಹ:** ಸಮಸ್ಯೆಗಳ ಪರಿಹಾರಕ್ಕಾಗಿ ನಿಮ್ಮ ಹೊಸ ಜಾಣ್ಮೆಯನ್ನು ಬಳಬೇಕಾದ ಸಂದರ್ಭ ಬರಬಹುದು. ನಿಮ್ಮ ದಿಟ್ಟ ಮಾತುಗಳಿಂದಾಗಿ ಅನಾವಶ್ಯಕ ಹೊರೆ ಹೊರಬೇಕಾದೀತು. ಸಾಂಸಾರಿಕ ಸಂತೋಷ ಅನುಭವಿಸುವಿರಿ.

**ಕನ್ಯಾ:** ಭರವಸೆಗಳ ಮಹಾಪೂರವೆ ಹರಿದುಬಂದು ಸಂತೋಷ ಮೂಡುವುದು. ಸೇವಾಕಾರ್ಯಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ಸವಾಲುಗಳು ಎದುರಾಗಲಿದ್ದು ಎದೆಗುಂದದೇ ಮುನ್ನುಗ್ಗಿ. ಯಶಸ್ಸು ನಿಮ್ಮದಾಗಲಿದೆ.

**ತುಲಾ:** ಕಷ್ಟಗಳೆಲ್ಲವೂ ಕರಗಿ ಹೋಗಿ ಕಾರ್ಯಯೋಜನೆಗಳು ಸುಲಭವಾಗಿ ಸಾಕಾರಗೊಳ್ಳುವವು. ಕೆಲಸ–ಕಾರ್ಯಗಳಿಗೆ ಸ್ಫೂರ್ತಿ ದೊರಕುವುದು. ಬಂಧುವರ್ಗದವರಿಂದ ಸಕಾಲಿಕ ನೆರವು ದೊರೆಯುವ ಸಾಧ್ಯತೆ.

**ವೃಶ್ಚಿಕ:** ಹೊಂದಿಕೊಳ್ಳುವ ಮನೋಭಾವದಿಂದಾಗಿ ಮಹತ್ವದ ವಿಷಯಗಳಲ್ಲಿ ಒಡಂಬಡಿಕೆಗೆ ಬರುವ ಸಾಧ್ಯತೆ. ವಿಪರೀತ ಸನ್ನಿವೇಶಗಳು ಎದುರಾಗಬಹುದು. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯ ಚರ್ಚೆ ನಡೆಯುವ ಸಾಧ್ಯತೆ.

**ಧನು:** ಬೇರೆಯವರ ಸಲಹೆಯಿಂದಾಗಿ ಅಪಾಯದಲ್ಲಿ ಸಿಲುಕಿಕೊಳ್ಳುವ ಸಾಧ್ಯತೆ. ಹಿರಿಯರ ಮಾತುಗಳನ್ನು ಗೌರವಿಸುವುದರಿಂದ ಆಪತ್ತಿನಿಂದ ಪಾರಾಗುವಿರಿ. ಛಲಕ್ಕೊಂದು ಬಲ ದೊರೆತು ಯಶಸ್ಸು ನಿಮ್ಮದಾಗಲಿದೆ.

**ಮಕರ:** ನಿಮ್ಮ ಬಹುದಿನಗಳ ಬಯಕೆ ಈಡೇರುವ ಸಾಧ್ಯತೆ. ವೃತ್ತಿಯಲ್ಲಿ ಬದಲಾವಣೆ ಮಾಡುವ ಸಾಧ್ಯತೆ. ಉತ್ತಮ ಕೆಲಸ ಕಾರ್ಯಗಳಿಂದಾಗಿ ಮನ್ನಣೆ ಗಳಿಸುವಿರಿ. ಮನೆಯವರ ಆರೋಗ್ಯದ ಬಗ್ಗೆ ನಿಗಾ ವಹಿಸಿ.

**ಕುಂಭ:** ಬಹುದಿನಗಳಿಂದ ಬಾಕಿ ಇರುವ ಕೆಲಸಗಳು ಇಂದು ವಿಳಂಬವಿಲ್ಲದೇ ನೆರವೇರುವ ಸಾಧ್ಯತೆ. ಸಮಾಜದ ಗೌರವಾದರಗಳು ನಿಮ್ಮನ್ನರಸಿ ಬರುವವು. ಭರವಸೆಗಳ ಈಡೇರಿಕೆಗಾಗಿ ಶ್ರಮ ವಹಿಸಬೇಕಾದೀತು.

**ಮೀನ:** ಬಂಧುಗಳ ಸಲಹೆ ಮತ್ತು ಆಶ್ವಾಸನೆಗಳಲ್ಲಿ ವಿಶ್ವಾಸವಿಡಿ. ಹೊಸ ಕೆಲಸಕಾರ್ಯಗಳಲ್ಲಿ ತೊಡಗಲು ಪ್ರಶಸ್ತವಾಗಿದೆ. ಷರತ್ತುಬದ್ಧ ಅವಕಾಶಗಳು ದೊರಕುವ ಸಾಧ್ಯತೆ. ಉದ್ಯೋಗರಂಗದಲ್ಲಿ ಬದಲಾವಣೆಯ ಸಾಧ್ಯತೆ.

**ನಿಮ್ಮ ಜನ್ಮದಿನ 24-ಜುಲೈ:** ಇಂದು ಅತ್ಯಂತ ಶುಭದಾಯಕ. ವ್ಯವಹಾರಸ್ಥರಿಗೆ ವ್ಯವಹಾರದಲ್ಲಿ ಸುಗಮತೆ. ಸಣ್ಣಪುಟ್ಟ ವಿಚಾರಗಳಿಗೂ ಎದುರಾಗುವ ವಿರೋಧಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಸಹನೆಯಿಂದ ವರ್ತಿಸುವುದು ಉತ್ತಮ. ಸಂಗಾತಿಯಿಂದ ನಿಮ್ಮ ನಡವಳಿಕೆಗಳ ಬಗ್ಗೆ ಗೌರವಾದರ ದೊರಕಿ ದಾಂಪತ್ಯದಲ್ಲಿ ಸದಾ ಸಂತೋಷವನ್ನನುಭವಿಸುವಿರಿ.

ರೌಡಿ ಚಟುವಟಿಕೆ ಹತ್ತಿಕ್ಕಲು ಕಾರ್ಯಾಚರಣೆ • 58 ಮನೆಗಳ ಮೇಲೆ ನಸುಕಿನಲ್ಲಿ ಸಿಸಿಬಿ ಪೊಲೀಸರ ದಿಢೀರ್ ದಾಳಿ

# ರೌಡಿಗಳ ಮನೆ ಮೇಲೆ ದಾಳಿ; ನಗದು, ಡ್ರ್ಯಾಗರ್ ಜಪ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ರೌಡಿ ಚಟುವಟಿಕೆ ಹತ್ತಿಕ್ಕಲು ಕಾರ್ಯಾಚರಣೆ ನಡೆಸುತ್ತಿರುವ ಸಿಸಿಬಿ ಪೊಲೀಸರು, ರೌಡಿಗಳು ಹಾಗೂ ಸಹಚರರ 58 ಮನೆಗಳ ಮೇಲೆ ಶುಕ್ರವಾರ ನಸುಕಿನಲ್ಲಿ ದಿಢೀರ್ ದಾಳಿ ನಡೆಸಿದರು.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಹಾಗೂ ಹಲವು ರೌಡಿಗಳ ಮನೆ ಮೇಲೆ ಇತ್ತೀಚೆಗಷ್ಟೇ ದಾಳಿ ನಡೆಸಿದ್ದ ಪೊಲೀಸರು, ಆಯುಧಗಳು, ಗಾಂಜಾ ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದರು. ಕೆಲವರನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದರು. ದಾಳಿ ಮಾಹಿತಿ ತಿಳಿದಿದ್ದ ಕೆಲ ರೌಡಿಗಳು ತಲೆಮರೆಸಿಕೊಂಡಿದ್ದರು. ಅಂಥ ರೌಡಿಗಳ ಮನೆ ಮೇಲೆಯೇ ಶುಕ್ರವಾರ ದಾಳಿ ಮಾಡಲಾಗಿದೆ.

'ರೌಡಿಗಳಾದ ವಿಲ್ಸನ್ ಗಾರ್ಡನ್ ನಾಗ್, ಸೈಕಲ್ ರವಿ, ಸೈಲೆಂಟ್ ಸುನೀಲ್, ಜೆಸಿಬಿ ನಾರಾಯಣ್ ಹಾಗೂ ಹಲವರು, ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದರು. ಅವರಲ್ಲಿ ಕೆಲವರು ನ್ಯಾಯಾಂಗ ಬಂಧನದಲ್ಲಿದ್ದು, ಜೈಲಿನಿಂದಲೇ ಸಂಚು ರೂಪಿಸಿ ಸಹಚರರ ಮೂಲಕ ಅಪರಾಧ ಕೃತ್ಯ ಮಾಡಿಸುತ್ತಿದ್ದರು' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ನಾಲ್ವರು ಪ್ರಮುಖ ರೌಡಿಗಳು ಹಾಗೂ ಅವರ ಸಹಚರರ ಪಟ್ಟಿ ಸಿದ್ಧಪಡಿಸಲಾಗಿತ್ತು. ಅದರನ್ವಯ ಡಿಸಿಪಿ, ಎಸಿಪಿ, ಇನ್‌ಸ್ಪೆಕ್ಟರ್ ನೇತೃತ್ವದ ತಂಡಗಳು 58 ಮನೆಗಳ ಮೇಲೆ ಏಕಕಾಲದಲ್ಲಿ ದಾಳಿ ಮಾಡಿದವು. ಇದೇ ವೇಳೆಯೇ 28 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದೂ ತಿಳಿಸಿದರು.

, **ನಗದು:** 'ಕಲಾಸಿಪಾಳ್ಯ ರೌಡಿ ಪಟ್ಟಿಯಲ್ಲಿ ಹೆಸರಿದ್ದ ನಾಗ್‌ನ ಮನೆಯಲ್ಲಿ ₹ 2 ಲಕ್ಷ ನಗದು ಹಾಗೂ ಡ್ರ್ಯಾಗರ್ ಪತ್ತೆಯಾಗಿವೆ. ಇತರೆ ರೌಡಿಗಳ ಮನೆಯಲ್ಲೂ ಡ್ರ್ಯಾಗರ್‌ಗಳು ಸಿಕ್ಕಿವೆ. ಎಲ್ಲವನ್ನೂ ಜಪ್ತಿ ಮಾಡಲಾಗಿದೆ' ಎಂದು ಅಧಿಕಾರಿ ಹೇಳಿದರು.

'ಸೈಕಲ್ ರವಿ ಮನೆಯಲ್ಲಿ ಆಸ್ತಿ ದಾಖಲೆಗಳು ಸಿಕ್ಕಿವೆ. ಶಿವಾಜಿನಗರ ಠಾಣೆ ರೌಡಿ ಪಟ್ಟಿಯಲ್ಲಿ ಹೆಸರಿರುವ ಶಹನಾಜ್ ಮನೆಯಲ್ಲಿ 254 ಆಧಾರ್ ಕಾರ್ಡ್‌ಗಳು ಹಾಗೂ ಬೇನಾಮಿ ಹೆಸರಿನ ಆಸ್ತಿ ದಾಖಲೆಗಳು ಪತ್ತೆಯಾಗಿವೆ. ಆಧಾರ್ ಕಾರ್ಡ್‌ಗಳು ಅಸಲಿಯೋ ನಕಲಿಯೋ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದೂ ತಿಳಿಸಿದರು.

ಜಪ್ತಿ ಮಾಡಲಾದ ನಗದು

ಅಪರಾಧ ಸುದ್ದಿ

## 'ಆಸ್ತಿ ವ್ಯಾಜ್ಯಗಳಲ್ಲಿ ಮಧ್ಯಪ್ರವೇಶಿಸಿ ಬೆದರಿಕೆ'

'ನಗರದಲ್ಲಿ ರೌಡಿ ಕೃತ್ಯಗಳನ್ನು ಮಟ್ಟಹಾಕಲು ಕಾರ್ಯಾಚರಣೆ ನಡೆಸಲಾಗುತ್ತಿದೆ. ನಮ್ಮ ಕಾರ್ಯಾಚರಣೆ ಮುಂದುವರಿಯಲಿದೆ' ಎಂದು ಸಿಸಿಬಿ ಜಂಟಿ ಕಮಿಷನರ್ ಸಂದೀಪ್ ಪಾಟೀಲ ಹೇಳಿದರು.

'ಮೇಲಿಂದ ಮೇಲೆ ಅಪರಾಧ ಕೃತ್ಯ ಎಸಗುತ್ತಿರುವ ರೌಡಿಗಳು ಸಾರ್ವಜನಿಕರಲ್ಲಿ ಭಯವನ್ನುಂಟು ಮಾಡುತ್ತಿದ್ದಾರೆ. ಆಸ್ತಿ ವ್ಯಾಜ್ಯಗಳಲ್ಲಿ ಮಧ್ಯಪ್ರವೇಶಿಸಿ ಜನರನ್ನು ಬೆದರಿಸುತ್ತಿದ್ದಾರೆ. ಮೀಟರ್ ಬಡ್ಡಿ, ಸುಲಿಗೆ ಹಾಗೂ ಭೂ ಅಕ್ರಮದಲ್ಲಿ ಭಾಗಿಯಾಗುತ್ತಿದ್ದಾರೆ. ಈ ಬಗ್ಗೆ ಮಾಹಿತಿ ಕಲೆಹಾಕಿ ಶುಕ್ರವಾರ ದಾಳಿ ಮಾಡಲಾಗಿದೆ' ಎಂದೂ ತಿಳಿಸಿದರು.

## ರೌಡಿಗಳ ಮೇಲೆ ನಿಗಾ ವಹಿಸಲು ಪ್ರತ್ಯೇಕ ತಂಡ

ಬೆಂಗಳೂರು: ಬ್ಯಾಂಕ್‌ನಲ್ಲಿ ರೌಡಿ ಕೊಲೆ, ವಿಜಯನಗರದಲ್ಲಿ ವಾಹನಗಳ ಮೇಲೆ ಕಲ್ಲು ತೂರಾಟ ಸೇರಿದಂತೆ ನಗರದಲ್ಲಿ ನಡೆದ ಅಪರಾಧ ಕೃತ್ಯಗಳನ್ನು ಗಂಭೀರವಾಗಿ ಪರಿಗಣಿಸಿರುವ ಕಮಿಷನರ್ ಕಮಲ್ ಪಂತ್, ರೌಡಿಗಳ ಚಟುವಟಿಕೆ ಮಟ್ಟಹಾಕಲು ಇನ್‌ಸ್ಪೆಕ್ಟರ್‌ಗಳಿಗೆ ಕೆಲ ಸೂಚನೆಗಳನ್ನು ನೀಡಿದ್ದಾರೆ.

'ಪ್ರತಿಯೊಂದು ಠಾಣೆ ವ್ಯಾಪ್ತಿಯಲ್ಲಿ ರೌಡಿಗಳ ಮೇಲೆ ಹೆಚ್ಚಿನ ನಿಗಾ ವಹಿಸಬೇಕು. ಅದಕ್ಕಾಗಿ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ಇಬ್ಬರು ಪಿಎಸ್‌ಐ ನೇತೃತ್ವದಲ್ಲಿ ಪ್ರತ್ಯೇಕ ತಂಡ ರಚಿಸಬೇಕು. ಸರದಿ ಪ್ರಕಾರ ತಂಡ ಕೆಲಸ ಮಾಡಬೇಕು' ಎಂದು ಕಮಿಷನರ್ ಹೇಳಿರುವುದಾಗಿ ಗೊತ್ತಾಗಿದೆ.

'ರೌಡಿ ಪಟ್ಟಿಯಲ್ಲಿರುವ ವ್ಯಕ್ತಿಗಳ ವಿಳಾಸ, ಅವರ ಚಲನವಲನ, ನಿತ್ಯದ ಕೆಲಸ, ಪ್ರವಾಸ... ಹೀಗೆ ಪ್ರತಿಯೊಂದು ಮಾಹಿತಿಯನ್ನು ಪ್ರತ್ಯೇಕ ತಂಡ ಕಲೆಹಾಕಬೇಕು. ರೌಡಿಗಳು ಮಾಡುವ ಪ್ರತಿಯೊಂದು ಕೆಲಸದ ವಿವರವನ್ನು ಸಂಗ್ರಹಿಸಬೇಕು. ಯಾವುದಾದರೂ ಆಸ್ತಿ ವ್ಯಾಜ್ಯಗಳಲ್ಲಿ ರೌಡಿಗಳು ಮಧ್ಯಪ್ರವೇಶಿಸಿದರೆ, ಅಂಥವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅನುಮಾನಾಸ್ಪದ ಚಟುವಟಿಕೆಗಳ ಕಂಡುಬಂದರೆ ರೌಡಿಗಳ ಮನೆಗಳ ಮೇಲೂ ದಾಳಿ ಮಾಡಬೇಕು' ಎಂದೂ ತಿಳಿಸಿದ್ದಾರೆ ಎನ್ನಲಾಗಿದೆ.

ಸುದ್ದಿ 2 ನಿಮಿಷ

## ಹಳೇ ಚಪ್ಪಲಿ ಮಾರಾಟಕ್ಕಿಟ್ಟು ₹ 1 ಲಕ್ಷ ಕಳೆದುಕೊಂಡ

ಬೆಂಗಳೂರು: ತಮ್ಮ ಹಳೇ ಚಪ್ಪಲಿ ಹಾಗೂ ಶೂಗಳನ್ನು 'ಓಎಲ್‌ಎಕ್ಸ್' ಜಾಲತಾಣದಲ್ಲಿ ಮಾರಾಟಕ್ಕಿಟ್ಟಿದ್ದ ನಗರದ ಯುವಕರೊಬ್ಬರು ₹ 1.05 ಲಕ್ಷ ಕಳೆದುಕೊಂಡಿದ್ದಾರೆ.

'ಬಾಗಲೂರಿನಲ್ಲಿ ವಾಸವಿರುವ 27 ವರ್ಷದ ಯುವಕ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಮಾನಯಾನ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಯುವಕ, 'ಹಳೇ ಚಪ್ಪಲಿ ಹಾಗೂ ಶೂ ಮಾರಾಟಕ್ಕಿದೆ' ಎಂದು ಓಎಲ್‌ಎಕ್ಸ್ ಜಾಲತಾಣದಲ್ಲಿ ಫೋಟೊ ಸಮೇತ ಜಾಹೀರಾತು ನೀಡಿದ್ದರು. ಅದನ್ನು ನೋಡಿ ಕರೆ ಮಾಡಿದ್ದ ಆರೋಪಿ, ಚಪ್ಪಲಿ ಹಾಗೂ ಶೂ ಖರೀದಿ ಮಾಡುವುದಾಗಿ ಹೇಳಿದ್ದ.'

'ಮುಂಗಡವಾಗಿ ಹಣ ಹಾಕುವುದಾಗಿ ತಿಳಿಸಿದ್ದ ಆರೋಪಿ, ಕೆಲ ಮಾಹಿತಿ ಪಡೆದಿದ್ದ. 'ಗೂಗಲ್ ಪೇ ಆ್ಯಪ್‌ಗೆ ಹಣ ಕಳುಹಿಸಿದ್ದೇನೆ. ಪರಿಶೀಲಿಸಿ' ಎಂದಿದ್ದ. ಅದನ್ನು ನಂಬಿದ್ದ ಯುವಕ, ಆ್ಯಪ್ ತೆರೆದು ನೋಡುವಷ್ಟರಲ್ಲೇ ಖಾತೆಯಿಂದ ₹ 1.05 ಲಕ್ಷ ಕಡಿತವಾಗಿದೆ. ನಂತರ, ಆರೋಪಿ ಸಹ ಮೊಬೈಲ್ ಸ್ವಿಚ್ ಆಫ್ ಮಾಡಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

## ತೈಲ ಬೆಲೆ ಏರಿಕೆ ಖಂಡಿಸಿ ಸಿಪಿಐ ಪ್ರತಿಭಟನೆ

ಬೆಂಗಳೂರು: ತೈಲ ಬೆಲೆ ಏರಿಕೆ ಖಂಡಿಸಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ) ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು. ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಎದುರು ಸೇರಿದ್ದ ಪ್ರತಿಭಟನಕಾರರು, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ವಿರುದ್ಧ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

'ದಿನದಿಂದ ದಿನಕ್ಕೆ ತೈಲ ಬೆಲೆ ಹೆಚ್ಚಾಗುತ್ತಿದ್ದು, ಸಾಮಾನ್ಯರ ಆರ್ಥಿಕ ಪರಿಸ್ಥಿತಿ ಮೇಲೆ ದೊಡ್ಡ ಹೊಡೆತ ಬಿದ್ದಿದೆ. ತೈಲದ ಮೇಲೆ ವಿಧಿಸುವ ಸುಂಕವನ್ನು ಕಡಿತಗೊಳಿಸಿ ಬೆಲೆ ಇಳಿಕೆ ಮಾಡಬೇಕಾದ ಕೇಂದ್ರ ಸರ್ಕಾರ ಮೌನವಾಗಿದೆ. ಇದರ ವಿರುದ್ಧ ಪ್ರತಿಭಟನೆ ನಡೆಸಲಾಗುತ್ತಿದೆ. ತೈಲ ಬೆಲೆ ಇಳಿಕೆ ಮಾಡದಿದ್ದರೆ ಗಂಭೀರ ಸ್ವರೂಪದ ಹೋರಾಟ ಮಾಡಲಾಗುವುದು' ಎಂದೂ ಪ್ರತಿಭಟನಕಾರರು ಎಚ್ಚರಿಸಿದರು.

'ಕೋವಿಡ್ ಲಾಕ್‌ಡೌನ್‌ನಿಂದ ಕೆಲಸ ಕಳೆದುಕೊಂಡು ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂಥವರ ನೆರವಿಗೆ ಸರ್ಕಾರ ಬರಬೇಕು. ಸಾಮಾನ್ಯ ಆರ್ಥಿಕ ಯೋಜನೆ ರೂಪಿಸಿ ಪ್ರತಿ ಕುಟುಂಬಕ್ಕೆ ಮಾಸಿಕ ₹ 10 ಸಾವಿರ ನೀಡಬೇಕು' ಎಂದೂ ಒತ್ತಾಯಿಸಿದರು.

ಕಾನೂನು ಪ್ರವೇಶ ಪರೀಕ್ಷೆ

ನಾಗರಬಾವಿಯ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ ಶುಕ್ರವಾರ ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆ (ಕ್ಲಾಟ್) ಬರೆಯುವ ಸಂಬಂಧ ಕೊಠಡಿಗಳಿಗೆ ತೆರಳಲು ಸರದಿಯಲ್ಲಿ ಕಾಯುತ್ತಿದ್ದ ವಿದ್ಯಾರ್ಥಿಗಳು – ಪ್ರಜಾವಾಣಿ ಚಿತ್ರ

## 31 ಅರ್ಹ ಇನ್‌ಸ್ಪೆಕ್ಟರ್ ಬಡ್ತಿಗೆ ಕ್ರಮ; ವರದಿ ಕೇಳಿದ ಎಡಿಜಿಪಿ ಸಲೀಂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ 31 ಇನ್‌ಸ್ಪೆಕ್ಟರ್‌ಗಳಿಗೆ ಡಿವೈಎಸ್ಪಿ ಆಗಿ ಬಡ್ತಿ ನೀಡಲು ಪೊಲೀಸ್ ಸಿಬ್ಬಂದಿ ಮಂಡಳಿ ಕ್ರಮ ಕೈಗೊಂಡಿದ್ದು, ಅರ್ಹ ಇನ್‌ಸ್ಪೆಕ್ಟರ್‌ಗಳ ಸೇವಾ ವರದಿ ಸಲ್ಲಿಸುವಂತೆ ಪೊಲೀಸ್ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ.

'ಹೈದರಾಬಾದ್ ಕರ್ನಾಟಕೇತರ ವೃಂದದಲ್ಲಿ ಬಡ್ತಿ ನೀಡಲು 31 ಇನ್‌ಸ್ಪೆಕ್ಟರ್‌ಗಳು ಅರ್ಹರಾಗಿದ್ದಾರೆ. ಪಟ್ಟಿ ಸಿದ್ಧಪಡಿಸಲಾಗಿದೆ. ಅವರ ವಾರ್ಷಿಕ ಕಾರ್ಯನಿರ್ವಹಣಾ ವರದಿ ನೀಡಿ. ಅವರ ವಿರುದ್ಧ ಯಾವುದಾದರೂ ಇಲಾಖೆ ವಿಚಾರಣೆ ಅಥವಾ ಅಪರಾಧ ಪ್ರಕರಣಗಳು ದಾಖಲಾಗಿದ್ದರೆ ಹಾಗೂ ನ್ಯಾಯಾಲಯದ ನಡವಳಿಗಳು ಬಾಕಿ ಇದ್ದರೆ ತಿಳಿಸಿ. ಎಲ್ಲ ಮಾಹಿತಿಯುಳ್ಳ ವರದಿಯನ್ನು ಸಿದ್ಧಪಡಿಸಿ ಜುಲೈ 27ರ ಒಳಗಾಗಿ ಪೊಲೀಸ್ ಪ್ರಧಾನ ಕಚೇರಿಗೆ ಕಳುಹಿಸಿ' ಎಂದು ಎಡಿಜಿಪಿ ಎಂ.ಎ. ಸಲೀಂ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ರಾಜ್ಯದ ಎಲ್ಲ ಕಮಿಷನರ್, ಐಜಿಪಿಗಳು ಹಾಗೂ ಜಿಲ್ಲಾ ಎಸ್ಪಿಗಳಿಗೆ ಪತ್ರ ಕಳುಹಿಸಲಾಗಿದೆ. ಅರ್ಹ ಇನ್‌ಸ್ಪೆಕ್ಟರ್‌ಗಳ ಪಟ್ಟಿಯನ್ನೂ ಲಗತ್ತಿಸಲಾಗಿದೆ.

**ಪಟ್ಟಿಯಲ್ಲಿ ಹೆಸರಿರುವ ಇನ್‌ಸ್ಪೆಕ್ಟರ್‌ಗಳು:** ಬಿ.ಎಂ. ಕನಕಲಕ್ಷ್ಮಿ, ಬಿ.ಕೆ. ಮಂಜಯ್ಯ, ರವಿ ನಾಯ್ಕ್, ಕುಮಾರಸ್ವಾಮಿ, ಎಚ್.ಟಿ. ಸುನೀಲ್‌ಕುಮಾರ್, ಎನ್. ಶ್ರೀಹರ್ಷ, ಜಯಪ್ಪ ನಾಮಗೌಡರ, ಬಿ. ಗಿರೀಶ್, ಪಿ.ಎಂ. ಯೋಗೇಂದ್ರಕುಮಾರ್, ಆನಂದ ಕಬ್ಬೂರಿ, ಎನ್. ತನ್ವೀರ್ ಅಹ್ಮದ್, ಕೆ.ಆರ್. ಚಂದ್ರಶೇಖರ್, ಎಸ್.ಆರ್.ಭರತ್, ಎಚ್. ಎಸ್. ರೇಣುಕಾರಾಧ್ಯ, ಮುತ್ತಣ್ಣ ಸವರಗೋಳ, ರವಿಕುಮಾರ್, ಬಿ. ಚೆಲುವರಾಜು, ಬಿ.ಎನ್. ಶ್ರೀನಿವಾಸ್, ಬಿ.ಕೆ. ಶೇಖರ್, ಎಸ್. ನಾಗರಾಜು, ಎಸ್.ಕೆ. ಮಾಲತೀಶಾ, ಪ್ರಭುಗೌಡ ಕಿರೆದಳ್ಳಿ, ಶಂಕರಗೌಡ ಪಾಟೀಲ, ಪಿ. ವೀರೇಂದ್ರಕುಮಾರ್, ಶಕುಂತಲ ಗೌಡರ, ಅಬ್ದುಲ್ ಕರೀಂ ರಾವುತಾರ್, ಶಿವಪ್ರಕಾಶ್ ರಾಜೇಂದ್ರ ನಾಯಕ್, ಚಿದಂಬರ ಮಡಿವಾಳರ, ಟಿ.ಆರ್. ರಾಜಾಶೆಟ್ಟಿ, ಎಂ.ಎನ್. ನಾಗರಾಜು, ಬಸವರಾಜ್ ತೇಲಿ.

ನಂದಿಬೆಟ್ಟದಲ್ಲಿ ಸ್ಥಳ ಪರಿಶೀಲಿಸಿದ ಪ್ರವಾಸೋದ್ಯಮ ಸಚಿವ ಸಿ.ಪಿ.ಯೋಗೇಶ್ವರ್

# 2 ವರ್ಷದೊಳಗೆ ರೋಪ್ ವೇ ನಿರ್ಮಾಣ

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** ರಾಜ್ಯದಲ್ಲಿ ಇದುವರೆಗೆ ಎಲ್ಲೂ ರೋಪ್ ವೇ ಮಾಡಲು ಸಾಧ್ಯವಾಗಿಲ್ಲ. ನಂದಿಬೆಟ್ಟಕ್ಕೆ ರೋಪ್ ವೇ ಮಾಡಬೇಕು ಎನ್ನುವುದು ಹಲವು ವರ್ಷಗಳ ಕನಸು. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ 2 ವರ್ಷದ ಒಳಗೆ ರೋಪ್ ವೇ ಕಾಮಗಾರಿ ಪೂರ್ಣಗೊಳಿಸ ಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ವಿಶ್ವಾಸ ವ್ಯಕ್ತಪಡಿಸಿದರು.

ನಂದಿಬೆಟ್ಟಕ್ಕೆ ರೋಪ್ ವೇ ನಿರ್ಮಾಣ ಸಂಬಂಧ ಶುಕ್ರವಾರ ಸ್ಥಳಪರಿಶೀಲಿಸಿ ಅವರು ಮಾತನಾಡಿದರು.

ನಂದಿಬೆಟ್ಟ ಸೂಕ್ಷ್ಮ ಪರಿಸರ ವಲಯ. ಯಾವುದೇ ರೀತಿ ಧಕ್ಕೆ ಆಗದಂತೆ ಅಭಿವೃದ್ಧಿ ಕೈಗೊಳ್ಳಲಾಗುವುದು. ಇಷ್ಟು ದಿನ ನಂದಿಬೆಟ್ಟವು ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿತ್ತು. ಈಗ ಸಂಪೂರ್ಣ ಒಡೆತನ ಪ್ರವಾಸೋದ್ಯಮ ಇಲಾಖೆಗೆ ಒಳಪಟ್ಟಿದೆ. ಗಿರಿಧಾಮವನ್ನು ಪರಿಸರ ಸ್ನೇಹಿ ತಾಣವಾಗಿ ಅಭಿವೃದ್ಧಿಗೊಳಿಸಲಾಗುವುದು ಎಂದು ಹೇಳಿದರು.

ದೊಡ್ಡಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಒಟ್ಟು 7 ಎಕರೆಯನ್ನು ಸರ್ಕಾರ ಮಂಜೂರು ಮಾಡಿದೆ. ವಾಹನ ನಿಲುಗಡೆಗೆ ಸರ್ಕಾರಿ ಜಾಗದ ಕೊರತೆ ಇದೆ. ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಒಳಪಟ್ಟ 30ರಿಂದ 35 ಎಕರೆ ಸರ್ಕಾರಿ ಜಮೀನು ಇದೆ. ಅದನ್ನು ಇಲಾಖೆಗೆ ಮಂಜೂರು ಮಾಡುವಂತೆ ಮನವಿ ಮಾಡಲಾಗಿದೆ ಎಂದರು.

ಐಡೆಸ್ಕ್ ಸಂಸ್ಥೆಯಿಂದ ಸರ್ವೆ: ರೋಪ್ ವೇ ಅಳವಡಿಸುವ ಸಂಬಂಧ ದೇಶದ ಪ್ರತಿಷ್ಠಿತ ರೋಪ್ ವೇ ನಿರ್ಮಾಣ ಸಂಸ್ಥೆ ಐಡೆಸ್ಕ್ ಈಗಾಗಲೇ ನಂದಿಬೆಟ್ಟದಲ್ಲಿ ಸರ್ವೆ ನಡೆಸುತ್ತಿದೆ. ರೋಪ್ ವೇ ಮೂಲಕ ಎಷ್ಟು ಜನರನ್ನು ಕೊಂಡೊಯ್ಯಬಹುದು, ಎಲ್ಲಿಂದ ಎಲ್ಲಿಗೆ ಹೀಗೆ ವಿವಿಧ ರೀತಿ ಸಮೀಕ್ಷೆಗಳನ್ನು ಸಂಸ್ಥೆ ನಡೆಸುತ್ತಿದೆ. ಶೀಘ್ರದಲ್ಲಿಯೇ ಟೆಂಡರ್ ಸಹ ನಡೆಯಲಿದೆ. ಈ ಸಂಸ್ಥೆಯ ತಾಂತ್ರಿಕ ಸಲಹೆಗಳನ್ನು ಆಧರಿಸಿ ರೋಪ್ ವೇ ನಿರ್ಮಾಣವಾಗಲಿದೆ ಎಂದು ಹೇಳಿದರು.

ಪ್ರವಾಸೋದ್ಯಮ ಇಲಾಖೆ ನಿರ್ದೇಶಕಿ ಸಿಂಧೂ ರೂಪೇಶ್, ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾ.ಪು ಸಿದ್ಧಲಿಂಗಸ್ವಾಮಿ, ವ್ಯವಸ್ಥಾಪಕ ನಿರ್ದೇಶಕರಾದ ವಿಜಯಶರ್ಮಾ, ಕುಮಾರ್ ಪುಷ್ಕರ್, ಉಪವಿಭಾಗಾಧಿಕಾರಿ ಎ.ಎನ್.ರಘುನಂದನ್, ತಹಶೀಲ್ದಾರ್ ಗಣಪತಿ ಶಾಸ್ತ್ರಿ, ಪ್ರವಾಸೋದ್ಯಮ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕ ಜಿತೇಂದ್ರನಾಥ್, ಐಡೆಸ್ಕ್ ರೋಪ್ ವೇ ಸಂಸ್ಥೆಯ ಮುಖ್ಯಸ್ಥ ಲಾಲ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ನಂದಿಬೆಟ್ಟದಲ್ಲಿ ರೋಪ್ ವೇ ನಿರ್ಮಾಣ ಸಂಬಂಧ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಸ್ಥಳ ಪರಿಶೀಲಿಸಿದರು

### ರೈತರಿಂದ ಸಚಿವರಿಗೆ ಮನವಿ

ರೋಪ್ ವೇ ಸಂಬಂಧ ಪ್ರವಾಸಿಗರ ವಾಹನ ನಿಲುಗಡೆಗೆ ಗುರುತಿಸಿರುವ ಸರ್ಕಾರಿ ಜಮೀನನ್ನು ರೈತರು 20 ವರ್ಷಗಳಿಂದ ಉಳುಮೆ ಮಾಡುತ್ತಿದ್ದಾರೆ. ಆದ್ದರಿಂದ ಈಗ ವಾಹನ ನಿಲುಗಡೆಗೆ ಗುರುತಿಸಿರುವ ಜಮೀನನ್ನು ರದ್ದುಗೊಳಿಸಬೇಕು. ಉಳುಮೆ ಮಾಡುತ್ತಿರುವ ಮುನಿನಾರಾಯಣಪ್ಪ ಅವರ ಹೆಸರಿಗೆ ಮಂಜೂರು ಮಾಡಬೇಕು ಎಂದು ರೈತ ಸಂಘದ ಮುಖಂಡರು ಸಚಿವರಿಗೆ ಮನವಿ ಸಲ್ಲಿಸಿದರು.

ಈ ಜಮೀನು ಬಗರ್‌ಹುಕುಂ ಅಕ್ರಮ ಸಕ್ರಮ ಸಮಿತಿ ಎದುರು ಇದೆ. ಮುನಿನಾರಾಯಣಪ್ಪ ಇದೇ ಜಮೀನನ್ನು ನಂಬಿಕೊಂಡಿದ್ದಾರೆ. ನಾವು ರೋಪ್ ವೇ ನಿರ್ಮಾಣ ವಿರೋಧಿಸುತ್ತಿಲ್ಲ. ಆದರೆ ರೈತರಿಗೆ ಅನ್ಯಾಯ ಆಗಬಾರದು ಎಂದು ಕೋರಿದರು. 'ಕಚೇರಿಗೆ ಬನ್ನಿ, ಈ ಬಗ್ಗೆ ಮಾತನಾಡೋಣ' ಎಂದು ಯೋಗೇಶ್ವರ್ ಹೇಳಿದರು.

### ಆ್ಯಪ್ ಅಭಿವೃದ್ಧಿಗೆ ಚಿಂತನೆ

ಪ್ರವಾಸಿಗರ ದಟ್ಟಣೆಯನ್ನೂ ನಿಯಂತ್ರಿಸಬೇಕಾಗಿದೆ. ಬೆಳಿಗ್ಗೆ ಮತ್ತು ಸಂಜೆ ಬೆಟ್ಟ ಪ್ರವೇಶಿಸಲು ಇಂತಿಷ್ಟು ಜನರಿಗೆ ಮಾತ್ರ ಅವಕಾಶ ಮಾಡಿಕೊಡಬೇಕು. ಆ್ಯಪ್ ಅಭಿವೃದ್ಧಿಗೊಳಿಸಿದರೆ ಯಾವಾಗ ನಂದಿ ಪ್ರವಾಸಕ್ಕೆ ಹೋಗಬಹುದು ಎನ್ನುವುದು ಪ್ರವಾಸಿಗರಿಗೆ ತಿಳಿಯಲಿದೆ. ಅವರೇ ಆ್ಯಪ್ ಮೂಲಕ ದಿನ ನಿಗದಿಮಾಡಿಕೊಂಡು ಬರಬಹುದು. ಈ ದೃಷ್ಟಿಯಿಂದ ಆ್ಯಪ್ ಅಭಿವೃದ್ಧಿಗೂ ಚಿಂತನೆ ಇದೆ ಎಂದು ಸಿ.ಪಿ.ಯೋಗೇಶ್ವರ್ ತಿಳಿಸಿದರು.

## ಮನೆ ಖಾಲಿ ಮಾಡಲು ಸೂಚನೆ: ಪ್ರತಿಭಟನೆ

**ಕೆ.ಆರ್.ಪುರ:** ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಮಾರತಹಳ್ಳಿಯಲ್ಲಿ ನಿರ್ಮಿಸಿರುವ ಮನೆಗಳಲ್ಲಿ ವಾಸ ಮಾಡುತ್ತಿರುವ ದಲಿತ ಕುಟುಂಬಗಳನ್ನು ಖಾಲಿ ಮಾಡಲು ಆಯುಕ್ತರು ಸೂಚನೆ ನೀಡಿರುವುದನ್ನು ವಿರೋಧಿಸಿ ಕರ್ನಾಟಕ ಜನಾಂದೋಲನ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಮರಿಯಪ್ಪ ಮಾತನಾಡಿ, 'ಕೃಷ್ಣಪ್ಪ ಗಾರ್ಡನ್‌ನಲ್ಲಿ ಕೊಳಚೆ ನಿರ್ಮೂಲನಾ ಮಂಡಳಿ ನಿರ್ಮಿಸಿದ್ದ ಮನೆಗಳಲ್ಲಿ ವಾಸವಿದ್ದ ನೂರಕ್ಕೂ ಹೆಚ್ಚು ಬಡ ದಲಿತ ಕುಟುಂಬಗಳನ್ನು ಜನವರಿ ತಿಂಗಳಲ್ಲಿ ತೆರವುಗೊಳಿಸಲಾಗಿತ್ತು. ಹೀಗಾಗಿ, ಅಲ್ಲಿ ವಾಸ ಮಾಡುತ್ತಿದ್ದ ಕುಟುಂಬಗಳು ಮಾರತ್ತಹಳ್ಳಿಯ ಮನೆಗಳಲ್ಲಿ ವಾಸ ಮಾಡುತ್ತಿದ್ದರು. ತೆರವುಗೊಳಿಸಿರುವ ಬಗ್ಗೆ ಬೆಂಗಳೂರು ಪೂರ್ವ ತಾಲ್ಲೂಕು ತಹಶಿಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗಿತ್ತು. ಇದೀಗ ಮಂಡಳಿಯ ಆಯುಕ್ತರು ಹಾಗೂ ಕಾರ್ಯಪಾಲಕ ಎಂಜಿನಿಯರ್ ಸುಧೀರ್ ಮನೆ ಖಾಲಿ ಮಾಡಿಸಲು ಮುಂದಾಗಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ದಲಿತ ರಕ್ಷಣಾ ವೇದಿಕೆ ಅಧ್ಯಕ್ಷ ಸುಬ್ರಮಣ್ಯ, ಕೆಜೆಎಸ್ ವಿಭಾಗೀಯ ಅಧ್ಯಕ್ಷ ಎಂ.ವೆಂಕಟೇಶ್, ಕರ್ನಾಟಕ ದಲಿತ ರಕ್ಷಣಾ ವೇದಿಕೆ ಪದಾಧಿಕಾರಿಗಳಾದ ಎಂ.ಶ್ರೀನಿವಾಸ್, ನಾಗರಭಾವಿ ನರಸಿಂಹಪ್ಪ, ವೆಂಕಟೇಶಪ್ಪ, ಉಮಾದೇವಿ, ಪಾರ್ವತಮ್ಮ, ಅಂಬಮ್ಮ, ದೀಪಾ, ಸೌಮ್ಯ ಹಾಜರಿದ್ದರು.

ಕರ್ನಾಟಕ ಜನಾಂದೋಲನ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

## ಆಟೊ ಚಾಲಕರಿಗೆ ಬಜಾಜ್‌ನಿಂದ ದಿನಸಿ ಕಿಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ 500 ಆಟೊ ಚಾಲಕರಿಗೆ ಬಜಾಜ್ ಆಟೊ ಲಿಮಿಟೆಡ್ ವತಿಯಿಂದ ದಿನಸಿ ಕಿಟ್‌ಗಳನ್ನು ಉಚಿತವಾಗಿ ವಿತರಿಸಲಾಯಿತು.

ಹೊಸೂರು ಮುಖ್ಯರಸ್ತೆಯ ಜಿ.ಬಿ. ಪಾಳ್ಯದಲ್ಲಿರುವ ಅಂಬಾ ಬಜಾಜ್ ಬಳಿ ದಿನಸಿ ಕಿಟ್ ವಿತರಿಸಿ ಮಾತನಾಡಿದ ಸಂಸ್ಥೆಯ ವಿಭಾಗೀಯ ವ್ಯವಸ್ಥಾಪಕ ಎ.ರಾಘವೇಂದ್ರ, 'ಲಾಕ್‌ಡೌನ್‌ನಿಂದಾಗಿ ಆಟೊ ಚಾಲಕರ ದುಡಿಮೆಗೆ ಹೊಡೆತ ಬಿದ್ದಿತ್ತು. ಆ ಸಂದರ್ಭದಲ್ಲಿ ಜೀವನ ನಿರ್ವಹಣೆಗೆ ಪರದಾಡಿದ್ದರು. ಇದನ್ನು ಮನಗಂಡ ಬಜಾಜ್, ಆಟೊ ಚಾಲಕರ ನೆರವಿಗೆ ನಿಂತಿದೆ' ಎಂದರು.

'ಸಂಸ್ಥೆಯು ಕಳೆದ ವರ್ಷ 10 ಸಾವಿರಕ್ಕೂ ಹೆಚ್ಚು ಬಡವರು ಹಾಗೂ ಆಟೊ ಚಾಲಕರ ಕುಟುಂಬಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿತ್ತು. ಈ ವರ್ಷ 12 ಸಾವಿರ ಮಂದಿಗೆ ಕಿಟ್ ವಿತರಿಸಲು ಯೋಜನೆ ರೂಪಿಸಿದೆ. ಈಗಾಗಲೇ ಎಂಟು ಸಾವಿರ ಕಿಟ್‌ಗಳ ವಿತರಣೆ ನಡೆದಿದೆ' ಎಂದು ಹೇಳಿದರು.

ಅಂಬಾ ಬಜಾಜ್‌ನ ಪ್ರಧಾನ ವ್ಯವಸ್ಥಾಪಕ ಜಾನ್, ರಾಕೇಶ್ ಇದ್ದರು.

## ಸರ ಕಿತ್ತೊಯ್ದಿದ್ದ ಅಣ್ಣ – ತಮ್ಮ ಸೆರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯಲ್ಲಿ ವೃದ್ಧೆಯೊಬ್ಬರ ಚಿನ್ನದ ಸರ ಕಿತ್ತೊಯ್ದಿದ್ದ ಆರೋಪದಡಿ ಅಣ್ಣ-ತಮ್ಮನನ್ನು ಪೊಲೀಸರು ಬಂಧಿಸಿದ್ದಾರೆ.

'ಕಾಮಾಕ್ಷಿಪಾಳ್ಯ ನಿವಾಸಿಗಳಾದ ಅಣ್ಣ- ತಮ್ಮ, ಪದವಿ ವ್ಯಾಸಂಗ ಮಾಡುತ್ತಿದ್ದರು. ಜುಲೈ 6ರಂದು ಬೆಳಿಗ್ಗೆ ವಿದ್ಯಾರಣ್ಯಪುರಕ್ಕೆ ಬಂದು ಕೃತ್ಯ ಎಸಗಿದ್ದರು. ವೃದ್ಧೆಯನ್ನು ತಳ್ಳಿ ಚಿನ್ನದ ಸರದ ಸಮೇತ ಪರಾರಿಯಾಗಿದ್ದರು. ವೃದ್ಧೆ ಗಾಯಗೊಂಡಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು, ಅರೆಕಾಲಿಕ ಕೆಲಸ ಮಾಡುತ್ತಿದ್ದರು. ಲಾಕ್‌ಡೌನ್‌ನಿಂದ ಕೆಲಸ ಹೋಗಿತ್ತು. ಇತ್ತೀಚೆಗೆ ಅವರ ತಂದೆಗೆ ಆರೋಗ್ಯ ಸಮಸ್ಯೆ ಉಂಟಾಗಿತ್ತು. ಚಿಕಿತ್ಸೆಗೆ ಹಣ ಹೊಂದಿಸುವುದಕ್ಕಾಗಿ ಅಣ್ಣ-ತಮ್ಮ ಈ ಕೃತ್ಯ ಎಸಗಿದ್ದರು. ಈ ಬಗ್ಗೆ ಅವರೇ ಹೇಳಿಕೆ ನೀಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

## ಆಜಾದ್ ಜೀವನ ಚರಿತ್ರೆಯ 'ಅಜೇಯ' ಕಾದಂಬರಿ ಇಂಗ್ಲಿಷ್‌ಗೆ

**ನವದೆಹಲಿ (ಪಿಟಿಐ):** ಹೆಸರಾಂತ ಲೇಖಕ ಬಾಬು ಕೃಷ್ಣಮೂರ್ತಿ ರಚಿತ ಕ್ರಾಂತಿಕಾರಿ ಚಂದ್ರಶೇಖರ್ ಆಜಾದ್ ಅವರ ಜೀವನ ಚರಿತ್ರೆ ಕುರಿತ 'ಅಜೇಯ' ಕಾದಂಬರಿಯು ಇಂಗ್ಲಿಷ್‌ಗೆ ಅನುವಾದಗೊಂಡಿದ್ದು, ಸ್ವಾತಂತ್ರ್ಯ ಸೇನಾನಿ ಆಜಾದ್ ಅವರ 115ನೇ ಜನ್ಮ ದಿನದ ಪ್ರಯುಕ್ತ ಆಗಸ್ಟ್ ಮೊದಲ ವಾರದಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಪುಸ್ತಕ ಪ್ರಕಾಶನ ಸಂಸ್ಥೆ ಗರುಡ ಪ್ರಕಾಶನ ಶುಕ್ರವಾರ ತಿಳಿಸಿದೆ.





ಆಜಾದ್

ಮಂಜುಳಾ ಟೇಕಲ್ ಅವರು ಈ ಕಾದಂಬರಿಯನ್ನು 'ಆಜಾದ್: ದಿ ಇನ್‌ವಿನ್ಸಿಬಲ್' ಶೀರ್ಷಿಕೆಯಲ್ಲಿ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ಆಜಾದ್‌ರ ಕೈ ಬರಹದ ಪತ್ರಗಳು ಹಾಗೂ ಅವರ ಕ್ರಾಂತಿಕಾರಿ ಚಟುವಟಿಕೆಗಳಿಗೆ ಸಂಬಂಧಿಸಿದ ಅಪೂರ್ವ ದಾಖಲೆಗಳು, ಅವರ ಸಮಕಾಲೀನರ ಜೀವನಚರಿತ್ರೆಯ ಉಲ್ಲೇಖಗಳು ಹಾಗೂ ಸ್ವಾತಂತ್ರ್ಯ ಪೂರ್ವ ಭಾರತದ ಸುದ್ದಿ ಮೂಲಗಳ ದಾಖಲೆಗಳೊಂದಿಗೆ ಆಜಾದ್‌ರ ಸಮಗ್ರ ವ್ಯಕ್ತಿ ಚಿತ್ರಣವನ್ನು ಈ ಕಾದಂಬರಿ ಚಿತ್ರಿಸಿದೆ.

1974ರಲ್ಲಿ ಕನ್ನಡದಲ್ಲಿ ಪ್ರಕಟವಾದ ಈ ಕಾದಂಬರಿಯು ಹಲವು ಬಾರಿ ಮರು ಮುದ್ರಣಗಳನ್ನು ಕಂಡಿದೆ. ಲೇಖಕ ಬಾಬು ಕೃಷ್ಣಮೂರ್ತಿ ಅವರಿಗೆ ಈ ಕಾದಂಬರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ತಂದುಕೊಟ್ಟಿದೆ.

# ಮನಿಶ್ ಮಹೇಶ್ವರಿ ವಿರುದ್ಧದ ನೋಟಿಸ್ ರದ್ದು

**ಬೆಂಗಳೂರು:** ವೃದ್ಧನ ಮೇಲಿನ ಹಲ್ಲೆಗೆ ಸಂಬಂಧಿಸಿದ ವಿಡಿಯೊ ವೈರಲ್ ಆದ ಪ್ರಕರಣದಲ್ಲಿ ಟ್ವಿಟರ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಮನಿಶ್ ಮಹೇಶ್ವರಿಗೆ ಉತ್ತರ ಪ್ರದೇಶ ಪೊಲೀಸರು ನೀಡಿದ್ದ ನೋಟಿಸ್ ರದ್ದುಪಡಿಸಿ ಹೈಕೋರ್ಟ್ ಆದೇಶಿಸಿದೆ.

'ಅರ್ಜಿದಾರರ ಮನಿಶ್ ಅವರನ್ನು ಎಫ್‌ಐಆರ್‌ನಲ್ಲಿ ಆರೋಪಿಯಾಗಿ ಮಾಡಿಲ್ಲ. ವಿಡಿಯೊ ಸಂವಾದದ ಮೂಲಕ ಅರ್ಜಿದಾರರ ವಿಚಾರಣೆ ನಡೆಸಲು ಸಾಧ್ಯವಿದ್ದರೂ ಸಿಆರ್‌ಪಿಸಿ ಸೆಕ್ಷನ್ 160 ಅಡಿಯಲ್ಲಿ ನೋಟಿಸ್ ನೀಡಲಾಗಿದೆ' ಎಂದು ನ್ಯಾಯಮೂರ್ತಿ ಜಿ. ನಾಗೇಂದ್ರ ಅವರಿದ್ದ ಪೀಠ ಹೇಳಿದೆ.

'ಮುಸ್ಲಿಂ ವ್ಯಕ್ತಿಯೊಬ್ಬರಿಗೆ 'ಜೈ ಶ್ರೀರಾಮ್' ಮತ್ತು 'ವಂದೇ ಮಾತರಂ' ಹೇಳುವಂತೆ ಒತ್ತಾಯಿಸುತ್ತಿರುವುದು ವಿಡಿಯೊದಲ್ಲಿದೆ. ಇದು ವೈಯಕ್ತಿಕ ದಾಳಿ ಎಂದು ತಿಳಿಸಿದ್ದರೂ ತಪ್ಪು ಮಾಹಿತಿ ಇರುವ ವಿಡಿಯೊ ಹರಡುವುದನ್ನು ತಡೆಯಲು ಟ್ವಿಟರ್ ಕ್ರಮ ಕೈಗೊಂಡಿಲ್ಲ' ಎಂಬುದು ಪೊಲೀಸರ ಆರೋಪ.

'ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ಹಾಜರಾಗುವುದಾಗಿ ತಿಳಿಸಿದ್ದರೂ ಖುದ್ದು ಹಾಜರಾಗಲು ಪೊಲೀಸರು ನೋಟಿಸ್ ನೀಡಿದ್ದಾರೆ. ವಿಚಾರಣೆಗೆ ಕರೆದು ಬಂಧಿಸುವ ಸಾಧ್ಯತೆ ಇದೆ' ಎಂದು ಮನಿಶ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಟ್ವಿಟರ್ ಇಂಡಿಯಾ ಮತ್ತು ಟ್ವಿಟರ್ ಇಂಕ್ ಎರಡೂ ವಿಭಿನ್ನ ಘಟಕಗಳು. ಟ್ವಿಟರ್‌ನಲ್ಲಿ ಹರಡುವ ಸಂದೇಶಗಳು ಇವರ ನಿಯಂತ್ರಣಕ್ಕೆ ಸಿಗುವುದಿಲ್ಲ. ಅರ್ಜಿದಾರರ ವಿರುದ್ಧದ ಆರೋಪ ಸಾಬೀತುಪಡಿಸುವ ಯಾವುದೇ ದಾಖಲೆಯನ್ನು ಉತ್ತರ ಪ್ರದೇಶ ಪೊಲೀಸರು ಸಲ್ಲಿಸಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು.

ಇಪ್ಪತ್ತಕ್ಕೂ ಹೆಚ್ಚು ಸಂಘಟನೆಗಳು, ನಾಗರಿಕರು ಹಾಗೂ ಪರಿಸರ ಪ್ರೇಮಿಗಳು ಭಾಗಿ

# ನೆಲಮಂಗಲ: ಕೆರೆಗಳ ಉಳಿಸಲು ಆಂದೋಲನ

ಪ್ರಜಾವಾಣಿ ವಾರ್ತೆ

**ನೆಲಮಂಗಲ:** ನೆಲಮಂಗಲ ಮತ್ತು ಬಿನ್ನಮಂಗಲ ಕೆರೆಗಳು ಸಂಪೂರ್ಣ ಕಲುಷಿತವಾಗಿದ್ದು, ಅಂತರ್ಜಲ ಹಾಳಾಗಿದೆ. ಅದೇ ನೀರನ್ನು ಜನತೆ ಕುಡಿಯುತ್ತಿದ್ದು, ವಿಷ ನಮ್ಮೆಲ್ಲರ ದೇಹ ಸೇರುತ್ತಿದೆ ಎಂದು ಕೆರೆಗಳನ್ನು ಉಳಿಸಿ ಅಭಿಯಾನದ ಸಂಘಟಕ ಮಣ್ಣೆ ಮೋಹನ್ ಕಳವಳ ವ್ಯಕ್ತಪಡಿಸಿದರು.

ಇಪ್ಪತ್ತಕ್ಕೂ ಹೆಚ್ಚು ಸಂಘಟನೆಗಳು, ನಾಗರಿಕರು ಹಾಗೂ ಪರಿಸರ ಪ್ರೇಮಿಗಳು ಹಮ್ಮಿಕೊಂಡಿರುವ 'ನೆಲಮಂಗಲ ಕೆರೆಗಳನ್ನು ಉಳಿಸಿ' ಅಭಿಯಾನ ಉದ್ದೇಶಿಸಿ ಮಾತನಾಡಿದ ಅವರು, 'ಸಂಬಂಧಪಟ್ಟ ಇಲಾಖೆಯವರು ಕೆರೆಯನ್ನು ಶುದ್ಧೀಕರಿಸಬೇಕು, ಹೂಳು ತೆಗೆಯಬೇಕು. ಒತ್ತುವರಿ ತೆರವುಗೊಳಿಸಬೇಕು. ಶುದ್ಧಿಯಾಗುವವರೆಗು ಮೀನುಗಾರಿಕೆ ಟೆಂಡರ್ ರದ್ದುಗೊಳಿಸಬೇಕು' ಎಂದು ಆಗ್ರಹಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎನ್.ಜಿ.ಗೋಪಾಲ್, 'ಸಂಪೂರ್ಣ ಮಲಿನಗೊಂಡಿರುವ ಕೆರೆಯಲ್ಲಿ ಮೀನುಗಾರಿಕೆಗೆ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮೀನುಗಾರಿಕೆ ಇಲಾಖೆ ಅನುಮತಿ ನೀಡಿವೆ. ಇಲ್ಲಿ ಬೆಳೆದ ಮೀನುಗಳನ್ನು ತಿಂದವರ ಗತಿ ಏನು' ಎಂದು ಪ್ರಶ್ನಿಸಿದರು.

ವಕೀಲ ಕನಕರಾಜು, 'ಸಂಪೂರ್ಣ ಜೊಂಡು ಬೆಳೆದು ಕೆರೆ ಇರುವುದೇ ಕಾಣುತ್ತಿಲ್ಲ. ಕೆರೆಯ ನೀರು ಕಪ್ಪುಬಣ್ಣಕ್ಕೆ ತಿರುಗಿದ್ದು, ಕೆರೆ ಪ್ರದೇಶ ಕೆಟ್ಟ ವಾಸನೆಯಿಂದ ಕೂಡಿದೆ' ಎಂದರು.

ಎಂ.ಟಿ.ಆರ್.ಮಂಜುನಾಥ್ ಮಾತನಾಡಿ, 'ಹಿಂದೆ ಕೆರೆಯಲ್ಲಿ ರಾಮದೇವರ ತೆಪ್ಪೋತ್ಸವ ಮಾಡುತ್ತಿದ್ದೆವು. ಇದೇ ನೀರನ್ನು ಕುಡಿಯುತ್ತಿದ್ದೆವು. ಇಂದು ಚರಂಡಿ ನೀರಿಗಿಂತಲೂ ಹೊಲಸಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಕೃಷಿ ಉದ್ಯೋಗ್‌ನ ನಾಗರಾಜ್, 'ಕೆರೆಯನ್ನು ಶುದ್ಧಗೊಳಿಸಿ, ಮೀನುಗಾರಿಕೆ, ದೋಣಿ ವಿಹಾರ ಇನ್ನಿತರ ಚಟುವಟಿಕೆಗಳ ಮೂಲಕ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಬಹುದು, ಆದಾಯವೂ ಬರುತ್ತದೆ' ಎಂದರು.

ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ ಮಾತನಾಡಿ, 'ಯೋಜನಾ ಪ್ರಾಧಿಕಾರ ಹಾಗೂ ದಾನಿಗಳ ಮೂಲಕ ₹6ಕೋಟಿ ವೆಚ್ಚದಲ್ಲಿ ಕೆರೆ ಅಭಿವೃದ್ಧಿಗೆ ಯೋಜಿಸಲಾಗಿದೆ. ಒಳಚರಂಡಿ ಯೋಜನೆ ಕಾಮಗಾರಿಯೂ ಶೀಘ್ರದಲ್ಲೇ ಪ್ರಾರಂಭವಾಗಲಿದೆ' ಎಂದರು.

ಬಿನ್ನಮಂಗಲ ಕೆರೆಯಿಂದ ನೆಲಮಂಗಲ ಕೆರೆ ವರೆಗೆ ಬೈಕ್ ಜಾಥಾ, ಪಾದಯಾತ್ರೆ ನಡೆಸಿ, ಕೆರೆ ಬಳಿ ಪ್ರತಿಭಟನೆ ಮಾಡಲಾಯಿತು. ವನಕಲ್ಲು, ಬಸವಣ್ಣದೇವರ ಮಠ, ಶಿವಾನಂದ ಆಶ್ರಮದ ಶ್ರೀಗಳು, ಕಿಸಾನ್ ಸಂಘದ ಪ್ರದೀಪ್, ಕನ್ನಡ ಸಾಂಸ್ಕೃತಿಕ ರಂಗದ ಡಿ.ಸಿದ್ದರಾಜು, ದಲಿತ ಸಂಘಟನೆಯ ಬಿ.ಆರ್.ಭಾಸ್ಕರ್ ಪ್ರಸಾದ್, ಗಂಗಬೈಲಪ್ಪ, ಜಯಕರ್ನಾಟಕದ ರಾಮಮೂರ್ತಿ ಇದ್ದರು.

ಕೆರೆ ಉಳಿಸಲು ಜಾಥಾ ನಡೆಯಿತು

ನಿಧನ ವಾರ್ತೆ

## ಎಸ್.ಆರ್. ಕೃಷ್ಣಸ್ವಾಮಿ ಭಟ್



ಬೆಂಗಳೂರು: ಕೋಟೆ ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಅರ್ಚಕ ಎಸ್.ಆರ್. ಕೃಷ್ಣಸ್ವಾಮಿ ಭಟ್ ಜುಲೈ 21ರಂದು ನಿಧನರಾದರು.

ಅವರಿಗೆ ಸಹೋದರರು, ಸಹೋದರಿಯರು ಇದ್ದಾರೆ.

ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಶನಿವಾರ (ಜುಲೈ 24) ಬೆಳಿಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಸಲಾಗುವುದೆಂದು ಕುಟುಂಬಸ್ಥರು ಹೇಳಿದ್ದಾರೆ.

ಚಿತ್ರಾವಳಿ

ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ಮುಂದೂಡಬೇಕು ಹಾಗೂ ಯುಜಿಸಿ ಮಾರ್ಗಸೂಚಿಯನ್ನು ಪಾಲಿಸಬೇಕು ಎಂದು ಒತ್ತಾಯಿಸಿ ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಎದುರು ವಿದ್ಯಾರ್ಥಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು.

ಎರಡು ದಿನಗಳು ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಬನ್ನೇರುಘಟ್ಟ ರಸ್ತೆಯ ರೈನ್ ಬೋ ಮಕ್ಕಳ ಆಸ್ಪತ್ರೆಯ ಸಿಬ್ಬಂದಿ ಮುಖಗವಸು ವಿತರಿಸಿ ದೇಹದ ಉಷ್ಣಾಂಶವನ್ನು ತಪಾಸಣೆ ನಡೆಸಿದರು.

## ಸಂಕ್ಷಿಪ್ತ ಸುದ್ದಿ

### ಅರ್ಜಿ ಆಹ್ವಾನ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನದ ವತಿಯಿಂದ ನೀಡಲಾಗುವ 2020ನೇ ಸಾಲಿನ 'ಶಾ.ಬಾಲೂರಾವ್ ಯುವ ಬರಹಗಾರ ಪ್ರಶಸ್ತಿ' ಹಾಗೂ 'ಶಾ. ಬಾಲೂರಾವ್ ಅನುವಾದ ಪ್ರಶಸ್ತಿ'ಗೆ ಲೇಖಕರಿಂದ ಪುಸ್ತಕಗಳನ್ನು ಆಹ್ವಾನಿಸಲಾಗಿದೆ.

ಪ್ರಶಸ್ತಿಗಳು ತಲಾ ₹25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿವೆ.

ಯುವ ಬರಹಗಾರ ಪ್ರಶಸ್ತಿಗೆ 35 ವರ್ಷದೊಳಗಿನವರು ರಚಿಸಿರುವ 2020ರಲ್ಲಿ ಮೊದಲ ಮುದ್ರಣದಲ್ಲಿ ಪ್ರಕಟವಾದ ಸಾಹಿತ್ಯದ ಯಾವುದೇ ಪ್ರಕಾರದ ಪುಸ್ತಕಗಳು ಹಾಗೂ ಅನುವಾದ ಪ್ರಶಸ್ತಿಗೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡಿರುವ ಪುಸ್ತಕಗಳನ್ನು ಸಲ್ಲಿಸಬಹುದು.

ಪುಸ್ತಕದ ಮೂರು ಪ್ರತಿಗಳು ಹಾಗೂ ಸ್ವವಿವರಗಳನ್ನು ಆಗಸ್ಟ್ 16ರೊಳಗೆ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ:ಗೌರವ ಕಾರ್ಯದರ್ಶಿ, ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಂಗಳೂರು ಸಂಪರ್ಕ:080-26615877

### ಉಪರಾಷ್ಟ್ರಪತಿಯನ್ನು ಭೇಟಿಯಾದ ಸುಮಲತಾ

ನವದೆಹಲಿ: ಮಂಡ್ಯ ಸಂಸದೆ ಸುಮಲತಾ ಅವರು ಶುಕ್ರವಾರ ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರನ್ನು ಭೇಟಿ ಮಾಡಿ, ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮ ಕಲ್ಲು ಗಣಿಗಾರಿಕೆ ಚಟುವಟಿಕೆಗಳ ಬಗ್ಗೆ ಸಿಬಿಐ ತನಿಖೆ ನಡೆಸುವಂತೆ ಒತ್ತಾಯಿಸಿದರು.

ಜಿಲ್ಲೆಯಲ್ಲಿ ಅತಿಯಾಗಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಚಟುವಟಿಕೆಗಳಿಂದ ಕೆಆರ್‌ಎಸ್ ಜಲಾಶಯಕ್ಕೆ ಅಪಾಯ ಎದುರಾಗಿದೆ. ಅಲ್ಲದೆ ಬಂಡೀಪುರ, ನಾಗರಹೊಳೆಯ ವನ್ಯಜೀವಿ ಅಭಯಾರಣ್ಯಗಳಿಗೂ ಸಂಕಷ್ಟ ಎದುರಾಗುವಂತೆ ಮಾಡಿವೆ. ಕಾವೇರಿ ನದಿಯನ್ನೂ ಇದು ಕಲುಷಿತಗೊಳಿಸಿದೆ ಎಂದು ಅವರು ತಮ್ಮ ಮನವಿಯಲ್ಲಿ ತಿಳಿಸಿದ್ದಾರೆ.

### ಜೋಗ ಜಲಪಾತ ವೀಕ್ಷಣೆ ವಿಶೇಷ ಪ್ಯಾಕೇಜ್ ಟೂರ್

ಶಿವಮೊಗ್ಗ: ವಿಶ್ವ ವಿಖ್ಯಾತ ಜೋಗ ಜಲಪಾತ ವೀಕ್ಷಣೆಗಾಗಿ ಕೆಎಸ್‌ಆರ್‌ಟಿಸಿ ವಿಶೇಷ ಪ್ಯಾಕೇಜ್ ಪ್ರಕಟಿಸಿದೆ.

ಪ್ರವಾಸಿಗರ ಅನುಕೂಲಕ್ಕಾಗಿ ವಾರಾಂತ್ಯದ ದಿನಗಳಲ್ಲಿ ಬೆಂಗಳೂರಿನಿಂದ ಜೋಗ ಜಲಪಾತಕ್ಕೆ ವಿಶೇಷ ಪ್ಯಾಕೇಜ್ ಟೂರ್ ಆಯೋಜಿಸಿದೆ. ಶುಕ್ರವಾರ ವಾರದಿಂದ ನಾನ್ ಎಸಿ ಸ್ಲೀಪರ್ ಬಸ್‌ನಲ್ಲಿ ಪ್ರವಾಸ ಆರಂಭವಾಗಿದೆ. ಶುಕ್ರವಾರ, ಶನಿವಾರ ಮಾತ್ರ ಪ್ರಯಾಣಕ್ಕೆ ಅವಕಾಶವಿದ್ದು, ಊಟ, ಉಪಾಹಾರ ವ್ಯವಸ್ಥೆ ಸೇರಿ ವಯಸ್ಕರಿಗೆ ₹ 2000 ಹಾಗೂ ಮಕ್ಕಳಿಗೆ ₹ 1800 ದರ ನಿಗದಿಗೊಳಿಸಲಾಗಿದೆ.

ವಾರಾಂತ್ಯದಲ್ಲಿ ಬೆಂಗಳೂರಿನಿಂದ ರಾತ್ರಿ 10.30ಕ್ಕೆ ಬಸ್‌ಗಳು ಹೊರಡಲಿದ್ದು, ಬೆಳಗಿನ ಜಾವ 5.30ಕ್ಕೆ ತಲುಪಲಿದೆ. ಜೋಗ ಸೇರಿ ವರದಹಳ್ಳಿಯಲ್ಲಿರುವ ಶ್ರೀಧರ ಆಶ್ರಮ, ಕೆಳದಿ, ಇಕ್ಕೇರಿಗೂ ಟೂರ್ ಬಸ್ ತೆರಳಲಿದೆ.

ಕೃಷಿ ಕ್ಷೇತ್ರದ ಸವಾಲುಗಳಿಗೆ ಪರಿಹಾರ ಸೂಚಿಸಲು ಸ್ಪರ್ಧೆ

# ವಿಜೇತ ನವೋದ್ಯಮಕ್ಕೆ ₹25 ಲಕ್ಷ ಅನುದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಕ್ಷೇತ್ರದ ಪ್ರಮುಖ ಸವಾಲುಗಳಿಗೆ ವಿನೂತನ ಪರಿಹಾರಗಳನ್ನು ಕಂಡುಹಿಡಿಯುವ ನವೋದ್ಯಮಗಳನ್ನು ಉತ್ತೇಜಿಸಲು ಸಿ-ಕ್ಯಾಂಪ್ ಸಂಸ್ಥೆಯು ರಾಷ್ಟ್ರಮಟ್ಟದ ಸ್ಪರ್ಧೆ ಆಯೋಜಿಸಿದೆ. ರಾಜ್ಯ ಸರ್ಕಾರದ ಸಹಯೋಗದಲ್ಲಿ ಈ ಸ್ಪರ್ಧೆ ನಡೆಯಲಿದ್ದು, ವಿಜೇತವಾದ ನವೋದ್ಯಮಕ್ಕೆ ₹25 ಲಕ್ಷದವರೆಗೆ ಅನುದಾನ ಒದಗಿಸಲಾಗುತ್ತದೆ.

ನಗರದಲ್ಲಿ ಶುಕ್ರವಾರ ಸ್ಪರ್ಧೆ ಕುರಿತು ಮಾತನಾಡಿದ ಉಪಮುಖ್ಯಮಂತ್ರಿ ಡಾ. ಸಿ.ಎನ್.ಅಶ್ವತ್ಥನಾರಾಯಣ, 'ನವೋದ್ಯಮಿಗಳನ್ನು ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಉತ್ತೇಜಿಸಿ, ಕೃಷಿ ವಲಯದಲ್ಲಿ ಆರ್ಥಿಕವಾಗಿ ಕಾರ್ಯಸಾಧುವಾದ, ಪರಿಹಾರ ಕೇಂದ್ರಿತ, ಅತ್ಯಾಧುನಿಕ ವಿಜ್ಞಾನ-ತಂತ್ರಜ್ಞಾನ ಆಧಾರಿತ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಲಾಗುತ್ತದೆ' ಎಂದು ಹೇಳಿದರು.

ಇದೇ ಸಂದರ್ಭದಲ್ಲಿ, ಭಾರತ-ಇಸ್ರೇಲ್ ನಡುವೆ ಒಪ್ಪಂದ ಏರ್ಪಟ್ಟಿತು. ಉಭಯ ದೇಶಗಳ ಜೀವವಿಜ್ಞಾನ ಮತ್ತು ಕೃಷಿ ತಾಂತ್ರಿಕತೆ ಕ್ಷೇತ್ರದ ನವೋದ್ಯಮಗಳ ನಡುವೆ ಸಹಭಾಗಿತ್ವ ಹೆಚ್ಚಿಸುವ ಉದ್ದೇಶವನ್ನು ಈ ಒಪ್ಪಂದ ಹೊಂದಿದೆ.

ದಕ್ಷಿಣ ಭಾರತದ ಇಸ್ರೇಲ್ ಕಾನ್ಸುಲ್ ಜನರಲ್ ಡಾ.ಜೊನಾಥನ್ ಜಡ್ಕಾ, 'ಈ ಒಪ್ಪಂದದಿಂದ ಎರಡೂ ದೇಶಗಳ ನವೋದ್ಯಮಗಳ ನಡುವೆ ಸಹಕಾರ ಹೆಚ್ಚಾಗಲಿದೆ. ಉಭಯ ದೇಶಗಳ ಪರಿಣತ ವಲಯಗಳನ್ನು ಒಂದೇ ವೇದಿಕೆಯಡಿ ತಂದು ಸಂಶೋಧನೆ ಮತ್ತು ಅಭಿವೃದ್ಧಿಗೆ ಸಹಭಾಗಿತ್ವದ ಅಭಿವೃದ್ಧಿಗೆ ಪೂರಕ ವಾತಾವರಣ ರೂಪಿಸುತ್ತದೆ' ಎಂದರು.

ಸ್ಪರ್ಧೆ ಕುರಿತ ಭಿತ್ತಿ ಪತ್ರಗಳನ್ನು ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತು ಗಣ್ಯರು ಬಿಡುಗಡೆಗೊಳಿಸಿದರು. ಎನ್‌ಸಿಬಿಎಸ್ ನಿರ್ದೇಶಕ ಪ್ರೊ.ಸತ್ಯಜಿತ್ ಮೇಯರ್, ಇನ್‌ಸ್ಟೆಮ್ ನಿರ್ದೇಶಕ ಪ್ರೊ.ಅಪೂರ್ವ ಸರಿನ್, ಸಿಕ್ಯಾಂಪ್ ಸಿಇಒ ಮತ್ತು ನಿರ್ದೇಶಕ ತಸ್ಲೀಂ ಆರಿಫ್ ಸಯ್ಯದ್, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ನಿರ್ದೇಶಕರಾದ ಮೀನಾ ನಾಗರಾಜ್ ಇದ್ದರು

### ಸ್ಪರ್ಧೆಯ ಸವಾಲುಗಳು

- ಮಣ್ಣು ಮತ್ತು ಸಸ್ಯಗಳ ಅಂಗಾಂಶದಲ್ಲಿ ಸೂಕ್ಷ್ಮ ಪೌಷ್ಠಿಕಾಂಶಗಳ ಸಾಂದ್ರತೆಯನ್ನು ಕಡಿಮೆ ದರದಲ್ಲಿ ನಿಖರ ಮತ್ತು ಕ್ಷಿಪ್ರವಾಗಿ ಪರೀಕ್ಷಿಸಬಲ್ಲ ಪರಿಕಲ್ಪನೆ
- ರಾಸಾಯನಿಕ ಅಥವಾ ಜೈವಿಕ ವಿಧಾನಗಳ ಮೂಲಕ ಕೃಷಿ ಉತ್ಪನ್ನಗಳ ಬಾಳಿಕೆ ಅವಧಿ ಹೆಚ್ಚಿಸುವುದು, ಕಟಾವಿನ ನಂತರ ನಷ್ಟದ ಪ್ರಮಾಣವನ್ನು ತಗ್ಗಿಸುವ ತಂತ್ರಜ್ಞಾನ
- ಕಾಫಿ ಗಿಡಗಳಿಗೆ ತಗುಲುವ ಬಿಳಿ ಕಾಂಡಕೊರಕಗಳ ಪ್ರಸರಣವನ್ನು ಪತ್ತೆಹಚ್ಚುವುದರ ಜೊತೆಗೆ ಅದನ್ನು ಉಪಚರಿಸಲು ಬೇಕಾದ ತಂತ್ರಜ್ಞಾನ ಅಭಿವೃದ್ಧಿ

ಮೇಳದಲ್ಲಿ ಆಯ್ಕೆಯಾದ ಯುವತಿಯೊಬ್ಬರಿಗೆ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಸಾಂಕೇತಿಕವಾಗಿ ನೇಮಕಾತಿ ಪತ್ರ ವಿತರಿಸಿದರು. ಕೌಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಗೌಡ ಇದ್ದರು

## ಮೊದಲ ದಿನ ಸಾವಿರ ಜನರಿಗೆ ಉದ್ಯೋಗಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಶಲ ಅಭಿವೃದ್ಧಿ ನಿಗಮವು ಒಂದು ತಿಂಗಳವರೆಗೆ ಹಮ್ಮಿಕೊಂಡಿರುವ ವರ್ಚುವಲ್ ಉದ್ಯೋಗ ಮೇಳದಲ್ಲಿ ಮೊದಲ ದಿನವೇ ಸಾವಿರ ಅಭ್ಯರ್ಥಿಗಳು ಉದ್ಯೋಗಾವಕಾಶ ಪಡೆದರು.

ನಗರದಲ್ಲಿ ಶುಕ್ರವಾರ ಸಾಂಕೇತಿಕವಾಗಿ ಕೆಲವು ಯುವಕ-ಯುವತಿಯರಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಉಪಮುಖ್ಯಮಂತ್ರಿ, ಕೌಶಲ ಅಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಮೇಳದಲ್ಲಿ ಭಾಗವಹಿಸಿದ್ದ 5 ಸಾವಿರ ಯುವಕ-ಯುವತಿಯರ ಪೈಕಿ ಒಂದು ಸಾವಿರ ಜನರಿಗೆ ಮೊದಲೇ ದಿನವೇ ಉದ್ಯೋಗ ಸಿಕ್ಕಿದ್ದು ಸಂತಸದ ಸಂಗತಿ. ಉದ್ಯೋಗಾಂಕ್ಷಿಗಳು ಮತ್ತು ಉದ್ಯೋಗದಾತ ಕಂಪನಿಗಳ ಜತೆ ನಿಗಮವು ಸೇತುವೆಯಾಗಿ ಕೆಲಸ ಮಾಡುತ್ತಿದೆ' ಎಂದರು.

'ನಿಗಮವು ಸ್ಕಿಲ್ ಕನೆಕ್ಟ್ ಹೆಸರಿನ https://skillconnect.kaushalkar.com/ ಪೋರ್ಟಲ್ ತೆರೆದಿದ್ದು, ಅದರಲ್ಲಿಯೂ ಉದ್ಯೋಗಾಂಕ್ಷಿಗಳು ನೋಂದಣಿ ಮಾಡಿಕೊಳ್ಳಬಹುದಾಗಿದೆ' ಎಂದು ಮಾಹಿತಿ ನೀಡಿದರು.

'ಐದು ಲಕ್ಷ ಭಾರತೀಯರಿಗೆ ಉದ್ಯೋಗಾವಕಾಶ ನೀಡಲು ಜಪಾನ್ ಮುಂದೆ ಬಂದಿದ್ದು, ಈ ಬಗ್ಗೆ ಭಾರತ ಸರ್ಕಾರದ ಜತೆ ಒಪ್ಪಂದ ಮಾಡಿಕೊಂಡಿದೆ. ಬ್ರಿಟನ್‌ಗೆ 1,000 ಶುಶ್ರೂಷಕರನ್ನು ಕಳಿಸುವ ಬಗ್ಗೆಯೂ ಒಪ್ಪಂದ ಆಗಿದೆ' ಎಂದರು.

ಮೇಳದಲ್ಲಿ ಭಾಗವಹಿಸಿರುವ ಕಂಪನಿಗಳು:

ಎಚ್‌ಜಿಎಸ್, ಆದಿತ್ಯ ಬಿರ್ಲಾ, ಸನ್‌ಸೆರಾ ಎಂಜಿನಿಯರಿಂಗ್, ಐಬಿಎಂ ಇಂಡಿಯಾ, ವಿಪ್ರೊ, ಟೀಮ್ ಲೀಸ್, ರಿಲಯನ್ಸ್‌ನ ಏಳು ಸಹ ಕಂಪನಿಗಳು, ಅಫ್ರಿಮ್ ಡಾಟಾ ಸರ್ವೀಸ್, ಡ್ರೀಮ್ ಆರ್ಬಿಟ್, ಹಿಂದುಜಾ, ವಿಸ್ಟ್ರಾನ್, ಫ್ಲಿಪ್‌ಕಾರ್ಟ್, ಡಿಎಚ್‌ಎಲ್, ಅಲ್ ಲಾಜಿಸ್ಟಿಕ್ಸ್, ಮೆಡಿಝಿನಿಕಾ, ಮೆಶೋ, ಗ್ರಾಸ್‌ರೂಟ್ಸ್ ಬಿಪಿಒ, ಇಂಡಿಯನ್ ಮನಿ, ನವತಾ ರೋಡ್ ಟ್ರಾನ್ಸ್‌ಪೋರ್ಟ್, ಲ್ಯಾಂಡ್‌ಮಾರ್ಕ್, ಐಟಿಸಿ, ಕ್ವೆಸ್ ಕಾರ್ಪ್, ಸ್ಟ್ರೆಪರಾವಾ ಇಂಡಿಯಾ ಸೇರಿ ಇಪ್ಪತ್ತಕ್ಕೂ ಹೆಚ್ಚು ಕಂಪನಿಗಳು ಭಾಗಿಯಾಗಿದ್ದವು.

### ಪರಿಶಿಷ್ಟ ಸಮುದಾಯಕ್ಕೆ ಸಿ.ಎಂ ಪಟ್ಟ : ಕಾಂಗ್ರೆಸ್‌ಗೆ ಬಿಜೆಪಿ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಸಮುದಾಯವರ ಬಗ್ಗೆ ಸಿದ್ದರಾಮಯ್ಯ ಅವರಿಗೆ ಕಾಳಜಿ ಇದ್ದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಸ್ಥಾನವನ್ನು ಆ ಸಮುದಾಯಕ್ಕೆ ನೀಡುವುದಾಗಿ ಈಗಲೇ ಘೋಷಿಸಲಿ' ಎಂದು ಬಿಜೆಪಿ ಸವಾಲು ಹಾಕಿದೆ.

ಪರಿಶಿಷ್ಟ ಸಮುದಾಯವರೊಬ್ಬರು ಮುಖ್ಯಮಂತ್ರಿ ಆಗಬಾರದು ಎಂದು ಜಿ.ಪರಮೇಶ್ವರ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದ ಸಿದ್ದರಾಮಯ್ಯ ಈಗ ಪರಿಶಿಷ್ಟ ಸಮುದಾಯವರ ಬಗ್ಗೆ ಪ್ರೇಮ ತೋರಿಸುತ್ತಿದ್ದಾರೆ ಎಂದು ಬಿಜೆಪಿ ಕುಟುಕಿದೆ.

'ದಲಿತ ಸಮುದಾಯಕ್ಕೆ ಸೇರಿದವರನ್ನು ಬಿಜೆಪಿ ಮುಂದಿನ ಮುಖ್ಯಮಂತ್ರಿ ಮಾಡಲಿ' ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ಬಿಜೆಪಿ ಟ್ವೀಟ್ ಮೂಲಕ ಪ್ರತಿಕ್ರಿಯಿಸಿದೆ. 'ಸಿದ್ದರಾಮಯ್ಯ ಅವರು ಈ ವಿಚಾರದಲ್ಲಿ ಮಾತನಾಡುವುದೂ ಒಂದೇ, ಗಾಂಧಿ ಕುಡಿಗಳು ಕುಟುಂಬ ರಾಜಕಾರಣದ ಬಗ್ಗೆ ಪ್ರವಚನ ನೀಡುವುದೂ ಒಂದೇ' ಎಂದು ವ್ಯಂಗ್ಯವಾಡಿದೆ.

ತಾವೇ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಿಕೊಳ್ಳುವಲ್ಲಿ ತರಾತುರಿಯಲ್ಲಿರುವ ಸಿದ್ದರಾಮಯ್ಯ ಅವರು ಪರಿಶಿಷ್ಟ ಸಮುದಾಯದ ವ್ಯಕ್ತಿಯನ್ನು ಮುಂದಿನ ಮುಖ್ಯಮಂತ್ರಿ ಎಂದು ಘೋಷಿಸಲು ಹೇಗೆ ಸಾಧ್ಯ ಎಂದೂ ಪ್ರಶ್ನಿಸಿದೆ.

**ಬಣ್ಣ ಬಣ್ಣದ ಚೆಂಡು** ವ್ಯಾಪಾರಿಯೊಬ್ಬರು ಬಣ್ಣ ಬಣ್ಣದ ಚೆಂಡುಗಳನ್ನು ಬೈಕ್‌ಗೆ ಕಟ್ಟಿಕೊಂಡು ಸಾಗುತ್ತಿರುವ ದೃಶ್ಯ ನಗರದ ಲುಂಬಿನಿ ಉದ್ಯಾನದ ಬಳಿ ಶುಕ್ರವಾರ ಕಂಡುಬಂದಿತು –ಪ್ರಜಾವಾಣಿ ಚಿತ್ರ

## 'ಶೇ 70ರಷ್ಟು ಪ್ರಾಯೋಗಿಕ ಕಲಿಕೆಗೆ ಇರಲಿ ಅವಕಾಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭವಿಷ್ಯದ ಮಾದರಿ ಶಿಕ್ಷಣ ಪದ್ಧತಿಯು ಶೇ 70ರಷ್ಟು ಪ್ರಾಯೋಗಿಕ ಕಲಿಕೆಗೆ ಅವಕಾಶ ನೀಡುವಂತಿರಬೇಕು. ಶೇ 20ರಷ್ಟು ಔಪಚಾರಿಕ ಮತ್ತು ಅನೌಪಚಾರಿಕ ಕಲಿಕೆಗೆ ಅವಕಾಶವಿದ್ದರೆ, ಶೇ 10ರಷ್ಟು ಮಾತ್ರ ಪಠ್ಯ ಆಧಾರಿತವಾಗಿರಬೇಕು' ಎಂದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ (ಎಸ್‌ವಿವೈಎಂ) ಸ್ಥಾಪಕ ಡಾ. ಆರ್.ಬಾಲಸುಬ್ರಮಣ್ಯಂ ಹೇಳಿದರು.

ನಗರದ ಆರ್.ವಿ. ವಿಶ್ವವಿದ್ಯಾಲಯವು 'ಭವಿಷ್ಯದ ಕಲ್ಲಿಕೆಗೆ ಸಜ್ಜಾಗುವ ವಿಶ್ವವಿದ್ಯಾಲಯದ ನಿರ್ಮಾಣ' ವಿಷಯ ಕುರಿತು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಿದ್ಯಾರ್ಥಿಗಳನ್ನು ಉದ್ಯೋಗ ಪಡೆಯುವ ನಿಟ್ಟನಲ್ಲಿ ಸಜ್ಜುಗೊಳಿಸುವ ಕೆಲಸವನ್ನು ವಿಶ್ವವಿದ್ಯಾಲಯಗಳು ಮಾಡಬೇಕಿದೆ. ಡಿಜಿಟಲ್ ಮತ್ತು ದತ್ತಾಂಶ ವಿಜ್ಞಾನದ ಕೌಶಲಗಳನ್ನು ಅವರಲ್ಲಿ ಬೆಳೆಸುವ ನಿಟ್ಟಿನಲ್ಲಿಯೂ ವಿ.ವಿ.ಗಳು ಚಿಂತನೆ ನಡೆಸುವ ಅವಶ್ಯಕತೆ ಇದೆ' ಎಂದು ಹೇಳಿದರು.

'ವಿಶ್ವವಿದ್ಯಾಲಯಗಳು ಅಳವಡಿಸಿಕೊಳ್ಳುವ ಪಠ್ಯಕ್ರಮಗಳೂ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಮಾಣ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಲಿವೆ. ವಿ.ವಿಗಳು ವಿದ್ಯಾರ್ಥಿಗಳ ಸಮಗ್ರ ಕಲಿಕೆಗೆ ವ್ಯವಸ್ಥೆ ಒದಗಿಸುವ ಸಂಸ್ಥೆಗಳಾಗಬೇಕೇ ವಿನಾ ಕೇವಲ ಮಾಹಿತಿ ಒದಗಿಸುವುದಕ್ಕೆ ಸೀಮಿತವಾಗಬಾರದು' ಎಂದರು.

### ಟಿಎಂಸಿ ಸಂಸದೀಯ ಪಕ್ಷದ ಅಧ್ಯಕ್ಷರಾಗಿ ಮಮತಾ ಆಯ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತೃಣಮೂಲ ಕಾಂಗ್ರೆಸ್‌ನ ಸಂಸದೀಯ ಪಕ್ಷದ ಅಧ್ಯಕ್ಷರನ್ನಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಶುಕ್ರವಾರ ಆಯ್ಕೆ ಮಾಡಲಾಗಿದೆ. ಈ ಮೂಲಕ ರಾಷ್ಟ್ರ ರಾಜಕಾರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸಲು ಮಮತಾ ಅವರಿಗೆ ಟಿಎಂಸಿ ವೇದಿಕೆ ಮಾಡಿಕೊಟ್ಟಿದೆ.

ಮಮತಾ ಬ್ಯಾನರ್ಜಿ

ರಾಜ್ಯಸಭೆ ಮತ್ತು ಲೋಕಸಭೆಯ ಪಕ್ಷದ ಸಂಸದರು ಸರ್ವಾನುಮತದಿಂದ ಮಮತಾ ಬ್ಯಾನರ್ಜಿ ಅವರನ್ನು ಅಖಿಲ ಭಾರತ ತೃಣ ಮೂಲ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ರಾಜ್ಯಸಭೆ ಸದಸ್ಯ ಡೆರಕ್ ಒಬ್ರಿಯಾನ್ ಈ ಕುರಿತ ನಿರ್ಧಾರ ಪ್ರಕಟಿಸಿದರು.

ಇದಕ್ಕೂ ಮೊದಲು ಈ ಸ್ಥಾನ ಅಲಂಕರಿಸಿದ್ದ ಸುದೀಪ್ ಬಂಡೋಪಾಧ್ಯಾಯ ಲೋಕಸಭೆಯಲ್ಲಿ ಟಿಎಂಸಿ ನಾಯಕರಾಗಿ ಮುಂದುವರಿಯಲಿದ್ದಾರೆ.

ನಾಳೆಯಿಂದ ನಾಲೆಗೆ ಹೇಮಾವತಿ ನೀರು ಬಿಡುಗಡೆ

# ಮದಲೂರಿಗೆ ನೀರು ಬಿಟ್ಟರೆ ಜೈಲು

ಪ್ರಜಾವಾಣಿ ವಾರ್ತೆ

ತುಮಕೂರು: ಶಿರಾ ವಿಧಾನಸಭೆ ಉಪಚುನಾವಣೆ ಸಮಯದಲ್ಲಿ ಪ್ರಮುಖ ವಿಷಯವಾಗಿದ್ದ ಮದಲೂರು ಕೆರೆಗೆ ನೀರು ಹರಿಸುವ ವಿಚಾರ ಈಗ ಮತ್ತೊಮ್ಮೆ ಮುನ್ನೆಲೆಗೆ ಬಂದಿದ್ದು, ವಿವಾದದ ಸ್ವರೂಪ ಪಡೆದುಕೊಂಡಿದೆ.

ಹೇಮಾವತಿಯಿಂದ ಹರಿಸುವ ನೀರನ್ನು ಕಳ್ಳಂಬೆಳ್ಳ, ಶಿರಾ ಕೆರೆಗೆ ತುಂಬಿಸಬಹುದು. ಶಿರಾದಿಂದ ಮುಂದಕ್ಕೆ ನೀರು ಹರಿಸುವಂತಿಲ್ಲ. ಮದಲೂರು ಕೆರೆಗೆ ನೀರು ಬಿಟ್ಟರೆ ಜೈಲಿಗೆ ಕಳುಹಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿರುವುದು ವಿವಾದಕ್ಕೆ ಕಾರಣವಾಗಿದೆ.

ಶಿರಾ ವಿಧಾನಸಭೆ ಚುನಾವಣೆ ಸಮಯದಲ್ಲಿ ಮದಲೂರು ಕೆರೆಗೆ ನೀರು ಹರಿಸಬೇಕು ಎಂದು ಪ್ರಮುಖವಾಗಿ ತಾಲ್ಲೂಕಿನ ಜನರು ಒತ್ತಾಯಿಸಿದ್ದರು. ಚುನಾವಣೆಗೆ ಸ್ಪರ್ಧಿಸಿದ್ದ ಪ್ರಮುಖ ಮೂರು ರಾಜಕೀಯ ಪಕ್ಷಗಳು ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದವು. 'ಬಿಜೆಪಿ ಮುಖಂಡರು ನೀರು ಹರಿಸುವುದಕ್ಕೆ ಈ ಹಿಂದೆಯೇ ವಿರೋಧ ವ್ಯಕ್ತಪಡಿಸಿದ್ದಾರೆ. ಈಗಲೂ ಭರವಸೆ ನೀಡುತ್ತಾರೆ. ಮುಂದೆ ನೀರು ಬಿಡುವುದಿಲ್ಲ' ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿ ಪ್ರಚಾರ ನಡೆಸಿದ್ದರು.

### ಮುಖ್ಯಾಂಶಗಳು

- ಗೊರೂರು ಜಲಾಶಯದಿಂದ ನೀರು ಬಿಡಲು ನಿರ್ಧಾರ
- ನಾಲೆಗಳ ಪರಿಶೀಲನೆಗೆ ಸೂಚನೆ
- ಮದಲೂರು ಕೆರೆಗೆ ನೀರು ಹರಿಸುವಂತಿಲ್ಲ

ಪ್ರಚಾರಕ್ಕೆ ಬಂದಿದ್ದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮದಲೂರು ಕೆರೆಗೆ ನೀರು ಹರಿಸಲಾಗುವುದು ಎಂದು ಭರವಸೆ ನೀಡಿದರು. ಅದರಂತೆ ಆದೇಶವೂ ಹೊರಬಿತ್ತು. ಚುನಾವಣೆ ಸಮಯದಲ್ಲಿ ಒಂದೆರಡು ದಿನಗಳ ಕಾಲ ಶಾಸ್ತ್ರಕ್ಕೆ ಎಂಬಂತೆ ಕೆರೆಗೆ ನೀರು ಬಂದಿತ್ತು. ನಂತರ ನೀರು ಹರಿಸುವುದನ್ನು ಸ್ಥಗಿತಗೊಳಿಸಲಾಯಿತು. ನೀರು ಬಿಡದಿರುವುದಕ್ಕೆ ಶಿರಾ ತಾಲ್ಲೂಕಿನಲ್ಲಿ ಆಕ್ರೋಶವೂ ವ್ಯಕ್ತವಾಗಿತ್ತು.

ಶುಕ್ರವಾರ ನಡೆದ ಕೆಡಿಪಿ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಮಾಧುಸ್ವಾಮಿ, 'ಗೊರೂರು ಜಲಾಶಯದಿಂದ ಒಂದೆರಡು ದಿನಗಳಲ್ಲಿ ನಾಲೆಗೆ ನೀರು ಹರಿಸಲಾಗುವುದು. ಅಷ್ಟರಲ್ಲಿ ನಾಲೆಗಳ ಸ್ಥಿತಿಗತಿ ಬಗ್ಗೆ ತಿಳಿಸಬೇಕು. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದು ಹೇಳಿದರು. ಇದಕ್ಕೆ ಜಲಸಂಪನ್ಮೂಲ ಇಲಾಖೆ ಎಂಜಿನಿಯರ್ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ ಎಂದರು.

ಈಗಾಗಲೇ ನೀರು ಸಂಗ್ರಹ ಆಗಿರುವುದರಿಂದ ಭಾನುವಾರದಿಂದ ನೀರು ಹರಿಸಲಾಗುವುದು. ತಕ್ಷಣ ನಾಲೆ ಸರಿಪಡಿಸಿ ಇಟ್ಟುಕೊಳ್ಳಬೇಕು ಎಂದು ಸಚಿವರು ಸಲಹೆ ಮಾಡಿದರು. ಆಗ ಮದಲೂರು ಕೆರೆಗೆ ನೀರು ಹರಿಸದಂತೆ ಸೂಚಿಸಿದರು. ಒಂದು ವೇಳೆ ನೀರು ಬಿಟ್ಟರೆ ಸಂಬಂಧಿಸಿದವರನ್ನು ಜೈಲಿಗೆ ಕಳುಹಿಸುವುದಾಗಿ ಎಚ್ಚರಿಸಿದರು.

ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಕೆರೆಯಿಂದ ಮದಲೂರು ಕೆರೆಗೆ ಕಾಲುವೆ ಮೂಲಕ ನೀರು ಹರಿಸಲಾಯಿತು (ಸಂಗ್ರಹ ಚಿತ್ರ)

**ಸಿದ್ಧತೆಯೇ ನಡೆದಿಲ್ಲ:** ಗೊರೂರು ಜಲಾಶಯದಲ್ಲಿ ನೀರಿನ ಮಟ್ಟ ಹೆಚ್ಚುತ್ತಿದ್ದು, ಯಾವ ಕ್ಷಣದಲ್ಲಾದರೂ ನೀರು ಬಿಡಬಹುದು ಎಂಬುದು ಗೊತ್ತಿದ್ದರೂ ಜಿಲ್ಲೆಯಲ್ಲಿ ನಾಲೆಗಳನ್ನು ಸುಸ್ಥಿಯಲ್ಲಿ ಇಟ್ಟುಕೊಂಡಿಲ್ಲ. ನೀರು ಹರಿಸಲು ಇನ್ನೂ ಸಾಕಷ್ಟು ಸಿದ್ಧತೆಗಳನ್ನೇ ಮಾಡಿಕೊಂಡಿಲ್ಲ. ನಾಲೆಗಳನ್ನು ಪರಿಶೀಲಿಸಲು ಮತ್ತಷ್ಟು ಸಮಯಾವಕಾಶ ಬೇಕು ಎಂದು ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಕೇಳಿದರು. ಆದರೆ ಇಷ್ಟು ದಿನಗಳು ಏನು ಮಾಡುತ್ತಿದ್ದರು. ಜುಲೈ ಮೊದಲ ವಾರದಲ್ಲೇ ಸಿದ್ಧತೆಗಳು ಮುಗಿಯಬೇಕಿತ್ತಲ್ಲವೆ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ.

### ಇತಿಹಾಸ ರಚನೆ: ಪ್ರತ್ಯೇಕ ಶಾಸನ ಸರ್ವೇಕ್ಷಣಾ ಇಲಾಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶೀಯ ನೆಲೆಯ ಇತಿಹಾಸ ರಚನೆಗೆ ಪ್ರತ್ಯೇಕ ಶಾಸನ ಸರ್ವೇಕ್ಷಣಾ ಇಲಾಖೆ ರಚನೆಯಾಗಬೇಕು' ಎಂದು ಕನ್ನಡ ಗೆಳೆಯರ ಬಳಗ ಆಗ್ರಹಿಸಿದೆ.

'ಶಾಸನಗಳು ದೇಶದ ಇತಿಹಾಸ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿವೆ. ಇದಕ್ಕೆ ಸ್ಪಷ್ಟ ನಿದರ್ಶನ ಅಯೋಧ್ಯಾ ಉತ್ಖನನ. ಈ ಉತ್ಖನನದಲ್ಲಿ ದೊರೆತ ಅವಶೇಷ ಮತ್ತು ಶಾಸನವು ವಿಷ್ಣು ದೇವಾಲಯವನ್ನು ಅಧಿಕೃತವಾಗಿ ದೃಢೀಕರಿಸಿತು. ದೇಶದಲ್ಲಿನ ಶಾಸನಗಳಲ್ಲಿ ಶೇ 30ರಷ್ಟು ಮಾತ್ರ ಬೆಳಕಿಗೆ ಬಂದಿವೆ. ದೇಶದ ವಾಸ್ತವ ಇತಿಹಾಸ ಹೊರಬರಬೇಕಾದರೆ ದೇಶದಲ್ಲಿರುವ ಎಲ್ಲ ಶಾಸನಗಳು ಪ್ರಕಟವಾಗಬೇಕು. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಶಾಸನ ವಿಭಾಗಕ್ಕೆ ಹಲವು ವರ್ಷಗಳಿಂದ ಶಾಸನತಜ್ಞರ ನೇಮಕಾತಿ ನಡೆದಿಲ್ಲ' ಎಂದು ಶಾಸನತಜ್ಞ ಡಾ.ಆರ್. ಶೇಷಶಾಸ್ತ್ರಿ ಹಾಗೂ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಬೇಸರ ವ್ಯಕ್ತಪಡಿಸಿದ್ದಾರೆ.

'ಪ್ರತ್ಯೇಕವಾದ ಭಾರತೀಯ ಶಾಸನ ಸರ್ವೇಕ್ಷಣಾ ಇಲಾಖೆ ರಚಿಸಿ, ಶಾಸನಗಳ ಅಧ್ಯಯನ, ಅನ್ವೇಷಣೆ ಮತ್ತು ಪ್ರಕಟಣೆಗೆ ಆದ್ಯತೆ ನೀಡಬೇಕು. ದೇಶದ ಇತಿಹಾಸ ನಿಂತಿರುವುದೇ ಶಾಸನಗಳ ಮೇಲೆ. ಇತಿಹಾಸದ ವಿವಿಧ ಮಜಲುಗಳನ್ನು ಅಧ್ಯಯನ ನಡೆಸಲು ಶಾಸನಗಳೇ ಆಧಾರಸ್ತಂಭ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೌಷ್ಟಿಕ ಆಹಾರ ಸೇವಿಸಿ

# ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಲಾಭ ಇಳಿಕೆ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಜೂನ್ ತ್ರೈಮಾಸಿಕದ ಲಾಭದಲ್ಲಿ ಶೇಕಡ 7ರಷ್ಟು ಇಳಿಕೆ ಆಗಿದೆ. ಕೋವಿಡ್ ಎರಡನೆಯ ಅಲೆಯ ಕಾರಣದಿಂದಾಗಿ ಉದ್ಯಮ ಸಮೂಹದ ಚಿಲ್ಲರೆ ವ್ಯಾಪಾರ ವಹಿವಾಟಿಗೆ ಏಟು ಬಿದ್ದು, ಲಾಭದಲ್ಲಿ ತುಸು ಇಳಿದಿದೆ. . ಈ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು ₹ 12,273 ಕೋಟಿ ಲಾಭ ದಾಖಲಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 13,233 ಕೋಟಿ ಲಾಭ ಕಂಡಿತ್ತು. ಈ ವರ್ಷದ ಜೂನ್ ತ್ರೈಮಾಸಿಕದಲ್ಲಿ ಆದಾಯವು ₹ 1.44 ಲಕ್ಷ ಕೋಟಿ ಎಂದು ಕಂಪನಿಯು ಷೇರು ಮಾರುಕಟ್ಟೆಗೆ ಮಾಹಿತಿ ನೀಡಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

## ಷೇರುಪೇಟೆ ವಹಿವಾಟು 138




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 15,824 |
| ಇಂದಿನ ಅಂತ್ಯ | 15,856 |
| ▲ | 32 |
| ದಿನದ ಗರಿಷ್ಠ | 15,899 |

## ವಿನಿಮಯ ದರ

| | |
|---|---|
| $ ಡಾಲರ್ | 74.4 |
| £ ಪೌಂಡ್ | 102.23 |
| € ಯುರೊ | 87.6 |
| ¥ ಯೆನ್ (100ಕ್ಕೆ) | 67.38 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹525 |
| 12 ಮೊಟ್ಟೆಗೆ | ₹70 |
| ಮೈಸೂರು | |
| 100 ಮೊಟ್ಟೆಗೆ | ₹525 |

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 600- 6500 |
| ನಡುಗೋಲು | 1700-750 |
| ರಾಶಿ | 800-850 |
| ರಾಶಿ ಉತ್ತಮ | 900-950 |
| ಜರಡಿ | 1000 -1050 |
| ಹೆರಕಿದ್ದು | 1200-1300 |
| ಹಸಿರು ಸಾಧಾರಣ | 800-850 |
| ಹಸಿರು ಉತ್ತಮ | 1000-1050 |
| ಹಸಿರು ಅತಿ ಉತ್ತಮ | 1300-1400 |
| ಕಾಳು ಮೆಣಸು | 385 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-43000 |
| ಹಳತು | 42500-52000 |
| **ಹೊಸನಗರ** | |
| ಬಿಳಿಗೋಟು | 24909-28569 |
| ಚಾಲಿ | 31809-36599 |
| ಕೆಂಪುಗೋಟು | 30819-34299 |
| ರಾಶಿ | 39619-42509 |
| ಸಿಪ್ಪೆಗೋಟು | 18669-18669 |
| **ಕಾರ್ಕಳ** | |
| ಹೊಸತು | 36000-43000 |
| **ಕುಮಟ** | |
| ಚಿಪ್ಪು | 30189-33019 |
| ಕೋಕ | 14099-18299 |
| ಹಳೆಚಾಲಿ | 42099-43799 |
| ಹೊಸಚಾಲಿ | 36899-39299 |
| **ಕುಂದಾಪುರ** | |
| ಹಳೆಚಾಲಿ | 36000-52000 |
| ಹೊಸಚಾಲಿ | 36000-46000 |
| **ಪುತ್ತೂರು** | |
| ಕೋಕ | 9500-25000 |
| ಹೊಸತು | 30000-43000 |
| **ಶಿವಮೊಗ್ಗ** | |
| ಬೆಟ್ಟೆ | 43099-45589 |
| ಗೊರಬಲು | 16000-34299 |
| ರಾಶಿ | 37699-42099 |
| ಸರಕು | 47899-75909 |
| **ಸಿದ್ದಾಪುರ** | |
| ಬಿಳಿಗೋಟು | 26599-33099 |
| ಕೋಕ | 26199-29089 |
| ಚಾಲಿ | 34199-38099 |
| ಹೊಸಚಾಲಿ | 31901-36799 |
| ಕೆಂಪುಗೋಟು | 29012-29899 |
| ರಾಶಿ | 38099-40509 |
| ತಟ್ಟಿಬೆಟ್ಟೆ | 33699-33699 |
| **ಶಿರಸಿ** | |
| ಬೆಟ್ಟೆ | 31169-38218 |
| ಬಿಳಿಗೋಟು | 22611-34602 |
| ಚಾಲಿ | 35471-38821 |
| ರಾಶಿ | 38591-40899 |
| **ಯಲ್ಲಾಪುರ** | |
| ಬಿಳಿಗೋಟು | 28099-33689 |
| ಕೋಕ | 20212-31099 |
| ಚಾಲಿ | 36069-38839 |
| ಕೆಂಪುಗೋಟು | 31499-31499 |
| ರಾಶಿ | 39479-42869 |
| ತಟ್ಟಿಬೆಟ್ಟೆ | 28099-33689 |
| **ರಾಮನಗರ ರೇಷ್ಮೆ** | |
| ಮಿಶ್ರತಳಿ (ಸಿ.ಬಿ) | 252-408 |
| ದ್ವಿತಳಿ (ಬಿ.ವಿ) | 260-471 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 13500 | 12000 | 12700 | 176 ಸೆಂಟ್ಸ್ |
| ಎಸಿ | 5690 | 4600 | 5100 | ಲಂಡನ್ |
| ಆರ್‌ಪಿ | 6525 | 5700 | 6000 | |
| ಆರ್‌ಸಿ | 3430 | 3350 | 3500 | 1779 ಡಾಲರ್ಸ್ |

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

## ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1450 (1470) |
| ಸೋಯಾ (ರಿಫೈನ್ಡ್) | ₹1400 (1395) |
| ಸೂರ್ಯಕಾಂತಿ (ರಿಫೈನ್ಡ್) | ₹1460 (1460) |
| ಪಾಮೋಲಿನ್ | ₹1220 (1210) |

## ಕೊಬ್ಬರಿ ಧಾರಣೆ

| | |
|---|---|
| ಬೆಂಗಳೂರು | ₹15800-15800 |
| ಅರಸೀಕೆರೆ | ₹14800-15750 |
| ತುರುವೇಕೆರೆ | ₹15800-15800 |

## ಮುಂಬೈ ಧಾರಣೆ

**ಶೇಂಗಾ**

23-07-2021

| | |
|---|---|
| ಜಾವಾ 70/80(ಹೊಸ) | 10150-10200 |
| ಜಾವಾ 80/90(ಹೊಸ) | 9250-9300 |
| ದಪ್ಪ ಮಧ್ಯಪ್ರದೇಶ(ಹೊಸ) | 10000-10100 |
| ದಪ್ಪ ಗುಜರಾತ್(ಹೊಸ) | 9400-9500 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1460 (1480) |
| ಒಂದು ವಾರದ ಡೆಲಿವರಿ | 1445 (1475) |
| ಸೋಯಾ ಕಚ್ಚಾ | 1360 (1347) |
| ಪಾಮ್ ವಾರದ ಡೆಲಿವರಿ | 1218 (1208) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1380 (1380) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
47,600 (47,350)
ಬೆಳ್ಳಿ ಕೆ.ಜಿ
67,000 (66,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಬಯೋಕಾನ್ ಲಾಭ ಶೇ 35ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಜೈವಿಕ ತಂತ್ರಜ್ಞಾನ ವಲಯದ ಪ್ರಮುಖ ಕಂಪನಿಯಾದ ಬಯೋಕಾನ್‌ನ ಜೂನ್ ತ್ರೈಮಾಸಿಕದ ಲಾಭದಲ್ಲಿ ಶೇಕಡ 35.39ರಷ್ಟು ಇಳಿಕೆ ಆಗಿದೆ.

ಕಂಪನಿಯು ಈ ತ್ರೈಮಾಸಿಕದಲ್ಲಿ ₹ 108.4 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು ₹ 167.8 ಕೋಟಿ ಲಾಭ ಗಳಿಸಿತ್ತು.

ಈ ವರ್ಷದ ಜೂನ್ ತ್ರೈಮಾಸಿಕದಲ್ಲಿ ಲಾಭದ ಪ್ರಮಾಣ ಕಡಿಮೆ ಆಗಿರಲು ಮುಖ್ಯ ಕಾರಣ, ಬಯೋಕಾನ್ ಜೊತೆ ನಂಟು ಹೊಂದಿರುವ ಬಿಕಾರಾ ಥೆರಪೆಟಿಕ್ಸ್ ನವೋದ್ಯಮದಲ್ಲಿ ಆಗಿರುವ ನಷ್ಟ ಎಂದು ಕಂಪನಿ ತಿಳಿಸಿದೆ.

**ಮೊದಲನೇ ವರ್ಷದ ಪುಣ್ಯಸ್ಮರಣೆ**

ಶ್ರೀ ಎಚ್. ಪಿ. ದೇಸಿಗೌಡ
(ನಿವೃತ್ತ ಜಿಲ್ಲಾ ನ್ಯಾಯಾಧೀಶರು)
ನಿಧನ 24/07/2020.
ನಿಮ್ಮ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತಿರುವ
ಇಂತಿ ದುಃಖತಪ್ತರು
ಧರ್ಮಪತ್ನಿ ಪುಷ್ಪ ಹಾಗೂ ಕುಟುಂಬವರ್ಗದವರು.

**ಪ್ರಥಮ ಪುಣ್ಯಸ್ಮರಣೆ**

ಶ್ರೀ ಜಿ ರೇಣುಗೋಪಾಲ ರೆಡ್ಡಿ
ನಿಧನ: 24.07.2020
ನೀವು ನಮ್ಮೊಂದಿಗೆ ಇದ್ದರೆ, ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ನಮ್ಮ ಪ್ರತಿ ಕ್ಷಣಗಳು ಇನ್ನೂ ಅದ್ಭುತವಾಗಿರುತ್ತಿದ್ದವು. ನಿಮ್ಮ ಸವಿನೆನಪು ನಮ್ಮ ಹೃದಯಗಳಲ್ಲಿ, ಮನದಾಳದಲ್ಲಿ ಮನೆ ಮಾಡಿದೆ.
ಶ್ರೀ ಹೆಚ್ ಗುರಪ್ಪ ರೆಡ್ಡಿ ಮತ್ತು ಪರಿವಾರ
ಶ್ರೀಮತಿ. ಆರ್ ಅನಿತಾ ಮತ್ತು ಮಕ್ಕಳು
ಫೋನ್:9901215351, 7795998899

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ
**ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**ಬಿಲ್ಡರ್ ಎಸೆನ್ಷಿಯಲ್**

**Water Proofing Materials**

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ, ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

**ರಿಯಲ್ ಎಸ್ಟೇಟ್ ಸೆಲ್ಲಿಂಗ್**

**Mysore**

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

**Industrial & Factory**

**Outskirts**

CONVERTED LAND for sale. NH 75. Nelamangala. 26275 Sq ft. Contact 9591932764 or 9972148777

**ಉದ್ಯೋಗಾವಕಾಶ**

**Drivers**

ಬೈಕ್ ರೈಡರ್ಸ್ ಬೇಕಾಗಿದ್ದಾರೆ, ಸಂಪಾದಿಸಿ ತಿಂಗಳಿಗೆ 30000 ಹಾಗೂ ಬೈಕ್ ಚಲಾಯಿಸಿ ನಿಮ್ಮ ಬಿಡುವಿನ ಸಮಯದಲ್ಲಿ ಖಚಿತಾ ಸಂಪಾದನೆ ಅಧಿಕ ಇನ್ಸೆಂಟಿವ್ ವಿಮೆ ಹಾಗೂ ಅಧಿಕ ಪ್ರಯೋಜನಗಳು ಕೂಡಲೇ ಕರೆ ಮಾಡಿ : 080-41434143

**General**

ತಕ್ಷಣ ಬೇಕಾಗಿದ್ದಾರೆ 7th, ಎಸ್.ಎಸ್.ಎಲ್.ಸಿ, ITI, ಡಿಗ್ರಿಯವರು (ವಿದ್ಯಾರ್ಹತೆಯಿಲದಲ್ಲದವರಿಗೂ) ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. 16,800/- 52,500/- ವಸತಿಯೂಟವಿರುತ್ತದೆ.ಸಂಪರ್ಕಿಸಿ: 8884412822, 8884412622

ಬೇಕಾಗಿದ್ದಾರೆ: ಆಫೀಸ್ ಕೋ-ಆರ್ಡಿನೇಟರ್, ರಿಸೆಪ್ಷನಿಸ್ಟ್, ಫೀಲ್ಡ್ ಕೋ-ಆರ್ಡಿನೇಟರ್. PH: 9741655179, 7337830391

100%ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) ಬೆಂಗಳೂರಿನ Private Limitedಕಂಪನಿಗಳಲ್ಲಿ ಕೆಲಸಮಾಡಲು7th,SSLC,PUC, Degree,Diploma, ITI,BE(Pass/fail) ಆದಂತಹವರು 1684ಯುವಕರು ಪರ್ಮನೆಂಟ್ ಹುದ್ದೆಗಳಿಗೆ ತಕ್ಷಣ ಬೇಕಾಗಿದ್ದಾರೆ(ವಿದ್ಯರ್ಹತೆಯಿಲ್ಲದವರೂ) ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 13,615-24,815/- ಸಂಪರ್ಕಿಸಿ:9900917474, 9900476464

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ 8095344488/ 8095344466

ತಕ್ಷಣ ಬೇಕಾಗಿದ್ದಾರೆ MNCಕಂಪನಿಗಳಿಗೆ SSLC,PUC,ITI Diplomaದವರು ಕೆಲಸಕ್ಕೆ ಬೇಕಾಗಿದ್ದಾರೆ ಉಚಿತ ವಸತಿಯೂಟದೊಂದಿಗೆ ಸಂಬಳ: 15,800 to 45000/- .8904170684, 8884435270

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ದ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800- 45000/-. 9980295449, 9902839010

**Part-Time Jobs**

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

**Wanted**

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 86,000. 7259685221, 7760116548

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

**ಭವಿಷ್ಯ**

**Astrology**

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ ಮೂಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಉಚಿತ ಜ್ಯೋತಿಷ್ಯ, ಶ್ರೀಸಿಗಂದೂರು ಚೌಡೇಶ್ವರಿ ಜ್ಯೋತಿಷ್ಯಾಲಯ ಶ್ರೀ ರಾಘವೇಂದ್ರ ಭಟ್. ವ್ಯಾಪಾರ, ಹಣಕಾಸು, ಮದುವೆ, ಪ್ರೇಮವಿಚಾರ ಶತ್ರುಬಾದೆ,ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9535759222

★॥ಶ್ರೀದುರ್ಗಾದೇವಿ॥★ ಜ್ಯೋತಿಷ್ಯಾಲಯ. ನಿಮ್ಮಯಾವುದೇ ಕಠಿಣಸಮಸ್ಯೆಗಳಿದ್ದರೇ ಶತಸಿದ್ಧ ಪರಿಹಾರ ನೀಡುತ್ತಾರೆ.ಇಂದೇ ಕರೆಮಾಡಿ ಫೋನಿನಲ್ಲಿ ಪ್ರಶ್ನೆ, ಫೋನಿನಲ್ಲಿ ಉತ್ತರ,ಶಾಶ್ವತ ಪರಿಹಾರ. ರಾಮಚಂದ್ರ ಗುರೂಜಿ 8050498041

ನಿಮ್ಮ ನಿಗೂಢ ಹಾಗೂ ಕಠಿಣ ಸಮಸ್ಯೆಗಳಿಗೆ ಕೇವಲ 1 ಗಂಟೆಯಲ್ಲಿ ಪರಿಹಾರ ಇದು ಚಮತ್ಕಾರ ಅಲ್ಲ. ಸಿದ್ಧಿಸಾಧಕರ ಸಾಧನೆ: 9148244231

ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

**HEALTH SPECIAL**

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

ಲೈಂಗಿಕ ರೋಗಗಳು, ಉದ್ರೇಕದ ಸಮಸ್ಯೆ, ಲೈಂಗಿಕ ನಿರಾಸಕ್ತಿ, ನಿದ್ರಾ ಸ್ಖಲನ, ಶೀಘ್ರ ಸ್ಖಲನ, ಲಿಂಗ ಚಿಕ್ಕದಾಗುವುದು, ನರ ದೌರ್ಬಲ್ಯ, ಅವಧಿಗೆ ಮೊದಲೇ ಸ್ಖಲನ, ಆತಂಕ, ದೌರ್ಬಲ್ಯ, ಕಡಿಮೆ ವೀರ್ಯಾಣು, ಮುಷ್ಠಿ ಮೈಥುನದ ಅಡ್ಡಪರಿಣಾಮ
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
100% NO SIDE EFFECTS
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★॥ಓಂಶ್ರೀಕಾಳಿಕಾದೇವಿ॥★ ಜ್ಯೋತಿಷ್ಯಾಲಯ ನಿಮ್ಮಸಮಸ್ಯೆಗಳಾದ ಪ್ರೀತಿಯಲ್ಲಿ ಮೋಸ,ನಂಬಿಕೆಯಲ್ಲಿ ಮೋಸ,ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀಪುರುಷ ವಶೀಕರಣಗಳಿಗೆ 9ಗಂಟೆಯಲ್ಲಿ 100%ಪರಿಹಾರ ಶತಸಿದ್ಧ. ಜಗನ್ನಾಥ್ ಮಂತ್ರವಾದಿ. 9880827222

★॥ಶ್ರೀಅಂಬಾಭವಾನಿದೇವಿ॥★ ಜ್ಯೋತಿಷ್ಯರು ಪ್ರೀತಿಪ್ರೇಮ ವಶಿಕರಣ, ದಾಂಪತ್ಯ, ಸಾಲದಬಾದೆ ಇನ್ನಾವುದೇ ಕಠಿಣ_ಗುಪ್ತ ಸಮಸ್ಯೆಗಳಿಗೆ 5_ನಿಮಿಷಗಳಲ್ಲಿ ಪರಿಹಾರ. ವಶೀಕರಣ_ಸ್ಪೆಷಲಿಸ್ಟ್. 7204848318

**ಪ್ರವಾಸ**

**Travel**

14.08.2021 3ದಿನಗಳ ಉಜ್ಜಯಿನಿ, ಮಹಕಳೇಶ್ವರ, ಓಂಕಾರೇಶ್ವರ. 21.08.2021 3ದಿನಗಳ ಭುವನೇಶ್ವರ್, ಪುರಿಜಗನ್ನಾಥ,ಕೊನಾರ್ಕ್. 21.08.2021 10ದಿನಗಳ ಲೇಹಲಡಾಖ್. 22.08.2021 7ದಿನಗಳ ತಮಿಳುನಾಡು ಸೆಪ್ಟೆಂಬರ್,ಅಕ್ಟೋಬರಿನಲ್ಲಿ 12ದಿನಗಳ ಗುಜರಾತ್/ರಾಜಸ್ಥಾನ್ ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು-40 9880847001, 9342848791

ಕಾಶಿ, ಗಯಾ, ಬುದ್ಧಗಯಾ, ಕೋಲ್ಕತ, ಭುವನೇಶ್ವರ್, ಕೊನಾರ್ಕ್,ಪುರಿಜಗನ್ನಾಥ್, ನವಂಬರ್ ಡಿಸೆಂಬರಿನಲ್ಲಿ. ಪ್ರತಿದಿನ ತಿರುಪತಿ ಪ್ಯಾಕೇಜ್ ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು. 9448294477

**ವಾಹನ**

**Four Wheelers Selling**

**Others**

ಯಶಸ್ಸು ಮೂರು ಚಿನ್ನದ ಆನೆಗಳೊಂದಿಗೆ
Ace GOLD ಪೆಟ್ರೋಲ್ ಮತ್ತು ಡೀಸಲ್ ವಾಹನ ಆಕರ್ಷಕ ಕೊಡುಗೆಗಳೊಂದಿಗೆ

4.99%* ಬಡ್ಡಿದರ 48 ತಿಂಗಳು
ಅಥವಾ
5.99%* ಬಡ್ಡಿದರ 60 ತಿಂಗಳು
ಕೊಡುಗೆಗಳು
₹25 000/-* ದವರೆಗೆ
ಎಕ್ಸ್‌ಚೇಂಜ್
₹12 000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore -7259784441
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 96209 55858
Bagalkot/Bijapur/Gulbarga/ Bidar - 73899 44057
Hubli/Belgaum 91088 64572
* ಷರತ್ತುಗಳು ಅನ್ವಯಿಸುತ್ತದೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

# ಜೊಮ್ಯಾಟೊ ಷೇರು ಮೌಲ್ಯ ಶೇ 66ರಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಜೊಮ್ಯಾಟೊ ಕಂಪನಿಯ ಷೇರುಗಳನ್ನು ಖರೀದಿಸಿದ್ದವರು ಶುಕ್ರವಾರದ ವಹಿವಾಟಿನಲ್ಲಿ ಸಂತಸದ ನಗೆ ಬೀರಿದ್ದಾರೆ. ಅವರ ಹೂಡಿಕೆಯ ಮೊತ್ತವು ಒಂದೇ ದಿನದಲ್ಲಿ ಶೇಕಡ 65ರಷ್ಟು ಹೆಚ್ಚಳವಾಗಿದೆ.

ಹೋಟೆಲ್ ಮತ್ತು ರೆಸ್ಟಾರೆಂಟ್‌ಗಳಿಂದ ಆಹಾರ ವಸ್ತುಗಳನ್ನು ಮನೆ ಬಾಗಿಲಿಗೆ ತಲುಪಿಸುವ ಕಂಪನಿಯಾದ ಜೊಮ್ಯಾಟೊ, ಐಪಿಒ ಸಂದರ್ಭದಲ್ಲಿ ತನ್ನ ಷೇರುಗಳ ಬೆಲೆಯನ್ನು ಗರಿಷ್ಠ ₹ 76ರವರೆಗೆ ನಿಗದಿ ಮಾಡಿತ್ತು. ಶುಕ್ರವಾರ ಬೆಳಿಗ್ಗೆ ಕಂಪನಿಯ ಷೇರುಗಳು, ಷೇರು ಮಾರುಕಟ್ಟೆಗಳಲ್ಲಿ ವಹಿವಾಟು ಆರಂಭಿಸಿದವು.

**ನಾವು ಯಶಸ್ಸು ಕಾಣುತ್ತೇವೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಅತ್ಯುತ್ತಮವಾಗಿ ಕೆಲಸ ಮಾಡುವುದು ಖಂಡಿತ. ನಾವು ತಲುಪಿರುವ ಹಂತವು ಭಾರತದ ಲಕ್ಷಾಂತರ ಜನರಿಗೆ ದೊಡ್ಡ ಕನಸುಗಳನ್ನು ಕಾಣಲು ಸ್ಫೂರ್ತಿ ನೀಡುತ್ತದೆ.**
**ದೀಪಿಂದರ್ ಗೋಯಲ್,** ಜೊಮ್ಯಾಟೊ ಸಿಇಒ

ಷೇರುಗಳು ₹ 115ರಂತೆ ಮುಂಬೈ ಷೇರು ಮಾರುಕಟ್ಟೆ (ಬಿಎಸ್‌ಇ) ಪ್ರವೇಶಿಸಿದವು. ಕೆಲವೇ ಹೊತ್ತಿನಲ್ಲಿ ಷೇರು ಮೌಲ್ಯವು ₹ 138ರವರೆಗೂ ಏರಿಕೆ ಆಗಿತ್ತು.

ದಿನದ ಕೊನೆಯಲ್ಲಿ ಜೊಮ್ಯಾಟೊ ಕಂಪನಿಯ ಪ್ರತಿ ಷೇರಿನ ಬೆಲೆಯು ₹ 125.85 ಆಗಿತ್ತು. ಇದರಿಂದಾಗಿ, ಐಪಿಒ ವೇಳೆ ನಿಗದಿ ಮಾಡಿದ್ದ ಬೆಲೆಗೆ ಹೋಲಿಸಿದರೆ ಜೊಮ್ಯಾಟೊ ಹೂಡಿಕೆದಾರರ ಸಂಪತ್ತು ಒಂದೇ ದಿನದಲ್ಲಿ ಶೇ 65ರಷ್ಟು ಹೆಚ್ಚಳವಾದಂತೆ ಆಗಿದೆ. ಷೇರು ಮಾರುಕಟ್ಟೆ ಪ್ರವೇಶದ ಸಂದರ್ಭದಲ್ಲಿ ಷೇರುಗಳಿಗೆ ಇದ್ದ ಬೆಲೆಗೆ (₹ 115) ಹೋಲಿಸಿದರೆ, ವಹಿವಾಟಿನ ಕೊನೆಯಲ್ಲಿ ಷೇರಿನ ಮೌಲ್ಯವು ಶೇಕಡ 9.43ರಷ್ಟು ಹೆಚ್ಚಳವಾದಂತಾಗಿದೆ.

ಒಂದು ಹಂತದಲ್ಲಿ ಕಂಪನಿಯ ಮಾರುಕಟ್ಟೆ ಮೌಲ್ಯವು ₹ 1 ಲಕ್ಷ ಕೋಟಿಯನ್ನು ದಾಟಿತ್ತು. ದಿನದ ವಹಿವಾಟಿನ ಕೊನೆಯಲ್ಲಿ ಮಾರುಕಟ್ಟೆ ಮೌಲ್ಯವು ₹ 98,731 ಕೋಟಿ ಆಗಿದೆ.

'ನಮ್ಮ ಐಪಿಒಗೆ ಸಿಕ್ಕ ಭಾರಿ ಸ್ಪಂದನವು, ನಾವು ಮಾಡುತ್ತಿರುವ ವಿನಿಯೋಗಗಳನ್ನು ಅರ್ಥ ಮಾಡಿಕೊಳ್ಳುವಂತಹ ಹೂಡಿಕೆದಾರರು ಜಗತ್ತಿನ ಎಲ್ಲೆಡೆಯೂ ಇದ್ದಾರೆ ಎಂಬ ಭರವಸೆಯನ್ನು ನಮಗೆ ನೀಡಿದೆ' ಎಂದು ಜೊಮ್ಯಾಟೊ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ದೀಪಿಂದರ್ ಗೋಯಲ್ ಪ್ರತಿಕ್ರಿಯೆ ನೀಡಿದ್ದಾರೆ.

'ಇದು ನಮ್ಮ ಪಾಲಿಗೆ ಬಹುದೊಡ್ಡ ದಿನ. ಹೊಸ ಆರಂಭದ ದಿನ. ಆದರೆ, ದೇಶದ ಇಡೀ ಇಂಟರ್ನೆಟ್ ವ್ಯವಸ್ಥೆಯ ಪ್ರಯತ್ನಗಳ ಪರಿಣಾಮವಾಗಿ ನಾವು ಇಂದು ಈ ಮಟ್ಟಕ್ಕೆ ಬಂದಿದ್ದೇವೆ' ಎಂದು ಅವರು ಕಂಪನಿಯ ಬ್ಲಾಗ್‌ನಲ್ಲಿ ಬರೆದಿದ್ದಾರೆ.

# ಫಿಗೊ: 2 ಆಟೊಮ್ಯಾಟಿಕ್ ವೇರಿಯೆಂಟ್ ಬಿಡುಗಡೆ

ಬೆಂಗಳೂರು: ಫಿಗೊ ಹ್ಯಾಚ್‌ಬ್ಯಾಕ್ ಮಾದರಿಯ ಎರಡು ಆಟೊಮ್ಯಾಟಿಕ್ ಆವೃತ್ತಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿರುವುದಾಗಿ ಫೋರ್ಡ್ ಇಂಡಿಯಾ ಕಂಪನಿ ತಿಳಿಸಿದೆ.

ಟೈಟಾನಿಯಂ ಮತ್ತು ಟೈಟಾನಿಯಂ+ ಟ್ರಿಮ್ ಆಯ್ಕೆಗಳಲ್ಲಿ ಇವು ಲಭ್ಯವಿವೆ. ಇವುಗಳ ಎಕ್ಸ್‌ ಷೋರೂಂ ಬೆಲೆ ಕ್ರಮವಾಗಿ ₹ 7.75 ಲಕ್ಷ ಮತ್ತು ₹ 8.2 ಲಕ್ಷ. ಹೊಸ ಫಿಗೊ ಎಟಿ ಮಾದರಿಯು 1.2 ಲೀಟರ್ ಪೆಟ್ರೋಲ್ ಎಂಜಿನ್ ಹೊಂದಿದೆ. ಈ ಮಾದರಿಯ ಕಾರುಗಳು ಐದು ಬಣ್ಣಗಳಲ್ಲಿ ಲಭ್ಯವಿರಲಿವೆ ಎಂದು ಕಂಪನಿ ಹೇಳಿದೆ.

ಫೋರ್ಡ್ ಫಿಗೊ ಎಟಿ

ಭಾರತದ ಗ್ರಾಹಕರಿಗೆ ಸೇವೆ ನೀಡಲು ಫೋರ್ಡ್ ಬದ್ಧವಾಗಿದ್ದು, ವಿಶ್ವದರ್ಜೆಯ ಆಟೊಮ್ಯಾಟಿಕ್ ತಂತ್ರಜ್ಞಾನವನ್ನು ಪರಿಚಯಿಸಲು ಹೆಮ್ಮೆ ಇದೆ ಎಂದು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ವಿನಯ್ ರೈನಾ ಹೇಳಿದ್ದಾರೆ.

ರೇನ್ ಸೆನ್ಸಿಂಗ್ ವೈಪ್ಸ್, ಎಲೆಕ್ಟ್ರೋಕ್ರೋಮಿಕ್ ಐಆರ್‌ವಿಎಂ, 7 ಇಂಚಿನ ಟಚ್‌ಸ್ಕ್ರೀನ್ ಇನ್ಫೊಟೇನ್ಮೆಂಟ್ ಸಿಸ್ಟಂ, ಸೈಡ್ ಮತ್ತು ಕರ್ಟೈನ್ ಏರ್‌ಬ್ಯಾಗ್, ಸ್ಟ್ಯಾಂಡರ್ಡ್ ಡ್ಯುಯಲ್ ಏರ್‌ಬ್ಯಾಗ್, ಎಲೆಕ್ಟ್ರಾನಿಕ್ ಸ್ಟೆಬಿಲಿಟಿ ಕಂಟ್ರೋಲ್ ಒಳಗೊಂಡಂತೆ ಹಲವು ವೈಶಿಷ್ಟ್ಯಗಳನ್ನು ಈ ಕಾರು ಹೊಂದಿದೆ.

## ಷೇರು ಮಾರುಕಟ್ಟೆ ಸೂಚ್ಯಂಕ ಏರಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಎಫ್‌ಎಂಸಿಜಿ ಮತ್ತು ಫಾರ್ಮಾ ವಲಯದ ಷೇರುಗಳ ಖರೀದಿ ಹೆಚ್ಚಿದ್ದ ಕಾರಣದಿಂದಾಗಿ ದೇಶದ ಷೇರು ಮಾರುಕಟ್ಟೆ ಸೂಚ್ಯಂಕಗಳು ಶುಕ್ರವಾರ ಏರಿಕೆ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 138 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 32 ಅಂಶ ಏರಿಕೆ ಕಂಡವು. ಸೋಮವಾರದಿಂದ ಶುಕ್ರವಾರದವರೆಗಿನ ಇಡೀ ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 164 ಅಂಶ, ನಿಫ್ಟಿ 67 ಅಂಶ ಇಳಿಕೆ ಕಂಡಂತಾಗಿದೆ.

ಬಿಎಸ್‌ಇ ರಿಯಾಲ್ಟಿ, ಬ್ಯಾಂಕ್, ಎಫ್‌ಎಂಸಿಜಿ, ಹಣಕಾಸು ಮತ್ತು ಲೋಹ ವಲಯದ ಸೂಚ್ಯಂಕಗಳು ಏರಿಕೆ ದಾಖಲಿಸಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 73.78 ಅಮೆರಿಕನ್ ಡಾಲರ್‌ಗೆ ತಲುಪಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 6 ಪೈಸೆಯಷ್ಟು ಹೆಚ್ಚಳವಾಗಿದೆ.

# ಜಮ್ಮು: ಸ್ಫೋಟಕ ಸಾಗಿಸುತ್ತಿದ್ದ ಡ್ರೋನ್ ಹೊಡೆದುರುಳಿಸಿದ ಪೊಲೀಸರು

ಜಮ್ಮು (ಪಿಟಿಐ): ಜಮ್ಮು ಜಿಲ್ಲೆಯ ಅಖನೂರ್ ಪ್ರದೇಶದ ಅಂತರರಾಷ್ಟ್ರೀಯ ಗಡಿ ಭಾಗದ ಸಮೀಪ ಐದು ಕೆ.ಜಿ. ಸುಧಾರಿತ ಸ್ಫೋಟಕ ವಸ್ತುಗಳನ್ನು ಕೊಂಡೊಯ್ಯುತ್ತಿದ್ದ ಡ್ರೋನ್ ಅನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಶುಕ್ರವಾರ ಹೊಡೆದುರುಳಿಸಿದ್ದಾರೆ.

'ಜೈಷ್‌–ಇ–ಮೊಹಮ್ಮದ್ ಉಗ್ರಗಾಮಿ ಸಂಘಟನೆ ಡ್ರೋನ್ ಮೂಲಕ ಅಖನೂರ್ ಪ್ರದೇಶದಲ್ಲಿ ಸ್ಫೋಟಕಗಳನ್ನು ಬೀಳಿಸಲು ಸಂಚು ರೂಪಿಸಿದೆ ಎನ್ನುವ ಖಚಿತ ಮಾಹಿತಿ ಪೊಲೀಸರಿಗೆ ದೊರೆತಿತ್ತು. ಸ್ಫೋಟಕ ವಸ್ತುಗಳನ್ನು ಪ್ಯಾಕ್ ಮಾಡಲಾಗಿತ್ತು. ಕೆಲವು ವೈರ್‌ಗಳನ್ನು ಜೋಡಿಸಿ ಸ್ಫೋಟಗೊಳಿಸುವ ರೀತಿಯಲ್ಲಿ ಸಿದ್ಧಗೊಳಿಸಿ ಡ್ರೋನ್‌ನಲ್ಲಿ ಅಳವಡಿಸಲಾಗಿತ್ತು. ಈ ಕಾರ್ಯಕ್ಕೆ ಹೆಕ್ಸಾ–ಕಾಪ್ಟರ್ ಡ್ರೋನ್ ಬಳಸಲಾಗಿದೆ' ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮುಕೇಶ್ ಸಿಂಗ್ ತಿಳಿಸಿದ್ದಾರೆ.

'ಈ ಡ್ರೋನ್‌ಗೆ ಆರು ರೆಕ್ಕೆಗಳಿದ್ದು, ಜಿಪಿಎಸ್ ಹಾಗೂ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆ ಎನ್ನುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಜೂನ್ 27ರಂದು ಜಮ್ಮುನಲ್ಲಿನ ವಾಯು ಪಡೆ ನೆಲೆ ಮೇಲೆ ದಾಳಿ ನಡೆಸಲು ಬಳಸಿದ್ದ ಡ್ರೋನ್ ಮಾದರಿಯದ್ದೇ ಇದಾಗಿದೆ. ಕೆಲ ದಿನಗಳ ಹಿಂದೆ ಅಖನೂರ್‌ನಲ್ಲಿ ಹೊಡೆದುರುಳಿಸಲಾಗಿದ್ದ ಡ್ರೋನ್‌ನ ಫ್ಲೈಟ್ ಕಂಟ್ರೋಲರ್‌ನ ಸರಣಿ ಸಂಖ್ಯೆಗಿಂತ ಈ ಡ್ರೋನ್‌ನ ಒಂದು ಸಂಖ್ಯೆ ಮಾತ್ರ ವಿಭಿನ್ನವಾಗಿದೆ' ಎಂದು ವಿವರಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಪೊಲೀಸರು ಶುಕ್ರವಾರ ಗುಂಡು ಹಾರಿಸಿ ಹೊಡೆದುರುಳಿಸಿದ ಡ್ರೋನ್

'ತೈವಾನ್ ಮತ್ತು ಹಾಂಗ್‌–ಕಾಂಗ್‌ನಲ್ಲಿ ತಯಾರಿಸಲಾದ ಬಿಡಿಭಾಗಗಳನ್ನು ಬಳಸಿಕೊಂಡು ಈ ಡ್ರೋನ್ ಸಿದ್ಧಪಡಿಸಲಾಗಿದೆ. ಜೈಷ್‌–ಇ–ಮೊಹಮ್ಮದ್ ಸಂಘಟನೆ ಇದೇ ರೀತಿಯಲ್ಲಿ ಹಲವು ಡ್ರೋನ್‌ಗಳನ್ನು ಸಿದ್ಧಪಡಿಸಿರುವ ಸಾಧ್ಯತೆ ಇದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಚೀನಾ ಮತ್ತು ಟರ್ಕಿಯಿಂದ ಪಾಕಿಸ್ತಾನವು ಡ್ರೋನ್‌ಗಳನ್ನು ಖರೀದಿಸುತ್ತಿದೆ. ಜಮ್ಮು ಗಡಿಯಲ್ಲಿ ಶಸ್ತ್ರಾಸ್ತ್ರಗಳು ಮತ್ತು ಮಾದಕ ದ್ರವ್ಯಗಳನ್ನು ಡ್ರೋನ್ ಮೂಲಕ ಬೀಳಿಸುವ ಕೃತ್ಯಗಳು ಕಳೆದ ವರ್ಷದಿಂದ ಹೆಚ್ಚಾಗಿವೆ. 2019ರಿಂದ ಪಾಕಿಸ್ತಾನ ಗಡಿಯಲ್ಲಿ ಸುಮಾರು 325 ಡ್ರೋನ್‌ಗಳು ಕಾಣಿಸಿಕೊಂಡಿವೆ.

# ಕ್ರಿಕೆಟ್; ಭಾರತದ ಸಾಧಾರಣ ಮೊತ್ತ

ಕೊಲಂಬೊ (ಪಿಟಿಐ): ಆತಿಥೇಯ ಬಳಗದ ಧನಜಂಯ ಡಿಸಿಲ್ವಾ ಮತ್ತು ಪ್ರವೀಣ ಜಯವಿಕ್ರಂ ಅವರ ಉತ್ತಮ ಬೌಲಿಂಗ್‌ನಿಂದಾಗಿ ಭಾರತ ತಂಡವು ಶುಕ್ರವಾರ ಇಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಸಾಧಾರಣ ಮೊತ್ತ ಗಳಿಸಿತು.

ಮಳೆಯಿಂದಾಗಿ ವಿಳಂಬವಾದ ಪಂದ್ಯದ ಇನಿಂಗ್ಸ್ ಅನ್ನು 47 ಓವರ್‌ಗಳಿಗೆ ನಿಗದಿಪಡಿಸಲಾಗಿದೆ. ಟಾಸ್ ಗೆದ್ದ ಭಾರತವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 43.1 ಓವರ್‌ಗಳಲ್ಲಿ 225 ರನ್ ಗಳಿಸಿ ಆಲೌಟ್ ಆಯಿತು.

ಒಂದು ರನ್ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡ ಪೃಥ್ವಿ ಶಾ (49 ರನ್) ಮತ್ತು ಸಂಜು ಸ್ಯಾಮ್ಸನ್ (46ರನ್) ಎರಡನೇ ವಿಕೆಟ್ ಜೊತೆಯಾಟದಲ್ಲಿ 70 ರನ್ ಸೇರಿಸಿದರು. ಆದರೆ, ನಾಯಕ ಶಿಖರ್ ಧವನ್, ಮನೀಷ್ ಪಾಂಡೆ, ಪದಾರ್ಪಣೆ ಮಾಡಿದ ನಿತೀಶ್ ರಾಣಾ, ಕನ್ನಡಿಗ ಕೃಷ್ಣಪ್ಪ ಗೌತಮ್ ಅವರು ಉತ್ತಮ ಕಾಣಿಕೆ ನೀಡುವಲ್ಲಿ ವಿಫಲರಾದರು.

ಪೃಥ್ವಿ ಶಾ ಮತ್ತು ಸೂರ್ಯಕುಮಾರ್ ಯಾದವ್

ಮುಂಬೈಕರ್ ಸೂರ್ಯಕುಮಾರ್ ಯಾದವ್ (40;37ಎ) ಭರವಸೆ ಮೂಡಿಸುವ ಆಟವಾಡಿದರು. ಆದರೆ ಅರ್ಧಶತಕ ಪೂರೈಸಲು ಅವರಿಗೆ ಸಾಧ್ಯವಾಗಲಿಲ್ಲ. ಎಡಗೈ ಸ್ಪಿನ್ನರ್ ಜಯವಿಕ್ರಂ ಅವರು ಸ್ವಲ್ಪ ದುಬಾರಿಯಾದರೂ ಮೂರು ಪ್ರಮುಖ ವಿಕೆಟ್‌ಗಳನ್ನು ಗಳಿಸಿದರು.

ಸಂಜು ಸ್ಯಾಮ್ಸನ್, ಪಾಂಡೆ ಮತ್ತು ಹಾರ್ದಿಕ್ ಪಾಂಡ್ಯ ವಿಕೆಟ್‌ಗಳನ್ನು ಅವರು ಗಳಿಸಿದರು. ಇನ್ನೊಂದೆಡೆ ಧನಂಜಯ ಅವರು ಸೂರ್ಯ, ರಾಣಾ ಮತ್ತು ಗೌತಮ್ ವಿಕೆಟ್‌ಗಳನ್ನು ಕಬಳಿಸಿ ಮಧ್ಯಮಕ್ರಮಾಂಕಕ್ಕೆ ಪೆಟ್ಟುಕೊಟ್ಟರು.

ಇದರಿಂದಾಗಿ ಭಾರತ ತಂಡವು ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ.

**ಐವರು ಪದಾರ್ಪಣೆ:** ಈ ಪಂದ್ಯದಲ್ಲಿ ಕೃಷ್ಣಪ್ಪ ಗೌತಮ್ ಸೇರಿದಂತೆ ಐವರು ಆಟಗಾರರಿಗೆ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ ಅವಕಾಶ ಲಭಿಸಿತು.

ಎಡಗೈ ಬ್ಯಾಟ್ಸ್‌ಮನ್ ನಿತೀಶ್ ರಾಣಾ, ಸ್ಪಿನ್ನರ್ ರಾಹುಲ್ ಚಾಹರ್, ಎಡಗೈ ಮಧ್ಯಮವೇಗಿ ಚೇತನ್ ಸಕಾರಿಯಾ, ಮತ್ತು ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ತಮ್ಮ ಚೊಚ್ಚಲ ಪಂದ್ಯ ಆಡಿದರು.

### ಪೆಗಾಸಸ್ ಗೂಢಚರ್ಯೆ: ರಾಹುಲ್ ಗಾಂಧಿ ಆರೋಪ, ಬಿಜೆಪಿ ತಿರುಗೇಟು

# ‘ಮೋದಿ, ಶಾ ಎಸಗಿದ್ದು ದೇಶದ್ರೋಹ’

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ದೇಶದ ವಿರುದ್ಧ, ದೇಶದ ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ಮತ್ತು ಪ್ರಜಾಪ್ರಭುತ್ವದ ವಿರುದ್ಧ ಪೆಗಾಸಸ್ ಕಣ್ಗಾವಲು ತಂತ್ರಾಂಶವನ್ನು ಬಳಸಿದ್ದಾರೆ. ಈ ಕೃತ್ಯವನ್ನು ದೇಶದ್ರೋಹ ಎಂದಷ್ಟೇ ಕರೆಯಬಹುದು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ತಮ್ಮ ಫೋನ್‌ಗಳನ್ನೂ ಕದ್ದಾಲಿಸಲಾಗುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಪೆಗಾಸಸ್ ಗೂಢಚರ್ಯೆಯನ್ನು ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಿ ಸಂಸತ್ ಭವನದ ಹೊರಗೆ ವಿಜಯ್ ಚೌಕದಲ್ಲಿ ವಿರೋಧ ಪಕ್ಷಗಳು ನಡೆಸಿದ ಪ್ರತಿಭಟನೆ ವೇಳೆ ರಾಹುಲ್ ಮಾತನಾಡಿದ್ದಾರೆ.

‘ಪೆಗಾಸಸ್ ತಂತ್ರಾಂಶವನ್ನು ಇಸ್ರೇಲ್ ಸರ್ಕಾರವು ಒಂದು ಶಸ್ತ್ರ ಎಂದು ವರ್ಗೀಕರಿಸಿದೆ. ಆ ಶಸ್ತ್ರವನ್ನು ಭಯೋತ್ಪಾದಕರ ವಿರುದ್ಧ ಮಾತ್ರ ಬಳಸಬೇಕು. ಆದರೆ ನಮ್ಮ ಪ್ರಧಾನಿ ಮತ್ತು ಗೃಹ ಸಚಿವರು ಈ ಶಸ್ತ್ರವನ್ನು ದೇಶದ ರಾಜ್ಯಗಳು, ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ಬಳಸಿದ್ದಾರೆ. ಈ ಶಸ್ತ್ರವನ್ನು ರಾಜಕೀಯವಾಗಿ ಬಳಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಈ ಶಸ್ತ್ರವನ್ನು ಅವರು ಬಳಸಿದ್ದಾರೆ’ ಎಂದು ರಾಹುಲ್ ಆರೋಪಿಸಿದ್ದಾರೆ.

‘ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದದ ತನಿಖೆಯ ಹಾದಿ ತಪ್ಪಿಸುವ ಉದ್ದೇಶದಿಂದಲೇ ಪೆಗಾಸಸ್ ಅನ್ನು ಸುಪ್ರೀಂ ಕೋರ್ಟ್ ಅಧಿಕಾರಿಗಳ ವಿರುದ್ಧ ಬಳಸಲಾಗಿದೆ. ಪೆಗಾಸಸ್ ಅನ್ನು ಯಾರೋ ವ್ಯಕ್ತಿ ಖರೀದಿಸಲು ಮತ್ತು ಬಳಕೆಗೆ ಅನುಮತಿ ನೀಡಲು ಸಾಧ್ಯವಿಲ್ಲ. ಸೇನೆಯು ಸಹ ಇದನ್ನು ನೇರವಾಗಿ ಖರೀದಿಸಲು ಸಾಧ್ಯವಿಲ್ಲ. ಇಸ್ರೇಲ್ ಸರ್ಕಾರ ಮಾತ್ರವೇ ಬೇರೆ ಸರ್ಕಾರಕ್ಕೆ ಇದನ್ನು ಮಾರಾಟ ಮಾಡಲು ಸಾಧ್ಯ. ಇದನ್ನು ಬಳಸುವ ದೇಶದ ಪ್ರಧಾನಿ ಮತ್ತು ಗೃಹ ಸಚಿವರಷ್ಟೇ ಪೆಗಾಸಸ್ ಬಳಕೆಗೆ ಅನುಮತಿ ನೀಡಲು ಸಾಧ್ಯ. ಹೀಗಾಗಿ ಗೃಹ ಸಚಿವ ಅಮಿತ್ ಶಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಮತ್ತು ಮೋದಿ ಮತ್ತು ಶಾ ಇಬ್ಬರ ವಿರುದ್ಧ ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಯಬೇಕು’ ಎಂದು ರಾಹುಲ್ ಆಗ್ರಹಿಸಿದ್ದಾರೆ.

**ರಫೇಲ್ ಸತ್ಯ ಹೊರಗೆ ಬರಲಿದೆ:** ‘ರಫೇಲ್ ಯುದ್ಧವಿಮಾನ ಖರೀದಿ ಒಪ್ಪಂದವು ಫ್ರಾನ್ಸ್ ಸರ್ಕಾರ ಮತ್ತು ಭಾರತ ಸರ್ಕಾರದ ಮಧ್ಯೆ ನಡೆಯಿತು. ಆದರೆ ಒಪ್ಪಂದದ ಸಭೆಯಲ್ಲಿ ಅನಿಲ್ ಅಂಬಾನಿ ಇದ್ದರು. ನಾನು ಸತ್ಯ ಹೇಳಿದಾಗ ಯಾರೂ ನಂಬಲಿಲ್ಲ. ನನ್ನನ್ನು ಯಾರೂ ಬೆಂಬಲಿಸಲಿಲ್ಲ. ಆದರೆ ಈಗ ಒಂದೊಂದೇ ಸತ್ಯ ಹೊರಗೆ ಬರುತ್ತಿದೆ’ ಎಂದು ರಾಹುಲ್ ಹೇಳಿದ್ದಾರೆ.

‘ನೀವು ಹಣಕೊಟ್ಟು ಎಲ್ಲವನ್ನೂ ಖರೀದಿಸಲು ಸಾಧ್ಯವಿಲ್ಲ ಮತ್ತು ಎಲ್ಲವನ್ನೂ ಹತ್ತಿಕ್ಕಲು ಸಾಧ್ಯವಿಲ್ಲ. ರಫೇಲ್ ಖರೀದಿ ಒಪ್ಪಂದಕ್ಕೆ ಸಂಬಂಧಿಸಿದಂತೆ ಫ್ರಾನ್ಸ್‌ನಲ್ಲಿ ತನಿಖೆ ಆರಂಭವಾಗಿದೆ. ರಫೇಲ್ ಒಪ್ಪಂದದಲ್ಲಿನ ಭ್ರಷ್ಟಾಚಾರಕ್ಕೆ ನಮ್ಮ ಪ್ರಧಾನಿಯೇ ನೇರ ಹೊಣೆ ಎಂಬುದು ನಿಮಗೆಲ್ಲರಿಗೂ ತಿಳಿಯಲಿದೆ’ ಎಂದು ರಾಹುಲ್ ಹೇಳಿದ್ದಾರೆ.

ಸಂಸತ್ ಭವನದ ಹೊರಗೆ ಗಾಂಧಿ ಪ್ರತಿಮೆಯ ಎದುರು ವಿರೋಧ ಪಕ್ಷಗಳ ನಾಯಕರು ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

## ‘ನನ್ನ ಫೋನ್ ಕದ್ದಾಲಿಸಲಾಗುತ್ತಿದೆ’

‘ನನ್ನ ಎಲ್ಲಾ ಫೋನ್‌ಗಳನ್ನು ಕದ್ದಾಲಿಸಲಾಗುತ್ತಿದೆ. ಗುಪ್ತಚರ ಇಲಾಖೆ ಅಧಿಕಾರಿಗಳು ನನಗೆ ಮತ್ತು ನನ್ನ ಸ್ನೇಹಿತರಿಗೆ ಕರೆ ಮಾಡುತ್ತಾರೆ. ನಿಮ್ಮ ಫೋನ್‌ಗಳನ್ನು ಕದ್ದಾಲಿಸುತ್ತಿದ್ದೇವೆ, ಎಚ್ಚರಿಕೆಯಿಂದಿರಿ ಎಂದು ಮಾಹಿತಿ ನೀಡುತ್ತಾರೆ. ನಾನು ಏನು ಮಾತನಾಡುತ್ತೇನೆ, ಏನು ಹೇಳುತ್ತೇನೆ ಎಂಬುದನ್ನು ನನ್ನ ಭದ್ರತಾ ಸಿಬ್ಬಂದಿ ಅವರ ಹಿರಿಯ ಅಧಿಕಾರಿಗಳಿಗೆ ಹೇಳಲೇಬೇಕು. ನನ್ನ ಫೋನ್ ಅನ್ನು ಕದ್ದಾಲಿಸುತ್ತಿಲ್ಲ ಎಂಬ ಭ್ರಮೆಯಲ್ಲಿ ನಾನು ಇಲ್ಲ’ ಎಂದು ರಾಹುಲ್ ಹೇಳಿದ್ದಾರೆ.

‘ಇದು ರಾಹುಲ್ ಗಾಂಧಿಯ ಖಾಸಗಿತನದ ವಿಷಯವಲ್ಲ. ಬದಲಿಗೆ ಜನರ ಧ್ವನಿಯನ್ನು ಹತ್ತಿಕ್ಕುತ್ತಿರುವ ವಿಚಾರ. ನಾನು ಪೆಗಾಸಸ್ ಗೂಢಚರ್ಯೆಯ ಸಂಭಾವ್ಯ ಗುರಿ ಅಲ್ಲ. ನನ್ನ ಫೋನ್‌ಗಳನ್ನು ಕದ್ದಾಲಿಸುತ್ತಿರುವುದು ನಿಜ’ ಎಂದು ಅವರು ಆರೋಪಿಸಿದ್ದಾರೆ.

### ‘ಕಾನೂನುಬಾಹಿರವಾಗಿ ಕದ್ದಾಲಿಸಿಲ್ಲ’

‘ಬಿಜೆಪಿ ಸರ್ಕಾರವು ಯಾರ ಫೋನನ್ನೂ ಕಾನೂನುಬಾಹಿರವಾಗಿ ಕದ್ದಾಲಿಸಿಲ್ಲ, ಗೂಢಚರ್ಯೆ ನಡೆಸಿಲ್ಲ. ರಾಹುಲ್ ಗಾಂಧಿ ಅವರು ತಮ್ಮ ಫೋನ್ ಅನ್ನು ಕದ್ದಾಲಿಸಲಾಗಿದೆ ಎಂದಿದ್ದಾರೆ. ಅದು ನಿಜವೇ ಆಗಿದ್ದರೆ ಅವರು ತಮ್ಮ ಫೋನ್ ಅನ್ನು ತನಿಖಾ ಸಂಸ್ಥೆಗೆ ಒಪ್ಪಿಸಲಿ. ಭಾರತೀಯ ದಂಡ ಸಂಹಿತೆಯ ನಿಯಮಗಳ ಪ್ರಕಾರ ತನಿಖೆ ನಡೆಯಲಿದೆ’ ಎಂದು ಬಿಜೆಪಿ ವಕ್ತಾರ ರಾಜ್ಯವರ್ಧನ್ ಸಿಂಗ್ ರಾಥೋಡ್ ಸವಾಲು ಹಾಕಿದ್ದಾರೆ.

### ದಿನದ ಬೆಳವಣಿಗೆ

- ಪೆಗಾಸಸ್ ಗೂಢಚರ್ಯೆಯನ್ನು ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಿ ಸಂಸತ್ ಭವನದ ಹೊರಗೆ ವಿರೋಧ ಪಕ್ಷಗಳ ಪ್ರತಿಭಟನೆ
- ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ದೇಶದ ಹಲವೆಡೆ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ
- ಜಮ್ಮು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ, ಹುರಿಯತ್ ನಾಯಕರು, ಸಾಮಾಜಿಕ ಕಾರ್ಯಕರ್ತರು ಮತ್ತು ಸ್ಥಳೀಯ ಪತ್ರಕರ್ತರು ಸೇರಿ 25 ಜನರ ಫೋನ್ ಸಂಖ್ಯೆಯು ಪೆಗಾಸಸ್ ಗೂಢಚರ್ಯೆ ಪಟ್ಟಿಯಲ್ಲಿದೆ ಎಂದು ದಿ ವೈರ್ ವರದಿ ಮಾಡಿದೆ
- ರಿಲಯನ್ಸ್ ಮುಖ್ಯಸ್ಥ ಅನಿಲ್ ಅಂಬಾನಿ ಅವರು ಮತ್ತು ಅವರ ಆಪ್ತ ಸಹಾಯಕರ ಫೋನ್ ಸಂಖ್ಯೆಯು ಪೆಗಾಸಸ್ ಗೂಢಚರ್ಯೆಯ ಪಟ್ಟಿಯಲ್ಲಿದೆ ಎಂದು ದಿ ವೈರ್ ವರದಿ ಮಾಡಿದೆ
- ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಗೂಢಚರ್ಯೆ ನಡೆಸಲು ಭಾರತ ಸರ್ಕಾರ ಪೆಗಾಸಸ್ ಬಳಸಿದೆ. ಈ ಬಗ್ಗೆ ತನಿಖೆಗೆ ನಡೆಸಿ ಎಂದು ಪಾಕಿಸ್ತಾನವು ವಿಶ್ವಸಂಸ್ಥೆಗೆ ಪತ್ರ ಬರೆದಿದೆ

**ಪೆಗಾಸಸ್ ಅನ್ನು ನಾವು ಖರೀದಿಸಿಲ್ಲ ಎಂದು ಸರ್ಕಾರ ಈವರೆಗೆ ಹೇಳಿಲ್ಲ. ಅದನ್ನು ಖರೀದಿಸಿರುವುದೇ ಆದರೆ, ದೇಶದ ಯಾವ ಏಜೆನ್ಸಿ ಅದನ್ನು ಖರೀದಿಸಿದೆ ಎಂಬುದನ್ನು ಬಹಿರಂಗಪಡಿಸಲಿ**
**ಪವನ್ ಖೇರಾ, ಕಾಂಗ್ರೆಸ್ ವಕ್ತಾರ**

**2017ರಲ್ಲಿ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಭೇಟಿ ನೀಡಿ ನೆತನ್ಯಾಹು ಜತೆ ಓಡಾಡಿದ್ದರು. ಕಣ್ಗಾವಲು ನಡೆಸುವ ಒಪ್ಪಂದ ಕುದುರಿಸಲು ಹೋಗಿದ್ದರೆ? ಸೀತಾರಾಂ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ**

### ಶಂತನು ಅಮಾನತು

ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರಿಂದ ಹೇಳಿಕೆ ಪತ್ರವನ್ನು ರಾಜ್ಯಸಭೆಯಲ್ಲಿ ಕಸಿದುಕೊಂಡು, ಹರಿದುಹಾಕಿದ್ದ ಟಿಎಂಸಿ ಸಂಸದ ಶಂತನು ಸೆನ್ ಅವರನ್ನು ಸಂಸತ್ ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡಲಾಗಿದೆ.

ಶುಕ್ರವಾರ ಬೆಳಿಗ್ಗೆಯೇ ಸರ್ಕಾರವು, ‘ಶಂತನು ಸೆನ್ ಅವರನ್ನು ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡಬೇಕು’ ಎಂದು ನಿರ್ಣಯ ಮಂಡಿಸಿತು. ಈ ನಿರ್ಣಯವನ್ನು ಧ್ವನಿಮತದ ಮೂಲಕ ಅಂಗೀಕರಿಸಿ, ಶಂತನು ಅವರನ್ನು ಅಮಾನತು ಮಾಡಲಾಯಿತು.

‘ಶಂತನು ಸೆನ್ ನಿಮ್ಮ ವರ್ತನೆಯಿಂದ ಸಂಸದೀಯ ನಡವಳಿಕೆಗೆ ಧಕ್ಕೆಯಾಗಿದೆ. ನಿಮ್ಮನ್ನು ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡಲಾಗಿದೆ. ನೀವು ಸದನದಿಂದ ಹೊರ ನಡೆಯಿರಿ’ ಎಂದು ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ಆದೇಶಿಸಿದರು. ಶಂತನು ಅವರು ಸದನದಿಂದ ಹೊರ ನಡೆಯಲು ನಿರಾಕರಿಸಿದರು.

‘ಅಮಾನತು ನಿರ್ಣಯವನ್ನು ಸದನದ ದಿನದ ಕಲಾಪ ಪಟ್ಟಿಯಲ್ಲಿ ಸೇರಿಸದೆಯೇ ಮಂಡಿಸಲಾಗಿದೆ.’ ಎಂದು ಟಿಎಂಸಿ ಸಂಸದರು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯ ಕಾರಣ ದಿನದಮಟ್ಟಿಗೆ ಕಲಾಪವನ್ನು ಮುಂದೂಡಲಾಯಿತು. ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟನೆ ನಡೆಸಿದ ಕಾರಣ ಲೋಕಸಭೆಯಲ್ಲೂ ಶುಕ್ರವಾರ ಕಲಾಪ ನಡೆಯಲಿಲ್ಲ.

### ‘ಬಜೆಟ್ ಏರಿಸಿದ್ದು ಏಕೆ?’

‘2017-18ನೇ ಸಾಲಿನಲ್ಲಿ ರಾಷ್ಟ್ರೀಯ ಭದ್ರತಾ ಸಮಿತಿಯ ಬಜೆಟ್ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಪೆಗಾಸಸ್ ಖರೀದಿಸಲು ಈ ಹಣ ಬಳಕೆಯಾಗಿದೆಯೇ? ಪೆಗಾಸಸ್ ಖರೀದಿಸಲೆಂದೇ ಸಮಿತಿಯ ಬಜೆಟ್ ಅನ್ನು ಏರಿಕೆ ಮಾಡಲಾಯಿತೆ’ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

‘2014-15ರಲ್ಲಿ ಈ ಸಮಿತಿಯ ಬಜೆಟ್ ₹ 44.46 ಕೋಟಿಯಷ್ಟು ಇತ್ತು. 2016-17ರಲ್ಲಿ ಅದನ್ನು ₹ 33 ಕೋಟಿಗೆ ಇಳಿಸಲಾಗಿತ್ತು. 2017-18ರಲ್ಲಿ ಈ ಸಮಿತಿಯ ಬಜೆಟ್ ಅನ್ನು ₹ 333 ಕೋಟಿಗೆ ಏರಿಕೆ ಮಾಡಲಾಗಿದೆ. ಅದೇ ವರ್ಷ ರಾಷ್ಟ್ರೀಯ ಭದ್ರತಾ ಸಮಿತಿಯಲ್ಲಿ ಸೈಬರ್ ಭದ್ರತೆ ಸಂಶೋಧನೆ ಮತ್ತು ಅಭಿವೃದ್ಧಿ ಘಟಕವನ್ನು ಆರಂಭಿಸಲಾಗಿದೆ. ಅದೇ ವರ್ಷದಿಂದ ಪೆಗಾಸಸ್ ಗೂಢಚರ್ಯೆ ಆರಂಭವಾಗಿದೆ. ಪೆಗಾಸಸ್ ಖರೀದಿಸಲೆಂದೇ ಇಷ್ಟು ದೊಡ್ಡ ಮೊತ್ತವನ್ನು ನೀಡಲಾಗಿದೆ ಎಂಬುದು ಸ್ಪಷ್ಟ’ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಆಪಾದಿಸಿದ್ದಾರೆ.

### 'ಗೂಢಚರ್ಯೆಗೆ ₹ 100 ಕೋಟಿ ಬಳಕೆ'

ಪೆಗಾಸಸ್ ಕುತಂತ್ರಾಂಶ ಖರೀದಿಸಲು ಇಸ್ರೇಲ್‌ನ ಎನ್‌ಎಸ್‌ಒ ಸಂಸ್ಥೆಗೆ ಕೇಂದ್ರ ಸರ್ಕಾರ 2017–18ನೇ ಸಾಲಿನಲ್ಲಿ ಸುಮಾರು ₹ 100 ಕೋಟಿ ನೀಡಿದೆ ಎಂದು ವಕೀಲ ಪ್ರಶಾಂತ್ ಭೂಷಣ್ ಅನುಮಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು ‘2016–17ನೇ ಸಾಲಿನಲ್ಲಿ ಎನ್‌ಎಸ್‌ಎ ಬಜೆಟ್ ₹ 33.17 ಕೋಟಿ ಇತ್ತು. ಮರುವರ್ಷದ ಬಜೆಟ್‌ನಲ್ಲಿ ಸುಮಾರು ₹ 300 ಕೋಟಿಯಷ್ಟು ಅನುದಾನ ಹೆಚ್ಚಾಗಿದೆ. ಸೈಬರ್ ಭದ್ರತೆ ಸಂಶೋಧನೆ ಮತ್ತು ಅಭಿವೃದ್ಧಿ(ಆರ್ ಆ್ಯಡ್ ಡಿ) ಅಡಿ ₹ 300 ಕೋಟಿಯನ್ನು ಹೆಚ್ಚುವರಿಯಾಗಿ ಪಡೆದಿದೆ. ಅದೇ ವರ್ಷ ₹ 100 ಕೋಟಿಯನ್ನು ವಿಪಕ್ಷ ನಾಯಕರು, ಪತ್ರಕರ್ತರು, ನ್ಯಾಯಮೂರ್ತಿಗಳು, ಚುನಾವಣಾ ಆಯುಕ್ತರ ಮೇಲೆ ಸೈಬರ್ ದಾಳಿ ನಡೆಸಲು ಬಳಸಲಾಗಿದೆ’ ಎಂದಿದ್ದಾರೆ.

**ಭ್ರಷ್ಟರು ಮಾತ್ರವೇ ಮೋದಿಗೆ ಹೆದರಬೇಕು. ನೀವು ಭ್ರಷ್ಟರಲ್ಲದೇ ಇದ್ದರೆ ಮೋದಿಗೆ ಹೆದರುವ ಅವಶ್ಯಕತೆ ಇಲ್ಲ. ಮೋದಿಯತ್ತ ನೋಡಿ ನಗೆ ಬೀರಬಹುದು**
**ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

**ಭ್ರಷ್ಟರು ಮೋದಿಗೆ ಹೆದರಬೇಕು ಎಂಬುದು ರಾಹುಲ್ ಗಾಂಧಿ ಅವರಿಗೆ ಅರ್ಥವಾಗಿದೆ. ರಾಹುಲ್ ಅವರ ಮಾತನ್ನು ಮೋದಿಯವರ ಪ್ರಶಂಸೆ ಎಂದು ಸ್ವೀಕರಿಸಬಹುದು**
**ಹಿಮಂತಾ ಬಿಸ್ವಾ ಶರ್ಮಾ,** ಅಸ್ಸಾಂ ಮುಖ್ಯಮಂತ್ರಿ

## ಪಟಾಕಿಗಳ ದುಷ್ಪರಿಣಾಮ ತಿಳಿಯಲು ಐಐಟಿ ಬೇಕೆ: ‘ಸುಪ್ರೀಂ’ ಪ್ರಶ್ನೆ

ನವದೆಹಲಿ (ಪಿಟಿಐ): ‘ಪಟಾಕಿಗಳ ಬಳಕೆಯಿಂದ ಆರೋಗ್ಯದ ಮೇಲಾಗುವ ಪ್ರತಿಕೂಲ ಪರಿಣಾಮಗಳನ್ನು ತಿಳಿಯಲು ನಿಮಗೆ ಐಐಟಿಯ ಅಧ್ಯಯನ ಅಗತ್ಯವಿದೆಯೇ? ದೀಪಾವಳಿ ಹಬ್ಬದ ಸಂದರ್ಭದಲ್ಲಿ ಏನಾಗುತ್ತದೆ ಎಂದು ದೆಹಲಿಯಲ್ಲಿ ವಾಸವಿರುವ ಯಾರಿಗಾದರೂ ಕೇಳಿ’ ಎಂದು ಸುಪ್ರೀಂ ಕೋರ್ಟ್ ಕಟುವಾಗಿ ಹೇಳಿದೆ.

ವಾಯುಮಾಲಿನ್ಯ ಹಿನ್ನೆಲೆಯಲ್ಲಿ ಪಟಾಕಿಗಳ ಮಾರಾಟ, ಬಳಕೆಯನ್ನು ನಿಷೇಧಿಸಿದ್ದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಆದೇಶವನ್ನು ನ್ಯಾಯಮೂರ್ತಿಗಳಾದ ಎ.ಎಂ. ಖಾನ್‌ವಿಲ್ಕರ್ ಮತ್ತು ಸಂಜೀವ್ ಖನ್ನಾ ಅವರಿದ್ದ ಪೀಠ ಸಮರ್ಥಿಸಿದೆ. ‘ಈ ಆದೇಶ ಸ್ಪಷ್ಟವಾಗಿದೆ. ವಿಚಾರಣೆ ಅಗತ್ಯವಿಲ್ಲ’ ಎಂದೂ ಹೇಳಿದೆ.

ಪಟಾಕಿ ಮಾರಾಟಗಾರರನ್ನು ಪ್ರತಿನಿಧಿಸಿದ್ದ ವಕೀಲ ಸಾಜ್ ದೀಪಕ್ ಅವರು, ’ಐಐಟಿ ಕಾನ್ಪುರದ ವರದಿಯ ಪ್ರಕಾರ, ವಾಯುಮಾಲಿನ್ಯಕ್ಕೆ ಕಾರಣವಾಗುವ 15 ಅಂಶಗಳಲ್ಲಿ ಪಟಾಕಿಗಳು ಸೇರಿಲ್ಲ’ ಎಂದು ಗಮನಸೆಳೆದರು.

ಇದಕ್ಕೆ ಮೇಲಿನಂತೆ ಪ್ರತಿಕ್ರಿಯಿಸಿದ ಪೀಠವು, ‘ವಾಯುಮಾಲಿನ್ಯ ಪ್ರಮಾಣವು ಹೆಚ್ಚಿರುವ ನಗರಗಳಲ್ಲಿ ಕೇವಲ ಮಾರಾಟ ಮತ್ತು ಬಳಕೆಯನ್ನು ಮಾತ್ರ ನಿಷೇಧಿಸಲಾಗಿದೆ. ಉತ್ಪಾದನೆಯನ್ನು ಅಲ್ಲ. ವಾಯುಮಾಲಿನ್ಯ ಪ್ರಮಾಣವನ್ನು ಆಧರಿಸಿ ಸ್ಥಳೀಯ ಸಂಸ್ಥೆಗಳು ತೀರ್ಮಾನ ಮಾಡಬಹುದಾಗಿದೆ’ ಎಂಬುದನ್ನು ಉಲ್ಲೇಖಿಸಿತು.

ದೆಹಲಿ–ಎನ್‌ಸಿಆರ್ ಮತ್ತು ಇತರೆ ನಗರಗಳಲ್ಲಿ ಪಟಾಕಿಗಳ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಿದ್ದ ಎನ್‌ಜಿಟಿ) ಆದೇಶವನ್ನು ಪ್ರಶ್ನಿಸಿ ಈ ಅರ್ಜಿಯನ್ನು ಸಲ್ಲಿಸಲಾಗಿತ್ತು.

ವಾಯುಮಾಲಿನ್ಯ ಪ್ರಮಾಣ ಗಂಭೀರವಾಗಿದ್ದರೆ ಪಟಾಕಿಗಳ ಮಾರಾಟ, ಬಳಕೆಗೆ ಅವಕಾಶವಿಲ್ಲ. ಕಡಿಮೆ ಇದ್ದರೆ ಹಸಿರು ಪಟಾಕಿಗಳ ಮಾರಾಟಕ್ಕೆ ಅವಕಾಶವನ್ನು ನೀಡಬಹುದಾಗಿದೆ ಎಂದು ಪೀಠವು ಉಲ್ಲೇಖಿಸಿತು.

**ಸಂಕ್ಷಿಪ್ತ ಸುದ್ದಿ**

### ನಿಗದಿಯಂತೆ ‘ನೀಟ್’

ನವದೆಹಲಿ: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಮತ್ತು ಇತರ ಸಾಮಾನ್ಯ ಪ್ರವೇಶ ಪರೀಕ್ಷೆಗಳನ್ನು (ಸಿಇಟಿ) ಕೈಬಿಡುವ ಯಾವುದೇ ಯೋಜನೆಯನ್ನು ಕೇಂದ್ರ ಸರ್ಕಾರ ಹೊಂದಿಲ್ಲ ಎಂದು ಆರೋಗ್ಯ ಇಲಾಖೆಯ ರಾಜ್ಯ ಸಚಿವೆ ಡಾ. ಭಾರತಿ ಪ್ರವೀಣ್ ಪವಾರ್ ಶುಕ್ರವಾರ ಲೋಕಸಭೆಗೆ ತಿಳಿಸಿದ್ದಾರೆ.

ವೈದ್ಯಕೀಯ ಸ್ನಾತಕೋತ್ತರ ಮತ್ತು ಸ್ನಾತಕ ಪದವಿಯ ‘ನೀಟ್’ ಪರೀಕ್ಷೆಗಳು ಕ್ರಮವಾಗಿ ಈ ವರ್ಷದ ಸೆಪ್ಟೆಂಬರ್ 11 ಮತ್ತು 12ರಂದು ನಡೆಯಲಿವೆ ಎಂದು ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಅಗತ್ಯ ಮುನ್ನೆಚ್ಚರಿಕಾ ಕ್ರಮಗಳೊಂದಿಗೆ ಕೋವಿಡ್ ಮಾರ್ಗಸೂಚಿಯನ್ನು ಪಾಲಿಸಿಕೊಂಡು ಪರೀಕ್ಷೆಗಳನ್ನು ನಡೆಸಲಾಗುವುದು ಎಂದಿದ್ದಾರೆ.

### ಜ. 1ರಿಂದ ಪ್ಲಾಸ್ಟಿಕ್ ಕಡ್ಡಿಗಳ ಬಳಕೆಗೆ ನಿಷೇಧ

ನವದೆಹಲಿ (ಪಿಟಿಐ): ಪ್ಲಾಸ್ಟಿಕ್‌ನಿಂದ ತಯಾರಿಸಲಾದ ಕ್ಯಾಂಡಿ ಕಡ್ಡಿಗಳು ಮತ್ತು ಐಸ್‌ಕ್ರೀಂ ಕಡ್ಡಿಗಳನ್ನು 2022ರ ಜನವರಿ 1ರಿಂದ ನಿಷೇಧಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಬಗ್ಗೆ ಸಂಸತ್‌ನಲ್ಲಿ ಪರಿಸರ ಖಾತೆ ರಾಜ್ಯ ಸಚಿವ ಅಶ್ವಿನಿ ಚೌಬೆ ಮಾಹಿತಿ ನೀಡಿದ್ದಾರೆ. ಈ ವರ್ಷದ ಆರಂಭದಲ್ಲಿ ಹೊರಡಿಸಲಾದ ಅಧಿಸೂಚನೆ ಅನ್ವಯ, ಒಂದು ಬಾರಿ ಬಳಕೆಯಾಗುವ ಕೆಲವು ಪ್ಲಾಸ್ಟಿಕ್ ವಸ್ತುಗಳನ್ನು ತಯಾರಿಸುವುದು, ಆಮದು ಮಾಡಿಕೊಳ್ಳುವುದು, ವಿತರಿಸುವುದು, ಮಾರಾಟ ಮತ್ತು ಬಳಕೆಯನ್ನು 2022ರ ಜನವರಿ 1ರಿಂದ ನಿಷೇಧಿ ಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದ್ದಾರೆ.

## ಮಾಧ್ಯಮ ಸಂಸ್ಥೆಗಳ ಮೇಲೆ ಐ.ಟಿ ದಾಳಿ: ಸಂಪಾದಕರ ಮಂಡಳಿ ಕಳವಳ

ನವದೆಹಲಿ (ಪಿಟಿಐ): ದೇಶದಲ್ಲಿ ಮುಕ್ತ ಮತ್ತು ಸ್ವತಂತ್ರ ಪತ್ರಿಕೋದ್ಯಮವನ್ನು ಹತ್ತಿಕ್ಕಲು ಸರ್ಕಾರಿ ಸಂಸ್ಥೆಗಳನ್ನು ‘ದಬ್ಬಾಳಿಕೆಯ ಅಸ್ತ್ರ’ವಾಗಿ ಬಳಸಲಾಗುತ್ತಿದೆ ಎಂದು ಭಾರತೀಯ ಸಂಪಾದಕರ ಮಂಡಳಿ ಕಳವಳ ವ್ಯಕ್ತ ಪಡಿಸಿದೆ.

ದೇಶದ ಪ್ರಮುಖ ಮಾಧ್ಯಮ ಸಂಸ್ಥೆಗಳಲ್ಲಿ ಒಂದಾದ ‘ದೈನಿಕ್ ಭಾಸ್ಕರ್’ನ ಕಚೇರಿಗಳ ಮೇಲೆ ವಿವಿಧೆಡೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನಡೆಸಿದ ದಾಳಿ ಬೆಳವಣಿಗೆಯ ಹಿಂದೆಯೇ ಮಂಡಳಿ ಈ ಹೇಳಿಕೆ ನೀಡಿದೆ.

ದೈನಿಕ್ ಭಾಸ್ಕರ್ ಮತ್ತು ಲಖನೌ ಮೂಲದ ಸ್ವತಂತ್ರ ಸುದ್ದಿ ವಾಹಿನಿ ಭಾರತ್ ಸಮಾಚಾರ್ ಕಚೇರಿಗಳ ಮೇಲೆ ನಡೆದ ಐ.ಟಿ ದಾಳಿ ಬಗ್ಗೆ ಭಾರತೀಯ ಸಂಪಾದಕರ ಮಂಡಳಿ (ಇಜಿಐ) ಆತಂಕ ವ್ಯಕ್ತಪಡಿಸಿದೆ.

ಈ ಕುರಿತ ಹೇಳಿಕೆಯಲ್ಲಿ ಇಜಿಐ, ‘ಕೋವಿಡ್–19 ಪಿಡುಗಿನ ಸಾವುಗಳ ಕುರಿತ ವರದಿಗಳ ನಂತರ ಈ ದಾಳಿ ನಡೆದಿದೆ. ದೈನಿಕ್ ಭಾಸ್ಕರ್ ಪತ್ರಿಕೆಯ ಸಂಪಾದಕ ಓಂ ಗೌರ್ ಅವರು ಇತ್ತೀಚೆಗೆ ವೆಬಿನಾರ್‌ನಲ್ಲಿ, ಸರ್ಕಾರಿ ಇಲಾಖೆಗಳಿಂದ ಬರಬೇಕಾದ ಜಾಹೀರಾತು ಪ್ರಮಾಣವು ಕಡಿಮೆಯಾಗಿರುವುದಾಗಿ ತಿಳಿಸಿದ್ದರು‘ ಎಂದು ಹೇಳಲಾಗಿದೆ.

## ಲಸಿಕೆಗೆ ಸಿಎಸ್‌ಆರ್ ನಿಧಿ ಬಳಕೆಗೆ ಅವಕಾಶ

ಚೆನ್ನೈ: ಕೇಂದ್ರ ಸರ್ಕಾರ ಖಾಸಗಿ ಆಸ್ಪತ್ರೆಗಳಿಗೆ ಹಂಚುವ ಕೋವಿಡ್ ಲಸಿಕೆಯ ಗರಿಷ್ಠ ಬಳಕೆಗೆ ತಮಿಳುನಾಡು ಸರ್ಕಾರ ಮಾರ್ಗವೊಂದನ್ನು ಕಂಡು ಕೊಂಡಿದೆ.

ಖಾಸಗಿ ಆಸ್ಪತ್ರೆಗಳ ಕೋಟಾದಡಿ ಹಂಚಿಕೆಯಾಗಿರುವ ಲಸಿಕೆಗಳನ್ನು ಕಾರ್ಪೋರೇಟ್ ಮತ್ತು ಖಾಸಗಿ ಸಂಸ್ಥೆಗಳು ತಮ್ಮ ಸಾಮಾಜಿಕ ಜವಾಬ್ದಾರಿ ನಿಧಿಯಡಿ (ಸಿಎಸ್‌ಆರ್) ಖರೀದಿಸಿ, ಅವುಗಳನ್ನು ಉಚಿತವಾಗಿ ವಿತರಿಸುವಂತೆ ತಮಿಳುನಾಡು ಸರ್ಕಾರ ಕೋರಿದೆ.

ಈ ಯೋಜನೆಗಾಗಿ ಆರೋಗ್ಯ ಇಲಾಖೆಯು ವಿವಿಧ ಕಂಪನಿಗಳಿಂದ ₹4 ಕೋಟಿ ಸಂಗ್ರಹಿಸಿದ್ದು, ಮುಂದಿನ ವಾರ ಚೆನ್ನೈನಲ್ಲಿ ಚಾಲನೆ ದೊರೆಯಲಿದೆ.

ಆಸಕ್ತ ವ್ಯಕ್ತಿಗಳೂ ತಾವು ಬಯಸಿದ ಆಸ್ಪತ್ರೆಗಳಲ್ಲಿ ಜನ ಸಾಮಾನ್ಯರಿಗೆ ಉಚಿತವಾಗಿ ಲಸಿಕೆ ಕೊಡಿಸಲು ಪ್ರಾಯೋಜಕತ್ವ ಪಡೆಯಬಹುದು. ಇದಕ್ಕೆ ಪೂರಕವಾದ ಅವಕಾಶವನ್ನು ಒದಗಿಸಲಾಗುವುದು ಎಂದು ಸರ್ಕಾರ ತಿಳಿಸಿದೆ.

ಖಾಸಗಿ ಆಸ್ಪತ್ರೆಗಳಿಗೆ ಹಂಚಿಕೆಯಾಗಿರುವ ಕೋವಿಡ್ ಲಸಿಕೆಗಳು ದುಬಾರಿ ಬೆಲೆಯ ಕಾರಣ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ ಎಂಬುದನ್ನು ಮನಗಂಡಿರುವ ಸರ್ಕಾರ ಈ ಯೋಜನೆ ಜಾರಿಗೊಳಿಸುತ್ತಿದೆ.

‘ರಾಜ್ಯಕ್ಕೆ ಲಭ್ಯವಾಗುವ ಲಸಿಕೆ ಸಮರ್ಪಕವಾಗಿ ಬಳಕೆಯಾಗುವಂತೆ ಮಾಡುವುದು ಈ ಯೋಜನೆಯ ಉದ್ದೇಶ. ಇದಕ್ಕಾಗಿ ಖಾಸಗಿ ಕಂಪನಿಗಳು, ಹಣಕಾಸು ಸಂಸ್ಥೆಗಳು ತಮ್ಮ ಸಿಎಸ್‌ಆರ್ ನಿಧಿ ನೀಡುವುದರ ಮೂಲಕ ಕೈಜೋಡಿಸಲು ಮುಂದಾಗಿವೆ’ ಎಂದು ಆರೋಗ್ಯ ಸಚಿವ ಮಾ ಸುಬ್ರಮಣಿಯನ್ ತಿಳಿಸಿದರು.

## ಭ್ರಷ್ಟಾಚಾರ ಪ್ರಕರಣ– ಮೇಲ್ಮನವಿ ವಿಳಂಬ: ಸಿಬಿಐಗೆ ಛೀಮಾರಿ

ನವದೆಹಲಿ: ಭ್ರಷ್ಟಾಚಾರ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸುವಲ್ಲಿ ವಿಳಂಬ ಧೋರಣೆ ಅನುಸರಿಸಿದ ಸಿಬಿಐಗೆ ಛೀಮಾರಿ ಹಾಕಿರುವ ಸುಪ್ರೀಂ ಕೋರ್ಟ್, ಅಧಿಕಾರಿಗಳ ಕಾರ್ಯವಿಧಾನವು ಆರೋಪಿಗಳೊಂದಿಗೆ ಸಹಭಾಗಿತ್ವ ಹೊಂದಿರುವ ಬಗ್ಗೆ ಅನುಮಾನ ಮೂಡಿಸುತ್ತದೆ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಷಾ ಅವರನ್ನೊಳಗೊಂಡ ನ್ಯಾಯಪೀಠವು ಈ ಕುರಿತು ತೀಕ್ಷ್ಣವಾದ ಹೇಳಿಕೆ ನೀಡಿದ್ದು, ಮೇಲ್ಮನವಿ ಸಲ್ಲಿಸುವಲ್ಲಿ ವಿಳಂಬವಾಗುವುದನ್ನು ತಪ್ಪಿಸಲು ಪರಿಶೀಲನಾ ವ್ಯವಸ್ಥೆಯೊಂದನ್ನು ರೂಪಿಸುವುವಂತೆ ಸಿಬಿಐ ಮುಖ್ಯಸ್ಥರಿಗೆ ಸೂಚನೆ ನೀಡಿದೆ.

ಛತ್ತೀಸಗಡ ಹೈಕೋರ್ಟ್‌ನ ತೀರ್ಪಿನ ವಿರುದ್ಧ 647 ದಿನಗಳ ಕಾಲ ವಿಳಂಬವಾಗಿ ಮೇಲ್ಮನವಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿದ ನ್ಯಾಯಪೀಠವು, ಖೋಟಾ ಹಣ ಮತ್ತು ದುರುಪಯೋಗ ಪ್ರಕರಣದಲ್ಲಿ ಈಗಾಗಲೇ ಆರೋಪಿಗಳಿಗೆ ಮೂರು ವರ್ಷ ಶಿಕ್ಷೆಯಾಗಿದೆ ಎಂದು ಹೇಳಿದೆ.

‘ಕೋವಿಡ್–19 ಸಾಂಕ್ರಾಮಿಕ ರೋಗದ ಕಾರಣಕ್ಕಾಗಿ ಮೇಲ್ಮನವಿ ಅರ್ಜಿ ಸಲ್ಲಿಸಲು ವಿಳಂಬವಾಯಿತು’ ಎನ್ನುವ ಸಿಬಿಐನ ವಾದವನ್ನು ತಳ್ಳಿಹಾಕಿದ ನ್ಯಾಯಪೀಠವು, ಇದು ಸ್ವೀಕಾರಾರ್ಹವಲ್ಲ ಎಂದೂ ಹೇಳಿತು.

## ಕೇರಳ: ವರದಕ್ಷಿಣೆ ಪಡೆದಿಲ್ಲ ಪ್ರಮಾಣಪತ್ರ ಸಲ್ಲಿಸಲು ಸರ್ಕಾರಿ ನೌಕರರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ವರದಕ್ಷಿಣೆಯನ್ನು ತಡೆಗಟ್ಟುವ ಕ್ರಮದ ಭಾಗವಾಗಿ ಕೇರಳದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು, ಸರ್ಕಾರಿ ನೌಕರರಿಗೆ ವರದಕ್ಷಿಣೆ ತೆಗೆದುಕೊಂಡಿಲ್ಲ ಎನ್ನುವ ಬಗ್ಗೆ ಅಫಿಡ್‌ವಿಟ್ (ಪ್ರಮಾಣಪತ್ರ) ಸಲ್ಲಿಸಲು ಸೂಚಿಸಿದೆ.

ಕೇರಳದಲ್ಲಿ ಇತ್ತೀಚೆಗೆ ವರದಕ್ಷಿಣೆ ಸಾವು ಮತ್ತು ಕಿರುಕುಳಗಳು ನಡೆದಿದ್ದು, ಇದರಲ್ಲಿ ಸರ್ಕಾರಿ ನೌಕರರು ಸಹ ಆರೋಪಿಯಾಗಿದ್ದಾರೆ. ಹಾಗಾಗಿ, ಅಲ್ಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಈ ಬಗ್ಗೆ ಸುತ್ತೋಲೆ ಹೊರಡಿಸಿದೆ.

ಕೇರಳದಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆ ಜಾರಿಯಲ್ಲಿದ್ದು, ಈ ಕಾಯ್ದೆಯ ಅನ್ವಯ ಸರ್ಕಾರಿ ನೌಕರ ರಿಗೆ ಪ್ರಮಾಣಪತ್ರ ಸಲ್ಲಿಸುವಂತೆ ಸುತ್ತೋಲೆ ಯಲ್ಲಿ ಸೂಚಿಸಲಾಗಿದೆ. ‘ವರದಕ್ಷಿಣೆ ಪಡೆಯುವುದು ಮತ್ತು ನೀಡುವ ಪ್ರಕ್ರಿಯೆಯಲ್ಲಿ ಸರ್ಕಾರಿ ನೌಕರರು ಭಾಗಿಯಾಗುತ್ತಿರುವುದು ನಾಚಿಕೆಗೇಡಿನ ಸಂಗತಿ’ ಎಂದೂ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಮದುವೆಯಾಗಿರುವ ಪುರುಷ ಸರ್ಕಾರಿ ನೌಕರರು ಒಂದು ತಿಂಗಳ ಅವಧಿಯೊಳಗೆ ತಾವು ವರದಕ್ಷಿಣೆ ಪಡೆದಿಲ್ಲ ಎನ್ನುವ ಕುರಿತು ಪ್ರಮಾಣಪತ್ರ ಸಲ್ಲಿಸಬೇಕು. ಈ ಪತ್ರಕ್ಕೆ ನೌಕರನ ಹೆಂಡತಿ, ತಂದೆ–ತಾಯಿ ಮತ್ತು ಅತ್ತೆ–ಮಾವ ಸಹಿ ಹಾಕಬೇಕು. ಈ ಬಗ್ಗೆ ಇಲಾಖೆಯ ಮುಖ್ಯಸ್ಥರು, ಜಿಲ್ಲಾ ವರದಕ್ಷಿಣೆ ನಿಷೇಧ ಅಧಿಕಾರಿಗೆ ಅರ್ಧ ವಾರ್ಷಿಕ ವರದಿ ಸಲ್ಲಿಸಬೇಕು ಎಂದೂ ನಿರ್ದೇಶನ ನೀಡಲಾಗಿದೆ.

ವರದಕ್ಷಿಣೆ ವಿರುದ್ಧ ಜಾಗೃತಿ ಮೂಡಿಸಲು ಈಚೆಗಷ್ಟೇ ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಅವರು ವಿವಿಧ ಗಾಂಧಿಪರ ಸಂಘಟನೆಗಳ ಜತೆಗೂಡಿ ಒಂದು ದಿನದ ಉಪವಾಸ ಸತ್ಯಾಗ್ರಹ ನಡೆಸಿದ್ದರು.

**ಸಂಕ್ಷಿಪ್ತ ಸುದ್ದಿ**

### ಪತ್ರಕರ್ತ ಕಿಶೋರ್ ಚಂದ್ರ ಬಿಡುಗಡೆ

**ಗುವಾಹಟಿ:** ಹಸುವಿನ ಸಗಣಿಗೆ ಸಂಬಂಧಿಸಿದಂತೆ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಹಾಕಿಕೊಂಡಿದ್ದ ಕಾರಣಕ್ಕೆ ಎನ್‌ಎಸ್‌ಎ ಕಾಯ್ದೆಯಡಿ ಬಂಧಿಸಲ್ಪಟ್ಟಿದ್ದ ಮಣಿಪುರದ ಪತ್ರಕರ್ತ ಕಿಶೋರ್ ಚಂದ್ರ ವಾಂಗ್‌ಖೇನ್ ಅವರನ್ನು ಮಣಿಪುರ ಹೈಕೋರ್ಟ್ ಆದೇಶದ ಅನ್ವಯ ಶುಕ್ರವಾರ ಬಿಡುಗಡೆಗೊಳಿಸಲಾಗಿದೆ.

ಈ ಪ್ರಕರಣದಲ್ಲಿ ಮಧ್ಯ ಪ್ರವೇಶಿಸುವಂತೆ ಕೋರಿ ಕಿಶೋರ್ ಅವರ ಪತ್ನಿ ಎಲಂಗ್‌ಬಾಮ್ ರಂಜಿತಾ ಅವರು ಗುರುವಾರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಜುಲೈ 23ರ ಸಂಜೆ ಒಳಗೆ ಕಿಶೋರ್ ಅವರನ್ನು ಬಿಡುಗಡೆಗೊಳಿಸುವಂತೆ ಹೈಕೋರ್ಟ್ ಮಧ್ಯಂತರ ಆದೇಶ ಹೊರಡಿಸಿ, ₹ 1 ಸಾವಿರ ಬಾಂಡ್ ನೀಡುವಂತೆ ತಿಳಿಸಿತ್ತು.

ಆ. 24ರಂದು ಮುಂದಿನ ವಿಚಾರಣೆ ನಡೆಯಲಿದ್ದು, ಅಲ್ಲಿಯವರೆಗೆ ಮಣಿಪುರ ಸರ್ಕಾರ ಮೇ 17ರಂದು ಹೊರಡಿಸಿದ್ದ ಎನ್‌ಎಸ್‌ಎ ಆದೇಶವನ್ನು ಅಮಾನತಿನಲ್ಲಿರಿಸಲಾಗಿದೆ ಎಂದು ನ್ಯಾಯಾಲಯ ತಿಳಿಸಿದೆ.

### ಇದೇ 27ರವರೆಗೆ ರಾಜ್ ಕುಂದ್ರಾ ಕಸ್ಟಡಿ ವಿಸ್ತರಣೆ

ಮುಂಬೈ (ಪಿಟಿಐ): ಅಶ್ಲೀಲ ಚಿತ್ರಗಳನ್ನು ನಿರ್ಮಿಸಿರುವ ಮತ್ತು ಅವುಗಳನ್ನು ಕೆಲವು ಆ್ಯಪ್‌ಗಳಲ್ಲಿ ಪ್ರಸಾರ ಮಾಡಿರುವ ಆರೋಪದ ಪ್ರಕರಣಕ್ಕೆ ಸಂಬಂಧಿಸಿ ಉದ್ಯಮಿ ರಾಜ್ ಕುಂದ್ರಾ ಅವರ ಪೊಲೀಸ್ ಕಸ್ಟಡಿಯನ್ನು ಇದೇ 27ರವರೆಗೆ ವಿಸ್ತರಿಸಿ ಇಲ್ಲಿನ ಕೋರ್ಟ್ ಶುಕ್ರವಾರ ಆದೇಶಿಸಿದೆ.

ಕುಂದ್ರಾ ಅವರನ್ನು ಜುಲೈ 19ರಂದು ಬಂಧಿಸಲಾಗಿತ್ತು. ಪೊಲೀಸ್ ಕಸ್ಟಡಿ ಶುಕ್ರವಾರ ಅಂತ್ಯಗೊಂಡ ಕಾರಣ, ಅವರನ್ನು ಇಲ್ಲಿನ ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು. ಪ್ರಕರಣ ಕುರಿತ ತನಿಖೆಗಾಗಿ ಕುಂದ್ರಾ ಅವರ ಕಸ್ಟಡಿಯನ್ನು ವಿಸ್ತರಿಸುವಂತೆ ಪೊಲೀಸರು ಅರ್ಜಿ ಸಲ್ಲಿಸಿದ್ದರು.

**ಶಿಲ್ಪಾ ಶೆಟ್ಟಿ ಹೇಳಿಕೆ ದಾಖಲು:** ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಪೊಲೀಸರು ಉದ್ಯಮಿ ರಾಜ್ ಕುಂದ್ರಾ ಪತ್ನಿ, ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಅವರ ಹೇಳಿಕೆಯನ್ನೂ ದಾಖಲಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

### ನ್ಯೆಂಗ್ಚಿಗೆ ಚೀನಾ ಅಧ್ಯಕ್ಷ ಜಿನ್‌ಪಿಂಗ್ ಭೇಟಿ

ಬೀಜಿಂಗ್ (ಪಿಟಿಐ): ಅರುಣಾಚಲ ಪ್ರದೇಶ ಗಡಿ ಸಮೀಪವಿರುವ, ಟಿಬೆಟ್‌ನ ನ್ಯೆಂಗ್ಚಿ ನಗರಕ್ಕೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಇತ್ತೀಚೆಗೆ ಭೇಟಿ ನೀಡಿದ್ದಾಗಿ ಸರ್ಕಾರಿ ಒಡೆತನದ ಸುದ್ದಿಸಂಸ್ಥೆ ಷಿನ್‌ಹುವಾ ವರದಿ ಮಾಡಿದೆ.

‘ಜಿನ್‌ಪಿಂಗ್ ಅವರು ನ್ಯೆಂಗ್ಚಿಯ ಮೇನ್‌ಲಿಂಗ್ ವಿಮಾನ ನಿಲ್ದಾಣದಲ್ಲಿ ಬುಧವಾರ ಬಂದಿಳಿದರು. ಅವರಿಗೆ ಸ್ಥಳೀಯ ಅಧಿಕಾರಿಗಳು ಹಾಗೂ ವಿವಿಧ ಸಮುದಾಯಗಳ ಜನರು ಆತ್ಮೀಯ ಸ್ವಾಗತ ಕೋರಿದರು’ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ

ಅವರು ನ್ಯಾಂಗ್ ನದಿಗೆ ಸೇತುವೆ ನಿರ್ಮಿಸಿರುವ ಸ್ಥಳಕ್ಕೆ ಭೇಟಿ ನೀಡಿದರು.

## ಟೋಕಿಯೊ ಸುದ್ದಿ ಸ್ವಾರಸ್ಯ

### ‘ಕೂಟ ರದ್ದುಪಡಿಸಿ’

ಕೂಟ ರದ್ದು ಪಡಿಸುವಂತೆ 50 ಮಂದಿಯ ಗುಂಪೊಂದು ಶುಕ್ರವಾರ ಟೋಕಿಯೊದಲ್ಲಿ ಪ್ರತಿಭಟನೆ ನಡೆಸಿತು.

ಮೆಟ್ರೊ ಪಾಲಿಟಿನ್ ಕಟ್ಟಡದ ಎದುರು ಸೇರಿದ್ದ ಪ್ರತಿಭಟನಾಕಾರರು ‘ಒಲಿಂಪಿಕ್ಸ್ ರದ್ದು ಮಾಡಿ; ಜನರ ಜೀವ ಉಳಿಸಿ’ ಎಂಬ ಘೋಷಣೆಗಳನ್ನು ಕೂಗಿದರು.

### ಅಮೆರಿಕ ಪಾಳಯದಲ್ಲಿ ಲಸಿಕೆ ಚರ್ಚೆ

ಒಲಿಂಪಿಕ್ಸ್ ಸ್ಪರ್ಧೆಗಳ ಆರಂಭಕ್ಕೆ ಕ್ಷಣಗಣನೆ ಶುರುವಾಗಿರುವ ಹೊತ್ತಿನಲ್ಲಿ ಅಮೆರಿಕ ಪಾಳಯದಲ್ಲಿ ಲಸಿಕೆಯ ಚರ್ಚೆ ಕಾವೇರಿದೆ.

ಕೂಟದಲ್ಲಿ ಪಾಲ್ಗೊಂಡಿರುವ 613 ಸದಸ್ಯರ ಪೈಕಿ ಸುಮಾರು 100 ಜನ ಲಸಿಕೆಯನ್ನೇ ಪಡೆದಿಲ್ಲ.

‘ಲಸಿಕೆಗೆ ದೇಹ ಹೇಗೆ ಸ್ಪಂದಿಸುತ್ತದೆಯೋ ಗೊತ್ತಿಲ್ಲ. ಸುಮ್ಮನೆ ಅಪಾಯ ಮೈಮೇಲೆ ಎಳೆದುಕೊಳ್ಳಲು ನಾನಂತೂ ಸಿದ್ಧನಿಲ್ಲ. ಮುಂದೆಯೂ ಲಸಿಕೆ ಪಡೆಯುವ ಯೋಚನೆ ಇಲ್ಲ’ ಎಂದು ಈಜುಪಟು ಮೈಕಲ್ ಆ್ಯಂಡ್ರ್ಯೂ ತಿಳಿಸಿದ್ದರು. ಮೈಕಲ್ ನಿರ್ಧಾರವನ್ನು ಹಿರಿಯ ಈಜುಪಟು ಮಾಯಾ ಡಿರಾಡೊ ಟೀಕಿಸಿದ್ದಾರೆ.

### ಸೋಂಕಿತರ ಸಂಖ್ಯೆ ಹೆಚ್ಚಳ

ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡವರ ಪೈಕಿ ಹೊಸದಾಗಿ 19 ಮಂದಿಗೆ ಕೊರೊನಾ ಸೋಂಕು ತಗುಲಿರುವುದು ಶುಕ್ರವಾರ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಒಟ್ಟು ಸಂಖ್ಯೆ 106ಕ್ಕೆ ಏರಿದೆ. ಇದರಲ್ಲಿ 11 ಮಂದಿ ಅಥ್ಲೀಟ್‌ಗಳು ಸೇರಿದ್ದಾರೆ.

ಶುಕ್ರವಾರ ಸೋಂಕಿಗೊಳಪಟ್ಟವರಲ್ಲಿ ತಲಾ 3 ಮಂದಿ ಕ್ರೀಡಾಪಟುಗಳು ಹಾಗೂ ಪತ್ರಕರ್ತರು ಇದ್ದಾರೆ.

**ಬೆಳಕಿನ ಚಿತ್ತಾರ** ಉದ್ಘಾಟನೆ ಸಮಾರಂಭದ ವೇಳೆ ಸುಡುಮದ್ದುಗಳನ್ನು ಸಿಡಿಸಿದ್ದರಿಂದ ಒಲಿಂಪಿಕ್ ಕ್ರೀಡಾಂಗಣದಲ್ಲಿ ಬಣ್ಣದ ಚಿತ್ತಾರ ಮೂಡಿತು. ಎಎಫ್‌ಪಿ ಚಿತ್ರ

- ಬಾಂಗ್ಲಾದೇಶದ ನೊಬೆಲ್ ಪುರಸ್ಕೃತ ಮೊಹಮ್ಮದ್ ಯೂನುಸ್‌ಗೆ ಒಲಿಂಪಿಕ್ ಲಾರೆಲ್
- ಜಪಾನ್ ದೇಶದ ತಂತ್ರಜ್ಞಾನ ವೈಭವದ ಪ್ರದರ್ಶನ
- ಅಫ್ಘಾನಿಸ್ತಾನ ತಂಡದ ಧ್ವಜಗೌರವ ಪಡೆದ ಏಕೈಕ ಮಹಿಳಾ ಅಥ್ಲೀಟ್ ಕಾಮಿಯಾ ಯಸೂಫಿ
- ಕಾರ್ಯಕ್ರಮದಲ್ಲಿ ಹಾಜರಿದ್ದ ಒಂದು ಸಾವಿರಕ್ಕಿಂತ ಕಡಿಮೆ ಸಂಖ್ಯೆಯ ಗಣ್ಯರು
- ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಅಮೆರಿಕದ ಪ್ರಥಮ ಮಹಿಳೆ ಜಿಲ್ ಬೈಡನ್
- ಪಥಸಂಚಲನದಲ್ಲಿ ಭಾಗವಹಿಸಿದ ಒಲಿಂಪಿಕ್ ರೆಫ್ಯೂಜಿ ತಂಡ

ಭಾರತದ ಕ್ರೀಡಾಪಟುಗಳು ಸೆಲ್ಫಿ ಕ್ಲಿಕ್ಕಿಸಿಕೊಂಡರು

### ಟೋಕಿಯೊ ಒಲಿಂಪಿಕ್ಸ್‌ಗೆ ಚಾಲನೆ; ಸುಡುಮದ್ದುಗಳ ರಂಗುರಂಗಿನ ವೈಭವ

# ಭರವಸೆಯ ಬೆಳಕು ಪ್ರಜ್ವಲಿಸಿದ ಹೊತ್ತು..

**ಟೋಕಿಯೊ(ಪಿಟಿಐ/ಎಪಿ):** ಒಲಿಂಪಿಕ್ ಕ್ರೀಡಾಂಗಣದಲ್ಲಿ ಶುಕ್ರವಾರದ ಮುಸ್ಸಂಜೆಯ ಕತ್ತಲನ್ನು ಸೀಳುತ್ತ ನಭಕ್ಕೆ ಚಿಮ್ಮಿದ ಸುಡುಮದ್ದಿನ ಬೆಳಕು ಮನುಕುಲದ ಭರವಸೆಯ ಕಿರಣಗಳಾಗಿ ಪ್ರತಿಫಲಿಸಿದವು.

ರಂಗುರಂಗಿನ ಬೆಳಕು, ಇಂಪಾದ ಸಂಗೀತ, ಮನಕ್ಕೆ ಮುದ ನೀಡಿದ ಸಾಂಪ್ರದಾಯಿಕ ನೃತ್ಯಗಳ ನಡುವೆ ಒಲಿಂಪಿಕ್ಸ್ ಕ್ರೀಡಾ ಉತ್ಸವಕ್ಕೆ ಚಾಲನೆ ದೊರೆಯಿತು.

ಕೌಂಟ್‌ಡೌನ್ ಗಡಿಯಾರ ಸೊನ್ನೆಗೆ ಬಂದಾಗ ಸುಡುಮದ್ದಿನ ಆರ್ಭಟ ರಂಗೇರಿತು. ಸುಮಾರು 20 ಸೆಕೆಂಡುಗಳ ಕಾಲ ರಂಗುರಂಗಿನ ಬೆಳಕು ಕಣ್ಮನ ಸೆಳೆಯಿತು. ಟೋಕಿಯೊ ಒಲಿಂಪಿಕ್ 2020 ಲಾಂಛನದಲ್ಲಿರುವ ಬಿಳಿ ಮತ್ತು ಆಗಸನೀಲಿ ಬಣ್ಣಗಳ ಚಿತ್ತಾರ ಮೂಡಿದಾಗ ನೋಡುಗರು ಪುಳಕಿತರಾದರು.

ಕೋವಿಡ್ ಕಾಲಘಟ್ಟದ ಆತಂಕ, ಅನಿಶ್ಚಿತತೆಗಳನ್ನು ದಿಟ್ಟತನದಿಂದ ಎದುರಿಸುವ ಛಲದೊಂದಿಗೆ ಜಪಾನ್ ವಿಶ್ವದ ಮೂಲೆಮೂಲೆಯಿಂದ ಬಂದ ಕ್ರೀಡಾಪಟುಗಳನ್ನು ಆತ್ಮೀಯವಾಗಿ ಸ್ವಾಗತಿಸಿತು. ಜಪಾನ್ ದೇಶದ ತಂತ್ರಜ್ಞಾನ ವೈಭವ ರಂಗೇರಿತು. ಡ್ರೋನ್‌ಗಳು ಷೋನದಲ್ಲಿ ಮಾಡಿದ ಒಲಿಂಪಿಕ್ ಲಾಂಛನ ಮತ್ತಿತರ ಆಕೃತಿಗಳು ಚಿತ್ತಾಪಹಾರಿ ಆಗಿದ್ದವು.

2013ರಲ್ಲಿ ಒಲಿಂಪಿಕ್ ಆಯೋಜನೆಗೆ ಬಿಡ್ ಲಭಿಸಿದ ನಂತರ ತಮ್ಮ ದೇಶದಲ್ಲಿ ಆದ ಸ್ಥಿತ್ಯಂತರಗಳ ನಡುವೆ ಕ್ರೀಡಾಗ್ರಾಮವನ್ನು ಕಟ್ಟಿದ ರೂಪಕವೂ ಮನಸೆಳೆಯಿತು.

ಕೋವಿಡ್ ಉಪಟಳದ ಸಂದರ್ಭದಲ್ಲಿ ಅನುಭವಿಸಿದ ಕಷ್ಟನಷ್ಟಗಳ ನಡುವೆಯೂ ದೃಢವಾಗಿ ನಿಂತ ಕತೆಯ ವಿಡಿಯೊ ಪ್ರದರ್ಶನಗೊಂಡಿತು.

ಜಪಾನ್ ಚಕ್ರವರ್ತಿ ನರುಹಿಟೊ ಕ್ರೀಡಾಕೂಟವನ್ನು ಉದ್ಘಾಟಿಸಿದರು. ಅಂತರರಾಷ್ಟ್ರೀಯ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಥಾಮಸ್ ಬಾಕ್ ಹಾಜರಿದ್ದರು.

ಪ್ರೇಕ್ಷಕರ ಪ್ರವೇಶ ನಿರ್ಬಂಧದ ಕಾರಣ ಖಾಲಿ ಕುರ್ಚಿಗಳು ನೀರವ ವಾತಾವರಣ ಸೃಷ್ಟಿಸಿದವು. ಹಿಂದಿನ ಯಾವ ಒಲಿಂಪಿಕ್ ಕೂಟದಲ್ಲಿಯೂ ಕಾಣದಂತಹ ಮತ್ತು ಊಹಿಸದಂತಹ ವಾತಾವರಣದಲ್ಲಿಯೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟ ಕಲಾವಿದರು ಮತ್ತು ಪಥಸಂಚಲನದಲ್ಲಿ ಪಾಲ್ಗೊಂಡ ವಿವಿಧ ದೇಶಗಳ ಕ್ರೀಡಾಪಟುಗಳ ಉತ್ಸಾಹಕ್ಕೆ ಕೊರತೆ ಇರಲಿಲ್ಲ.

ಉದ್ಘಾಟನೆ ವೇಳೆ ಒಲಿಂಪಿಕ್ಸ್ ಲಾಂಛನ ಎಲ್ಲರನ್ನೂ ಆಕರ್ಷಿಸಿತು —ರಾಯಿಟರ್ಸ್ ಚಿತ್ರ

ಕ್ರೀಡಾಂಗಣದ ಹೊರಗೆ ಸಾವಿರಾರು ಜನರು ಸೇರಿದ್ದರು. ಅದರಲ್ಲಿ ಕ್ರೀಡಾಪ್ರೇಮಿಗಳೂ ಇದ್ದರು. ಅಂಗಣದೊಳಗೆ ಪ್ರವೇಶಿಸಿ ಸಮಾರಂಭ ಕಣ್ತುಂಬಿಕೊಳ್ಳುವ ಹುಮ್ಮಸ್ಸಿದ್ದರೂ ಭದ್ರತಾ ವ್ಯವಸ್ಥೆಯನ್ನು ದಾಟಲು ಅವಕಾಶವೇ ಇರಲಿಲ್ಲ. ಈ ನಡುವೆ ಒಲಿಂಪಿಕ್ ಅಯೋಜನೆಯನ್ನು ಸ್ಥಗಿತಗೊಳಿಸಿ ಎಂಬ ಪ್ರತಿಭಟನಾಕಾರರ ಕೂಗು ಕೂಡ ಜೋರಾಗಿತ್ತು.

ಕೊರೊನಾ ಪಿಡುಗಿನ ವಿರುದ್ಧದ ಹೋರಾಟಕ್ಕೆ ತಮ್ಮ ಜೊತೆಯಿದೆ ಎಂಬ ದೃಢವಾದ ಹೆಜ್ಜೆಗಳನ್ನು ಎಲ್ಲ ದೇಶಗಳ ಕ್ರೀಡಾಪಟುಗಳೂ ಹಾಕಿದರು. ಸಣ್ಣ, ದೊಡ್ಡ, ಹಿಂದುಳಿದ, ಮುಂದುವರಿದ ದೇಶಗಳ ಅಥ್ಲೀಟ್‌ಗಳೆಲ್ಲರೂ ಒಂದೇ ವೇದಿಕೆಯಲ್ಲಿ ಸೇರಿದರು. ಬೇರೆ ವರ್ಣ, ಧರ್ಮ ಮತ್ತು ಸಂಸ್ಕೃತಿಗಳನ್ನು ಪ್ರತಿನಿಧಿಸುವ ಪೋಷಾಕುಗಳನ್ನು ಧರಿಸಿದ್ದ ಕ್ರೀಡಾಪಟುಗಳು ಭರವಸೆಯ ಹೆಜ್ಜೆ ಹಾಕಿದರು. ಅದರಲ್ಲಿ ಮನಪ್ರೀತ್ ಸಿಂಗ್ ಮತ್ತು ಮೇರಿ ಕೋಮ್ ತ್ರಿವರ್ಣ ಹಿಡಿದು ಮುನ್ನಡೆಸಿದ ಭಾರತ ತಂಡವೂ ಇತ್ತು.

2012ರ ಲಂಡನ್ ಒಲಿಂಪಿಕ್ಸ್ ಮತ್ತು 2016ರ ರಿಯೊ ಒಲಿಂಪಿಕ್ಸ್‌ನ ಉದ್ಘಾಟನೆ ಸಮಾರಂಭದ ಅದ್ದೂರಿತನ ಇಲ್ಲಿ ಇರಲಿಲ್ಲ. ಆದರೆ, ದುರಿತ ಕಾಲದ ಕರಾಳತೆಯನ್ನು ಎದುರಿಸಿ ನಿಂತು ಮಹತ್ಸಾಧನೆ ಮಾಡುವ ಭರವಸೆಯ ಬೆಳಕಂತೂ ಇತ್ತು.

### ಪ್ರಜ್ಞೆ ಕಳೆದುಕೊಂಡ ಆರ್ಚರಿಪಟು

ಟೋಕಿಯೊದಲ್ಲಿ ತಾಪಮಾನ ಹೆಚ್ಚಿದ್ದು, ಸುಡು ಬಿಸಿಲಿನಿಂದಾಗಿ ರಷ್ಯಾದ ಆರ್ಚರಿಪಟು ಸ್ವೆಟ್ಲಾನ ಗೊಂಬೊಯೆವಾ ಸ್ಪರ್ಧೆಯ ವೇಳೆಯೇ ಪ್ರಜ್ಞೆತಪ್ಪಿದರು.

ಅರ್ಹತಾ ಸುತ್ತು ಪೂರ್ಣಗೊಳಿಸಿದ ಬಳಿಕ ಸ್ವೆಟ್ಲಾನ ಏಕಾಏಕಿ ಕುಸಿದು ಬಿದ್ದರು. ವೈದ್ಯಕೀಯ ಸಿಬ್ಬಂದಿ ತಕ್ಷಣವೇ ಸ್ಥಳಕ್ಕೆ ಧಾವಿಸಿ ಆರೈಕೆ ಮಾಡಿದರು.

‘ಈ ರೀತಿ ತಲೆ ತಿರುಗಿ ಬಿದ್ದಿದ್ದು ಇದೇ ಮೊದಲು. ವಿಪರೀತ ಬಿಸಿಲಿನಿಂದ ಹೀಗಾಗಿರಬಹುದು’ ಎಂದು ಸ್ವೆಟ್ಲಾನ ಪ್ರತಿಕ್ರಿಯಿಸಿದರು.

### ಒಸಾಕ ಪಂದ್ಯ ಮುಂದಕ್ಕೆ

ಜಪಾನ್‌ನ ಭರವಸೆಯ ಟೆನಿಸ್ ಆಟಗಾರ್ತಿ ನವೊಮಿ ಒಸಾಕ ಭಾನುವಾರ ಒಲಿಂಪಿಕ್ಸ್ ಅಭಿಯಾನ ಆರಂಭಿಸಲಿದ್ದಾರೆ. ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನ ಹೋರಾಟದಲ್ಲಿ ಒಸಾಕ, ಚೀನಾದ ಜೆಂಗ್ ಸಾಯ್‌ಸಾಯ್ ಎದುರು ಆಡಬೇಕಿತ್ತು. ಶನಿವಾರ ನಿಗದಿಯಾಗಿದ್ದ ಈ ಪಂದ್ಯವನ್ನು ಭಾನುವಾರಕ್ಕೆ ಮುಂದೂಡಲಾಗಿದೆ.

### ಆರ್ಚರಿ: ಕೊರಿಯಾ ಮುನ್ನಡೆ

**ಟೋಕಿಯೊ (ಪಿಟಿಐ):** ಭಾರತದ ಆರ್ಚರಿಪಟುಗಳು ಒಲಿಂಪಿಕ್ಸ್‌ನ ಮೊದಲ ದಿನ ಕೊರಿಯಾ ಕ್ರೀಡಾಪಟುಗಳ ಮುಂದೆ ಕೊಂಚ ನಿರಾಸೆಗೆ ಒಳಗಾದರು. ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ದೀಪಿಕಾ ಕುಮಾರಿ ರ್‍ಯಾಂಕಿಂಗ್ ಹಂತದಲ್ಲಿ ನಿರೀಕ್ಷಿತ ಸಾಮರ್ಥ್ಯ ತೋರಲು ವಿಫಲರಾದರು. ಒಂಬತ್ತನೇ ಸ್ಥಾನಕ್ಕೆ ಕುಸಿದರು. ಪುರುಷ ಆರ್ಚರ್‌ಗಳು ಪ್ರಯಾಸಪಟ್ಟು ಮುಂದಿನ ಹಂತಕ್ಕೆ ಪ್ರವೇಶ ಪಡೆದರು. ಅತನು ದಾಸ್, ಪ್ರವೀಣ್ ಜಾಧವ್ ಮತ್ತು ತರುಣದೀಪ್ ರಾಯ್‌ಗೆ ಹೆಚ್ಚು ಸ್ಕೋರ್ ಸಂಪಾದಿಸಲು ಆಗಲಿಲ್ಲ.

### ‘ಕಳಪೆ ಸಾಮರ್ಥ್ಯ ತೋರಿದರೆ ಕ್ರಮ’

**ನವದೆಹಲಿ (ಪಿಟಿಐ):** ‘ಒಲಿಂಪಿಕ್ಸ್‌ನಲ್ಲಿ ನಿರೀಕ್ಷೆಗೆ ತಕ್ಕ ಸಾಮರ್ಥ್ಯ ತೋರದ ಅಥ್ಲೀಟ್‌ಗಳು ಕಠಿಣ ಶಿಕ್ಷೆ ಎದುರಿಸಬೇಕಾಗುತ್ತದೆ’ ಎಂದು ಭಾರತ ಅಥ್ಲೆಟಿಕ್ಸ್ ಫೆಡರೇಷನ್ ಶುಕ್ರವಾರ ಎಚ್ಚರಿಸಿದೆ.

ಈಗಾಗಲೇ ಕೂಟಕ್ಕೆ ಅರ್ಹತೆ ಗಳಿಸಿರುವ ಲಾಂಗ್‌ಜಂಪ್ ಸ್ಪರ್ಧಿ ಎಂ.ಶ್ರೀಶಂಕರ್ ಹಾಗೂ 20 ಕಿ.ಮೀ.ನಡಿಗೆ ಸ್ಪರ್ಧಿ ಕೆ.ಟಿ.ಇರ್ಫಾನ್ ಉತ್ತಮ ಲಯದಲ್ಲಿಲ್ಲ ಎಂಬ ಮಾತುಗಳು ಕೇಳಿಬಂದಿದೆ.

‘ಇರ್ಫಾನ್ ಹಾಗೂ ಶ್ರೀಶಂಕರ್ ಒಲಿಂಪಿಕ್ಸ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಲಿದ್ದಾರೆ ಎಂದು ಅವರ ಕೋಚ್‌ಗಳು ಭರವಸೆ ನೀಡಿದ್ದಾರೆ. ಹೀಗಾಗಿ ಕೂಟಕ್ಕೆ ಕಳುಹಿಸಲು ತೀರ್ಮಾನಿಸಿದ್ದೇವೆ. ನಿರಾಸೆ ಮೂಡಿಸಿದರೆ ಕಠಿಣ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಎಎಫ್‌ಐ ಅಧ್ಯಕ್ಷ ಆದಿಲ್ ಸುಮರಿವಾಲ ಹೇಳಿದ್ದಾರೆ.

# ಟೆನಿಸ್: ಪವಾಡದ ನಿರೀಕ್ಷೆ

**ಟೋಕಿಯೊ (ಪಿಟಿಐ):** ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಭಾರತದ ಟೆನಿಸ್ ಸ್ಪರ್ಧಿಗಳ ಪದಕದ ಹಾದಿ ಕಠಿಣವೆನಿಸಿದೆ.

ಮಹಿಳಾ ಡಬಲ್ಸ್‌ನಲ್ಲಿ ಸಾನಿಯಾ ಮಿರ್ಜಾ ಮತ್ತು ಅಂಕಿತಾ ರೈನಾ ಕಣಕ್ಕಿಳಿಯಲಿದ್ದಾರೆ. ಸಾನಿಯಾ ಪಾಲಿಗೆ ಇದು ನಾಲ್ಕನೇ ಒಲಿಂಪಿಕ್ಸ್. ಅಂಕಿತಾ, ಮೊದಲ ಬಾರಿ ಮಹಾಕೂಟಕ್ಕೆ ಅಡಿ ಇಡುತ್ತಿದ್ದಾರೆ.

2020ರ ಮಾರ್ಚ್ ಬಳಿಕ ಇವರು ಒಮ್ಮೆಯೂ ಜೊತೆಯಾಗಿ ಆಡಿಲ್ಲ. ಒಟ್ಟಾಗಿ ಅಭ್ಯಾಸವನ್ನೂ ನಡೆಸಿಲ್ಲ. ಹೀಗಾಗಿ ಮಹತ್ವದ ಕೂಟದಲ್ಲಿ ಈ ಜೋಡಿ ಹೇಗೆ ಆಡಬಹುದು ಎಂಬ ಕುತೂಹಲ ಅಭಿಮಾನಿಗಳಲ್ಲಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಸುಮಿತ್ ನಗಾಲ್ ಅಂಗಳಕ್ಕಿಳಿಯಲಿದ್ದಾರೆ. ಪ್ರಮುಖ ಕ್ರೀಡಾಪಟುಗಳು ಕೂಟದಿಂದ ಹಿಂದೆ ಸರಿದ ಕಾರಣ ವಿಶ್ವ ರ್‍ಯಾಂಕಿಂಗ್‌ನಲ್ಲಿ 144ನೇ ಸ್ಥಾನದಲ್ಲಿರುವ ನಗಾಲ್‌ಗೆ ಒಲಿಂಪಿಕ್ಸ್ ಅರ್ಹತೆ ಲಭಿಸಿದೆ. ಈ ಹಿಂದೆ ನಡೆದಿದ್ದ ಚಾಲೆಂಜರ್ ಟೂರ್ನಿಗಳಲ್ಲಿ ನಗಾಲ್ ನಿರೀಕ್ಷಿತ ಸಾಮರ್ಥ್ಯ ತೋರಿಲ್ಲ. ಹಿಂದಿನ ವೈಫಲ್ಯಗಳನ್ನು ಮರೆತು ವಿಶ್ವಾಸದಿಂದ ಹೋರಾಡಬೇಕಾದ ಸವಾಲು ಅವರ ಮುಂದಿದೆ.



ಸುಮಿತ್ ನಗಾಲ್

ಜಪಾನ್‌ನ ಟೆನಿಸ್ ಆಟಗಾರ್ತಿ ನವೊಮಿ ಒಸಾಕ ಒಲಿಂಪಿಕ್ ಜ್ಯೋತಿಯೊಂದಿಗೆ —ಎಎಫ್‌ಪಿ ಚಿತ್ರ

ಹಾಕಿ

# ಪದಕದ ಕನಸಿನ ಅಭಿಯಾನಕ್ಕೆ ಮುನ್ನುಡಿ

**ಟೋಕಿಯೊ(ಪಿಟಿಐ):** ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ಹಾಕಿ ತಂಡವು ಇತಿಹಾಸ ರಚಿಸುವ ಹುಮ್ಮಸ್ಸಿನಲ್ಲಿದೆ.

40 ವರ್ಷಗಳಿಂದ ಒಲಿಯದ ಒಲಿಂಪಿಕ್ ಪದಕವನ್ನು ಕೊರಳಿಗೇರಿಸಿಕೊಂಡು ಬರುವ ಅಭಿಯಾನಕ್ಕೆ ಶನಿವಾರ ಚಾಲನೆ ದೊರೆಯಲಿದೆ. ಎ ಗುಂಪಿನಲ್ಲಿ ಕಣಕ್ಕಿಳಿಯಲಿರುವ ಭಾರತ ಹಾಕಿ ತಂಡವು ನ್ಯೂಜಿಲೆಂಡ್ ವಿರುದ್ಧ ಮೊದಲ ಪಂದ್ಯವಾಡಲಿದೆ. ಎಂಟನೇ ರ್‍ಯಾಂಕ್ ನ ನ್ಯೂಜಿಲೆಂಡ್ ತಂಡಕ್ಕಿಂತ ಭಾರತವು ಬಲಿಷ್ಠವಾಗಿದೆ. ಕಿವೀಸ್ ತಂಡವನ್ನು 11 ಬಾರಿ ಎದುರಿಸಿರುವ ಭಾರತ ತಂಡವು ಎಂಟು ಬಾರಿ ಜಯಿಸಿದೆ.

ಒಲಿಂಪಿಕ್ ಹಾಕಿಯಲ್ಲಿ ಭಾರತವು ಸುವರ್ಣಯುಗದ ದಾಖಲೆ ಹೊಂದಿದೆ. ಆದರೆ 1980ರ ನಂತರ ಪದಕ ಜಯಿಸಲು ಸಾಧ್ಯವಾಗಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿರುವ ತಂಡದಿಂದ ಈ ಬಾರಿ ಸಾಧನೆ ಮೂಡಿಬರುವ ಭರವಸೆ ಇದೆ.

1964ರಲ್ಲಿ ಟೋಕಿಯೊದಲ್ಲಿಯೇ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವು ಪದಕ ಜಯಿಸಿತ್ತು. ಈಗ ಮತ್ತೊಮ್ಮೆ ಇದೇ ತಾಣದಲ್ಲಿ ಮತ್ತೆ ವಿಜಯೋತ್ಸವ ಆಚರಿಸುವ ಕನಸು ಗರಿಗೆದರಿದೆ. ತಂಡವು ಬೆಂಗಳೂರಿನ ಸಾಯ್ ಕೇಂದ್ರದಲ್ಲಿಯೇ ತರಬೇತಿ ಪಡೆದು ಟೋಕಿಯೊಗೆ ತೆರಳಿದೆ.

**ಹಾಕಿ (ಮಹಿಳಾ ತಂಡಗಳು)**

| | | |
|---|---|---|
| ಜುಲೈ 24 | ಸಂಜೆ 5.15 | ಭಾರತ–ನೆದರ್ಲೆಂಡ್ಸ್ |
| ಜುಲೈ 26 | ಸಂಜೆ 5.45 | ಭಾರತ–ಜರ್ಮನಿ |
| ಜುಲೈ 28 | ಬೆಳಿಗ್ಗೆ 6.30 | ಭಾರತ–ಗ್ರೇಟ್ ಬ್ರಿಟನ್ |
| ಜುಲೈ 30 | ಬೆಳಿಗ್ಗೆ 8.15 | ಭಾರತ–ಐರ್ಲೆಂಡ್ |
| ಜುಲೈ 31 | ಬೆಳಿಗ್ಗೆ 8.45 | ಭಾರತ–ದಕ್ಷಿಣ ಆಫ್ರಿಕಾ |
| ಆಗಸ್ಟ್ 2 | ಬೆಳಿಗ್ಗೆ 6 ಗಂಟೆ | ಕ್ವಾರ್ಟರ್‌ಫೈನಲ್ |
| ಆಗಸ್ಟ್ 4 | ಬೆಳಿಗ್ಗೆ 7 ಗಂಟೆ | ಸೆಮಿಫೈನಲ್ |
| ಆಗಸ್ಟ್ 6 | ಬೆಳಿಗ್ಗೆ 7 ಗಂಟೆ | ಕಂಚಿನ ಪದಕದ ಪಂದ್ಯ |
| ಆಗಸ್ಟ್ 6 | ಮಧ್ಯಾಹ್ನ 3.30 | ಫೈನಲ್ ಪಂದ್ಯ |

ಹಾಕಿ ತಂಡದ ಆಟಗಾರ ಶ್ರೀಜೇಶ್

**ಹಾಕಿ (ಪುರುಷರ ತಂಡಗಳು)**

| ದಿನಾಂಕ | ಆರಂಭ | ತಂಡಗಳು |
|---|---|---|
| ಜುಲೈ 24 | ಬೆಳಿಗ್ಗೆ 6.30 | ಭಾರತ–ನ್ಯೂಜಿಲೆಂಡ್ |
| ಜುಲೈ 25 | ಮಧ್ಯಾಹ್ನ 3 ಗಂಟೆ | ಭಾರತ–ಆಸ್ಟ್ರೇಲಿಯಾ |
| ಜುಲೈ 27 | ಬೆಳಿಗ್ಗೆ 6.30 | ಭಾರತ–ಸ್ಪೇನ್ |
| ಜುಲೈ 29 | ಬೆಳಿಗ್ಗೆ 6 | ಭಾರತ–ಅರ್ಜೆಂಟೀನಾ |
| ಜುಲೈ 30 | ಮಧ್ಯಾಹ್ನ 3 ಗಂಟೆ | ಭಾರತ–ಜಪಾನ್ |
| ಆಗಸ್ಟ್ 1 | ಬೆಳಿಗ್ಗೆ 6 ಗಂಟೆ | ಕ್ವಾರ್ಟರ್‌ಫೈನಲ್ |
| ಆಗಸ್ಟ್ 3 | ಬೆಳಿಗ್ಗೆ 7 ಗಂಟೆ | ಸೆಮಿಫೈನಲ್ |
| ಆಗಸ್ಟ್ 5 | ಬೆಳಿಗ್ಗೆ 7 ಗಂಟೆ | ಕಂಚಿನ ಪದಕದ ಪಂದ್ಯ |
| ಆಗಸ್ಟ್ 5 | ಮಧ್ಯಾಹ್ನ 3.30 | ಫೈನಲ್ ಪಂದ್ಯ |

### ಅದಾನಿ ಗ್ರೂಪ್ ಪ್ರಾಯೋಜಕತ್ವ

**ಟೋಕಿಯೊ (ಪಿಟಿಐ):** ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿರುವ ಭಾರತ ತಂಡಕ್ಕೆ ಅದಾನಿ ಸಮೂಹ ಪ್ರಾಯೋಜಕತ್ವ ನೀಡಲಿದೆ. ಭಾರತೀಯ ಒಲಿಂಪಿಕ್ ಸಂಸ್ಥೆಯ (ಐಒಎ) ಮಹಾ ಕಾರ್ಯದರ್ಶಿ ರಾಜೀವ್ ಮೆಹ್ತಾ ಶುಕ್ರವಾರ ಈ ವಿಷಯ ತಿಳಿಸಿದ್ದಾರೆ.

# ಚಿನ್ನದ ಕನವರಿಕೆ

ಬ್ಯಾಡ್ಮಿಂಟನ್

**ಟೋಕಿಯೊ (ಪಿಟಿಐ):** ಒಲಿಂಪಿಕ್ಸ್ ಬ್ಯಾಡ್ಮಿಂಟನ್‌ನಲ್ಲಿ ಭಾರತಕ್ಕೆ ಚಿನ್ನದ ಪದಕ ದಕ್ಕಿಲ್ಲ. ದಶಕಗಳಿಂದ ಕಾಡುತ್ತಿರುವ ಈ ಕೊರಗು ತಂತ್ರಜ್ಞಾನದ ತವರಾಗಿರುವ ಟೋಕಿಯೊದಲ್ಲಿ ದೂರವಾಗುವ ನಿರೀಕ್ಷೆ ಇದೆ.

ಐದು ವರ್ಷಗಳ ಹಿಂದೆ ಸಾಂಬಾ ನಾಡಿನಲ್ಲಿ ನಡೆದಿದ್ದ ‘ಕ್ರೀಡಾ ಮೇಳ’ದಲ್ಲಿ ಬೆಳ್ಳಿಯ ಬೆಡಗು ಮೂಡಿಸಿದ್ದ ಪಿ.ವಿ.ಸಿಂಧು, ಈ ಬಾರಿ ಚಿನ್ನ ಜಯಿಸಿ ಹೊಸ ಭಾಷ್ಯ ಬರೆಯುವ ತವಕದಲ್ಲಿದ್ದಾರೆ. ಹಾಲಿ ಚಾಂಪಿಯನ್ ಕ್ಯಾರೊಲಿನ್ ಮರಿನ್ ಕೂಟದಿಂದ ದೂರ ಉಳಿದಿರುವ ಕಾರಣ ಸಿಂಧು ಚಿನ್ನದ ಹಾದಿ ಇನ್ನಷ್ಟು ಸುಗಮವಾಗಿದೆ.

ಪುರುಷರ ಸಿಂಗಲ್ಸ್ ಸ್ಪರ್ಧಿ ಬಿ.ಸಾಯಿ ಪ್ರಣೀತ್, ಪಾಲ್ಗೊಳ್ಳುತ್ತಿರುವ ಮೊದಲ ಕೂಟದಲ್ಲೇ ಪದಕದ ಸಾಧನೆ ಮಾಡುವ ಹುಮ್ಮಸ್ಸಿನಲ್ಲಿದ್ದಾರೆ. ಭಾರತದವರು ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದೇ ಇದುವರೆಗಿನ ಉತ್ತಮ ಸಾಧನೆ ಎನಿಸಿದೆ. ಹೀಗಾಗಿ ಪ್ರಣೀತ್ ಮೇಲೆ ನಿರೀಕ್ಷೆ ಹೆಚ್ಚಿದೆ.

ಪುರುಷರ ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ ಹಾಗೂ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಭಾರತದ ಸವಾಲು ಮುನ್ನಡೆಸಲಿದ್ದಾರೆ. ವಿಶ್ವ ರ್‍ಯಾಂಕಿಂಗ್‌ನಲ್ಲಿ 10ನೇ ಸ್ಥಾನದಲ್ಲಿರುವ ಇವರು ಉತ್ತಮ ಸಾಮರ್ಥ್ಯ ತೋರುವ ವಿಶ್ವಾಸದಲ್ಲಿದ್ದಾರೆ.

ಎರಡು ವಿಭಾಗಗಳಲ್ಲಿ ಫೈನಲ್ ಇಂದು; ಅಭಿಷೇಕ್, ಸೌರಭ್, ಅಪೂರ್ವಿ, ಇಳವೆನ್ನಿಲ ಮೇಲೆ ನಿರೀಕ್ಷೆ

# ‘ಮೊದಲ’ ಪದಕಕ್ಕೆ ಗುರಿ ಇಡುವ ತವಕ

**ಟೋಕಿಯೊ (ಪಿಟಿಐ):** ಇತ್ತೀಚಿನ ವರ್ಷಗಳಲ್ಲಿ ಅಮೋಘ ಸಾಧನೆ ಮಾಡುತ್ತಿರುವ ಭಾರತದ ಶೂಟರ್‌ಗಳು ಪದಕಗಳನ್ನು ಗೆಲ್ಲುವ ಭರವಸೆಯೊಂದಿಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಶನಿವಾರ ಕಣಕ್ಕೆ ಇಳಿಯಲಿದ್ದಾರೆ.

ಶೂಟಿಂಗ್ ಸ್ಪರ್ಧೆಯ ಮೊದಲ ದಿನ ಎರಡು ವಿಭಾಗಗಳ ಫೈನಲ್ ನಡೆಯಲಿದ್ದು ಭಾರತದ ಎಂಟು ಶೂಟರ್‌ಗಳು ಪದಕ ಪ್ರದಾನ ವೇದಿಕೆ ಏರುವ ನಿರೀಕ್ಷೆಯಲ್ಲಿ ಇದ್ದಾರೆ.

15 ಮಂದಿಯನ್ನೊಳಗೊಂಡ ಬಲಿಷ್ಠ ಶೂಟಿಂಗ್ ತಂಡ ಟೋಕಿಯೊದಲ್ಲಿದ್ದು ಪ್ರತಿಯೊಬ್ಬರೂ ಇತ್ತೀಚಿನ ವರ್ಷಗಳಲ್ಲಿ ಉತ್ತಮ ಸಾಮರ್ಥ್ಯ ತೋರಿದವರೇ. ಸೌರಭ್ ಚೌಧರಿ, ಅಭಿಷೇಕ್ ವರ್ಮಾ, ಅಪೂರ್ವಿ ಚಾಂಡೇಲ, ಇಳವೆನ್ನಿಲ ವಾಳರಿವನ್, ಮನು ಭಾಕರ್, ಯಶಸ್ವಿನಿ ಸಿಂಗ್ ದೇಸ್ವಾಲ್, ಅಂಜುಮ್ ಮೌದ್ಗಿಲ್, ತೇಜಸ್ವಿನಿ ಸಾವಂತ್ ಮುಂತಾದವರು ಹೆಚ್ಚು ನಿರೀಕ್ಷೆ ಮೂಡಿಸಿದ್ದಾರೆ.

ಮೊದಲ ದಿನ ಪುರುಷರ 10 ಮೀಟರ್ಸ್ ಏರ್ ಪಿಸ್ತೂಲು ಮತ್ತು ಮಹಿಳೆಯರ 10 ಮೀಟರ್ಸ್ ಏರ್ ರೈಫಲ್ಸ್ ವಿಭಾಗದಲ್ಲಿ ಪ್ರಶಸ್ತಿ ಸುತ್ತಿನ ಸ್ಪರ್ಧೆ ನಡೆಯಲಿದ್ದು ಶೂಟರ್‌ಗಳು ಪದಕಗಳಿಗೆ ಗುರಿ ಇಡಲಿದ್ದಾರೆ. ಅಭಿಷೇಕ್ ವರ್ಮಾ ಮತ್ತು ಸೌರಭ್ ಚೌಧರಿ ಪುರುಷರ ವಿಭಾಗದಲ್ಲೂ ಅಪೂರ್ವಿ ಚಾಂಡೇಲ ಮತ್ತು ಇಳವೆನ್ನಿಲ ವಾಳರಿವನ್ ಮಹಿಳೆಯ ವಿಭಾಗದಲ್ಲೂ ಫೈನಲ್‌ನಲ್ಲಿ ಸ್ಪರ್ಧಿಸಲಿದ್ದಾರೆ.

ಕ್ರೊವೇಷ್ಯಾಗೆ ಅಭ್ಯಾಸಕ್ಕೆ ತೆರಳುವ ಕೆಲವೇ ದಿನಗಳ ಹಿಂದ ಕೋವಿಡ್ ಸೋಂಕಿಗೆ ಒಳಗಾಗಿದ್ದ ಅಪೂರ್ವಿ ನಂತರ ಚೇತರಿಸಿಕೊಂಡಿದ್ದರು. ನಂತರ ಭರವಸೆಯಲ್ಲೇ ಆಡಿದ್ದರು. ವಿಶ್ವಕಪ್‌ನಲ್ಲಿ ಮೂರು ಬಾರಿ ಚಿನ್ನ ಗೆದ್ದಿರುವ ಅವರು ರಿಯೊ ಒಲಿಂಪಿಕ್ಸ್‌ನಲ್ಲಿ ಬೆನ್ನುನೋವಿನಿಂದ ಬಳಲಿ ನಿರಾಸೆಗೆ ಒಳಗಾಗಿದ್ದರು. ಈ ಬಾರಿ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಪ್ರಯತ್ನಿಸಲಿದ್ದಾರೆ.

### ಫೈನಲ್ ಸ್ಪರ್ಧೆಗಳು

**ಮಹಿಳೆಯರ 10 ಮೀ ಏರ್ ರೈಫಲ್**
- ಸಮಯ: ಬೆಳಿಗ್ಗೆ **7.15**

**ಪುರುಷರ 10 ಮೀ ಏರ್ ಪಿಸ್ತೂಲು**
- ಸಮಯ: ಮಧ್ಯಾಹ್ನ **12.00**

(ಸಮಯ: ಭಾರತೀಯ ಕಾಲಮಾನ
ಸ್ಥಳ: ಅಸಾಕ ಶೂಟಿಂಗ್ ರೇಂಜ್)

ವರ್ಷದ ಇಳವೆನ್ನಿಲ ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿದ್ದಾರೆ. ದೇಶದ ಅತ್ಯಂತ ಪ್ರತಿಭಾನ್ವಿತ ಶೂಟರ್ ಆಗಿರುವ ಅವರು ಆ ಪ್ರತಿಭೆಯನ್ನು ಪದಕವಾಗಿ ಪರಿವರ್ತಿಸುವ ಹುಮ್ಮಸ್ಸಿನಲ್ಲಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದಿರುವ ಗಗನ್ ನಾರಂಗ್ ಅವರ ತರಬೇತಿಯಲ್ಲಿ ಬೆಳೆದಿದ್ದಾರೆ.

ನಾಳೆಯೂ ಎರಡು ಫೈನಲ್ ನಡೆಯಲಿದ್ದು ಮನು ಭಾಕರ್ ಮತ್ತು ಯಶಸ್ವಿನಿ ಸಿಂಗ್ ದೇಸ್ವಾಲ್ 10 ಮೀಟರ್ಸ್ ಏರ್ ಪಿಸ್ತೂಲು ವಿಭಾಗದಲ್ಲಿ, ದಿವ್ಯಾಂಶ್ ಸಿಂಗ್ ಪನ್ವರ್, ದೀಪಕ್ ಕುಮಾರ್ 10 ಮೀಟರ್ಸ್ ಏರ್ ರೈಫಲ್ಸ್‌ನಲ್ಲಿ ಪದಕಕ್ಕೆ ಗುರಿ ಇಡುವರು. ಕಳೆದ ಬಾರಿ ಭಾರತದ ಶೂಟರ್‌ಗಳು ಬರಿಗೈಯಲ್ಲಿ ವಾಪಸಾಗಿದ್ದರು.

ಸೌರಭ್ ಚೌಧರಿ –ಟ್ವಿಟರ್ ಚಿತ್ರ

ಅಪೂರ್ವಿ ಚಾಂಡೇಲಾ –ಪಿಟಿಐ ಚಿತ್ರ

ಇಳವೆನ್ನಿಲ ವಾಳರಿವನ್ –ಪಿಟಿಐ ಚಿತ್ರ

ಮೀರಾಬಾಯಿ ಚಾನು

## ಮೀರಾಬಾಯಿಗೆ ಚೀನಾ ವೇಟ್‌ಲಿಫ್ಟರ್ ಪೈಪೋಟಿ

**ಟೋಕಿಯೊ:** ಮಾಜಿ ವಿಶ್ವ ಚಾಂಪಿಯನ್ ಮೀರಾಬಾಯಿ ಚಾನು ವೇಟ್‌ಲಿಫ್ಟಿಂಗ್‌ನ ಪದಕ ಹಂತದ ಸ್ಪರ್ಧೆಯಲ್ಲಿ ಶನಿವಾರ ಹೋರಾಡಲಿದ್ದಾರೆ.

ರಿಯೊ ಒಲಿಂಪಿಕ್ಸ್‌ನಲ್ಲಿ ಗಾಯದ ಸಮಸ್ಯೆಯಿಂದಾಗಿ ಕಂಗೆಟ್ಟಿದ್ದ ಚಾನು ಈಗ 49 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದಾರೆ. ಭಾರತಕ್ಕೆ ವೇಟ್‌ಲಿಫ್ಟಿಂಗ್‌ನಲ್ಲಿ ಪದಕ ಗೆದ್ದುಕೊಡುವ ನೆಚ್ಚಿನ ಕ್ರೀಡಾಪಟು ಎಂದೇ ಅವರನ್ನು ಬಿಂಬಿಸಲಾಗಿದೆ.

ಎಂಟು ಮಹಿಳಾ ವೇಟ್‌ಲಿಫ್ಟರ್‌ಗಳು ಇರುವ ಸ್ಪರ್ಧೆಯಲ್ಲಿ ಚೀನಾದ ಹೋವ್ ಜಿಹುಯಿ ಅವರು ಮೀರಾಬಾಯಿಗೆ ಪ್ರಬಲ ಪೈಪೋಟಿ ನೀಡುವ ನಿರೀಕ್ಷೆ ಇದೆ.

ಮೀರಾ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 205 ಕೆಜಿ ಆಗಿದ್ದರೆ, ಚೀನಾ ವೇಟ್‌ಲಿಫ್ಟರ್ 213 ಕೆಜಿ ಭಾರ ಎತ್ತಿ ಗಮನ ಸೆಳೆದಿದ್ದಾರೆ.

ವೇಟ್‌ಲಿಫ್ಟಿಂಗ್‌ನಲ್ಲಿ ಭಾರತಕ್ಕೆ ಪದಕ ಗೆದ್ದುಕೊಟ್ಟವರು ಕರ್ಣಂ ಮಲ್ಲೇಶ್ವರಿ ಅವರೊಬ್ಬರೆ. ಸಿಡ್ನಿ ಒಲಿಂಪಿಕ್ಸ್‌ನಲ್ಲಿ ಅವರು 69 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದರು.

ಶನಿವಾರದ ಸ್ಪರ್ಧೆಯಲ್ಲಿ ಅಮೆರಿಕದ ಡೆಲಾಕ್ರೂಜ್ ಜೋರ್ಡಾನ್ ಎಲಿಜಬೆತ್ ಮತ್ತು ಇಂಡೊನೇಷ್ಯಾದ ಐಸಾ ವಿಂಡಿ ಕಾಂಟಿಕ ಕೂಡ ಮೀರಾಗೆ ಸವಾಲೊಡ್ಡುವ ಸಾಧ್ಯತೆ ಇದೆ.

### ಭಾರತದ ಸ್ಪರ್ಧಾ ಸಮಯ

| | |
|---|---|
| **ಶೂಟಿಂಗ್** | |
| ಬೆಳಿಗ್ಗೆ **5.30** | ಮಹಿಳೆಯರ 10 ಮೀ. ಏರ್ ರೈಫಲ್ ಅರ್ಹತಾ ಸುತ್ತು (ಇಳವೆನ್ನಿಲಾ ವಾಳರಿವನ್, ಅಪೂರ್ವಿ ಚಾಂಡೇಲ) |
| ಬೆಳಿಗ್ಗೆ **7.15** | ಮಹಿಳೆಯರ 10 ಮೀ.ಏರ್ ರೈಫಲ್ ಫೈನಲ್ |
| ಬೆಳಿಗ್ಗೆ **9.30** | ಪುರುಷರ 10 ಮೀ. ಏರ್ ಪಿಸ್ತೂಲ್ ಅರ್ಹತಾ ಸುತ್ತು (ಸೌರಭ್ ಚೌಧರಿ, ಅಭಿಷೇಕ್ ಶರ್ಮಾ) |
| ಮಧ್ಯಾಹ್ನ **12** | ಪುರುಷರ 10 ಮೀ. ಏರ್ ಪಿಸ್ತೂಲ್ ಫೈನಲ್ |
| **ಜೂಡೊ** | |
| ಬೆಳಿಗ್ಗೆ **7.30** | ಮಹಿಳೆಯರ 48 ಕೆಜಿ ವಿಭಾಗದ ಎಲಿಮಿನೇಷನ್ ಸುತ್ತು (ಸುಶೀಲಾ ದೇವಿ) |
| **ರೋಯಿಂಗ್** | |
| ಬೆಳಿಗ್ಗೆ **7.50** | ಪುರುಷರ ಲೈಟ್‌ವೇಟ್ ಡಬಲ್ ಸ್ಕಲ್ಸ್ ಹೀಟ್ಸ್ (ಅರ್ಜುನ್ ಲಾಲ್, ಅರವಿಂದ್ ಸಿಂಗ್) |
| **ವೇಟ್‌ಲಿಫ್ಟಿಂಗ್** | |
| ಬೆಳಿಗ್ಗೆ **10.20** | ಮಹಿಳೆಯರ 49 ಕೆಜಿ ವಿಭಾಗದ ಪದಕದ ಸುತ್ತು (ಮೀರಾಬಾಯಿ ಚಾನು) |
| **ಆರ್ಚರಿ** | |
| ಬೆಳಿಗ್ಗೆ **6** ಗಂಟೆ | ಮಿಶ್ರ ತಂಡದ ಎಲಿಮಿನೇಷನ್ಸ್(ಅತನು ದಾಸ್, ದೀಪಿಕಾ ಕುಮಾರಿ) |
| **ಬ್ಯಾಡ್ಮಿಂಟನ್** | |
| ಬೆಳಿಗ್ಗೆ **8.50** | ಪುರುಷರ ಡಬಲ್ಸ್ ಗುಂಪು ಹಂತ (ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ) |
| ಬೆಳಿಗ್ಗೆ **9.30** | ಪುರುಷರ ಸಿಂಗಲ್ಸ್ ಗುಂಪು ಹಂತ (ಸಾಯಿ ಪ್ರಣೀತ್) |
| **ಬಾಕ್ಸಿಂಗ್** | |
| ಬೆಳಿಗ್ಗೆ **8** ಗಂಟೆ | ಮಹಿಳೆಯರ ವೆಲ್ಟರ್‌ವೇಟ್ ರೌಂಡ್ 32 (ಲವ್ಲಿನಾ ಬೊರ್ಗೊಹೈನ್) |
| ಬೆಳಿಗ್ಗೆ **9.30** | ಪುರುಷರ ವೆಲ್ಟರ್‌ವೇಟ್ ರೌಂಡ್ 32 (ವಿಕಾಸ್ ಕ್ರಿಶನ್) |
| **ಟೇಬಲ್ ಟೆನಿಸ್** | |
| ಬೆಳಿಗ್ಗೆ **5.30** | ಮಹಿಳಾ ಮತ್ತು ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯಗಳು (ಜಿ.ಸತ್ಯನ್, ಶರತ್ ಕಮಲ್, ಮಣಿಕಾ ಬಾತ್ರಾ, ಸುತೀರ್ಥಾ ಮುಖರ್ಜಿ) |
| ಬೆಳಿಗ್ಗೆ **7.45** | ಮಿಶ್ರ ಡಬಲ್ಸ್ ಪ್ರೀಕ್ವಾರ್ಟರ್‌ಫೈನಲ್ (ಶರತ್ ಕಮಲ್ ಮತ್ತು ಮಣಿಕಾ ಬಾತ್ರಾ) |

ನೇರ ಪ್ರಸಾರ: ಸೋನಿ ನೆಟ್‌ವರ್ಕ್ * ಭಾರತೀಯ ಕಾಲಮಾನ

ಬಾಕ್ಸಿಂಗ್: ಕಣದಲ್ಲಿ ಭಾರತದ 9 ಮಂದಿ; ವಿಕಾಸ್ ಕೃಷನ್‌ಗೆ ಜಪಾನ್‌ನ ಒಕಜಾವ ಎದುರಾಳಿ

# ಪದಕಕ್ಕೆ ‘ಪಂಚ್’ ಮಾಡುವ ಸವಾಲು

**ಟೋಕಿಯೊ (ಪಿಟಿಐ):** ಸ್ಥಳೀಯ ಕ್ರೀಡಾಪಟು ಮೆನ್ಸಾ ಒಕಜಾವ ಎದುರು ಸೆಣಸುವ ಮೂಲಕ ವಿಕಾಸ್ ಕೃಷನ್ ಬಾಕ್ಸಿಂಗ್‌ನಲ್ಲಿ ಶನಿವಾರ ಭಾರತದ ಸವಾಲು ಆರಂಭಿಸುವರು. ಮೇರಿ ಕೋಮ್, ಅಮಿತ್ ಪಂಘಾಲ್, ಪೂಜಾ ರಾಣಿ, ಮನೀಷ್ ಕೌಶಿಕ್ ಮುಂತಾದವರನ್ನು ಒಳಗೊಂಡ ಒಂಬತ್ತು ಮಂದಿ ಭಾರತದ ಪರವಾಗಿ ಕಣಕ್ಕೆ ಇಳಿಯಲಿದ್ದಾರೆ.

ಮೊದಲ ದಿನ ಒಟ್ಟು 27 ಸ್ಪರ್ಧೆಗಳು ನಡೆಯಲಿವೆ. ಆದರೆ ಭಾರತದ ಪರವಾಗಿ 63 ಕೆಜಿ ವಿಭಾಗದಲ್ಲಿ ವಿಕಾಸ್ ಅವರ ಸ್ಪರ್ಧೆ ಮಾತ್ರ ಇದೆ. ಭಾನುವಾರ ಮೇರಿ ಕೋಮ್ ಮತ್ತು ಮನೀಷ್ ಕೌಶಿಕ್ ಕಣಕ್ಕೆ ಇಳಿಯಲಿದ್ದಾರೆ. 29 ವರ್ಷದ ವಿಕಾಸ್ ಕೃಷಣ್‌ಗೆ ಇದು ಮೂರನೇ ಒಲಿಂಪಿಕ್ಸ್ ಆಗಿದ್ದು ಪದಕ ಗೆಲ್ಲುವ ಹುಮ್ಮಸ್ಸಿನಲ್ಲಿದ್ದಾರೆ. ಅವರ ಎದುರಾಳಿ, 25 ವರ್ಷದ ಬಾಕ್ಸರ್ 2019ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. ಅದೇ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ಹರಿಯಾಣದ ಬಾಕ್ಸರ್‌ಗೆ ಮೊದಲ ಸವಾಲನ್ನು ಮೀರಲು ಸಾಧ್ಯವಾದರೆ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಲಿದ್ದು ಕ್ಯೂಬಾದ ಮೂರನೇ ಶ್ರೇಯಾಂಕಿತ ರಿನೀಲ್ ಇಗ್ಲೆಸಿಸ್ ಅವರನ್ನು ಎದುರಿಸುವರು. ಇಗ್ಲಿಸಿಸ್ 2012ರ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದು ಮಾಜಿ ವಿಶ್ವ ಚಾಂಪಿಯನ್ ಕೂಡ ಆಗಿದ್ದಾರೆ.

ಭಾರತದ ಎಲ್ಲ ಬಾಕ್ಸರ್‌ಗಳು ಕೂಡ ಕ್ರೀಡಾಕೂಟದಲ್ಲಿ ಪ್ರಬಲ ಎದುರಾಳಿಗಳ ವಿರುದ್ಧ ಸೆಣಸಬೇಕಾಗಿದೆ. 2008 ಮತ್ತು 2012ರಲ್ಲಿ ತಲಾ ಒಂದೊಂದು ಕಂಚಿನ ಪದಕ ಗೆದ್ದಿದ್ದ ಭಾರತ 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಒಂದು ಪದಕವನ್ನೂ ಗೆಲ್ಲಲಿಲ್ಲ. ಆ ನಿರಾಸೆ ಮರೆಯಲು ಈ ಬಾರಿ ಕಠಿಣ ಪ್ರಯತ್ನ ನಡೆಸಲಿದ್ದಾರೆ.

ಅಮಿತ್ ಪಂಘಾಲ್ ಅವರಿಗೆ ಇಲ್ಲಿ ಅಗ್ರ ಶ್ರೇಯಾಂಕ ನೀಡಲಾಗಿದ್ದು 52 ಕೆ.ಜಿ ವಿಭಾಗದಲ್ಲಿ ಅವರು ವಿಶ್ವದ ಒಂದನೇ ಕ್ರಮಾಂಕದ ಬಾಕ್ಸರ್ ಆಗಿದ್ದಾರೆ. ಪ್ರೀ ಕ್ವಾರ್ಟರ್ ಫೈನಲ್‌ಗೆ ಬೈ ಲಭಿಸಿರುವ ನಾಲ್ವರಲ್ಲಿ ಅವರೂ ಒಬ್ಬರು. ಅವರ ಮೊದಲ ಸ್ಪರ್ಧೆ 31ರಂದು ನಡೆಯಲಿದೆ. ಬೊಟ್ಸ್ವಾನಾದ ಮೊಹಮ್ಮದ್ ರಜಬ್ ಮತ್ತು ಕೊಲಂಬಿಯಾದ ರಿವಾಜ್ ಮಾರ್ಟಿನೆಜ್ ನಡುವಿನ ಹಣಾಹಣಿಯಲ್ಲಿ ಗೆದ್ದವರನ್ನು ಪಂಘಾಲ್ ಎದುರಿಸುವರು. ಮಾರ್ಟಿನೆಸ್ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು.

ಆರು ಬಾರಿಯ ವಿಶ್ವ ಚಾಂಪಿಯನ್ ಮೇರಿ ಕೋಮ್ ಮಹಿಳೆಯರ 51 ಕೆಜಿ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. ಮೊದಲ ಸುತ್ತಿನಲ್ಲಿ ಅವರಿಗೆ ಡೊಮಿನಿಕಾದ ಮಿಗ್ವೆಲಿನಾ ಹೆರ್ನಾಂಡಜ್ ಎದುರಾಳಿ.

ವಿಕಾಸ್–ಒಕಜಾವ ಮುಖಾಮುಖಿ
ಸಮಯ: ಸಂಜೆ 3.45 (ಭಾರತೀಯ ಕಾಲಮಾನ)
ಸ್ಥಳ: ಕೊಕುಗಿಕಾನ್ ಅರೆನಾ

ವಿಕಾಸ್ ಕೃಷನ್ –ಎಎಫ್‌ಪಿ ಚಿತ್ರ

ಅಮಿತ್ ಪಂಘಾಲ್ –ಪಿಟಿಐ ಚಿತ್ರ

ಮೇರಿ ಕೋಮ್ –ಪಿಟಿಐ ಚಿತ್ರ

ಅಚಂತ ಶರತ್ ಕಮಲ್ ಮತ್ತು ಮಣಿಕಾ ಭಾತ್ರ –ಪಿಟಿಐ ಚಿತ್ರ

# ಪದಕದ ಬರ ನೀಗಿಸುವ ಭರವಸೆ

**ಟೋಕಿಯೊ (ಪಿಟಿಐ):** ಮಿನಿ ಒಲಿಂಪಿಕ್ಸ್ ಎಂದೇ ಕರೆಯಲಾಗುವ ಏಷ್ಯನ್ ಗೇಮ್ಸ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಿದ ಭಾರತದ ಟೇಬಲ್ ಟೆನಿಸ್ ಪಟುಗಳು ಟೋಕಿಯೊದಲ್ಲಿ ಪದಕಗಳನ್ನು ಗೆಲ್ಲುವ ಗುರಿಯೊಂದಿಗೆ ಶನಿವಾರ ಸೆಣಸುವರು.

ಜಕಾರ್ತದಲ್ಲಿ ನಡೆದ ಏಷ್ಯನ್ ಗೇಮ್ಸ್‌ನ ಪುರುಷರ ವಿಭಾಗದಲ್ಲಿ ಮತ್ತು ಮಿಶ್ರ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದ ಭಾರತ ಪದಕದ ಬರವನ್ನು ನೀಗಿಸಿದ್ದರು. ಒಲಿಂಪಿಕ್ಸ್‌ನಲ್ಲೂ ಇದೇ ರೀತಿಯ ಸಾಮರ್ಥ್ಯವನ್ನು ತೋರಲು ಮುಂದಾಗಿದ್ದಾರೆ.

ಮಿಶ್ರ ವಿಭಾಗದಲ್ಲಿ ಅಚಂತ ಶರತ್ ಕಮಲ್ ಮತ್ತು ಮಣಿಕಾ ಭಾತ್ರ ಒಲಿಂಪಿಕ್ಸ್ ಅರ್ಹತಾ ಸುತ್ತಿನಲ್ಲಿ ಉತ್ತಮ ಸಾಮರ್ಥ್ಯ ತೋರಿದ್ದಾರೆ.

ಹೀಗಾಗಿ ಅವರ ಮೇಲೆ ಭರವಸೆ ಮೂಡಿದೆ. ಪುರುಷರ ವಿಭಾಗದಲ್ಲಿ ಶರತ್ ಮತ್ತು ಗುಣಶೇಖರನ್ ಸತ್ಯನ್ ಕಠಿಣ ಸವಾಲು ಎದುರಿಸಬೇಕಾಗಿದೆ. 20ನೇ ಶ್ರೇಯಾಂಕದ ಶರತ್ ಕಮಲ್ ಮೂರನೇ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಮಾ ಲಾಂಗ್ ಎದುರು ಸೆಣಸಬೇಕಾಗಿದೆ. ಮಹಿಳಾ ಸಿಂಗಲ್ಸ್‌ನಲ್ಲಿ ಮಣಿಕಾ ಮತ್ತು ಇದೇ ಮೊದಲ ಬಾರಿ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಸುತೀರ್ಥ ಮುಖರ್ಜಿ ಮೇಲೆ ಭರವಸೆ ಇದೆ.

# ಈಜು: ಸತ್ವಪರೀಕ್ಷೆಗೆ ಶ್ರೀಹರಿ ಸಜ್ಜು

**ಟೋಕಿಯೊ:** ಕೋವಿಡ್ ಆರಂಭಗೊಂಡ ನಂತರ ಕ್ರೀಡಾಕ್ಷೇತ್ರದಲ್ಲಿ ಹೆಚ್ಚು ತೊಂದರೆಗೆ ಒಳಗಾದವರು ಈಜುಪಟುಗಳು. ಭಾರತದಲ್ಲೂ ಲಾಕ್‌ಡೌನ್ ಆರಂಭವಾದ ನಂತರ ಈಜುಕೊಳಗಳಲ್ಲಿ ಚಟುವಟಿಕೆ ನಡೆದದ್ದು ಕಡಿಮೆ. ಕರ್ನಾಟಕದಲ್ಲಂತೂ ಒಂದೂವರೆ ವರ್ಷದಿಂದ ಈಜು ಆರಂಭಿಸುವ ಪ್ರಯತ್ನಕ್ಕೆ ಆಗಾಗ ಸ್ವಲ್ಪ ಫಲ ಸಿಕ್ಕಿದ್ದು ಬಿಟ್ಟರೆ ಮಿಕ್ಕಂತೆ ನಿರಾಸೆಯೇ ಕಾದಿತ್ತು.

ಇಂಥ ಸಂದರ್ಭದಲ್ಲಿ ಒಲಿಂಪಿಕ್ಸ್‌ಗೆ ದಿನಗಣನೆ ಆರಂಭವಾಗುತ್ತಿದ್ದಂತೆ ಭಾರತ ಮತ್ತು ಕರ್ನಾಟಕದ ಈಜು ಕ್ಷೇತ್ರದಲ್ಲಿ ಬೆಳ್ಳಿ ಬೆಳಕು ಮೂಡಿತ್ತು. ಮೊದಲು ಸಜನ್ ಪ್ರಕಾಶ್, ನಂತರ ಬೆಂಗಳೂರಿನ ಶ್ರೀಹರಿ ನಟರಾಜ್ ‘ಎ’ ಅರ್ಹತೆಯೊಂದಿಗೆ ಟೋಕಿಯೊ ಟಿಕೆಟ್ ಗಳಿಸಿದ್ದರು. ಮಹಿಳಾ ವಿಭಾಗದಲ್ಲಿ ಮಾನಾ ಪಟೇಲ್ ಕೂಡ ಸ್ಥಾನ ಗಳಿಸಿ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದ್ದರು. 2008ರ ಬೀಜಿಂಗ್ ಒಲಿಂಪಿಕ್ಸ್ ನಂತರ ಎರಡಕ್ಕಿಂತ ಹೆಚ್ಚು ಈಜುಪಟುಗಳನ್ನು ಭಾರತ ಕಳುಹಿಸಿದ್ದು ಇದೇ ಮೊದಲು.

ಪುರುಷರ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಶ್ರೀಹರಿ, 200 ಮೀಟರ್ಸ್ ಫ್ರೀಸ್ಟೈಲ್, 100 ಹಾಗೂ 200 ಮೀಟರ್ಸ್ ಬಟರ್‌ಫ್ಲೈನಲ್ಲಿ ಸಜನ್ ಪ್ರಕಾಶ್, ಮಹಿಳೆಯರ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಮನಾ ಪಟೇಲ್ ಪದಕದ ಮೇಲೆ ಗುರಿ ಇಟ್ಟು ಕೊಳಕ್ಕೆ ಇಳಿಯಲಿದ್ದಾರೆ.

ಒಲಿಂಪಿಕ್ಸ್‌ನ ಮೊದಲ ಆವೃತ್ತಿಯಿಂದಲೇ ಈಜು ಕ್ರೀಡೆಗೆ ಸ್ಥಾನ ಇದೆ. ಭಾರತ 1932ರ ಲಾಸ್ ಏಂಜಲೀಸ್ ಕೂಟದಲ್ಲಿ ಒಬ್ಬರು ಈಜುಪಟುವನ್ನು ಕಳುಹಿಸಿ ಪದಾರ್ಪಣೆ ಮಾಡಿತ್ತು. ನಂತರದ ಆವೃತ್ತಿಯಲ್ಲಿ ದೇಶವನ್ನು ಯಾರೂ ಪ್ರತಿನಿಧಿಸಲಿಲ್ಲ. ಆದರೆ 1948ರ ಲಂಡನ್ ಒಲಿಂಪಿಕ್ಸ್‌ನಲ್ಲಿ ದೇಶವನ್ನು ಏಳು ಮಂದಿ ಪ್ರತಿನಿಧಿಸಿದ್ದರು. ಅದು, ಈ ವರೆಗೆ ಭಾರತವನ್ನು ಪ್ರತಿನಿಧಿಸಿದವರ ಗರಿಷ್ಠ ಸಂಖ್ಯೆ. ಮುಂದಿನ ಬಾರಿ ಐವರು ಮತ್ತು ಅದರ ನಂತರ ಇಬ್ಬರನ್ನು ಕಳುಹಿಸಲಾಗಿತ್ತು. ಆದರೆ ಇದಾಗಿ ಏಳು ಆವೃತ್ತಿಗಳಲ್ಲಿ ಭಾರತಕ್ಕೆ ಈಜಿನಲ್ಲಿ ಪಾಲ್ಗೊಳ್ಳಲು ಆಗಲಿಲ್ಲ.

1996ರಿಂದ ಪ್ರತಿ ಒಲಿಂಪಿಕ್ಸ್‌ನಲ್ಲೂ ಭಾರತದ ಈಜುಪಟುಗಳು ಪಾಲ್ಗೊಳ್ಳುತ್ತಿದ್ದಾರೆ. ಆದರೆ ಆರಂಭದಿಂದ ಇಲ್ಲಿಯ ವರೆಗೆ ಒಮ್ಮೆಯೂ ಪದಕ ಗೆಲ್ಲಲು ಸಾಧ್ಯವಾಗಲಿಲ್ಲ. ಈ ಬಾರಿ ‘ಎ’ ಅರ್ಹತೆ ಗಳಿಸಿರುವ ಇಬ್ಬರೂ ಭರವಸೆ ಮೂಡಿಸಿದ್ದಾರೆ. ‘ಎ’ ಅರ್ಹತೆ ಗಳಿಸಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ ಮೊದಲ ಈಜುಪಟು ಎಂದೆನಿಸಿಕೊಂಡಿರುವ ಸಜನ್ ಪ್ರಕಾಶ್ 200 ಮೀಟರ್ಸ್ ಬಟರ್‌ಫ್ಲೈನಲ್ಲಿ ರಾಷ್ಟ್ರೀಯ ದಾಖಲೆ ಮುರಿದಿದ್ದಾರೆ.

ಶ್ರೀಹರಿ ನಟರಾಜ್‌ಗೆ ದಾಖಲೆಗಳು ಹೊಸದೇನೂ ಅಲ್ಲ. ವಿವಿಧ ಟೂರ್ನಿಗಳಲ್ಲಿ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಗಳನ್ನು ಮುರಿಯುತ್ತ ಬಂದಿರುವ ಅವರು ‘ಎ’ ಅರ್ಹತೆಯೊಂದಿಗೆ ಒಲಿಂಪಿಕ್ಸ್ ಕೂಟದಲ್ಲಿ ಭಾಗವಹಿಸುವ ಭಾರತದ ಎರಡನೇ ಆಟಗಾರ. ಈ ಅಪರೂಪದ ಸಾಧನೆಯನ್ನು ಪದಕವಾಗಿ ಪರಿವರ್ತಿಸಿ ದೇಶಕ್ಕೆ ಗೌರವ ತಂದುಕೊಡಲು ಅವರು ಸಜ್ಜಾಗಿದ್ದಾರೆ. ಮಾನಾ ಪಟೇಲ್ 50, 100 ಮತ್ತು 200 ಮಿಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ರಾಷ್ಟ್ರೀಯ ದಾಖಲೆ ಬರೆದಿದ್ದಾರೆ. ಕೇವಲ 15 ವರ್ಷದವರಾಗಿದ್ದಾಗ 50 ಮತ್ತು 200 ಮೀಟರ್ಸ್‌ನಲ್ಲಿ ದಾಖಲೆ ಬರೆದ ಸಾಧಕಿ ಅವರು. ಈ ವರ್ಷದ ಜೂನ್‌ನಲ್ಲಿ 100 ಮೀಟರ್ಸ್ ದಾಖಲೆ ಬರೆದಿದ್ದಾರೆ. ಅದು ಅವರ ಭರವಸೆಯನ್ನು ಇನ್ನಷ್ಟು ಹೆಚ್ಚಿಸಿದೆ. ಹೀಗಾಗಿ ಭಾರತದ ಪದಕದ ನಿರೀಕ್ಷೆಯೂ ಹೆಚ್ಚಾಗಿದೆ.

ಶ್ರೀಹರಿ ನಟರಾಜ್ –ಪ್ರಜಾವಾಣಿ ಚಿತ್ರ

ಮಾನಾ ಪಟೇಲ್ –ಪಿಟಿಐ ಚಿತ್ರ